ಬೆಂಗಳೂರು
ಶನಿವಾರ, 14 ಮಾರ್ಚ್ 2026
ಸಂಪುಟ 33, ಸಂಚಿಕೆ 133, ಪುಟಗಳು 14+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital
ರಾಷ್ಟ್ರ ಜಾಗೃತಿಯ ದೈನಿಕ
# ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಹೊಸ ಆರ್ಥಿಕ ಸ್ಥಿರೀಕರಣ ನಿಧಿ | ೦೫ · ಸಿಇಸಿ ಪದಚ್ಯುತಿಗೆ ಪ್ರತಿಪಕ್ಷಗಳ ನೋಟಿಸ್ | ೦೫ · ಈಶಾನ್ಯದಲ್ಲಿ ಬಿಜೆಪಿಯಿಂದ ಶಾಂತಿ ಖಾತ್ರಿ | ೦೫

## ಶುಭ ದಿನ

ಕಲಿಯುಗಾಬ್ಧ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಕೃಷ್ಣ ಪಕ್ಷ, ತಿಥಿ:ದಶಮಿ, ನಕ್ಷತ್ರ: ಉತ್ತರಾಷಾಢ

### ದಿನದ ಮಾತು

ಸದ್ಗುಣವು ಜ್ಞಾನದಿಂದ ಮೆರೆಯುತ್ತದೆ. ಅಜ್ಞಾನವು ಸಹನೆಯಿಂದ ಮೆರೆಯುತ್ತದೆ.
▲ ನೀತಿ ಕುಸುಮ

### ವಿಶುದ್ಧ ಚಕ್ರ ಜಾಗೃತ ಆಗುವುದು ನಿಜವೇ?

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಳೂರು
• ಪುಟ ೬

### ಆರ್‌ಎಸ್‌ಎಸ್ ವಾರ್ಷಿಕ ವರದಿ ಅಂಕಿ ಅಂಶ

ಶತಾಬ್ದಿ ವರ್ಷದ ಸಂಭ್ರಮ

ಗೃಹ ಸಂಪರ್ಕ ಅಭಿಯಾನ
**3,89,465** ಹಳ್ಳಿಗಳ 10.02 ಕೋಟಿ ಮನೆಗಳಿಗೆ ಭೇಟಿ
**37,048** ಸ್ಥಳಗಳಲ್ಲಿ ಹಿಂದು ಸಮ್ಮೇಳನ
**1,34,766** ಒಟ್ಟು ಶಾಖೆ, ಮಿಲನ್ ಮತ್ತು ಮಂಡಳಿಗಳು
**3.49** ಕೋಟಿ ಜನರು ಭಾಗಿ
• ವಿಶೇಷ ಪುಟ ೩

### ಕಿರುಸುದ್ದಿ

ಪಾಕ್ ಮೇಲೆ ಅಫ್ಘಾನಿಸ್ತಾನ ಪ್ರತೀಕಾರದ ಡ್ರೋನ್ ದಾಳಿ
• ಪುಟ ೫
ರಾಜ್ಯಗಳಿಗೆ ಹೆಚ್ಚುವರಿ ಸೀಮೆಎಣ್ಣೆ ಪೂರೈಕೆ
• ಪುಟ ೫
ತೃತೀಯಲಿಂಗಿ ಸ್ಪಷ್ಟ ವ್ಯಾಖ್ಯಾನಕ್ಕೆ ಮಸೂದೆ
• ಪುಟ ೫
ವಿಮಾನ ನಿಲ್ದಾಣ ನಿರ್ಮಾಣ: ಪಾಟೀಲ್
• ಪುಟ ೯
ಸುಮ್ಮನಿದ್ದೇನೆ ಎಂದರೆ ಬಲಹೀನತೆ ಎಂದು ಭಾವಿಸಬೇಡಿ: ಖಾದರ್
• ಪುಟ ೯
ತೋಟಗಾರಿಕಾ ಮಹಾವಿದ್ಯಾಲಯ ಸ್ಥಾಪನೆ
• ಪುಟ ೯

ಎದ್ದೇಳದ ಸ್ಥಿತಿಯಲ್ಲಿ ಖಮೇನಿ ಉತ್ತರಾಧಿಕಾರಿ ಮೊಜ್ತಬಾ

# ಇರಾನ್ ಸ್ಥಿತಿ ಗಂಭೀರ

**• ಹೊಸದಿಲ್ಲಿ:** ಇರಾನ್‌ನಲ್ಲಿ ರಾಜಕೀಯ ಗೊಂದಲ ಹೆಚ್ಚಾಗಿದ್ದು, ಸರ್ವೋಚ್ಚನಾಯಕತ್ವದ ವಿಚಾರದಲ್ಲಿ ಅನಿಶ್ಚಿತತೆ ಉಂಟಾಗಿದೆ. ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ನಡೆಸಿದ ಸೇನಾ ದಾಳಿಗಳ ಬಳಿಕ ದೇಶದ ಪರಿಸ್ಥಿತಿ ಇನ್ನಷ್ಟು ತೀವ್ರಗೊಂಡಿದೆ.

ಇರಾನ್ ಸರ್ವೋಚ್ಚನಾಯಕ ಅಯತೊಲ್ಲಾ ಅಲಿ ಖಮೇನಿ ಹತ್ಯೆಯಾದ ನಂತರ ಅವರ ಪುತ್ರ ಮೊಜ್ತಬಾ ಖಮೇನಿ ಅಧಿಕಾರ ವಹಿಸಿಕೊಂಡಿದ್ದರು. ಆದರೆ ಇತ್ತೀಚಿನ ವೈಮಾನಿಕ ದಾಳಿಯಲ್ಲಿ ಮೊಜ್ತಬಾ ಖಮೇನಿ ಗಂಭೀರವಾಗಿ ಗಾಯಗೊಂಡಿದ್ದು, ಅವರ ಒಂದು ಕಾಲು ಕತ್ತರಿಸಬೇಕಾದ ಸ್ಥಿತಿ ನಿರ್ಮಾಣವಾಗಿದೆ ಎಂಬ ಮಾಹಿತಿ ಅಮೆರಿಕ ಮೂಲಗಳಿಂದ ಬಂದಿದೆ. ಅವರು ರಹಸ್ಯ ಸ್ಥಳದಲ್ಲಿ ಚಿಕಿತ್ಸೆ ಪಡೆಯುತ್ತಿರುವುದಾಗಿ ವರದಿಯಾಗಿದೆ.




ಈ ಕುರಿತು ಪ್ರತಿಕ್ರಿಯಿಸಿರುವ ಅಮೆರಿಕದ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್, ಇರಾನ್‌ನಲ್ಲಿ ಈಗ ಯಾರು ಅಧಿಕಾರದಲ್ಲಿದ್ದಾರೆ ಎಂಬುದೇ ಸ್ಪಷ್ಟವಾಗಿಲ್ಲ ಎಂದು ವ್ಯಂಗ್ಯವಾಡಿದ್ದಾರೆ. ಪೆಂಟಗನ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೊಜ್ತಬಾ ಖಮೇನಿ ಬಿಡುಗಡೆ ಮಾಡಿದ ಮೊದಲ ಹೇಳಿಕೆಯಲ್ಲಿ ಧ್ವನಿ ಅಥವಾ ವಿಡಿಯೋ ಇರಲಿಲ್ಲ ಎಂದು ಹೇಳಿದ್ದಾರೆ. ಇರಾನ್‌ನಲ್ಲಿ ಸಾಕಷ್ಟು ಕ್ಯಾಮೆರಾಗಳು ಇದ್ದರೂ ಲಿಖಿತ ಹೇಳಿಕೆ ಮಾತ್ರ ನೀಡಿರುವುದು ಅವರ ಸ್ಥಿತಿಗತಿ ಬಗ್ಗೆ ಅನುಮಾನ ಹುಟ್ಟಿಸುತ್ತಿದೆ ಎಂದು ಹೇಳಿದ್ದಾರೆ. ➡ಪುಟ ೨


ಮೊಜ್ತಬಾ





**ಇರಾಕ್‌ನಲ್ಲಿ ಅಮೆರಿಕ ಇಂಧನ ಮರುಪೂರಣ ವಿಮಾನ ಪತನ**
• ಪುಟ ೫

### ಮೊಜ್ತಬಾಗೆ ಜೀವ ವಿಮೆ ಇಲ್ಲ: ನೆತನ್ಯಾಹು

ಇರಾನ್ ವಿರುದ್ಧದ ಅಮೆರಿಕ-ಇಸ್ರೇಲ್ ಯುದ್ಧವು ನಿರೀಕ್ಷೆಗಿಂತ ಉತ್ತಮವಾಗಿ ನಡೆಯುತ್ತಿದೆ. ಇಸ್ರೇಲ್ ಎಂದಿಗಿಂತ ಬಲಶಾಲಿಯಾಗಿದೆ ಎಂದು ಹೇಳಿರುವ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಇರಾನ್‌ನ ನೂತನ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿಗೆ ಯಾವುದೇ ಜೀವ ವಿಮೆ ಇಲ್ಲ ಎಂದು ವ್ಯಂಗ್ಯವಾಡಿದ್ದಾರೆ. ಇಸ್ರೇಲ್ ಖಮೇನಿ ಮತ್ತು ಹೆಜ್ಬುಲ್ಲಾ ನಾಯಕ ನಯೀಮ್ ಖಾಸಿಮ್ ಅವರನ್ನು ಗುರಿಯಾಗಿಸಿದೆಯೇ ಎಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ನೆತನ್ಯಾಹು, ನಾನು ಭಯೋತ್ಪಾದಕ ಸಂಘಟನೆಗಳ ಯಾವುದೇ ನಾಯಕರ ಮೇಲೆ ಜೀವ ವಿಮಾ ಪಾಲಿಸಿಯನ್ನು ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ.

### ಹಾರ್ಮುಜ್ ಜಲಸಂಧಿಯಲ್ಲಿ ಭಾರತೀಯರಿಗೆ ಪ್ರಾಮುಖ್ಯತೆ

ಇರಾನ್ ಭಾರತೀಯ ಧ್ವಜ ಹೊಂದಿರುವ ಹಡಗುಗಳಿಗೆ ಹಾರ್ಮುಜ್ ಜಲಸಂಧಿ ಮೂಲಕ ಸುರಕ್ಷಿತ ಸಂಚಾರಕ್ಕೆ ಅವಕಾಶ ನೀಡಿದೆ ಎಂದು ವರದಿಗಳು ತಿಳಿಸಿವೆ. ಈ ಹಿನ್ನೆಲೆಯಲ್ಲಿ ಕೆಲವು ಹಡಗುಗಳು ತಮ್ಮ ಗುರುತು ಸಂದೇಶಗಳಲ್ಲಿ ಸಂಪೂರ್ಣ ಭಾರತೀಯ ಸಿಬ್ಬಂದಿ (ಆಲ್ ಇಂಡಿಯಾ ಕ್ರೂ), ಭಾರತೀಯ ಸಿಬ್ಬಂದಿ ಹಡಗಿನಲ್ಲಿದ್ದಾರೆ (ಇಂಡಿಯನ್ ಕ್ರೂ ಆನ್ ಬೋರ್ಡ್) ಎಂಬ ಫಲಕಗಳನ್ನು ಪ್ರದರ್ಶಿಸುತ್ತಿರುವುದು ಗಮನಸೆಳೆದಿದೆ.

### ಬುರ್ಜ್ ಖಲೀಫಾ ಬಳಿ ಭಾರೀ ಸ್ಫೋಟ

ವಿಶ್ವದ ಅತ್ಯಂತ ಎತ್ತರದ ಕಟ್ಟಡ ವಿರುವ ದುಬೈನ ಬುರ್ಜ್ ಖಲೀಫಾ ಬಳಿ ಶುಕ್ರವಾರವೂ ಭಾರಿ ಸ್ಫೋಟದ ಸದ್ದು ಕೇಳಿಬಂದಿದೆ. ಭೀಕರ ಬಾಂಬ್ ಸದ್ದಿಗೆ ದುಬೈನಲ್ಲಿ ಕಟ್ಟಡಗಳೂ ಅಲುಗಾಡಿದ್ದು, ಆಕಾಶಕ್ಕೆ ಕಪ್ಪು ಹೊಗೆ ಆವರಿಸಿದೆ. ವರದಿಗಳ ಪ್ರಕಾರ, ಘಟನೆಯ ನಂತರ ದುಬೈ ಪೊಲೀಸರು ಆ ಪ್ರದೇಶವನ್ನು ಸುತ್ತುವರಿದಿದ್ದಾರೆ. ಕಟ್ಟಡಕ್ಕೆ ಭಾರೀ ಹಾನಿಯಾಗಿದೆ. ➡ಪುಟ ೨

**ಯುದ್ಧದ ತೀವ್ರತೆ ಮತ್ತಷ್ಟು ಹೆಚ್ಚಳ** • ಪುಟ ೫

### ಅಮೆರಿಕಗೆ ಇರಾನ್ ಎಚ್ಚರಿಕೆ

ತಮ್ಮ ಇಸ್ಲಾಮಿಕ್ ಗಣರಾಜ್ಯದ ಮೇಲೆ ದಾಳಿ ಮಾಡಿದ್ದಕ್ಕಾಗಿ ಅಮೆರಿಕ ವಿಷಾದಿಸುವಂತೆ ಮಾಡುವ ಪಣವನ್ನು ಇರಾನ್ ತೊಟ್ಟಿದೆ. ಇದೇ ವೇಳೆ, ಹಾರ್ಮುಜ್ ಜಲಮಾರ್ಗದ ಮೇಲೆ ಹಿಡಿತ ಸಾಧಿಸುವ ಮೂಲಕ ತೈಲ ಬೆಲೆಗಳನ್ನು ಗಗನಕ್ಕೇರಿಸುವ ಪ್ರತಿಜ್ಞೆ ಮಾಡಿದೆ. ಯುದ್ಧ ಈಗಾಗಲೇ ಜಾಗತಿಕವಾಗಿ ತೈಲ ಪೂರೈಕೆಗೆ ಅಡ್ಡಿಪಡಿಸಿದ್ದು, ಇತಿಹಾಸದಲ್ಲೇ ಮೊದಲ ಬಾರಿಗೆ ಅತಿ ದೊಡ್ಡ ಸರಕು ಸಾಗಣೆ ಪೂರೈಕೆಗೆ ಅಡಚಣೆಯಾಗಿದೆ ಎಂದು ಅಂತಾರಾಷ್ಟ್ರೀಯ ಇಂಧನ ಸಂಸ್ಥೆ ಎಚ್ಚರಿಸಿದೆ. ಇದಕ್ಕೆ ಪ್ರತಿಯಾಗಿ ಸಾಮಾಜಿಕ ಜಾಲತಾಣದಲ್ಲಿ ಆಕ್ರೋಶ ವ್ಯಕ್ತಪಡಿಸಿರುವ ಡೊನಾಲ್ಡ್ ಟ್ರಂಪ್, ಇರಾನ್ ಸೋಲಿಸುವುದು ಕಚ್ಚಾ ತೈಲ ಬೆಲೆಗಳಿಗಿಂತ ಮುಖ್ಯ ಎಂದು ತಿಳಿಸಿದ್ದಾರೆ. ➡ಪುಟ ೨

ರಾಜಕೀಯವಾಗಿ ಬೆನ್ನಿಗೆ ನಿಂತು ಡಾ.ಯತೀಂದ್ರ ಬೆಳೆಸಿ: ವರುಣ ಕ್ಷೇತ್ರದ ಜನರಿಗೆ ಸಿಎಂ ಮನವಿ

# ಉಸಿರಿರುವವರೆಗೂ ರಾಜಕೀಯ ಮಾಡುವೆ



**• ಮೈಸೂರು:** ನನ್ನ 48 ವರ್ಷಗಳ ರಾಜಕೀಯ ಜೀವನದಲ್ಲಿ ಸೋಲು-ಗೆಲುವು ಎರಡನ್ನೂ ಕಂಡಿದ್ದೇನೆ. ಸೋತಾಗಲೂ ಜನರ ಸೇವೆಯನ್ನು ಪ್ರಾಮಾಣಿಕವಾಗಿ ಕೈಲಾದಷ್ಟು ಮಾಡಿಕೊಂಡು ಬಂದಿದ್ದೇನೆ. ಮುಂದೆಯೂ ಉಸಿರಿರುವವರೆಗೆ ರಾಜಕೀಯ ಮಾಡುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮೈಸೂರು ತಾಲೂಕಿನ ವರಕೋಡು ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀಬೀರೇಶ್ವರಸ್ವಾಮಿ ದೇವಾಲಯವನ್ನು ಶುಕ್ರವಾರ ಉದ್ಘಾಟಿಸಿ ಮಾತನಾಡಿದ ಅವರು, ನನ್ನ ರಾಜಕೀಯ ಜೀವನದಲ್ಲಿ ಸೋಲು ಗೆಲುವು ಕಂಡಿದ್ದೇನೆ. ನಾಲ್ಕು ಸೋಲು, ಏಳು ಗೆಲುವು ಕಂಡಿದ್ದೇನೆ. ಆದರೆ, ಜನಸೇವೆಯನ್ನು ಮಾತ್ರ ಮರೆತಿಲ್ಲ. ಕೊನೆಯ ಉಸಿರು ಇರುವವರೆಗೂ ರಾಜಕೀಯ ಮಾಡುತ್ತೇನೆ. ಕೈಲಾದಷ್ಟು ಸೇವೆ ಮಾಡುವೆ ಎಂದು ಅಭಯ ನೀಡಿದರು.

ಚಾಮುಂಡೇಶ್ವರಿ ಮತ್ತು ವರುಣ ಕ್ಷೇತ್ರದ ಜನರು ನಿರಂತರವಾಗಿ ಬೆಂಬಲ ನೀಡುತ್ತಾ ಬಂದಿರುವ ಕಾರಣ ಎಂದಿಗೂ ಕ್ಷೇತ್ರದ ಜನರನ್ನು ಮರೆಯಲಾಗದು. ಎರಡು ಬಾರಿ ಮುಖ್ಯಮಂತ್ರಿ, ಎರಡು ಬಾರಿ ವಿರೋಧ ಪಕ್ಷದ ನಾಯಕನಾಗಿ ಕೆಲಸ ಮಾಡುವ ಜತೆಗೆ, 17 ಬಾರಿ ಬಜೆಟ್ ಮಂಡಿಸಿದ್ದೇನೆ. ಇಂತಹ ಅವಕಾಶ ನನ್ನ ಪಾಲಿಗೆ ದೊರೆಯಲು ಮೈಸೂರು ತಾಲೂಕು ವರುಣ ಹೋಬಳಿ ಜನರೇ ಕಾರಣರಾಗಿದ್ದಾರೆ ಎಂದರು. ➡ಪುಟ ೨

### ಡಾ.ಯತೀಂದ್ರ ಬೆಳೆಸಿ

ವರುಣ ಕ್ಷೇತ್ರಕ್ಕೆ ಹೆಚ್ಚು ಬಾರಿ ಬರಲು ಸಾಧ್ಯವಾಗುತ್ತಿಲ್ಲ. ಆದರೆ, ವರುಣ ಕ್ಷೇತ್ರದ ಅಭಿವೃದ್ಧಿ ವಿಚಾರದಲ್ಲಿ ಯತೀಂದ್ರ ಹೇಳಿದ ಎಲ್ಲಾ ಅಭಿವೃದ್ಧಿ ಕೆಲಸ ಮಾಡುತ್ತಿದ್ದಾರೆ. ರಾಜಕೀಯವಾಗಿ ಡಾ.ಯತೀಂದ್ರರನ್ನು ಬೆಳೆಸುವ ಕೆಲಸ ಮಾಡಬೇಕು. ಮುಂದೆಯೂ ಅವರನ್ನು ಕೈಹಿಡಿದು ಬೆಳೆಸುತ್ತೀರಿ ಎನ್ನುವ ನಂಬಿಕೆ, ವಿಶ್ವಾಸವಿದೆ ಎಂದಾಗ ಅಲ್ಲಿದ್ದವರು ಮಂತ್ರಿ ಮಾಡಬೇಕು. ಡಿಸಿಎಂ ಮಾಡಬೇಕೆಂದು ಜೋರಾಗಿ ಕೂಗಿದಾಗ ನಗುತ್ತಲೇ ಮಾತು ಮುಂದುವರಿಸಿದರು. ಈಗಿನ ಹುಂಡಿಗಳಿಗೂ (ಗ್ರಾಮಗಳು) ಅಂದಿನ ಹುಂಡಿಗಳಿಗೂ ವ್ಯತ್ಯಾಸ ಇದೆ. 1977ರಿಂದಲೂ ಪರಿಚಯವಿದೆ. ಮಲ್ಲಹಳ್ಳಿ ಗ್ರಾಮದ ಸಾಕಣ್ಣ 1977ರಿಂದಲೂ ಪರಿಚಯ. ನಮ್ಮ ಸರ್ಕಾರದಲ್ಲಿ ಎಲ್ಲಾ ಜಾತಿ, ಧರ್ಮದವರಿಗೆ ಯೋಜನೆಗಳನ್ನು ನೀಡಿದ್ದೇನೆ. ➡ಪುಟ ೨

ಆರೆಸ್ಸೆಸ್ ಸಹಸರಕಾರ್ಯವಾಹ ಮುಕುಂದ ಅಭಿಪ್ರಾಯ

# ಯುದ್ಧ ಪರಿಸ್ಥಿತಿ ದೂರವಾಗಲಿ

**• ಸಮಲ್ಖಾ(ಹರಿಯಾಣ):** ಪಶ್ಚಿಮ ಏಷ್ಯದಲ್ಲಿ ಉಂಟಾಗಿರುವ ಯುದ್ಧದ ಸಂದರ್ಭದಲ್ಲಿ ಭಾರತ ಸರ್ಕಾರದ ನಿಲುವೇ ನಮ್ಮ ನಿಲುವು. ಆದಷ್ಟು ಬೇಗ ಈ ಪರಿಸ್ಥಿತಿ ಸರಿಯಾಗಬೇಕು ಎನ್ನುವುದು ನಮ್ಮ ಅಪೇಕ್ಷೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್)ದ ಸಹಸರಕಾರ್ಯವಾಹ ಸಿ.ಆರ್. ಮುಕುಂದ ತಿಳಿಸಿದ್ದಾರೆ.



ಶುಕ್ರವಾರ ಆರ್‌ಎಸ್‌ಎಸ್ (ಸಂಘ) ಅಖಿಲ ಭಾರತೀಯ ಪ್ರತಿನಿಧಿ ಸಭಾದ ಉದ್ಘಾಟನೆಯ ನಂತರ ಸುದ್ದಿಗೋಷ್ಠಿ ನಡೆಸಿದ ಅವರು, ಈ ಸಂದರ್ಭದಲ್ಲಿ ಭಾರತ ಸರ್ಕಾರ ಏನು ಮಾಡಬೇಕೋ ಅದನ್ನು ಮಾಡುತ್ತಿದೆ. ಅದನ್ನು ಮಾಧ್ಯಮಗಳಲ್ಲಿ ನಾವು ಕೇಳಿದ್ದೇವೆ, ಓದಿದ್ದೇವೆ. ನಮ್ಮ ದೇಶದ ಪ್ರಧಾನಮಂತ್ರಿ, ವಿದೇಶಾಂಗ ವ್ಯವಹಾರಗಳ ಸಚಿವರು ವಿವಿಧ ದೇಶಗಳ ಪ್ರಮುಖರೊಂದಿಗೆ ಸಂವಾದದಲ್ಲಿ ನಿರತರಾಗಿದ್ದಾರೆ. ಭಾರತದ ನಿಲುವು ಏನಾಗಿರಬೇಕು ಎನ್ನುವುದನ್ನು ಕೇಂದ್ರ ಸರ್ಕಾರ ಹೇಳಿದೆ. ಸರ್ಕಾರದ ನಿಲುವೇ ನಮ್ಮ ನಿಲುವು ಎಂದರು.

ಆರ್‌ಎಸ್‌ಎಸ್ ಎಲ್ಲಾ ಅಂತಾರಾಷ್ಟ್ರೀಯ ವಿಷಯಗಳಿಗೂ ತನ್ನ ಅಭಿಪ್ರಾಯ ಹೇಳುವುದಿಲ್ಲ. ಆದರೆ, ಆಯಾ ದೇಶಗಳ ಸ್ಥಾನೀಯ ಸಮಾಜ ಮತ್ತು ನಮ್ಮ ಭಾರತೀಯ ಸಮಾಜದ ಎಲ್ಲರ ಹಿತರಕ್ಷಣೆಯಿಂದ ಒಳ್ಳೆಯದೇ ಆಗಬೇಕು ಎನ್ನುವುದು ನಮ್ಮ ಆದ್ಯತೆ. ವಿವಿಧ ದೇಶಗಳಲ್ಲಿನ ಹಿಂದು ಸಂಘಟನೆಗಳ ಜತೆ ಸಂಘದ ಸಂಪರ್ಕವಿದೆ. ಇಲ್ಲಿಯವರೆಗೆ ಭಾರತೀಯ ಸಮಾಜದ ಜನರಿಗೆ ಬಹುದೊಡ್ಡ ಆತಂಕ ಅಲ್ಲಿ ಎದುರಾಗಿಲ್ಲ, ಎಲ್ಲರೊಂದಿಗೆ ಎಲ್ಲಾ ರೀತಿಯಲ್ಲೂ ಸಂಪರ್ಕ, ಸಂಬಂಧ ಹೊಂದುವ ಎಲ್ಲಾ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದರು. ➡ಪುಟ ೨

ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಜಾಗೊಳಿಸಿದ ನ್ಯಾಯಾಲಯ

# ಮುಟ್ಟಿನ ರಜೆ ಕಡ್ಡಾಯಗೊಳಿಸಿದರೆ ಮಹಿಳೆಯರ ವೃತ್ತಿಗೆ ದಕ್ಕೆ: ಸುಪ್ರೀಂ

**• ಹೊಸದಿಲ್ಲಿ:** ವಿದ್ಯಾರ್ಥಿನಿಯರು ಹಾಗೂ ಮಹಿಳಾ ಉದ್ಯೋಗಿಗಳಿಗೆ ಋತುಸ್ರಾವ ರಜೆ ಕಡ್ಡಾಯಗೊಳಿಸುವ ರಾಷ್ಟ್ರೀಯ ನೀತಿಯೊಂದನ್ನು ಅಂಗೀಕರಿಸಬೇಕೆಂಬ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಪುರಸ್ಕರಿಸಲು ಸರ್ವೋಚ್ಚ ನ್ಯಾಯಾಲಯ ನಿರಾಕರಿಸಿದೆ.

ಇಂತಹ ನೀತಿ ನಿಯಮಗಳು ಉದ್ದೇಶ ಪೂರ್ವಕವಲ್ಲದೆಯೇ ಲಿಂಗ ತಾರತಮ್ಯ ಧೋರಣೆಗಳನ್ನು ಬಲವರ್ಧಿಸಬಲ್ಲುದು. ಮಹಿಳೆಯರ ಔದ್ಯೋಗಿಕ ಭವಿಷ್ಯಕ್ಕೂ ಹೊಡೆತ ನೀಡುವ ಸಾಧ್ಯತೆಯಿದೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಆದಾಗ್ಯೂ ಸಂಬಂಧಪಟ್ಟ ಅಧಿಕಾರಿಗಳು ಅಥವಾ ಪ್ರಾಧಿಕಾರ ಅರ್ಜಿದಾರರ ಅಹವಾಲನ್ನು ಪರಾಮರ್ಶಿಸಬಹುದು. ➡ಪುಟ ೨



### ಸಾಮಾಜಿಕ ಪರಿಣಾಮ ಬಗ್ಗೆ ಸಿಜೆಐ ಕಳವಳ

ಕಡ್ಡಾಯ ಮುಟ್ಟಿನ ರಜೆಗಳು ಸಾಮಾಜಿಕವಾಗಿ ಬೀರಲಿರುವ ಪರಿಣಾಮಗಳ ಕುರಿತು ಮುಖ್ಯ ನ್ಯಾಯಮೂರ್ತಿ ಕಳವಳ ವ್ಯಕ್ತಪಡಿಸಿದ್ದಾರೆ. ಇಂತಹ ಕ್ರಮಗಳು ಅನುದ್ದೇಶಪೂರ್ವಕ. ಮಹಿಳೆಯರ ಕುರಿತ ಕೀಳರಿಮೆ ಭಾವದ ಬಲವರ್ಧಿಸುವ ಅಪಾಯವಿದೆ ಎಂದವರು ಎಚ್ಚರಿಸಿದ್ದಾರೆ.

# 70 ಪಲ್ಲಕ್ಕಿ ಸೇರಿ 115 ಹೊಸ ಬಸ್

**• ಬೆಂಗಳೂರು:** ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಹೊಸದಾಗಿ 45 ಕರ್ನಾಟಕ ಸಾರಿಗೆ ಹಾಗೂ 70 ಹವಾನಿಯಂತ್ರಣರಹಿತ ಸ್ಲೀಪರ್ ಪಲ್ಲಕ್ಕಿ ಬಸ್ ಸೇರಿದಂತೆ ಒಟ್ಟು 115 ಬಸ್‌ಗಳು ಸೇರ್ಪಡೆಗೊಂಡಿದ್ದು, ಶುಕ್ರವಾರದಿಂದಲೇ ಸಾರ್ವಜನಿಕ ಸೇವೆಗೆ ಮುಕ್ತವಾಗಿವೆ.

**ನೂತನ ಬಸ್‌ಗಳ ಸಂಚಾರಕ್ಕೆ ಚಾಲನೆ ನೀಡಿದ ಸಚಿವ ರಾಮಲಿಂಗಾರೆಡ್ಡಿ**

ಕೆಎಸ್‌ಆರ್‌ಟಿಸಿ ವತಿಯಿಂದ ನಿಗಮದ ಕೇಂದ್ರ ಕಚೇರಿಯಲ್ಲಿ ನೂತನ 45 ಕರ್ನಾಟಕ ಸಾರಿಗೆ ಹಾಗೂ 70 ಪಲ್ಲಕ್ಕಿ ಬಸ್ಸುಗಳಿಗೆ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಶುಕ್ರವಾರ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಹವಾನಿಯಂತ್ರಣರಹಿತ ಸ್ಲೀಪರ್ ಪಲ್ಲಕ್ಕಿಗಳಿಗೆ ಭಾರೀ ಬೇಡಿಕೆಯಿದ್ದು ಮುಂದಿನ ದಿನಗಳಲ್ಲಿ ಹಂತಹಂತವಾಗಿ ಇನ್ನಷ್ಟು ಪಲ್ಲಕ್ಕಿ ಬಸ್‌ಗಳನ್ನು ಕೆಎಸ್‌ಆರ್‌ಟಿಸಿಗೆ ಸೇರಿಸಲಾಗುವುದು ಎಂದರು. ➡ಪುಟ ೨

ಬೆಂಗಳೂರಿನ 3500 ಕಿಮೀ ರಸ್ತೆಗೆ ಶೀಘ್ರ ಇನ್ನಷ್ಟು ಸೇರ್ಪಡೆ

# ಮತ್ತೆ ಪ್ಲಾಸ್ಟಿಕ್ ರಸ್ತೆ ಚಿಂತನೆ

▶ ಮಹೇಶ್ ಹೆಗಡೆ

**• ಬೆಂಗಳೂರು:** ಪರಿಸರ ಸಂರಕ್ಷಣೆ ದೃಷ್ಟಿಕೋನದಿಂದ ಅತ್ಯಂತ ಮಹತ್ವವಾಗಿರುವ ಪ್ಲಾಸ್ಟಿಕ್ ಬಳಸಿ ರಸ್ತೆ ಮಾಡುವಲ್ಲಿ ಭಾರತದಲ್ಲಿ ಮೊದಲ ಬಾರಿಗೆ ಮುಂಚೂಣಿಯಲ್ಲಿದ್ದ ನಗರಗಳಲ್ಲಿ ಬೆಂಗಳೂರು ಸಹ ಒಂದು. 2002ರ ಆಸುಪಾಸಿನಲ್ಲಿ ಆರಂಭವಾದ ಈ ಚಿಂತನೆಯಲ್ಲಿ ಬೆಂಗಳೂರು ನಗರದಲ್ಲಿ ಸುಮಾರು 3,500 ಕಿ.ಮೀ.ಗೂ ಹೆಚ್ಚಿನ ಉದ್ದದ ರಸ್ತೆಯನ್ನು ಕಡಿಮೆ ಗುಣಮಟ್ಟದ ಪ್ಲಾಸ್ಟಿಕ್(ಸಿಂಗಲ್‌ಯೂಸ್) ಬಳಸಿ ರಸ್ತೆ ನಿರ್ಮಿಸಲಾಗಿದೆ.

ಪದ್ಮಶ್ರೀ ಪ್ರೊ. ಆರ್. ವಾಸುದೇವನ್ ಅವರ ಪರಿಕಲ್ಪನೆಯ ಪ್ಲಾಸ್ಟಿಕ್ ಬಳಸಿ ರಸ್ತೆ ನಿರ್ಮಾಣ ಬೆಂಗಳೂರಿನಲ್ಲಿ 2002 ರಿಂದ 2016ರ ಅವಧಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಆಗಿತ್ತು. ನಂತರದಲ್ಲಿ ನಿಧಾನಗತಿಯಾಗಿದೆ. ಇದೀಗ ಮತ್ತೆ ನಗರದಲ್ಲಿ ಪ್ಲಾಸ್ಟಿಕ್ ಬಳಸಿ ರಸ್ತೆ ನಿರ್ಮಿಸುವುದಕ್ಕೆ ವೇಗ ನೀಡುವ ಚಿಂತನೆ ನಡೆಸಲಾಗುತ್ತಿದ್ದು, ಈ ಸಂಬಂಧ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಕಡಿಮೆ ಮೌಲ್ಯಯುತ ಪ್ಲಾಸ್ಟಿಕ್‌ನ್ನು ಡಾಂಬರೀಕರಣಕ್ಕೆ ಬಳಸಿಕೊಳ್ಳಲು ಸೂಚನೆ ನೀಡಿದ್ದಾರೆ. ➡ಪುಟ ೨



### ನಿರ್ವಹಣಾ ವೆಚ್ಚದಲ್ಲಿ ಉಳಿತಾಯ

ರಸ್ತೆ ನಿರ್ಮಾಣದ ನಂತರ ನಿರ್ವಹಣೆ ಸವಾಲಿನ ಕೆಲಸ. ಆದರೆ ಪ್ಲಾಸ್ಟಿಕ್ ಬಳಸಿ ಮಾಡಿದ ರಸ್ತೆ ನಿರ್ವಹಣೆ ಸುಲಭ. ಸಮಾನ್ಯ ರಸ್ತೆಗಳಿಗಿಂತ ಸುಮಾರು 5 ವರ್ಷ ಹೆಚ್ಚು ಕಾಲ ಬಾಳಿಕೆ ಬರಲಿದೆ. ಇದರಿಂದ ರಸ್ತೆ ನಿರ್ವಹಣೆಗೆ ಬೇಕಾಗುವ ಹಣ ಉಳಿತಾಯವಾಗಲಿದೆ. ➡ಪುಟ ೨

# ಕೆಂಪು ಕಲ್ಲಿನಂತೆ ಮರಳು ಸಮಸ್ಯೆಗೂ ಪರಿಹಾರ ಹುಡುಕಿ

**• ವಿಧಾನಸಭೆ:** ಕರಾವಳಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕೆಂಪು ಕಲ್ಲು (ಲ್ಯಾಟರೈಟ್ ಕಲ್ಲು) ಸಮಸ್ಯೆಗೆ ಪರಿಹಾರ ಕಂಡುಕೊಂಡಂತೆ ಅಲ್ಲಿನ ಎಲ್ಲ ಜನಪ್ರತಿನಿಧಿಗಳು, ಅಧಿಕಾರಿಗಳ ಸಭೆ ಕರೆದು ಮರಳು ಸಮಸ್ಯೆಯನ್ನೂ ಬಗೆಹರಿಸುವಂತೆ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಹರೀಶ್ ಪೂಂಜ ವಿಷಯ ಪ್ರಸ್ತಾಪಿಸಿ, ನಮ್ಮೂರಿನಲ್ಲಿ ಒಂದು ಲೋಡ್ ಮರಳಿಗೆ 20-21 ಸಾವಿರ ರೂ. ಆಗಿದೆ. ನಾನ್ ಸಿಆರ್‌ಝೆಡ್ ವ್ಯಾಪ್ತಿಯಲ್ಲಿ 18 ಮರಳು ನಿಕ್ಷೇಪಗಳನ್ನು ಗುರುತಿಸಲಾಗಿದ್ದರೂ ಈವರೆಗೆ ಮರಳುಗಾರಿಕೆ ಆರಂಭವಾಗಿಲ್ಲ. ಜನರ ಕನಸಾಗಿರುವ ಮನೆ ನಿರ್ಮಾಣಕ್ಕೆ ಮರಳು ಸಿಗದೆ ಸಮಸ್ಯೆಯಾಗುತ್ತಿದೆ ಎಂದರು. ➡ಪುಟ ೨



# ಸಾಲಗಾರರ ರಕ್ಷಣಾ ಖಾಸಗಿ ವಿಧೇಯಕ

◆ **ವಿಧಾನಪರಿಷತ್:** ಹಣಕಾಸು ವ್ಯವಹಾರ ನಡೆಸುವ ಯಾವುದೇ ಸಂಸ್ಥೆ, ಕಂಪನಿ, ಹಣಕಾಸು ಸಂಸ್ಥೆ ಅಥವಾ ಬ್ಯಾಂಕ್ ಯಾವುದೇ ಸಾಲಗಾರನಿಗೆ ಸುಸ್ತಿ ದಿನಾಂಕದಿಂದ 180 ದಿನಗಳ ಕಾಲಾವಕಾಶ ನೀಡಿದ ನಂತರವಷ್ಟೆ ಅಡಮಾನವಿಟ್ಟ ಚಿನ್ನಾಭರಣಗಳನ್ನು ಹಾರಾಜು ಹಾಕಲು ಅನುಮತಿ ನೀಡಬೇಕು ಎನ್ನುವ ಕಾನೂನು ತರಲು ಖಾಸಗಿ ವಿಧೇಯಕ ಮಂಡಿಸಲಾಗಿದೆ.

ಶುಕ್ರವಾರ ವಿಧಾನ ಪರಿಷತ್‌ನ ಖಾಸಗಿ ಕಾರ್ಯ ಕಲಾಪದಲ್ಲಿ, ಕರ್ನಾಟಕ ಚಿನ್ನ ಅಡಮಾನವಿಟ್ಟ ಸಾಲಗಾರರ ರಕ್ಷಣಾ ವಿಧೇಯಕ, 2025 ಎನ್ನುವ ಖಾಸಗಿ ವಿಧೇಯಕವನ್ನು ಕಾಂಗ್ರೆಸ್ ಸದಸ್ಯ ರಮೇಶ್ ಬಾಬು ಮಂಡಿಸಿದ್ದಾರೆ. ಯಾವುದೇ ಹಣಕಾಸು ಸಂಸ್ಥೆಯಿಂದ ಸಾಲಗಾರರ ರಕ್ಷಣೆಗಾಗಿ ಹಾಗೂ ಅಡಮಾನವಿಟ್ಟ ಚಿನ್ನದ ಹರಾಜಿನ ಪ್ರಕ್ರಿಯೆಯನ್ನು ನಿಯಂತ್ರಿಸಲು ಈ ಖಾಸಗಿ ವಿದೇಯಕವನ್ನು ಮಂಡಿಸಲಾಗಿದೆ.

ಈ ವಿಧೇಯಕದಂತೆ ಸಾಲಗಾರನಿಗೆ ತಾನು ಅಡಮಾನವಿಟ್ಟ ಚಿನ್ನವನ್ನು ಹರಾಜು ಮಾಡುವುದಕ್ಕಿಂತ ಮೊದಲು ನ್ಯಾಯಯುತ ಹಾಗೂ ಸಮಂಜಸವಾದ ಅವಕಾಶವನ್ನು ಹಣಕಾಸು ಸಂಸ್ಥೆಗಳಿಂದ ಒದಗಿಸಲು ಈ ಖಾಸಗಿ ವಿಧೆಯಕ ಮಂಡಿಸಲಾಗಿದೆ.

180 ದಿನಗಳ ಕಾಲಾವಕಾಶ ನೀಡುವ ನೋಟಿಸ್ ಅವಧಿ ಯಲ್ಲಿ ಒಂದು ವೇಳೆ ಸಾಲಗಾರನು ತನಗೆ ಅನ್ವಯವಾಗುವ ಬಡ್ಡಿಯೊಂದಿಗೆ ಬಾಕಿ ಒತ್ತವನ್ನು ಪಾವತಿಸಿ ತಾನು ಅಡಮಾನವಿಟ್ಟ ಚಿನ್ನವನ್ನು ಬಿಡಿಸಿಕೊಳ್ಳಲು ಅವಕಾಶ ನೀಡುವ ಉದ್ದೇಶವನ್ನು ಈ ಖಾಸಗಿ ವಿಧೇಯಕ ಹೊಂದಿದೆ. ಅಲ್ಲದೇ ಸಾಲಗಾರನು ತನಗೆ ಹಣ ನೀಡಿದ ಸಂಸ್ಥೆಗೆ ಕೊನೆಯದಾಗಿ ತಿಳಿಸಿರುವ ವಿಳಾಸಕ್ಕೆ ನೋಂದಾಯಿತ ಅಂಚೆ ಮೂಲಕ, ಇ-ಮೇಲ್, ಅಥವಾ ಎಸ್‌ಎಂಎಸ್‌ಗಳನ್ನು ಕಳುಹಿಸುವಮೂಲಕ ಹರಾಜು ಪ್ರಕ್ರಿಯೆಯ ಮಾಹಿತಿಯನ್ನು ಸಾಲಗಾರನ ಗಮನಕ್ಕೆ ಕಡ್ಡಾಯವಾಗಿ ತರಲು ಈ ವಿಧೇಯಕದಲ್ಲಿ ಮನವಿ ಮಾಡಿದ್ದಾರೆ.

### ಹರಾಜು ಪ್ರಕ್ರಿಯೆ ನಿಯಂತ್ರಣ

ಸಾಲಗಾರನು ಅಡಮಾನವಿಟ್ಟ ಚಿನ್ನದ ಹರಾಜನ್ನು ರಾಜ್ಯಸ ಸರ್ಕಾರದಿಂದ ಅನುಮೋದಿತರಾಗಿರುವ ಪರವಾನಗಿ ಪಡೆದ ಹಾರಾಜುದಾರರ ಮೂಲಕ ಅಥವಾ ಸ್ಥಳೀಯ ತಹಶೀಲ್ದಾರ್, ಮಾತ್ರ ನಡೆಸತಕ್ಕದ್ದು, ಅಲ್ಲದೇ ಸಾಲಗಾರನಿಗೆ ಹರಾಜು ದಿನಾಂಕದ ಮಾಹಿತಿಯನ್ನು 15 ದಿನಗಳ ಮುಂಚಿತವಾಗಿ ನಿಡಲು ವಿಧೆಯಕದಲ್ಲಿ ಹೇಳಲಾಗಿದೆ.

**ಪ್ರವಾಸೋದ್ಯಮ ಮೇಳಕ್ಕೆ ಚಾಲನೆ**



ಬೆಂಗಳೂರು ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ಆರಂಭವಾದ ಮೂರು ದಿನಗಳ ಪ್ರಯಾಣ ಮತ್ತು ಪ್ರವಾಸೋದ್ಯಮ ಮೇಳವನ್ನು (ಟಿಟಿಎಫ್) ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ್ ಚಾಲನೆ ನೀಡಿದರು. ಪ್ರವಾಸೋದ್ಯಮ ಇಲಾಖೆ ಕಾರ್ಯದರ್ಶಿ ಕೆ.ವಿ.ತ್ರಿಲೋಕಚಂದ್ರ ಇದ್ದರು.

# ಪಕ್ಷದ ವರಿಷ್ಠರಿಗೆ ಆಕಾಂಕ್ಷಿಗಳ ಹೆಸರು ರವಾನೆ: ವಿಜಯೇಂದ್ರ

◆ **ಬೆಂಗಳೂರು:** ಇಂದಿನ ಕೋರ್ ಕಮಿಟಿ ಸಭೆಯಲ್ಲಿ ಮುಂದೆ ಬರುವ ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಅಭ್ಯರ್ಥಿಗಳು ಮತ್ತು ಆಕಾಂಕ್ಷಿಗಳ ಬಗ್ಗೆ ಚರ್ಚೆ ನಡೆದಿದೆ. ಕೋರ್ ಕಮಿಟಿಯಲ್ಲಿ ಚರ್ಚಿಸಿದ ಹೆಸರುಗಳನ್ನು ಪಕ್ಷದ ವರಿಷ್ಠರಿಗೆ ಕಳುಹಿಸಿಕೊಡುತ್ತೇವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.



ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿದ ಅವರು, ರಾಜ್ಯ ಕೋರ್ ಕಮಿಟಿ ಸಭೆಯು ಇಂದು ನಡೆದಿದೆ. ಕರ್ನಾಟಕ ರಾಜ್ಯ ಉಸ್ತುವಾರಿ ಡಾ. ರಾಧಾಮೋಹನ್ ದಾಸ್ ಅಗ್ರವಾಲ್, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಪ್ರತಿಪಕ್ಷನಾಯಕರು ಮತ್ತು ಎಲ್ಲ ಕೋರ್ ಕಮಿಟಿ ಸದಸ್ಯರು ಭಾಗವಹಿಸಿದ್ದರು ಎಂದರು. ವಿಧಾನಪರಿಷತ್ ಚುನಾವಣೆಗೆ ಅಭ್ಯರ್ಥಿಗಳ ಹೆಸರು ಘೋಷಿಸಿದ್ದೇವೆ. ವಿಧಾನಸಭೆ, ವಿಧಾನಪರಿಷತ್ ಚುನಾವಣೆಯ ಅಭ್ಯರ್ಥಿಗಳನ್ನು ಗೆಲ್ಲಿಸುವ ನಿಟ್ಟಿನಲ್ಲಿ ನಾವೆಲ್ಲ ಒಂದಾಗಿ, ಒಟ್ಟಾಗಿ ಪ್ರಯತ್ನ ಮಾಡಬೇಕು; ಸಂಪೂರ್ಣ ಶ್ರಮ ಹಾಕಬೇಕೆಂದು ಈ ಸಭೆಯಲ್ಲಿ ತೀರ್ಮಾನ ಆಗಿದೆ ಎಂದು ತಿಳಿಸಿದರು.

ಪ್ರಲ್ಹಾದ್ ಜೋಶಿ, ಗೋವಿಂದ ಕಾರಜೋಳ ಮತ್ತು ನಾನು, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಎಲ್ಲ ಆಕಾಂಕ್ಷಿಗಳು, ಪಕ್ಷದ ಪ್ರಮುಖರ ಜೊತೆ ಕುಳಿತು ಚರ್ಚಿಸಿ ಹಿಂದೆ ಆಗಿದ್ದನ್ನು ಮರೆತು, ಬದಿಗಿಟ್ಟು ನಾವೆಲ್ಲ ಒಟ್ಟಾಗಿ ಚುನಾವಣೆಯಲ್ಲಿ ಗೆಲ್ಲಲು ಶ್ರಮ ಹಾಕಬೇಕೆಂದು ಆ ಸಭೆ ನಡೆಸಿದ್ದೇವೆ ಎಂದು ಹೇಳಿದರು. ಒಟ್ಟಾರೆಯಾಗಿ ಕೋರ್ ಕಮಿಟಿಯಲ್ಲಿ ಚರ್ಚೆಯಾದ ಪ್ರಕಾರ ಹೆಸರುಗಳನ್ನು ಇವತ್ತು ಅಥವಾ ನಾಳೆ ದಿಲ್ಲಿಗೆ ಕಳಿಸಿಕೊಡುತ್ತೇವೆ. ಅಸಮಾಧಾನಿತರಿಗೆ ಏನು ಹೇಳಬೇಕೋ ಅದನ್ನು ನಾಲ್ಕು ಗೋಡೆ ಮಧ್ಯೆ ಹೇಳಿದ್ದೇವೆ. ಎಲ್ಲರನ್ನೂ ಕೂರಿಸಿ ಮಾತನಾಡಿದ್ದೇವೆ ಎಂದರು.

## ಕಿರುಸುದ್ದಿ

### ಆದ್ಯತೆ ಮೇರೆಗೆ ಇ-ಸ್ವತ್ತು

◆ **ವಿಧಾನಸಭೆ:** ಇ-ಆಸ್ತಿ ತಂತ್ರಾಂಶದಲ್ಲಿ ಉಂಟಾಗುವ ತಾಂತ್ರಿಕ ಸಮಸ್ಯೆಗಳನ್ನು ಆದ್ಯತೆಯ ಮೇರೆಗೆ ಬಗೆಹರಿಸಲಾಗುತ್ತಿದೆ. ಸ್ವತ್ತಿನ ಮಾಲೀಕರು ಇ-ಖಾತಾ ಕೋರಿ ಕರ್ನಾಟಕ ಒನ್ ಹಾಗೂ ಸಿಟಿಜನ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ನಗರಾಭಿವೃದ್ಧಿ ಹಾಗೂ ನಗರ ಯೋಜನಾ ಸಚಿವ ಬೈರತಿ ಸುರೇಶ್ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಜ್ಯೋತಿ ಗಣೇಶ್ ಜಿ.ಬಿ ಅವರು ಇ-ತಂತ್ರಾಂಶದಲ್ಲಿನ ಲೋಪದೋಷಗಳನ್ನು ಸರಿಪಡಿಸಿ ಆಸ್ತಿಯ ಮಾಲೀಕರಿಗೆ ಇ-ಸ್ವತ್ತು ಖಾತೆ ಮಾಡಿಕೊಡಲು ಕೋರಿದರು. ಇದಕ್ಕೆ ಉತ್ತರಿಸಿದ ಸಚಿವರು, ಕರ್ನಾಟಕ ಪೌರ ನಿಗಮಗಳ ಅಧಿನಿಯಮ 1976ರ ತಿದ್ದುಪಡಿಯಂತೆ 2024ರ ಸೆಪ್ಟೆಂಬರ್ 10ರ ಮೊದಲು ಅನಧಿಕೃತವಾಗಿ ರಚಿತವಾದ ಸ್ವತ್ತುಗಳಿಗೆ ಮಾತ್ರ ಖಾತಾ ನೀಡಲು ಇ-ಆಸ್ತಿ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ಒಟ್ಟು ವಿಸ್ತೀರ್ಣ ನಿವೇಶನ ಅಥವಾ ಸ್ವತ್ತಿನ ಪೂರ್ಣ ಅಳತೆಯನ್ನು ನಮೂದಿಸಲು ಅವಕಾಶವಿದೆ. ಕ್ರಯಪತ್ರದಲ್ಲಿರುವಂತೆ ಅಳತೆಯನ್ನು ತಂತ್ರಾಂಶದಲ್ಲಿ ನಮೂದು ಮಾಡಬೇಕು. ಸ್ವತ್ತು ಎಂದರೆ ಖಾಲಿ ಭೂಮಿ ಅಥವಾ ಕಟ್ಟಡ ಎರಡನ್ನೂ ಒಳಗೊಂಡಿರುತ್ತದೆ ಎಂದರು.



### ಹಂತ ಹಂತವಾಗಿ ತೋಟಗಾರಿಕಾ ಮಹಾವಿದ್ಯಾಲಯಗಳ ಸ್ಥಾಪನೆ

◆ **ವಿಧಾನಸಭೆ:** ಕರ್ನಾಟಕ ರಾಜ್ಯದಲ್ಲಿ ಹಂತ ಹಂತವಾಗಿ ತೋಟಗಾರಿಕಾ ಮಹಾವಿದ್ಯಾಲಯಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸಚಿವ ಎಸ್.ಎಸ್. ಮಲ್ಲಿಕಾರ್ಜುನ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ಷಡಕ್ಷರಿ ಅವರು ತುಮಕೂರು ಜಿಲ್ಲೆ ತಿಪಟೂರಿನಲ್ಲಿ ತೋಟಗಾರಿಕೆ ಮಹಾವಿದ್ಯಾಲಯದ ಅವಶ್ಯಕತೆ ಇದೆ. ಇದಕ್ಕಾಗಿ ಸರ್ಕಾರ ಸರ್ಕಾರ ತೋಟಗಾರಿಕೆ ಕಾಲೇಜನ್ನು ಸ್ಥಾಪಿಸಲು ಕ್ರಮ ವಹಿಸ ಬೇಕೆಂದು ಕೋರಿದರು. ಇದಕ್ಕೆ ಉತ್ತರಿಸಿದ ಸಚಿವರು, ಹೊಸ ತೋಟಗಾರಿಕೆ ಮಹಾವಿದ್ಯಾಲಯಗಳನ್ನು ಸ್ಥಾಪಿಸಲು ಇರುವ ಸಾಧಕ-ಬಾಧಕಗಳನ್ನು ಪರಿಶೀಲಿಸಲು ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಿಗಳ ವಿಶ್ವವಿದ್ಯಾ ಲಯದ ವಿಶ್ರಾಂತ ಕುಲಪತಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ತಿಪಟೂರು ತಾಲೂಕಿನ ಬಿದರೆಗುಡಿಕಾವಲಿ ನಲ್ಲಿ ತೋಟಗಾರಿಕೆ ಮಹಾವಿದ್ಯಾಲಯ ಸ್ಥಾಪಿಸುವುದು ಸೇರಿದಂತೆ ರಾಜ್ಯದ ವಿವಿಧ ಸ್ಥಳಗಳಲ್ಲಿ ತೋಟಗಾರಿಕೆ ಮಹಾವಿದ್ಯಾಲಯಗಳನ್ನು ಸ್ಥಾಪಿಸುವ ಬಗ್ಗೆ ಈ ಸಮಿತಿ ವಿವಿಧ ಆಯಾಮಗಳನ್ನು ಪರಿಶೀಲಿಸಿ ವರದಿ ನೀಡಿದೆ ಎಂದು ಸಚಿವರು ತಿಳಿಸಿದರು.



### ಕಲಬುರಗಿಯಲ್ಲಿ ಶೀತಲೀಕರಣ ಘಟಕ: ಸಚಿವ

◆ **ವಿಧಾನಸಭೆ:** ಕಲಬುರಗಿ ಜಿಲ್ಲೆಯ ಆಳಂದ ಅಥವಾ ಕಲಬುರಗಿಯಲ್ಲಿ ಶೀತಲೀಕರಣ ಘಟಕಗಳನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ. ಅನುದಾನದ ಲಭ್ಯತೆಯನುಸಾರ ಸ್ಥಳೀಯ ಎಪಿಎಂಸಿ ಜತೆ ಚರ್ಚಿಸಿ ಘಟಕ ಸ್ಥಾಪನೆ ಮಾಡುವ ಬಗ್ಗೆ ತೀರ್ಮಾನಿಸಲಾಗುವುದು ಎಂದು ಸಚಿವ ಎಸ್.ಎಸ್. ಮಲ್ಲಿಕಾರ್ಜುನ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ಬಿ.ಆರ್. ಪಾಟೀಲ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕಲಬುರಗಿ ಜಿಲ್ಲೆಯಲ್ಲಿ 13624 ಮೆ.ಟನ್ ಸಾಮರ್ಥ್ಯವುಳ್ಳ 4 ಶಿಥಲೀಕರಣ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಅಲ್ಲದೆ, ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮಿಷನ್ ಯೋಜನೆಯಲ್ಲಿ ನಿರ್ಮಿಸಲು ಉತ್ತೇಜನ ನೀಡಲಾಗುತ್ತಿದೆ ಎಂದರು.

## 915 ಎಕರೆ ಸರ್ಕಾರ ಭೂಸ್ವಾಧೀನ: ಸಚಿವ ಎಂ.ಬಿ. ಪಾಟೀಲ್

# ವಿಮಾನ ನಿಲ್ದಾಣ ನಿರ್ಮಾಣ

◆ **ವಿಧಾನಸಭೆ:** ಬಳ್ಳಾರಿ, ಹೊಸಪೇಟೆ, ಹಂಪೆ, ಆನೆಗೊಂದಿ, ಸಂಡೂರು, ಕೊಪ್ಪಳ, ಕುರು ಗೋಡು, ಸಿರಗುಪ್ಪ ಮುಂತಾದ ಭಾಗಗಳಿಗೆ ಅನುಕೂಲ ವಾಗುವಂತೆ ವಿಮಾನ ನಿಲ್ದಾಣ ಬರಬೇಕೆಂಬುದು ಸರ್ಕಾರದ ಉದ್ದೇಶವಾಗಿದೆ ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಜನಾರ್ದನ ರೆಡ್ಡಿ ವಿಷಯ ಪ್ರಸ್ತಾಪಿಸಿ, 2010ರಲ್ಲಿ ಬಳ್ಳಾರಿ ವಿಮಾನ ನಿಲ್ದಾಣಕ್ಕೆ ಜಾಗ ಗುರುತಿಸಿ 915 ಎಕರೆಯನ್ನು ಸರ್ಕಾರ ಭೂಸ್ವಾಧೀನ ಮಾಡಿದೆ. ಆದರೆ, 15 ವರ್ಷಗಳಾದರೂ ಇನ್ನೂ ವಿಮಾನ ನಿಲ್ದಾಣ ನಿರ್ಮಿಸಿಲ್ಲ, ಆ ಜಾಗವನ್ನು ಕೇಂದ್ರ ಸರ್ಕಾರಕ್ಕೆ ಹಸ್ತಾಂತರಿಸಿದರೆ 750 ಕೋಟಿ ರೂ. ವೆಚ್ಚದಲ್ಲಿ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಅದು ತಯಾರಿದೆ ಎಂದು ಹೇಳಿದರು.

ಇದಕ್ಕೆ ಉತ್ತರಿಸಿದ ಸಚಿವ ಎಂ.ಬಿ. ಪಾಟೀಲ ಅವರು, ಬಳ್ಳಾರಿ ವಿಮಾನ ನಿಲ್ದಾಣದಿಂದ ಆ ಜಿಲ್ಲೆಯ ಜೊತೆಗೆ ಕೊಪ್ಪಳ ಮತ್ತು ವಿಜಯನಗರ ಜಿಲ್ಲೆಗಳ ಜನರಿಗೂ ಪ್ರಯೋಜನ ಆಗಬೇಕು. ಬಳ್ಳಾರಿ ವಿಮಾನ ನಿಲ್ದಾಣದಿಂದ ನೆರೆಯ ಆಂಧ್ರಪ್ರದೇಶಕ್ಕೂ ಲಾಭವಾಗಲಿದೆ. ಈ ಯೋಜನೆಯ ಸಂಬಂಧ ಸದ್ಯದಲ್ಲೇ ಮೂರೂ ಜಿಲ್ಲೆಗಳ ಜನಪ್ರತಿನಿಧಿಗಳ ಸಭೆ ಕರೆದು, ಸಿಎಂ ಅಧ್ಯಕ್ಷತೆಯಲ್ಲಿ ಸಾಧಕ-ಬಾಧಕಗಳನ್ನು ಯೋಚಿಸಲಾಗುವುದು ಎಂದರು.

ಈಗ ಹೊಸದಾಗಿ ಗುರುತಿಸಿರುವ ಸ್ಥಳ ಬಳ್ಳಾರಿಯಿಂದ 19 ಕಿ.ಮೀ. ದೂರದಲ್ಲಿದೆ. ಅಲ್ಲಿಂದ ಹೊಸಪೇಟೆಗೆ 33 ಕಿ.ಮೀ., ಹಂಪಿಗೆ 26 ಕಿ.ಮೀ, ಸಂಡೂರಿಗೆ 33 ಕಿ.ಮೀ., ಕೊಪ್ಪಳಕ್ಕೆ 75 ಕಿ.ಮೀ., ಕುರುಗೋಡಿಗೆ 14 ಕಿ.ಮೀ., ತೋರಣಗಲ್ಲಿಗೆ 13 ಕಿ.ಮೀ. ಮತ್ತು ಸಿರಗುಪ್ಪಕ್ಕೆ 43 ಕಿ.ಮೀ. ಆಗಲಿದೆ. ಆದರೆ, ಈಗ ಗುರುತಿಸಿರುವ ಜಾಗವು ವಿಮಾನ ನಿಲ್ದಾಣಕ್ಕೆ ಎಷ್ಟರ ಮಟ್ಟಿಗೆ ಸೂಕ್ತ ಎನ್ನುವುದನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ ತೀರ್ಮಾನಿಸಬೇಕು. ಇದು ಕಾರ್ಯಸಾಧು ಎನಿಸಿದರೆ ಎಲ್ಲ ಜನಪ್ರತಿನಿಧಿಗಳ ಜತೆ ಚರ್ಚಿಸಿ ಮುಂದಿನ ಹೆಜ್ಜೆ ಇಡಲಾಗುವುದು ಎಂದು ವಿವರಿಸಿದರು.

ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಾಗುತ್ತಿತ್ತು ವಿಮಾನ ನಿಲ್ದಾಣ ನಿರ್ಮಿಸುವಾಗಲೇ ದೂರದೃಷ್ಟಿ ಇರಬೇಕು. ಇಲ್ಲದಿದ್ದರೆ ಹುಬ್ಬಳ್ಳಿ, ಬೆಳಗಾವಿ, ಬೀದರ್ ಇಲ್ಲೆಲ್ಲ ಆಗಿರುವ ತಪ್ಪುಗಳೇ ಮುಂದುವರಿಯುತ್ತವೆ. ಬೆಳಗಾವಿ ಮತ್ತು ಹುಬ್ಬಳ್ಳಿ ವಿಮಾನ ನಿಲ್ದಾಣದ ಮಧ್ಯೆ ಕೇವಲ 70 ಕಿ.ಮೀ. ಅಂತರವಿದೆ. ಇವೆರಡೂ ಜಿಲ್ಲೆಗಳಿಗೆ ಅನುಕೂಲವಾಗುವ ಹಾಗೆ ನಡುವೆ ನಿಲ್ದಾಣ ನಿರ್ಮಿಸಿದ್ದರೆ ಪ್ರಯಾಣಿಕರ ದಟ್ಟಣೆ ಪರಿಗಣಿಸಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಎಂದು ಘೋಷಿಸುತ್ತಿದ್ದರು. ಬೆಳಗಾವಿಯಲ್ಲಿ ಭಾರತೀಯ ವಾಯುಪಡೆ ಇರುವುದು ನಮ್ಮ ಪ್ರಯೋಜನಕ್ಕೆ ಬಂದಿದೆ ಎಂದವರು ಹೇಳಿದರು.

ವಿಜಯಪುರದಲ್ಲೂ ಇದೇ ತಪ್ಪಾಗಿದೆ. ಈಗ ಉದ್ಘಾಟನೆಗೆ ಸಜ್ಜಾಗಿರುವ ವಿಮಾನ ನಿಲ್ದಾಣ ಕಲಬುರಗಿ ರಸ್ತೆಯಲ್ಲಿದೆ. ಅದರ ಬದಲು ಆಲಮಟ್ಟಿ ಕಡೆಗೆ ಮಾಡಿದ್ದರೆ ಬಾದಾಮಿ, ಐಹೊಳೆ, ಪಟ್ಟದಕಲ್ಲು, ಬಾಗಲಕೋಟೆ ಮುಂತಾದ ಸ್ಥಳಗಳಿಗೆ ಪ್ರಯೋಜನ ಸಿಗುತ್ತಿತ್ತು. ವಿಮಾನ ನಿಲ್ದಾಣ ನಿರ್ಮಿಸಿದ ನಂತರ ಅದು ಸ್ತಬ್ಧವಾದರೆ ಪ್ರಯೋಜನವೇನು? ಹೀಗಾಗಿ ಬಳ್ಳಾರಿ ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಕೆಐಎಡಿಬಿಯಿಂದ 800 ಮತ್ತು 1,200 ಎಕರೆ ಇರುವ ಎರಡು ಹೊಸ ತಾಣಗಳನ್ನು ನೋಡಲಾಗಿದೆ ಎಂದು ತಿಳಿಸಿದರು.

### ಉಡಾನ್ ಯೋಜನೆ ವಿಸ್ತರಣೆಗೆ ಪ್ರಸ್ತಾವ

ಜಿಲ್ಲಾ ಮತ್ತು ವಿಭಾಗೀಯ ಮಟ್ಟದ ಕೇಂದ್ರಗಳಲ್ಲಿರುವ ವಿಮಾನ ನಿಲ್ದಾಣಗಳು ಇಡೀ ದೇಶದಲ್ಲಿ ತೊಂದರೆ ಎದುರಿಸುತ್ತಿವೆ. ರಾಜ್ಯದ ಬೀದರ್ ವಿಮಾನ ನಿಲ್ದಾಣ ಸದ್ಯಕ್ಕೆ ಕೆಕೆಆರ್‌ಡಿಬಿ ನೆರವಿನಿಂದ ನಡೆಯುವಂತಾಗಿದೆ. ಅದೇ ರೀತಿ ಕಲಬುರಗಿ ವಿಮಾನ ನಿಲ್ದಾಣ ಕೂಡ ಕಾರ್ಯಾಚರಣೆ ಮಾಡಬೇಕೆನ್ನುವ ಬೇಡಿಕೆ ಬಂದಿದ್ದು, ಅದನ್ನು ಮಾಡುತ್ತೇವೆ. ಹೀಗಾಗಿ ಉಡಾನ್ ಯೋಜನೆಯನ್ನು 3ರಿಂದ 5 ವರ್ಷಗಳಿಗೆ ವಿಸ್ತರಿಸಬೇಕು. ನಂತರದ ಐದು ವರ್ಷಗಳ ಕಾಲ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 50:50 ಅನುಪಾತದಲ್ಲಿ ನಿರ್ವಹಿಸಬೇಕು ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವರ ಬಳಿ ನಾನು ಪ್ರಸ್ತಾಪ ಇಟ್ಟಿದ್ದೇನೆ. ಅಲ್ಲದೇ ಕರ್ನಾಟಕದಲ್ಲಿ ವಿಮಾನ ಯಾನ ನೀತಿ ತರುವುದಕ್ಕೆ ತಯಾರಿ ನಡೆಸಲಾಗುತ್ತಿದೆ ಎಂದು ಎಂ.ಬಿ. ಪಾಟೀಲ ತಿಳಿಸಿದರು.



# ಬಜೆಟ್‌ನಲ್ಲಿ ಮನೆ ಘೋಷಣೆ ಇಲ್ಲ: ಶಾಸಕ ಸುರೇಶ ಗೌಡ

◆ **ವಿಧಾನಸಭೆ:** ಕಳೆದ ಮೂರು ವರ್ಷಗಳಲ್ಲಿ ಆಶ್ರಯ ಯೋಜನೆಯಡಿ ಜನರಿಗೆ ಒಂದೇ ಒಂದು ಮನೆ, ನಿವೇಶನ ನೀಡಿಲ್ಲ. ಕರಾವಳಿ ಭಾಗದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಕೋಸ್ಟಲ್ ಟೂರಿಸಂ ಕಾರಿಡಾರ್ ನಿರ್ಮಾಣದ ಬೇಡಿಕೆ ಬಗ್ಗೆ ಸರ್ಕಾರ ಬಜೆಟ್‌ನಲ್ಲಿ ಪ್ರಸ್ತಾಪಿಸಿಯೇ ಇಲ್ಲ ಎಂದು ಬಿಜೆಪಿ ಶಾಸಕ ಸುರೇಶ ಗೌಡ ಅಸಮಾಧಾನ ವ್ಯಕ್ತಪಡಿಸಿದರು.

ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಅವರು, ಈ ಬಾರಿ ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಕೇವಲ 10.50 ಕೋಟಿ ರೂ. ಅನುದಾನ ಒದಗಿಸಿದೆ. ಇದು ಆನೆ ಹೊಟ್ಟೆಗೆ ಅರೆ ಕಾಸಿನ ಮಜ್ಜಿಗೆ ಎನ್ನುವಂತಾಗಿದೆ. ಈ ಹಿನ್ನೆಲೆಯಲ್ಲಿ ಕನಿಷ್ಠ 200 ಕೋಟಿ ರೂ. ಒದಗಿಸಬೇಕು. ಈ ಭಾಗದ ಜನರ ಜೀವನಾಡಿಯಾಗಿರುವ ಮತ್ಸೋದ್ಯಮಕ್ಕೂ ನಿರೀಕ್ಷಿತ ಅನುದಾನ ಸಿಕ್ಕಿಲ್ಲ. ಮತ್ಸ್ಯಾಶ್ರಯ ಯೋಜನೆಗೆ ನೀಡಿರುವ 1.20 ಲಕ್ಷ ರೂ. ಯಾವುದಕ್ಕೂ ಸಾಲದು. ಪ್ರತಿ ಕುಟುಂಬಕ್ಕೆ ಕನಿಷ್ಠ 5 ಲಕ್ಷ ರೂ. ಒದಗಿಸಬೇಕು.

ಉತ್ತರ ಕರ್ನಾಟಕದಿಂದ ವಲಸೆ ಬರುವ ಕಾರ್ಮಿಕರ ಮಕ್ಕಳ ಅನುಕೂಲಕ್ಕಾಗಿ ನಮ್ಮ ಭಾಗದಲ್ಲಿ ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗ ಗಳ ವಸತಿ ಶಾಲೆಗಳ ನಿರ್ಮಾಣಕ್ಕೆ ಸರ್ಕಾರ ಮುಂದಾಗಬೇಕು ಎಂದು ಆಗ್ರಹಿಸಿದರು.

ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಬಡವರಿಗೆ ಒಂದೇ ಒಂದು ಆಶ್ರಯ ಮನೆ, ನಿವೇಶನ ಒದಗಿಸಿಲ್ಲ. ಗ್ರಾಮೀಣ ಜನರಿಗೆ ನೀರೊದಗಿಸುವ ಜೆಜೆಎಂ ಯೋಜನೆ ಸತ್ತುಹೋಗಿದೆ. ಶಾಸಕರು ಕ್ಷೇತ್ರದಲ್ಲಿ ತಲೆ ಎತ್ತುಕೊಂಡು ತಿರುಗಾಡದ ಪರಿಸ್ಥಿತಿ ಸೃಷ್ಟಿಯಾಗಿದೆ ಎಂದು ಅಸಹಾಯಕತೆಯನ್ನು ತೋಡಿಕೊಂಡ ಅವರು, ಕಳೆದ 3 ವರ್ಷಗಳಲ್ಲಿ ಘೋಷಿಸಿರುವ ಎಷ್ಟು ಯೋಜನೆಗಳನ್ನು ಜಾರಿಗೆ ತಂದಿದೆ ಎಂಬುದನ್ನು ಸರ್ಕಾರ ಸದನಕ್ಕೆ ತಿಳಿಸಬೇಕು ಎಂದು ಸವಾಲು ಹಾಕಿದರು.



> **ವಿವಿಧ ದೇಶಗಳು ಕಡಲ ತೀರದಲ್ಲಿ ಸೃಷ್ಟಿಸಿರುವ ಪ್ರವಾಸೋದ್ಯಮ ಮಾದರಿಯಲ್ಲಿ ಮಂಗಳೂರು, ಉಡುಪಿ ಸೇರಿದಂತೆ ಕರಾವಳಿ ಭಾಗದಲ್ಲಿ 320 ಕಿ. ಮೀ. ಉದ್ದಕ್ಕೂ ಪ್ರವಾಸೋದ್ಯಮವನ್ನು ಉತ್ತೇಜಿಸಬೇಕು. ಪಿಪಿಪಿ ಮಾದರಿಯಲ್ಲಿ ಹೋಟೆಲ್, ರೆಸಾರ್ಟ್ ಹಾಗೂ ಹೋಂ ಸ್ಟೇಗಳನ್ನು ಸೃಷ್ಟಿಸಬೇಕು. ಅದಕ್ಕಾಗಿ ಕೋಸ್ಟಲ್ ಟೂರಿಸಂ ರೂಪಿಸಬೇಕು.**
>
> ■ **ಸುರೇಶ ಗೌಡ, ಬಿಜೆಪಿ ಶಾಸಕ**

# ವೈದ್ಯರ ವರ್ಗಾವಣೆಗೆ ಸದಸ್ಯರ ಆಕ್ರೋಶ

◆ **ವಿಧಾನಸಭೆ:** ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿನ ವೈದ್ಯರ ವರ್ಗಾವಣೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ವಿಲೀನಗೊಳಿಸುವುದರ ವಿರುದ್ಧ ಪಕ್ಷಭೇದ ಮರೆತು ಸದಸ್ಯರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಪ್ರಶೋತ್ತರದ ಬಳಿಕ ಜೆಡಿಎಸ್ ಶಾಸಕಿ ಶಾರದಾ ಪೂರ್ಯ ನಾಯಕ್, ಶಿವಮೊಗ್ಗದಲ್ಲಿ ಸಮುದಾಯ ಆರೋಗ್ಯ ಕೇಂದ್ರದಲ್ಲಿದ್ದ ತಜ್ಞ ವೈದ್ಯರನ್ನು ತಾಲೂಕು ಆಸ್ಪತ್ರೆಗಳಿಗೆ ವರ್ಗಾವಣೆ ಮಾಡಲಾಗಿದೆ. ಹೀಗಾಗಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಸರಿಯಾದ ಚಿಕಿತ್ಸೆ ಲಭಿಸುತ್ತಿಲ್ಲ. ವೈದ್ಯರನ್ನು ತಕ್ಷಣ ಕರ್ತವ್ಯದಿಂದ ಬಿಡುಗಡೆಯಾಗಿ ನಿಯೋಜಿಸಲಾದ ಸ್ಥಳದಲ್ಲಿ ವರದಿ ಮಾಡಿಕೊಳ್ಳುವಂತೆ ಬೆಂಗಳೂರಿನಿಂದ ಹಿರಿಯ ಅಧಿಕಾರಿಗಳು ಕರೆ ಮಾಡಿ, ಒತ್ತಡ ಹೇರುತ್ತಿದ್ದಾರೆ. ಈ ಬಗ್ಗೆ ಈ ಮೊದಲು ವಿಧಾನಸಭೆಯಲ್ಲಿ ಚರ್ಚಿಸಲಾಗಿತ್ತು. ಅರ್ಧ ತಾಸು ವಿಸ್ತೃತ ಚರ್ಚೆಗೆ ಅವಕಾಶ ನೀಡುವುದಾಗಿ ಸಭಾಧ್ಯಕ್ಷರು ಭರವಸೆ ನೀಡಿದ್ದರು. ಅದರಂತೆ ಈಗಾಗಲೇ ಚರ್ಚೆಗೆ ಅವಕಾಶ ನೀಡಿ ಎಂದು ಪಟ್ಟು ಹಿಡಿದರು.

ಇದಕ್ಕೆ ಬಿಜೆಪಿ ಶಾಸಕರಾದ ಸುನೀಲ್ ಕುಮಾರ್, ಚನ್ನಬಸಪ್ಪ, ಆರಗ ಜ್ಞಾನೇಂದ್ರ, ಕಾಂಗ್ರೆಸ್ ಶಾಸಕ ಅಶೋಕ್ ಕುಮಾರ್ ರೈ ಸೇರಿದಂತೆ ಹಲವಾರು ಮಂದಿ ಧ್ವನಿಗೂಡಿಸಿದರು. ಒಂದು ಹಂತದಲ್ಲಿ ಎಲ್ಲಾ ಶಾಸಕರು ಗದ್ದಲ ಮಾಡಿ ವೈದ್ಯರ ವರ್ಗಾವಣೆಯನ್ನು ಹಿಂಪಡೆಯಬೇಕು. ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮುಚ್ಚುವ ನಿರ್ಧಾರ ಕೈಬಿಡಬೇಕು ಎಂದು ಒತ್ತಾಯಿಸಿದರು.


ಈ ವೇಳೆ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ಸ್ವಯಂ ಪ್ರೇರಿತ ಹೇಳಿಕೆ ನೀಡಿ, ಗುರುವಾರ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಚರ್ಚೆಯಾಗಿದೆ. ವೈದ್ಯರ ವರ್ಗಾವಣೆ ಮಾಡಬಾರದು ಎಂದು ಮುಖ್ಯಮಂತ್ರಿ ಅವರು ಸೂಚನೆ ನೀಡಿದ್ದಾರೆ ಎಂದರೂ ಸದಸ್ಯರು ಗದ್ದಲ ನಿಲ್ಲಿಸಲಿಲ್ಲ.

ಗೃಹ ಸಚಿವ ಪರಮೇಶ್ವರ್ ಮಧ್ಯ ಪ್ರವೇಶ ಮಾಡಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ವಿಲೀನದ ಬಗ್ಗೆ ಸಂಪುಟದಲ್ಲಿ ಚರ್ಚೆಗಳಾಗಿವೆ. ಒಂದು ವೇಳೆ ವೈದ್ಯರ ವರ್ಗಾವಣೆಯಾಗಿದ್ದರೆ ಅವರನ್ನು ಮರಳಿ ಕೆಲಸ ನಿರ್ವಹಿಸುತ್ತಿದ್ದ ಸ್ಥಳಕ್ಕೆ ವಾಪಸ್ ಕಳುಹಿಸಲಾಗುವುದು. ಈ ಬಗ್ಗೆ ಮುಖ್ಯಮಂತ್ರಿಯವರು, ಆರೋಗ್ಯ ಸಚಿವರಿಗೆ ಸೂಚನೆ ನೀಡಿದ್ದಾರೆ. ತಾಲೂಕು ಆಸ್ಪತ್ರೆಗಳಲ್ಲಿ ಪ್ರಸೂತಿ ಮತ್ತು ಮಕ್ಕಳ ಆರೋಗ್ಯಕ್ಕೆ ಒತ್ತು ನೀಡುವಸಲುವಾಗಿ ತಜ್ಞ ವೈದ್ಯರನ್ನು ಪುನರ್ ನಿಯೋಜನೆ ಮಾಡುತ್ತಿರುವುದಾಗಿ ಆರೋಗ್ಯ ಸಚಿವರು ವಿವರಣೆ ನೀಡಿದ್ದಾರೆ. ಸದ್ಯಕ್ಕೆ ಅದ್ಯಾವುದನ್ನು ಮಾಡದಂತೆ ಮುಖ್ಯಮಂತ್ರಿ ತಿಳಿಸಿದ್ದಾರೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿಯೂ ಸೇವೆ ಮುಂದುವರಿಯಲಿದೆ ಎಂದು ತಿಳಿಸಿದರು.

ಸದಸ್ಯರು ಇದನ್ನು ಒಪ್ಪದೆ ವರ್ಗಾವಣೆ ಆದೇಶವಾಗಿರುವ ವೈದ್ಯರು ಬೇರೆಡೆ ಕರ್ತವ್ಯಕ್ಕೆ ವರದಿ ಮಾಡಿಕೊಂಡರೆ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಸಮಸ್ಯೆಯಾಗುತ್ತದೆ ಎಂದು ಪ್ರತಿಪಾದಿಸಿದರು. ಕೊನೆಗೆ ಸಭಾಧ್ಯಕ್ಷರು ಮಧ್ಯಪ್ರವೇಶಿಸಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ವಿಲೀನವನ್ನು ಕೈ ಬಿಡಲು ಮತ್ತು ವೈದ್ಯರ ವರ್ಗಾವಣೆಯನ್ನು ಸ್ಥಗಿತಗೊಳಿಸಲು ಮುಖ್ಯಮಂತ್ರಿ ಸಂಪುಟದಲ್ಲಿ ಸೂಚಿಸಿರುವುದಾಗಿ ಸಚಿವರು ಹೇಳುತ್ತಿದ್ದಾರೆ. ಸದ್ಯಕ್ಕೆ ಎಲ್ಲವೂ ಯಥಾ ಸ್ಥಿತಿಯಲ್ಲಿರಲಿದೆ ಎಂದರು.

# 20 ಎಕರೆಯಲ್ಲಿ ಆಧುನಿಕ ಹೂವಿನ ಮಾರುಕಟ್ಟೆ

◆ **ವಿಧಾನಸಭೆ:** ಚಿಕ್ಕಬಳ್ಳಾಪುರದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯಾಪ್ತಿಯ 20 ಎಕರೆಯಲ್ಲಿ ಆಧುನಿಕ, ಸುಸಜ್ಜಿತ ಹೂವಿನ ಮಾರುಕಟ್ಟೆ ಸ್ಥಾಪಿಸಲಾಗುವುದು ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ತಿಳಿಸಿದರು.



ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ಶರತ್ ಬಚ್ಚೇಗೌಡ ಪ್ರಶ್ನೆಗೆ ಉತ್ತರಿಸಿದ ಅವರು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆಯ ಎಂಪಿಎಂಸಿ ಮಾರುಕಟ್ಟೆ ಪ್ರಾಂಗಣದಲ್ಲಿರುವ ಜಮೀನಿನಲ್ಲಿ ಹೂವಿನ ಮಾರುಕಟ್ಟೆ ಅಭಿವೃದ್ಧಿಪಡಿಸುವ ಯೋಜನಾ ವರದಿ ತಯಾರಿಸಲಾಗಿದ್ದು, ಸದ್ಯದಲ್ಲೇ ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಹೇಳಿದರು.

ಈ ಸಾಲಿನ ಬಜೆಟ್ ಭಾಷಣದಲ್ಲಿ ಚಿಕ್ಕಬಳ್ಳಾಪುರದಲ್ಲಿ ಹೂವಿನ ಮಾರುಕಟ್ಟೆ ಪ್ರಸ್ತಾವನೆ ಮಾಡಲಾಗಿದ್ದು, ಸುಮಾರು 20 ಕೋಟಿ ರೂ. ಅನುದಾನ ಮಂಜೂರು ಮಾಡಲಾಗಿದೆ. ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ. ಇದಾದ ಬಳಿಕ ಹೊಸಕೋಟೆಯಲ್ಲಿ ಹೂವಿನ ಮಾರುಕಟ್ಟೆ, ಶೈತ್ಯಾಗಾರ ನಿರ್ಮಾಣಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಒಂದು ಕಾಲದಲ್ಲಿ ನಾವು ಹೊರ ದೇಶಗಳಿಂದ ಪುಷ್ಪಗಳನ್ನು ಆಮದು ಮಾಡಿಕೊಳ್ಳುತ್ತಿದ್ದೆವು. ಈಗ ಪುಷ್ಪೋದ್ಯಮ ರಾಜ್ಯದಲ್ಲಿ ದೊಡ್ಡದಾಗಿ ಬೆಳೆದಿದ್ದು, ಪುಷ್ಪಗಳನ್ನು ರಫ್ತು ಮಾಡುವಷ್ಟು ಶಕ್ತಿ ಬಂದಿದೆ. ಸುಮಾರು 37 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಪುಷ್ಪ ಕೃಷಿ ಮಾಡಲಾಗುತ್ತಿದೆ. ರಾಜ್ಯದಲ್ಲಿ ಹೂವಿಗಾಗಿ ಸ್ವತಂತ್ರ ಮಾರುಕಟ್ಟೆ ಇಲ್ಲ. ಹಾಲಿ ಇರುವ 170 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ, ಇತರೆ ಅಧಿಸೂಚಿತ ಉತ್ಪನ್ನಗಳ ಜೊತೆಗೆ ಹೂವು ಉತ್ಪನ್ನದ ವಹಿವಾಟು ನಿಯಂತ್ರಣವಾಗುತ್ತಿದೆ ಎಂದರು.

## ವಾರದಲ್ಲಿ ಸಿಲಿಂಡರ್ ಸಮಸ್ಯೆಗೆ ಪರಿಹಾರ: ಸಚಿವ ಮುನಿಯಪ್ಪ

◆ **ವಿಧಾನಪರಿಷತ್:** ಹೊಟೇಲ್‌ಗಳಿಗೆ ಸಿಲಿಂಡರ್ ಪೂರೈಸಲು ಸದ್ಯದ ಮಟ್ಟಿಗೆ ದಾಸ್ತಾನಿಲ್ಲ. ಒಂದು ವಾರದಲ್ಲಿ ಸಮಸ್ಯೆ ಪರಿಹಾರವಾಗುವ ವಿಶ್ವಾಸವಿದೆ. 10 ದಿನಗಳವರೆಗೆ ಮಾಲೀಕರು ತಾಳ್ಮೆಯಿಂದ ಇರಬೇಕಾಗುತ್ತದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು. ಶೂನ್ಯ ವೇಳೆಯಲ್ಲಿ ಕಾಂಗ್ರೆಸ್‌ನ ಐವಾನ್ ಡಿಸೋಜಾ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ತೈಲ ಕಂಪನಿಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಗಿದೆ. ಹೋಟೆಲ್‌ಗಳಿಗೆ ವಾಣಿಜ್ಯ ಗ್ಯಾಸ್ ಸಿಲಿಂಡರ್ ಅನ್ನು ಬೇಡಿಕೆಗೆ ಅನುಗುಣವಾಗಿ ಒದಗಿಸಲು ಸದ್ಯ ಆಗುತ್ತಿಲ್ಲ. ಆದರೆ ಆಸ್ಪತ್ರೆ, ಹಾಸ್ಟೆಲ್, ವಸತಿ ಶಾಲೆಗಳಿಗೆ ಗ್ಯಾಸ್ ಒದಗಿಸಲಾಗುತ್ತದೆ ಎಂದರು.

## ವಾಟಾಳ್‌ಗೆ ರಾಜ್ಯೋತ್ಸವ ಪ್ರಶಸ್ತಿ

◆ **ವಿಧಾನಪರಿಷತ್:** ಕರ್ನಾಟಕದಲ್ಲಿ ನೆಲ, ಜಲ, ಭಾಷೆಯ ಸಂರಕ್ಷಣೆಗೆ ಹೋರಾಟ ಮಾಡುವ ಸಂಘ ಸಂಸ್ಥೆಗಳಿಗೆ ಆರ್ಥಿಕ ಶಕ್ತಿ ಮತ್ತು ಇತರೆ ಸಂಪನ್ಮೂಲಗಳನ್ನು ನೀಡುವ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತಿದೆ. ಆದರೆ, ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಕೊಡಬೇಕಾಗಿದ್ದು ನಿಜ. ಈ ವರ್ಷ ಸಮಿತಿಯ ಮುಂದೆ ಈ ವಿಷಯವನ್ನು ಪ್ರಸ್ತಾಪಿಸಿ ಅವರ ಹೆಸರನ್ನು ಪರಿಗಣಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ತಿಳಿಸಿದರು.

ಶೂನ್ಯವೇಳೆಯಲ್ಲಿ ರಮೇಶ್ ಬಾಬು ಪ್ರಶ್ನೆಗೆ ಉತ್ತರಿಸಿದ ಅವರು, ವಾಟಾಳ್ ನಾಗರಾಜ್ ಅವರಂತಹ ಹಿರಿಯ ಹೋರಾಟಗಾರರು ಸೇರಿದಂತೆ ಇನ್ನೂ ಅನೇಕರಿಗೆ ಪ್ರಶಸ್ತಿ ನೀಡಬೇಕಿದೆ. ಪ್ರಸಕ್ತ ವರ್ಷ ಸಮಿತಿಯ ಮುಂದೆ ಈ ಪ್ರಸ್ತಾವನೆ ಇರಿಸಲಾಗುವುದು ಎಂದರು.

## ಉತ್ತರ ನೀಡಿ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುತ್ತಿಲ್ಲ

# ಉತ್ತರ ನೀಡುವಲ್ಲಿ ಸರ್ಕಾರ ವಿಫಲ

◆ **ವಿಧಾನಪರಿಷತ್:** ಸದಸ್ಯರು ಕೇಳಿದ ಹಲವಾರು ಪ್ರಶ್ನೆಗಳಿಗೆ ಇನ್ನೂ ಉತ್ತರವೇ ಬಂದಿಲ್ಲ ಎಂಬ ಸದಸ್ಯ ಭೋಜೇಗೌಡ ಅವರ ಆಕ್ಷೇಪಕ್ಕೆ ಸಹಮತ ವ್ಯಕ್ತಪಡಿಸಿದ ಸಭಾಪತಿ ಬಸವರಾಜ ಹೊರಟ್ಟಿ ಅವರು, ಉತ್ತರ ನೀಡುವಲ್ಲಿ ವಿಫಲವಾದ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.



ಉತ್ತರನೀಡಲು ವಿಫಲವಾದರೆ ಅಧಿಕಾರಿಗಳ ಮೇಲೆ ಏಕೆ ಕ್ರಮ ಕೈಗೊಳ್ಳುತ್ತಿಲ್ಲ, ಉತ್ತರ ಕೊಡುವುದಿಲ್ಲ ಎಂದಾದರೂ ಹೇಳಿ ನಾನು ಕೇಳುವುದನ್ನೇ ಬಿಟ್ಟುಬಿಡುತ್ತೇನೆ ಎಂದು ಖಾರವಾಗಿ ನುಡಿದರು. ಆಗ ಸ್ಪಷ್ಟೀಕರಣ ನೀಡಲು ಮುಂದಾದ ಸಭಾನಾಯಕ ಎನ್.ಎಸ್. ಭೋಸರಾಜು ಅವರು, ಈಗಾಗಲೇ ಉತ್ತರಗಳನ್ನು ನಿಯಮಿತವಾಗಿ ಒದಗಿಸಲು ಅಧಿಕಾರಿಗಳಿಗೆ ಮಾಹಿತಿ ನೀಡಿದ್ದೇವೆ. ವಾರದಲ್ಲಿ ಉತ್ತರ ದೊರಕಿಸುತ್ತೇವೆ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಹೊರಟ್ಟಿ, ಪ್ರತಿ ಬಾರಿಯೂ ಇದನ್ನೇ ಹೇಳುತ್ತೀರಿ, ಉತ್ತರ ಕೊಡಲು ವೈಫಲ್ಯವಾದ ಅಧಿಕಾರಿಗಳ ಮೇಲೆ ಏಕೆ ಕ್ರಮ ಕೈಗೊಳ್ಳುತ್ತಿಲ್ಲ, ಈ ವಿಷಯವಾಗಿ ವಿಳಂಬ ನೀತಿ ಅನುಸರಿಸುವ ಒಂದಿಬ್ಬರು ಅಧಿಕಾರಿಗಳ ಮೇಲೆ ಮೊದಲು ಕ್ರಮಕೈಗೊಳ್ಳಿ ಎಂದು ಹೇಳಿದರು.

ಪ್ರಾರಂಭದಲ್ಲೇ ಈ ವಿಷಯ ಪ್ರಸ್ತಾಪಿಸಿದ ಸದಸ್ಯ ಭೋಜೇಗೌಡ, ಪ್ರಸಕ್ತ ಅಧಿವೇಶನದಲ್ಲಿ ಸದಸ್ಯರು 740 ಪ್ರಶ್ನೆಗಳನ್ನು ಕೇಳಿದ್ದು ಅದರಲ್ಲಿ 182 ಪ್ರಶ್ನೆಗಳಿಗೆ ಉತ್ತರವೇ ಬಂದಿಲ್ಲ. ಈ ರೀತಿ ಪ್ರಶ್ನೆಗಳಿಗೆ ಉತ್ತರವೇ ಬರದಿದ್ದರೆ ನಾವು ಪ್ರಶ್ನೆ ಏಕೆ ಕೇಳಬೇಕು ಎಂದು ಅಸಮಧಾನ ಹೊರಹಾಕಿದರು.

### ಕಾನೂನು ತೊಡಕಿಲ್ಲದ ಪ್ರಶ್ನೆಗಳಿಗೆ ಉತ್ತರ

ಈ ವೇಳೆ ಮಧ್ಯ ಪ್ರವೇಶಿಸಿದ ಕಾನೂನು ಸಚಿವ ಎಚ್.ಕೆ. ಪಾಟೀಲ್, ಮಾ.20 ರಂದು ಉತ್ತರ ಬಾಕಿ ಇರುವ ಪ್ರಶ್ನೆಗಳ ಇಲಾಖೆಗಳ ಕಾರ್ಯದರ್ಶಿಗಳ ಜತೆ ಸಭೆ ನಡೆಸಲಾಗುವುದು. ಕಾನೂನು ತೊಡಕಿಲ್ಲದ ಪ್ರಶ್ನೆಗಳಿಗೆ ಮಾ.26ರ ಒಳಗೆ ಉತ್ತರ ಕೊಡಿಸಲಾಗುವುದು. ಒಂದು ವೇಳೆ ಅಧಿಕಾರಿಗಳು ಸೂಕ್ತ ರೀತಿಯಲ್ಲಿ ಸ್ಪಂದಿಸದಿದ್ದರೆ ಅವರ ವಿರುದ್ಧ ಸೂಕ್ತ ಕ್ರಮ ಜರುಗಿಸುವುದಾಗಿ ಪಾಟೀಲ್ ಸ್ಪಷ್ಟಪಡಿಸಿದರು.

## ಸುಮ್ಮನಿದ್ದೇನೆ ಎಂದರೆ ಅದನ್ನು ನನ್ನ ಬಲಹೀನತೆ ಎಂದು ಭಾವಿಸಬೇಡಿ

# ಸದನದಲ್ಲಿ ಸಚಿವರಿಗೆ ವಿಧಾನಸಭಾಧ್ಯಕ್ಷ ಎಚ್ಚರಿಕೆ

◆ **ವಿಧಾನಸಭೆ:** ಶಾಸಕರು ಕೇಳುವ ಪ್ರಶ್ನೆಗಳಿಗೆ ಉತ್ತರ ಬಾರದಿದ್ದಾಗ ಸೌಮ್ಯವಾಗಿ ಹೇಳುತ್ತೇನೆಂದರೆ ಅದು ನನ್ನ ದೌರ್ಬಲ್ಯವಲ್ಲ. ಸುಮ್ಮನಿದ್ದೇನೆ ಎಂದರೆ ಅದನ್ನು ನನ್ನ ಬಲಹೀನತೆ ಎಂದು ಭಾವಿಸಬೇಡಿ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಸದನದಲ್ಲಿ ಸರ್ಕಾರ ಮತ್ತು ಸಚಿವರಿಗೆ ಎಚ್ಚರಿಕೆ ನೀಡಿದರು.



ಸದನದಲ್ಲಿ ಕೇಳಲಾದ ಪ್ರಶ್ನೆಗಳಿಗೆ ಇಲಾಖೆಗಳಿಂದ ಸರಿಯಾಗಿ ಉತ್ತರ ಬರುತ್ತಿಲ್ಲ ಎಂಬ ಪ್ರತಿಪಕ್ಷ ಸದಸ್ಯರ ಮಾತಿಗೆ ದನಿಗೂಡಿಸಿದ ವಿಧಾನಸಭಾಧ್ಯಕ್ಷರು, ನಾನು ದಿನವೂ ಗಮನಿಸುತ್ತಿದ್ದೇನೆ. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪೈಕಿ ಅತಿ ಕಡಿಮೆ ಪ್ರಶ್ನೆಗಳಿಗೆ ಉತ್ತರ ನೀಡಲಾಗುತ್ತಿದೆ. ಇದು ಸರಿಯಲ್ಲ, ನಾನು ಸೌಮ್ಯದಿಂದ ಹೇಳುತ್ತಿದ್ದೇನೆ, ಸುಮ್ಮನಿದ್ದೇನೆ ಎಂದರೆ ಅದನ್ನು ನನ್ನ ಬಲಹೀತನೆ ಎಂಬುದಾಗಿ ಭಾವಿಸಬೇಡಿ ಎಂದು ಸಚಿವರಿಗೆ ನೇರವಾಗಿಯೇ ಹೇಳಿದರು.

ಸದಸ್ಯರು ಉತ್ತರಕ್ಕಾಗಿ ಆಸಕ್ತಿಯಿಂದ ಪ್ರಶ್ನೆ ಕೇಳುತ್ತಾರೆ. ಯಾವುದೇ ಒಂದು ಪ್ರಶ್ನೆ ಕೇಳಿದ ನಂತರ ಉತ್ತರ ಕೊಡಲು 10 ದಿನ ಸಮಯ ಇರುತ್ತದೆ. 10 ದಿನದ ನಂತರವೂ ಉತ್ತರ ಬರುವುದಿಲ್ಲ ಎಂದರೆ ಏನರ್ಥ? ಸದಸ್ಯರು ಪ್ರಶ್ನೆ ಯಾಕೆ ಕೇಳಬೇಕು, ಅಧಿವೇಶನಕ್ಕೆ ಏನು ಅರ್ಥವಿದೆ? ಇದನ್ನೆಲ್ಲ ಕೊನೆಗೊಳಿಸಬೇಕು. ಸದನದಲ್ಲಿ ಕೇಳಿದ ಪ್ರಶ್ನೆಗಳಿಗೆ ಸದಸ್ಯರು ದುಂಬಾಲು ಬೀಳದಿದ್ದರೆ ಒಂದು ವರ್ಷವಾದರೂ ಉತ್ತರ ಬರುವುದಿಲ್ಲ. ಹೀಗಾದರೆ ಹೇಗೆ? ಇದನ್ನು ಗಂಭೀರವಾಗಿ ತೆಗೆದುಕೊಳ್ಳಿ, ಉತ್ತರ ಕೊಡಿ. ಅಧಿಕಾರಿಗಳನ್ನು ಕರೆಸಿ ಸೂಚನೆ ನೀಡಿ, ಪರಿಶೀಲನೆ ನಡೆಸಿ ಎಲ್ಲಾ ಸದಸ್ಯರ ಪ್ರಶ್ನೆಗಳಿಗೆ ಉತ್ತರ ಬರುವಂತೆ ನೋಡಿಕೊಳ್ಳಿ ಎಂದು ತಾಕೀತು ಮಾಡಿದರು.

ಸದನದಲ್ಲಿ ಇದುವರೆಗೂ ಉತ್ತರ ಬಾರದ ಪ್ರಶ್ನೆಗಳಿಗೆ ಉತ್ತರ ಒದಗಿಸುವ ಸಂಬಂಧ ಉಪಸಭಾಧ್ಯಕ್ಷರ ನೇತೃತ್ವದಲ್ಲಿ ಸಮಿತಿ ರಚಿಸಿದ್ದೇನೆ. ಸೋಮವಾರ ಯಾವ ಯಾವ ಇಲಾಖೆಯಿಂದ ಎಷ್ಟೆಷ್ಟು ಉತ್ತರಗಳು ಬಾಕಿ ಇವೆ ಎಂಬುದನ್ನು ಸದನದ ಮುಂದಿಡುತ್ತೇನೆ. ಉತ್ತರ ಕೊಡಲಾಗದಿದ್ದರೆ ಯಾವಾಗ ಉತ್ತರ ಕೊಡಲು ಸಾಧ್ಯ ಎಂಬುದನ್ನು ಪ್ರಶ್ನೆ ಕೇಳಿದ ಎಲ್ಲ ಶಾಸಕರಿಗೆ ಲಿಖಿತವಾಗಿ ಕೊಡಬೇಕು ಎಂದು ಸಭಾಧ್ಯಕ್ಷರು ಹೇಳಿದರು.

ಪ್ರತಿಪಕ್ಷ ನಾಯಕ ಆರ್. ಅಶೋಕ, ಈಗಾಗಲೇ ಸಭಾಧ್ಯಕ್ಷರು ಮೂರು ಬಾರಿ ಹೇಳಿದ್ದಾರೆ. ನಾಲ್ಕನೇ ಬಾರಿ ಹೇಳುವ ಸಂದರ್ಭ ಬರಬಾರದು. ಯಾವ ಇಲಾಖೆಯಿಂದ ಎಷ್ಟು ಪ್ರಶ್ನೆಗಳು ಬಾಕಿ ಇವೆ ಎಂಬ ಪಟ್ಟಿಯನ್ನು ಇಡಿ. ಕೆಲ ಅಧಿಕಾರಿಗಳು ಸೋಮಾರಿಗಳಿದ್ದಾರೆ. ಗಾಲ್ಫ್ ಆಡಲು ಹೋಗುತ್ತಾರೆ. ನಾವು ಇಲ್ಲಿ ಫುಟ್ಬಾಲ್ ಆಗಿದ್ದೇವೆ. ಸಚಿವರು ಉತ್ತರ ಕೊಡುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

### ಪ್ರಶ್ನೆಗಳಿಗೆ ಉತ್ತರ ಒದಗಿಸುವ ಪ್ರಯತ್ನ: ಪರಂ

ಸರ್ಕಾರದ ಪರವಾಗಿ ಉತ್ತರ ನೀಡಿದ ಗೃಹ ಸಚಿವ ಡಾ. ಜಿ. ಪರಮೇಶ್ವರ, ಸಭಾಧ್ಯಕ್ಷರ ಮಾತುಗಳನ್ನು ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಮುಖ್ಯಮಂತ್ರಿಗಳು ಈಗಾಗಲೇ ಎಲ್ಲಾ ಸಚಿವರಿಗೂ ಈ ಬಗ್ಗೆ ಸೂಚನೆ ಕೊಟ್ಟಿದ್ದಾರೆ. ಅಪರೂಪಕ್ಕೆ ಸಭಾಧ್ಯಕ್ಷರು ಬಹಳ ಗಡುಸಾಗಿ ಮಾತನಾಡಿದ್ದಾರೆ. ಮುಂದಿನ ದಿನಗಳಲ್ಲಿ ಸದಸ್ಯರ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಒದಗಿಸುವ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದರು.





# ಆರ್‌ಎಸ್‌ಎಸ್: ಅಖಿಲ ಭಾರತೀಯ ಪ್ರತಿನಿಧಿ ಸಭಾ ಪ್ರಾರಂಭ

**ಸಮಾಲ್ಖಾ:** ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್) ದ ವಾರ್ಷಿಕ ಅಖಿಲ ಭಾರತೀಯ ಪ್ರತಿನಿಧಿ ಸಭಾ ಹರಿಯಾಣದಸಮಾಲ್ಖಾದಲ್ಲಿರುವಮಾಧವಸೃಷ್ಟಿಆವರಣದಲ್ಲಿ ಶುಕ್ರವಾರ ಆರಂಭಗೊಂಡಿತು. ಭಾನುವಾರದವರೆಗೆ ನಡೆಯಲಿದೆ.

ಆರ್‌ಎಸ್‌ಎಸ್ ಸರಸಂಘಚಾಲಕ ಡಾ.ಮೋಹನ್ ಭಾಗವತ್, ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ಭಾರತ ಮಾತೆಯ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಉದ್ಘಾಟಿಸಿದರು. ಬಳಿಕ ಹೊಸಬಾಳೆ ಅವರು ಸಂಘದ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಪ್ರಸ್ತುತ ಪಡಿಸಿದರು.

ಈ ಅಖಿಲ ಭಾರತೀಯ ಪ್ರತಿನಿಧಿ ಸಭಾವು ಪ್ರತಿವರ್ಷವೂ ನಡೆಯುತ್ತದೆ. ಈ ವರ್ಷ ಸಂಘ ಮತ್ತು ಸಂಘಪ್ರೇರಿತ 32 ಸಂಘಟನೆಗಳ ಅಖಿಲ ಭಾರತ ಮಟ್ಟದ ಹಾಗೂ ಪ್ರಾಂತ ಮಟ್ಟದ ಅಧಿಕಾರಿಗಳು ಸೇರಿದಂತೆ ಸಂಘದ ಎಲ್ಲಾ 45 ಪ್ರಾಂತಗಳಿಂದ 1,487 ಕಾರ್ಯಕರ್ತರು ಅಪೇಕ್ಷಿತರಿದ್ದಾರೆ. ಮೂರು ದಿನಗಳ ಅಖಿಲ ಭಾರತೀಯ ಪ್ರತಿನಿಧಿ ಸಭಾದಲ್ಲಿ ಹೆಚ್ಚು ಸಮಯ ಸಂಘಕಾರ್ಯದ ವಿಮರ್ಶೆ ಹಾಗೂ ಯೋಜನೆಗಳಿಗೆ ಮೀಸಲಿಡಲಾಗುತ್ತದೆ.

**ಅಗಲಿದ ಗಣ್ಯರಿಗೆ ಶ್ರದ್ಧಾಂಜಲಿ ಸಮರ್ಪಣೆ:** ರಾಷ್ಟ್ರಕ್ಕೆ ಮತ್ತು ಸಮಾಜಕ್ಕೆ ಕೊಡುಗೆಯನ್ನು ನೀಡಿ ಅಗಲಿದ ನಾಡಿನ ಪ್ರಮುಖರಿಗೆ, ಆರ್‌ಎಸ್‌ಎಸ್ ಹಿರಿಯ ಕಾರ್ಯಕರ್ತರಿಗೆ ಪ್ರತಿವರ್ಷ ಅಖಿಲ ಭಾರತೀಯ ಪ್ರತಿನಿಧಿ ಸಭಾದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಗುತ್ತದೆ. ಈ ಬಾರಿ ವಿದರ್ಭದ ಸದ್ಗುರುದಾಸ ಮಹಾರಾಜ್, ಕೇಂದ್ರದ ಮಾಜಿ ಗೃಹಮಂತ್ರಿ ಶಿವರಾಜ್ ಪಾಟೀಲ್, ಪುರಾತತ್ವ ಇಲಾಖೆಯ ಅಧ್ಯಕ್ಷರಾಗಿದ್ದ ಪದ್ಮಭೂಷಣ ಕೆ.ಎನ್. ದೀಕ್ಷಿತ್, ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಅಜಿತ್ ಪವಾರ್, ನಟ ಧರ್ಮೇಂದ್ರ, ತಮಿಳು ಚಿತ್ರ ನಿರ್ಮಾಪಕ ಎ.ವಿ.ಎನ್. ಸರವಣನ್, ಕೇರಳದ ಸಿನೆಮಾ ನಟ ಶ್ರೀನಿವಾಸನ್, ಕಮ್ಯುನಿಸ್ಟ್ ನಾಯಕ ಆರ್. ನಲ್ಲಕಣ್ಣು, ಮಿಜೋರಾಂನ ಮಾಜಿ ರಾಜ್ಯಪಾಲ ಸ್ವರಾಜ್ ಕೌಶಲ್, ಒಡಿಶಾದ ಭಾಷಾತಜ್ಞೆ ಮಾಲತಿ ಮುರ್ಮು, ಅಸ್ಸಾಂನ ಕಲಾವಿದ ಸಮರ್ ಹಜಾರಿಕಾ, ಹಿರಿಯ ಪತ್ರಕರ್ತ ಪ್ರಫುಲ್ಲ ಗೋವಿಂದ ಬರುವಾ, ಬಂಗಾಲದ ಸಾಹಿತಿ ಮಣಿಶಂಕರ್ ಮುಖರ್ಜಿ ಸೇರಿದಂತೆ ಅನೇಕ ಗಣ್ಯರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

**ಅಗಲಿದ ಕರ್ನಾಟಕದ ಗಣ್ಯರಿಗೆ ಶ್ರದ್ಧಾಂಜಲಿ:** ಕರ್ನಾಟಕದಲ್ಲಿಗಣನೀಯ ಸೇವೆ ಸಲ್ಲಿಸಿ ಅಗಲಿರುವ ಗಣ್ಯರಿಗೂ ಪ್ರತಿನಿಧಿ ಸಭಾದಲ್ಲಿ ಶ್ರದ್ಧಾಂಜಲಿ ಅರ್ಪಿಸಲಾಯಿತು. ಪರಿಸರ ವಿಜ್ಞಾನಿ ಡಾ. ಮಾಧವ ಗಾಡ್ಗೀಲ್, ವೃಕ್ಷಮಾತೆ ಸಾಲುಮರದ ತಿಮ್ಮಕ್ಕ, ಸ್ವಾತಂತ್ರ್ಯ ಹೋರಾಟಗಾರ ಮತ್ತು ರಾಜಕಾರಣಿ ಭೀಮಣ್ಣ ಖಂಡ್ರೆ, ಶಿಕ್ಷಣತಜ್ಞ ಮತ್ತು ಉದ್ಯಮಿ ಡಾ.ಎನ್. ವಿನಯ ಹೆಗ್ಡೆ, ಹಿಂದೂಸ್ತಾನಿ ಗಾಯಕ ಅಶೋಕ ಹುಗ್ಗಣ್ಣವರ್, ಹಿರಿಯ ರಾಜಕಾರಣಿ ಮತ್ತು ಅಖಿಲ ಭಾರತ ವೀರಶೈವ ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಹಾಗೂ ಹುಬ್ಬಳ್ಳಿಯ ಉದ್ಯಮಿ ಭರತ್ ಖಿಮ್ಜಿ ಅವರಿಗೆ ಗೌರವ ಸಲ್ಲಿಸಲಾಯಿತು.







# ದೇಶವ್ಯಾಪಿ 55,683 ಸ್ಥಾನಗಳಲ್ಲಿ ನಿತ್ಯ ಶಾಖೆ

**ಸಮಾಲ್ಖಾ:** ಸಮಾಜದ ರಚನಾತ್ಮಕ ಶಕ್ತಿಗಳನ್ನು ಒಟ್ಟುಗೂಡಿಸುವುದು ಮತ್ತು ರಾಷ್ಟ್ರ ನಿರ್ಮಾಣದ ಕೆಲಸದಲ್ಲಿ ಮುಂದುವರಿಯುವುದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಉದ್ದೇಶವಾಗಿದೆ. ಸಂಘವು ಪ್ರಪಂಚದಾದ್ಯಂತ ಎಲ್ಲರಿಗೂ ಶಾಂತಿ ಮತ್ತು ಕ್ಷೇಮವನ್ನು ಬಯಸುತ್ತದೆ ಎಂದು ಸಂಘದ ಸಹಸರಕಾರ್ಯವಾಹ ಸಿ.ಆರ್. ಮುಕುಂದ ಹೇಳಿದರು.

ಶುಕ್ರವಾರ ಅಖಿಲ ಭಾರತೀಯ ಪ್ರತಿನಿಧಿ ಸಭಾದ ಉದ್ಘಾಟನೆಯ ನಂತರ ಸುದ್ದಿಗೋಷ್ಠಿ ನಡೆಸಿದ ಅವರು, ಶತಾಬ್ದಿ ವರ್ಷವಾದ್ದರಿಂದ ಈ ಬಾರಿಯ ಅಖಿಲ ಭಾರತೀಯ ಪ್ರತಿನಿಧಿ ಸಭೆಯು ಮಹತ್ವಪೂರ್ಣವಾದದ್ದು. ಇಡೀ ದೇಶದಲ್ಲಿ ಸಂಘದ ಕಾರ್ಯಕರ್ತರು ಮತ್ತು ಸ್ವಯಂಸೇವಕರು ಸಂಘಕಾರ್ಯದ ವಿಸ್ತಾರ ಮತ್ತು ಸಮಾಜದ ಸಂಪರ್ಕ ಮತ್ತು ಜಾಗರಣದಲ್ಲಿ ಭಾಗಿಯಾಗಿದ್ದರು. ಅದರ ಸಂಪೂರ್ಣ ಮಾಹಿತಿಯನ್ನು ಪಡೆಯುವುದಕ್ಕೆ ಅವರಲ್ಲಿ ಕೆಲವರು ಈ ಪ್ರತಿನಿಧಿ ಸಭೆಯಲ್ಲಿ ಭಾಗಿಯಾಗುತ್ತಿದ್ದಾರೆ. ಸುಮಾರು 1400ಕ್ಕೂ ಅಧಿಕ ಮಂದಿ ಈ ಸಭೆಗೆ ಅಪೇಕ್ಷಿತರಿದ್ದಾರೆ ಎಂದರು.

ದೇಶಾದ್ಯಂತ ಒಟ್ಟು 55,683 ಸ್ಥಾನಗಳಲ್ಲಿ 88,949 ಶಾಖೆಗಳು ನಡೆಯುತ್ತಿವೆ. ಕಳೆದ ಒಂದು ವರ್ಷದಲ್ಲಿ 5,820 ಶಾಖೆಗಳು ಹೆಚ್ಚಾಗಿವೆ. ದೇಶವ್ಯಾಪಿ 32,606 ಸಾಪ್ತಾಹಿಕ (ಮಿಲನ್) ಶಾಖೆಗಳು ಜರುಗುತ್ತಿವೆ, ಕಳೆದ ವರ್ಷಕ್ಕಿಂತ 459 ಮಿಲನ್‌ಗಳು ಹೆಚ್ಚಾಗಿವೆ. ಪ್ರಸ್ತುತ ದೇಶಾದ್ಯಂತ ತಿಂಗಳಿಗೊಮ್ಮೆ ನಡೆಯುವ ಮಂಡಳಿಗಳು ಒಟ್ಟು 13,211 ಇವೆ. ಸಂಘದ ದೈನಂದಿನ ಶಾಖೆ, ಸಾಪ್ತಾಹಿಕ ಮಿಲನ್ ಮತ್ತು ಸಂಘ ಮಂಡಳಿಗಳನ್ನು ಸೇರಿಸಿದರೆ ದೇಶದಲ್ಲಿ ಒಟ್ಟು 1,34,766 ಶಾಖೆಗಳು ನಡೆಯುತ್ತಿವೆ ಮಾಹಿತಿ ನೀಡಿದರು.

ದೇಶದಲ್ಲಿ ಸಂಘಕಾರ್ಯವು ಸ್ಥಿರವಾಗಿ ಬೆಳೆಯುತ್ತಿದೆ, ಕಳೆದ ವರ್ಷದಲ್ಲಿ ಹಲವಾರು ಹೊಸ ಸ್ಥಳಗಳಲ್ಲಿ ಹೊಸ ಶಾಖೆಗಳು ಪ್ರಾರಂಭವಾಗಿವೆ. ಸಾಮಾಜಿಕ ಜೀವನದಲ್ಲಿ ಸಕಾರಾತ್ಮಕ ಬದಲಾವಣೆಯನ್ನು ತರುವ ಉದ್ದೇಶದೊಂದಿಗೆ ಮುಂಬರುವ ವರ್ಷಗಳಲ್ಲಿ ಹಳ್ಳಿಗಳು ಮತ್ತು ಸಣ್ಣ ಪಟ್ಟಣಗಳಲ್ಲಿ ಹೆಚ್ಚು ಹೆಚ್ಚು ಶಾಖೆಗಳನ್ನು ಪ್ರಾರಂಭಿಸುವ ಗುರಿಯನ್ನು ಸಂಘ ಹೊಂದಿದೆ ಎಂದು ಅವರು ಹೇಳಿದರು.

ನಕ್ಸಲ್ ಸಮಸ್ಯೆ ಪರಿಹಾರ

ದೇಶದಲ್ಲಿದ್ದ ನಕ್ಸಲ್ ಬಾಧಿತ ಪ್ರದೇಶಗಳಲ್ಲಿ ಪರಿಸ್ಥಿತಿ ಸಹಜವಾಗುತ್ತಿದ್ದು, ಅಲ್ಲಿ ಶಾಂತಿ ಮತ್ತು ಅಭಿವೃದ್ಧಿಯನ್ನು ತರಲು ಸರ್ಕಾರ ಮಾಡುತ್ತಿರುವ ಪ್ರಯತ್ನಗಳನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘ ಸ್ವಾಗತಿಸಿದೆ. ಮಣಿಪುರದಲ್ಲಿ ಇದುವರೆಗೂ ಬಿಗಡಾಯಿಸಿದ್ದ ಪರಿಸ್ಥಿತಿ ಈಗ ಸುಧಾರಿಸುತ್ತಿದೆ. ರಾಜಕೀಯ ಸ್ಥಿರತೆಯ ಜೊತೆಗೆ ಅದಕ್ಕಿಂತಲೂ ಮಿಗಿಲು ಅಲ್ಲಿನ ಸಮಾಜದ ಸಂಪೂರ್ಣ ಬುಡಕಟ್ಟು ಜನಾಂಗಗಳ ಪ್ರಮುಖರು ಒಟ್ಟಾಗಿ ಪರಿಹಾರ ಕಂಡುಕೊಳ್ಳಲು ಮುಂದಾಗಿದ್ದಾರೆ. ಈ ಪ್ರಯತ್ನಗಳಲ್ಲಿ ಸಂಘದ ಸ್ವಯಂಸೇವಕರು ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ಮುಕುಂದ ಅವರು ಹೇಳಿದರು.

ಮಣಿಪುರದ ಮೈಥೇಯಿ, ಕುಕಿ, ನಾಗ ಸೇರಿದಂತೆ ಎಲ್ಲಾ ಬುಡಕಟ್ಟು ಜನಾಂಗಗಳೊಡನೆ ಸಂಘದ ಸಂಪರ್ಕವಿದೆ. ಆ ಸಮುದಾಯಗಳಲ್ಲಿ ಸ್ವಯಂಸೇವಕ, ಕಾರ್ಯಕರ್ತರು ಇದ್ದಾರೆ. ಅಲ್ಲಿನ ಸಂಘದ ಅಸ್ತಿತ್ವವನ್ನು ಆಧಾರವನ್ನಾಗಿಸಿಕೊಂಡು ಕೇವಲ ಈಗ ಸಮಸ್ಯೆಗಳು ಉಂಟಾದಾಗ ಮಾತ್ರವಲ್ಲದೇ ಉಳಿದ ಸಂದರ್ಭಗಳಲ್ಲೂ ಎಲ್ಲರ ನಡುವೆ ಉತ್ತಮ ಬಾಂಧವ್ಯ ಮೂಡುವಂತೆ ಮಾಡುವ ಪ್ರಯತ್ನಗಳಾಗಿತ್ತು ಮತ್ತು ಅದು ಜಾರಿಯಲ್ಲಿತ್ತು. ಸಂಘದ ನಮ್ಮ ಕಾರ್ಯಕರ್ತರು ಅಲ್ಲಿನ ಬುಡಕಟ್ಟು ಬಂಧುಗಳ ಪ್ರಮುಖರ ನಡುವೆ ಮಾತುಕತೆ ನಡೆಸಿ ಏನೇ ಭಿನ್ನಾಭಿಪ್ರಾಯಗಳಿದ್ದರೂ ನಾವೆಲ್ಲರೂ ಭಾರತ ಮಾತೆಯ ಮಕ್ಕಳು ಎನ್ನುವ ಭಾವ ಮೂಡಿಸುವಲ್ಲಿ ಶ್ರಮವಹಿಸಿದರು. ಭಾರತೀಯ ಸಮಾಜದ, ಸ್ವಧರ್ಮದ ಸಂರಕ್ಷಣೆ ಮಾಡುವುದಕ್ಕೆ ನಾವೆಲ್ಲರೂ ಒಂದಾಗಿರಬೇಕು ಎಂಬ ಭಾವ ನಿರ್ಮಾಣ ಮಾಡುವುದು ನಮ್ಮ ಪ್ರಯತ್ನವಾಗಿತ್ತು. ರಾಜಕೀಯ ಸ್ಥಿರತೆ ತರುವ ಪ್ರಯತ್ನ ಸರ್ಕಾರ ಮಾಡಿತು. ನಾವು ಎಲ್ಲರನ್ನು ಒಂದುಗೂಡಿಸುವ ಪ್ರಯತ್ನ ಮಾಡಿದೆವು. ಕಳೆದ ಎರಡು ವರ್ಷಗಳಲ್ಲಿ ನಮ್ಮ ಪ್ರಯತ್ನ ಉತ್ತಮ ಪರಿಣಾಮವನ್ನುಂಟುಮಾಡಿದೆ ಎಂದರು.

ನಮ್ಮ ನೆರೆಯ ದೇಶ ಬಾಂಗ್ಲಾದಲ್ಲಿ ಹಿಂದುಗಳಿಗೆ ಕಠಿಣ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರಗಳು ಹಿಂದುಗಳ ಮಾನ ಸಂರಕ್ಷಣೆ, ಹಕ್ಕು ಮತ್ತು ಆಸಕ್ತಿಗಳ ಸಂರಕ್ಷಿಸುವುದಕ್ಕೆ ಪ್ರಯತ್ನಮಾಡಬೇಕೆಂದು ಸಂಘ ಆಗ್ರಹಿಸುತ್ತದೆ ಎಂದು ಮುಕುಂದ ಸಿ.ಆರ್. ಹೇಳಿದರು.

ಅಖಿಲ ಭಾರತೀಯ ಪ್ರಚಾರ ಪ್ರಮುಖ್ ಸುನೀಲ್ ಅಂಬೇಕರ್, ಸಹ ಪ್ರಚಾರ ಪ್ರಮುಖರಾದ ನರೇಂದ್ರ, ಠಾಕೂರ್ ಮತ್ತು ಪ್ರದೀಪ್ ಜೋಶಿ ಸುದ್ದಿಗೋಷ್ಠಿಯಲ್ಲಿದ್ದರು.

# ಸಂಘ ಶತಾಬ್ದಿ ಕಾರ್ಯಕ್ರಮಗಳು

**ಸಮಾಲ್ಖಾ:** ರಾಷ್ಟ್ರೀಯ ಸ್ವಯಂಸೇವಕ ಸಂಘದ ಶತಮಾನೋತ್ಸವ ವರ್ಷದ ಕಾರ್ಯಕ್ರಮಗಳನ್ನು ದೇಶಾದ್ಯಂತ ಆಯೋಜಿಸಲಾಗುತ್ತಿದೆ. ಸಮಾಜದ ಸಜ್ಜನ ಶಕ್ತಿಯ ಬೆಂಬಲ ಮತ್ತು ಭಾಗವಹಿಸುವಿಕೆಯು ಸ್ವಯಂಸೇವಕರನ್ನು ಬಹಳವಾಗಿ ಪ್ರೋತ್ಸಾಹಿಸಿದೆ ಎಂದು ಸಂಘದ ಸಹಸರಕಾರ್ಯವಾಹ ಮುಕುಂದ ಸಿ.ಆರ್. ಹೇಳಿದರು.

ಕಳೆದ ವರ್ಷ ಅಕ್ಟೋಬರ್ 2ರ ವಿಜಯದಶಮಿಯಲ್ಲಿ ನಾಗ್ಪುರದಲ್ಲಿ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಅವರ ಭಾಷಣದೊಂದಿಗೆ ಶತಾಬ್ದಿ ವರ್ಷದ ಕಾರ್ಯಕ್ರಮಗಳು ಪ್ರಾರಂಭಗೊಂಡವು. ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಭಾಗವಹಿಸಿದರು. ಅದಕ್ಕಿಂತ ಒಂದು ದಿನ ಮೊದಲು ಸಂಘ ಶತಾಬ್ದಿಯ ಹಿನ್ನೆಲೆಯಲ್ಲಿ ದಿಲ್ಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ನಾಣ್ಯ ಹಾಗೂ ಅಂಚೆಚೀಟಿಯನ್ನು ಬಿಡುಗಡೆ ಮಾಡಿದರು ಎಂದು ತಿಳಿಸಿದರು.

ಸಂಘ ಶತಾಬ್ದಿ ವರ್ಷದಲ್ಲಿ ಎರಡು ರೀತಿಯ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ. ಮೊದಲನೆಯದ್ದು ಶಾಖೆಗಳ ಮೂಲಕ ಸಂಘಟನಾತ್ಮಕ ವಿಸ್ತಾರ; ಎರಡನೆಯದ್ದು ಸಮಾಜದ ಸಂಪರ್ಕಕ್ಕಾಗಿ, ಸಮಾಜದಲ್ಲಿ ಸದ್ಭಾವ ನಿರ್ಮಾಣಕ್ಕಾಗಿ, ಎಲ್ಲಾ ಸಜ್ಜನ ಶಕ್ತಿಯನ್ನು ಜೊತೆಯಲ್ಲಿರಿಸಿಕೊಂಡು ಸಮಾಜದ ಸಂಘಟನೆ, ಪರಿವರ್ತನೆ ಮತ್ತು ಜಾಗರಣದ ಕಾರ್ಯವನ್ನು ಮಾಡುವುದಾಗಿದೆ ಎಂದು ಹೇಳಿದರು.

**ಪ್ರಮುಖ ನಾಗರಿಕ ಗೋಷ್ಠಿ ಮತ್ತು ಸದ್ಭಾವಗೋಷ್ಠಿ:** ಪ್ರತಿ ಸ್ಥಾನದ ಪ್ರಮುಖ ನಾಗರಿಕರನ್ನು ತಲುಪುವ ದೃಷ್ಟಿಯಿಂದ ಪ್ರಮುಖ ನಾಗರಿಕ ಗೋಷ್ಠಿ; ಸಮಾಜದಲ್ಲಿ ಸದ್ಭಾವನೆಯನ್ನು ಮೂಡಿಸುವ ಸಲುವಾಗಿ ಸ್ಥಾನೀಯ ಸ್ತರದಲ್ಲಿ ಜಾತಿ ಸಮುದಾಯಗಳ ಪ್ರಮುಖರು, ಆಧ್ಯಾತ್ಮಿಕ ಸಂಸ್ಥೆಗಳ ಪ್ರಮುಖರು, ಧಾರ್ಮಿಕ ಕೇಂದ್ರಗಳ ಪ್ರಮುಖರು ಸೇರಿದಂತೆ ಎಲ್ಲರನ್ನೂ ಒಟ್ಟಿಗೆ ಕೊಂಡೊಯ್ಯುವ ಮೂಲಕ ಸಮಾಜದಲ್ಲಿ ಸುಧಾರಣೆ ತರುವ ಪ್ರಯತ್ನಗಳ ಕುರಿತು ಚರ್ಚೆ ಸದ್ಭಾವನ ಗೋಷ್ಠಿಗಳಲ್ಲಿ ನಡೆಯಲಿದೆ ಎಂದು ವಿವರಿಸಿದರು.

## 10 ಕೋಟಿ ಗೃಹ ಸಂಪರ್ಕ

ಸಮಾಜದ ಸಂಪರ್ಕಕ್ಕಾಗಿ ಅನೇಕ ಪ್ರಯತ್ನಗಳನ್ನು ಶತಾಬ್ದಿ ಸಂದರ್ಭದಲ್ಲಿ ನಾವು ಮಾಡಿದ್ದೇವೆ. ಪ್ರಮುಖವಾಗಿ ಪ್ರತಿ ಗ್ರಾಮದ ಪ್ರತಿ ಮನೆಯನ್ನೂ ಸಂಪರ್ಕಿಸುವ ಪ್ರಯತ್ನವನ್ನು ನಾವು ಮಾಡಿದ್ದು ಇಲ್ಲಿಯವರೆಗೆ 3.90 ಲಕ್ಷ ಗ್ರಾಮಗಳ 10 ಕೋಟಿ ಮನೆಗಳನ್ನು ನಾವು ತಲುಪಿದ್ದೇವೆ. ಈ ಪ್ರಯತ್ನ ಇನ್ನೂ ಜಾರಿಯಲ್ಲಿದೆ. ಶತಾಬ್ದಿ ವರ್ಷ 2026ರ ಅಕ್ಟೋಬರ್‌ವರೆಗೆ ಇರಲಿದ್ದು ಕೆಲವು ಪ್ರಾಂತಗಳಲ್ಲಿ ಈ ಪ್ರಯತ್ನ ಪೂರ್ಣಗೊಂಡಿದೆ. ಕೆಲವು ಪ್ರಾಂತಗಳಲ್ಲಿ ನಡೆಯುತ್ತಿದೆ, ಇನ್ನು ಮೂರು ಅಥವಾ ನಾಲ್ಕು ತಿಂಗಳಲ್ಲಿ ಪೂರ್ಣಗೊಳ್ಳಲಿದೆ. ಗೃಹಸಂಪರ್ಕದ ಅನುಭವ ಬಹಳ ವಿಶೇಷವಾಗಿತ್ತು. ಸಮಾಜದ ಸರ್ವರನ್ನೂ ತಲುಪುವ ಪ್ರಯತ್ನ ನಮ್ಮದು ಎಂದರು.

ಮುಖ್ಯವಾಗಿ ಪಂಚಪರಿವರ್ತನೆಯ (ಕುಟುಂಬ ಪ್ರಬೋಧನ, ಪರಿಸರ ಸಂರಕ್ಷಣೆ, ಸಾಮಾಜಿಕ ಸಾಮರಸ್ಯ, ಸ್ವದೇಶಿ ಭಾವ ಜಾಗರಣ ಮತ್ತು ನಾಗರಿಕ ಶಿಷ್ಟಾಚಾರ) ವಿಷಯವನ್ನು ವಸತಿ ಅಥವಾ ಮಂಡಲ ಸ್ತರದಲ್ಲಿ ಎಲ್ಲರಿಗೂ ತಲುಪಬೇಕು ಎಂಬ ಪ್ರಯತ್ನವನ್ನು ಮಾಡಲಾಗುತ್ತಿದೆ. ಈ ವಿಷಯದ ಕುರಿತು ಸ್ಥಾನೀಯ ಪ್ರಮುಖರು, ವೈಚಾರಿಕ ವಲಯದ ಪ್ರಮುಖರ ಜೊತೆಗೆ ಚರ್ಚಿಸಿ, ಸಮಾಜದಲ್ಲಿ ಪಂಚಪರಿವರ್ತನೆಗೆ ಪೂರಕ ಮಾನಸಿಕತೆಯ ನಿರ್ಮಾಣಕ್ಕಾಗಿ ಪ್ರಯತ್ನಿಸಲಾಗುತ್ತಿದೆ. ಅದಕ್ಕಾಗಿ ಪ್ರಮುಖ ನಾಗರಿಕ ಗೋಷ್ಠಿ ಮತ್ತು ಸದ್ಭಾವ ಗೋಷ್ಠಿಗಳು ಸಹಕಾರಿ ಆಗಲಿವೆ ಎಂದು ಅಭಿಪ್ರಾಯಪಟ್ಟರು.

ಆರ್‌ಎಸ್‌ಎಸ್‌ನ ಶತಮಾನೋತ್ಸವ ವರ್ಷದ ಕಾರ್ಯಕ್ರಮಗಳು ಅಕ್ಟೋಬರ್ 2026ರವರೆಗೆ ಮುಂದುವರಿಯಲಿದೆ. ಈ ಅವಧಿಯಲ್ಲಿ ವಿವಿಧ ಚಟುವಟಿಕೆಗಳನ್ನು ಯೋಜಿಸಲಾಗಿದೆ ಎಂದು ಮುಕುಂದ ಅವರು ತಿಳಿಸಿದರು.



## ಗೃಹ ಸಂಪರ್ಕ ಅಭಿಯಾನ

| | |
|---|---|
| ಸಂಪರ್ಕಿಸಿದ ಹಳ್ಳಿಗಳು | 3,89,465 |
| ಸಂಪರ್ಕಿಸಿದ ಬಸ್ತಿ (ವಸತಿ) | 31,143 |
| ಭೇಟಿ ನೀಡಿದ ಮನೆಗಳು | 10,02,12,162 |
| ಹಂಚಿದ ಕರಕತ್ರಗಳು | 9,11,88,203 |
| ಪುಸ್ತಕ ಮಾರಾಟ | 84,13,552 |

## ಹಿಂದು ಸಮ್ಮೇಳನ

| | |
|---|---|
| ಮಂಡಲ ಸಮ್ಮೇಳನಗಳು | 23,143 |
| ಬಸ್ತಿ (ವಸತಿ) ಸಮ್ಮೇಳನಗಳು | 13,905 |
| ಮಹಿಳಾ ಭಾಗವಹಿಸುವಿಕೆ | 1,55,95,124 |
| ಪುರುಷರ ಭಾಗವಹಿಸುವಿಕೆ | 1,93,40,087 |
| ಒಟ್ಟು ಭಾಗವಹಿಸುವಿಕೆ | 3,49,35,211 |

## ಕಾರ್ಯವಿಸ್ತಾರ 2026

| | |
|---|---|
| ಸ್ಥಾನಗಳು | 55,683 |
| ಶಾಖೆಗಳು | 88,949 |
| ಮಿಲನ್‌ಗಳು | 32,606 |
| ಮಂಡಳಿಗಳು | 13,211 |
| ಒಟ್ಟು | 1,34,766 |

# ವಿಜಯದಶಮಿ ಅಂಕಿ-ಅಂಶ

## ವಿಜಯದಶಮಿ ಉತ್ಸವ

| | |
|---|---|
| ಒಟ್ಟು ಉತ್ಸವ | 62,555 |
| ತರುಣರ ಭಾಗವಹಿಸುವಿಕೆ | 27,08,186 |
| ಬಾಲಕರ ಭಾಗವಹಿಸುವಿಕೆ | 5,36,955 |
| ಒಟ್ಟು ಭಾಗವಹಿಸುವಿಕೆ | 32,45,141 |

## ವಿಜಯದಶಮಿ ಸಂಚಲನ

| | |
|---|---|
| ಸಂಚಲನ ಸ್ಥಳ | 22,656 |
| ತರುಣರ ಭಾಗವಹಿಸುವಿಕೆ | 21,62,155 |
| ಬಾಲಕರ ಭಾಗವಹಿಸುವಿಕೆ | 3,83,663 |
| ಒಟ್ಟು ಭಾಗವಹಿಸುವಿಕೆ | 25,45,818 |





## 37,000 ಹಿಂದು ಸಮ್ಮೇಳನಗಳು

ದೇಶದಲ್ಲಿ ಶತಾಬ್ದಿ ವರ್ಷದ ನಿಮಿತ್ತ ಇಲ್ಲಿಯವರೆಗೆ 37,048 ಹಿಂದು ಸಮ್ಮೇಳನಗಳು ನಡೆದಿವೆ. ಇನ್ನೂ ಕೆಲವು ಕಡೆಗಳಲ್ಲಿ ನಡೆಯಲಿವೆ. ನಗರ ಪ್ರದೇಶ, ಗ್ರಾಮೀಣ ಪ್ರದೇಶ, ಬುಡಕಟ್ಟು ಪ್ರದೇಶಗಳು, ದೂರದ ಪ್ರದೇಶಗಳ ಸಹಿತ ಎಲ್ಲಾ ಕಡೆಗಳಲ್ಲಿ ಹಿಂದು ಸಮ್ಮೇಳನಗಳು ಜರುಗಿವೆ. ಅರುಣಾಚಲ ಪ್ರದೇಶದಲ್ಲಿ ದೂರದ ಪ್ರದೇಶವೊಂದರಲ್ಲಿ ಸಂಘದ ಸಹಸರಕಾರ್ಯವಾಹ ಅರುಣ್ ಕುಮಾರ್ ಅವರು ಭಾಗವಹಿಸಿದ್ದ ಹಿಂದು ಸಮ್ಮೇಳನದಲ್ಲಿ ಪಾಲ್ಗೊಂಡವರು – ಇದು ನಂಬಲಾಗುತ್ತಿಲ್ಲ. ಈ ಹಿಂದೆ ಯಾವತ್ತೂ ಹೀಗೆ ಸಮಾಜದ ಎಲ್ಲಾ ಬಂಧುಗಳು ದೊಡ್ಡ ಸಂಖ್ಯೆಯಲ್ಲಿ ಆಗಮಿಸಿ ದೇಶ, ಸಮಾಜದ ಬಗ್ಗೆ ಯೋಚಿಸುವ ಕೆಲಸ ಆಗಿರಲಿಲ್ಲ ಎಂದು ಸಂಭ್ರಮಿಸಿದ್ದಾರೆ ಎಂದು ತಿಳಿಸಿದರು.

## ಸ್ವಯಂಸೇವಕರಿಗೆ ಅಪೂರ್ವ ಸ್ವಾಗತ

ಕೇರಳದಲ್ಲಿ ನಾವು ಎಲ್ಲರ ಮನೆಗಳಿಗೆ ಭೇಟಿ ನೀಡಿದ್ದೇವೆ. ಅದರಲ್ಲಿ ಕಮ್ಯುನಿಸ್ಟ್ ಸಿದ್ಧಾಂತದ ಜನರ ಮನೆಗಳೂ ಸೇರಿದ್ದವು. ಮುಸ್ಲಿಂ, ಕ್ರಿಶ್ಚಿಯನ್ ಸಮುದಾಯದವರ ಮನೆಗಳಿಗೂ ನಾವು ಭೇಟಿ ಕೊಟ್ಟಿದ್ದೇವೆ. ಬಹುತೇಕ ಸ್ಥಳಗಳಲ್ಲಿ ನಮಗೆ ಒಳ್ಳೆಯ ಸ್ವಾಗತ ಸಿಕ್ಕಿದೆ. ಕೇರಳದ ಸಣ್ಣದೊಂದು ಪ್ರದೇಶದಲ್ಲಿ ನಮ್ಮ ಸ್ವಯಂಸೇವಕರು 55,000 ಮುಸ್ಲಿಂ ಮನೆಗಳು ಮತ್ತು 54,000 ಕ್ರಿಶ್ಚಿಯನ್ ಮನೆಗಳಿಗೆ ಭೇಟಿ ಕೊಟ್ಟಿದ್ದಾರೆ. ಎಲ್ಲೆಡೆ ಪ್ರೀತಿಯಿಂದ ಸ್ವಾಗತಿಸಿದ್ದಾರೆ. ರಾಷ್ಟ್ರೀಯ ವಿಚಾರಗಳು, ಪಂಚ ಪರಿವರ್ತನೆಯ ವಿಷಯವಾಗಿ ನಾವು ಅವರಲ್ಲಿ ಚರ್ಚಿಸಿದ್ದು, ಎಲ್ಲರೂ ಅದನ್ನು ಸ್ವಾಗತಿಸಿದರು. ಹೀಗೆ ವಿಚಾರ, ಪೂಜಾ ಪದ್ಧತಿ, ವನವಾಸಿ, ಬುಡಕಟ್ಟು ಜನಾಂಗಗಳೂ ಸೇರಿದಂತೆ ಎಲ್ಲಾ ರೀತಿಯ ಜನರ ಮನೆಗಳ ಸಂಪರ್ಕವು ಉತ್ತಮ ರೀತಿಯಲ್ಲಿ ನಡೆದಿದೆ ಎಂದು ಮುಕುಂದ ಅವರು ಪ್ರಶಂಸಿಸಿದರು.

## ನಾಲ್ಕು ಮಹಾನಗರಗಳಲ್ಲಿ ಸಂವಾದ ಕಾರ್ಯಕ್ರಮ

ದೇಶದ ನಾಲ್ಕು ಪ್ರಮುಖ ಮಹಾನಗರಗಳಲ್ಲಿ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಅವರ ಉಪನ್ಯಾಸಮಾಲೆ ಮತ್ತು ಸಂವಾದ ಕಾರ್ಯಕ್ರಮಗಳು ಜರುಗಿದವು. ದಿಲ್ಲಿ, ಬೆಂಗಳೂರು, ಕೊಲ್ಕತ ಮತ್ತು ಮುಂಬೈನಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಅದರ ಜೊತೆಗೆ ಸರಸಂಘಚಾಲಕರು ರಾಷ್ಟ್ರದ ಎಲ್ಲಾ ರಾಜ್ಯಗಳ ರಾಜಧಾನಿಗೆ ಭೇಟಿ ನೀಡಿ ಸಂವಾದದಲ್ಲಿ ಪಾಲ್ಗೊಂಡರು. ಈ ಕಾರ್ಯಕ್ರಮಗಳಲ್ಲಿ ಸರಸಂಘಚಾಲಕರ ಭಾಗವಹಿಸುವಿಕೆ ಮತ್ತು ಮಾರ್ಗದರ್ಶನ ಉತ್ತಮ ಪರಿಣಾಮವನ್ನು ಬೀರಿದೆ. ಎಲ್ಲಾ ಸಂವಾದಗಳಲ್ಲಿ ಹಲವು ರೀತಿಯ ಪ್ರಶ್ನೆಗಳಿಗೆ ಸರಸಂಘಚಾಲಕರು ನಮಗೆಲ್ಲರಿಗೂ ಮಾರ್ಗದರ್ಶನ ನೀಡುವಂತಹ ಉತ್ತರಗಳನ್ನು ನೀಡಿದ್ದಾರೆ. ಕೇವಲ ನಾಲ್ಕು ಮಹಾನಗರಗಳಲ್ಲಿ ನಡೆದ ಉಪನ್ಯಾಸಮಾಲೆ ಕಾರ್ಯಕ್ರಮಗಳಲ್ಲಿ ಸರಸಂಘಚಾಲಕರು ನಾಗರಿಕರೊಂದಿಗೆ ನೇರವಾಗಿ ಸಂವಹನ ನಡೆಸಿದ್ದಾರೆ. ಸಾವಿರಕ್ಕೂ ಹೆಚ್ಚು ಪ್ರಶ್ನೆಗಳಿಗೆ ಉತ್ತರಿಸಿದ್ದಾರೆ ಮತ್ತು 20 ತಾಸಿಗೂ ಅಧಿಕ ಸಮಯವನ್ನು ಪ್ರಶ್ನೋತ್ತರಕ್ಕಾಗಿಯೇ ನೀಡಿದ್ದಾರೆ.

ಕರ್ನಾಟಕ ಸರ್ಕಾರ

## ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಜಮಖಂಡಿ ಪ್ರಾದೇಶಿಕ ಉಪ ವಿಭಾಗ, ಜಮಖಂಡಿ

**OFFICE OF THE ASSISTANT CONSERVATOR OF FORESTS, BAGALKOTE TERRITORIAL SUB DIVISION, JAMAKHANDI**

ದೂರವಾಣಿ ಸಂಖ್ಯೆ: 7348962827 ಇ-ಮೇಲ್: acftjkd@gmail.com

ಸಂಖ್ಯೆ: ಸಅಸಂ/ಜಮಖಂಡಿ/ಇ-ಟೆಂಡರ್/2025-26 ದಿನಾಂಕ: 12-03-2026

**ಟೆಂಡರ್ ಪ್ರಕಟಣೆ**

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, 2026–27ನೇ ಸಾಲಿಗೆ ಜಮಖಂಡಿ ಉಪ ವಿಭಾಗ ವ್ಯಾಪ್ತಿಗೆ ಬರುವ ಉಪ ವಿಭಾಗ ಕಛೇರಿ ಮತ್ತು ವಲಯ ಕಛೇರಿಗಳಿಗೆ ಗಣಕಯಂತ್ರ ನಿರ್ವಾಹಕರು, ಇಲಾಖಾ ವಾಹನಗಳಿಗೆ ವಾಹನ ಚಾಲಕರುಗಳನ್ನು ಮತ್ತು ಮಧ್ಯೆ ... ಜಲಗಾರರು ಮತ್ತು ಕಾವಲುಗಾರರನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸಲು ಅರ್ಹ ಗುತ್ತಿಗೆದಾರರಿಂದ ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **www.kppp.karnataka.gov.in** ನಲ್ಲಿ ಪ್ರಕಟಿಸಿದಂತೆ, ಟೆಂಡರ್ ಸ್ವೀಕರಿಸಲು ಕೊನೆಯ **ದಿನಾಂಕ 26–03–2026 ಮಧ್ಯಾಹ್ನ 13.00 ಗಂಟೆ**, ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 27–03–2026 ಮಧ್ಯಾಹ್ನ 15.00 ಗಂಟೆಗೆ** ಹಾಗೂ ಆರ್ಥಿಕ ಬಿಡ್‌ಗಳನ್ನು **ದಿನಾಂಕ: 30–03–2026 ರಂದು ಮಧ್ಯಾಹ್ನ 15–30 ಗಂಟೆಗೆ** ತೆರೆಯಲಾಗುವುದು. ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಇ-ಟೆಂಡರ್‌ಗಾಗಿ ಭಾಗವಹಿಸಬಹುದು.

ಹೆಚ್ಚಿನ ಮಾಹಿತಿಗಾಗಿ ರಜೆ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/–
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಜಮಖಂಡಿ ಉಪವಿಭಾಗ,
ಜಮಖಂಡಿ

ವಾ.ಸಾ.ಇ./ಬಾಗಲಕೋಟೆ/643/2025–26/ದೇಶಪಾಂಡೆಪಬ್ಲಿಸಿಟಿ

---

ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ಬಿನ್ನಿಪೇಟೆ, ಬೆಂಗಳೂರು

ಸಂಖ್ಯೆ: ಹಹೂಮತ(ವಿ)/ಕೃಉಮಾಸ(ಬೆಂ)/3464/2025–26
ದಿನಾಂಕ: 05.03.2026

**–: ಸಾರ್ವಜನಿಕ ಪ್ರಕಟಣೆ :–**

ಸಮಿತಿಯ ಕಲಾಸಿಪಾಳ್ಯ ಸಗಟು ತರಕಾರಿ ಮಾರುಕಟ್ಟೆ ಪ್ರಾಂಗಣದಲ್ಲಿ ವ್ಯಾಪಾರ ವಹಿವಾಟು ನಡೆಸುತ್ತಿರುವ ಸಮಸ್ತ ರೈತ ಬಾಂಧವರು, ಪೇಟೆಕಾರ್ಯಕರ್ತರು ಹಾಗೂ ಸಾರ್ವಜನಿಕರ ಗಮನಕ್ಕೆ ತರಬಯಸುವುದೇನೆಂದರೆ, ಈ ಸಮಿತಿಯ ಕಲಾಸಿಪಾಳ್ಯ ಸಗಟು ತರಕಾರಿ ಮಾರುಕಟ್ಟೆ ಪ್ರಾಂಗಣ, ಬೆಂಗಳೂರು ಇಲ್ಲಿ ವ್ಯವಹರಿಸಲು ಮೆ: ಎಸ್.ಎ.ಎಂ ಕಂಪನಿ, ಪಾಲುದಾರರು: ಶ್ರೀ ಸೈಯದ್ ಮುಜೀಜ್, ಶ್ರೀ ಸೈಯದ್ ಮುಹೀದ್ ಪಾಷ ಮತ್ತು ಶ್ರೀ ಕೆ.ಮಂಜುನಾಥ್, ಕೇರ್ ಆಫ್ ಮಳಿಗೆ ಸಂಖ್ಯೆ 197, ಸಿ ಬ್ಲಾಕ್, ಮೊದಲನೆ ಮಹಡಿ, ಕಲಾಸಿಪಾಳ್ಯ ಸಗಟು ತರಕಾರಿ ಮಾರುಕಟ್ಟೆ ಪ್ರಾಂಗಣ ಬೆಂಗಳೂರು ಇವರು ದಲ್ಲಾಲ/ಸಂಗ್ರಹಣಕಾರರ ಲೈಸನ್ಸ್ ಪಡೆದಿರುತ್ತಾರೆ.

ಪ್ರಸ್ತುತ ಸಂಸ್ಥೆಯ ಪಾಲುದಾರರಾದ ಶ್ರೀ ಸೈಯದ್ ಮುಜೀಜ್, ಶ್ರೀ ಸೈಯದ್ ಮುಹೀದ್ ಪಾಷ ಮತ್ತು ಶ್ರೀ ಕೆ.ಮಂಜುನಾಥ್ ಇವರು ಸಮಿತಿಗೆ ಅರ್ಜಿ ಸಲ್ಲಿಸಿ, ವೈಯುಕ್ತಿಕ ಕಾರಣದಿಂದ ಸದರಿ ಸಂಸ್ಥೆಯಿಂದ ಶ್ರೀ ಸೈಯದ್ ಮುಜೀಜ್, ಶ್ರೀ ಸೈಯದ್ ಮುಹೀದ್ ಪಾಷ ಇವರನ್ನು ನಿವೃತ್ತಿಗೊಳಿಸಿ, ಮತ್ತೊಬ್ಬ ಪಾಲುದಾರರಾದ ಶ್ರೀ ಕೆ.ಮಂಜುನಾಥ್ ಇವರು ಸಂಸ್ಥೆಯ ಮಾಲೀಕತ್ವದಲ್ಲಿ ಮುಂದುವರೆಸಿಕೊಂಡು ಹೋಗಲು ಹಾಗೂ ಸಂಸ್ಥೆಯ ನಾಮೆಯನ್ನು ಮೆ: ಬಿ.ಸಿ.ಕೆ.ಟ್ರೇಡರ್ಸ್ ಎಂದು ಬದಲಾಯಿಸಿಕೊಡಲು ಅನುಮತಿ ಕೋರಿರುತ್ತಾರೆ.

ಆದುದರಿಂದ, ಸದರಿಯವರಿಂದ ಯಾರಿಗಾದರೂ ಬಾಕಿ ಇದ್ದಲ್ಲಿ ಹಾಗೂ ಈ ಬಗ್ಗೆ ಯಾರಿಂದಲಾದರೂ ಸಲಹೆ/ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 07 ದಿನದೊಳಗಾಗಿ ದಾಖಲೆ ಸಹಿತ ಸಮಿತಿಗೆ ಸಲ್ಲಿಸಬಹುದೆಂದು ತಿಳಿಸಲಾಗಿದೆ ಮತ್ತು ನಿಗಧಿತ ಅವಧಿ ಮುಗಿದ ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ ಹಾಗೂ ಯಾವ ಆಕ್ಷೇಪಣೆಗಳು ಬಾರದಿದ್ದಲ್ಲಿ ನಿಯಮಾನುಸಾರ ಸದರಿಯವರ ಕೋರಿಕೆಯನ್ನು ಪರಿಗಣಿಸಲಾಗುವುದು.

ಸಹಿ/– ಕಾರ್ಯದರ್ಶಿ

---

**IN THE COURT OF THE 3rd ADDITIONAL CIVIL JUDGE AND J.M.F.C. AT ANEKAL**

**C.MIS No. 2057 OF 2025**

**BETWEEN: 1. Sri.Muniyappa,** S/o Late Chikkavanaguri, Aged about 80 years, **2. Smt. Deveeramma,** W/o late Muniyappa, Aged about 82 years, **3. Smt. Rathnamma,** D/o Late Muniyappa, Aged about 59 years, **4. Smt. Kantamma,** D/o Late Muniyappa, W/o Narendra T.M, Aged about 50 years, **5. Smt. Manjula,** D/o Late Muniyappa, Aged about 40 years, All are R/ at, Halesampigehalli Village, Jigani Hobli,, Anekal Taluk, Bangalore District ... **PETITIONER**

**AND: THE TAHASILDHAR,** Anekal Town, Bangalore District. ... **RESPONDENT**

**NOTICE**

Whereas the above petitioner has filed the petition for the issue of death Certificate of father of 1st petitioner, father in law of 2nd petitioner and Grand father of the 3 to 5th petitioners namely Chikkahonaguri S/o late vannaguri died on 06/04/1980 at Halesampigehalli Village, Jigani Hobli Anekal Taluk, Bangalore Urban District. any person interested in this matter, may appear before the above court at 11:00 AM on **25-04-2026** to which date the case is posted for hearing before the Hon'ble 3rd Additional Civil Judge and J.M.F.C at Anekal.

Take notice that in default of your appearance on the said date and time the case will be heard and determined in your absence.

Given under my hand and seal of the court on 13-03-2026.

By order of the court, Sheristedar, Civil Judge, Jr dvn and JMFC Court at Anekal.

**NETHRAVATHI,** Advocate
Anekal Town.

---



---

# PUBLIC NOTICE

This is to inform the general public that my client **Smt. Kamakshamma,** W/o Jittappa, Aged about 58 Years, Residing at Kacharakanahalli, Hosakote Taluk, Bangalore Rural District-560 067, she is the absolute owner of the **Land bearing New Sy No.87/56, Old Sy No.87/2,** then Sy No.87/32, Situated at Thirumalashettahalli Village, Anugondanahalli Hobli, Hosakote Taluk, Bangalore Rural District, **Measuring 0.01 Guntas** bounded on: **East by:** Property belongs to Kamalamma, Anjinappa and Muniraju, **West by:** 25 Feet Road, **North by:** Sy No.87/2 and **South by:** Property belongs to G. Subramanireddy, she having acquired the same through a Registered Sale Deed Dated **07.03.2022,** bearing Document No. HSK-1-15454/2021-22.

**Further on 09.03.2026, my client has lost her Original Registered Sale Deed Dated 01.09.2016, bearing Document No. HSK-1-04517/2016-17,** In this regard she has lodged a police complaint on 10.03.2026, the public to whosoever find original documents may be handed over to my client or undersigned advocate. Any person/s do not have any right, title or interest of any nature in or any lien, charge or claims in relation to the said property. The public are hereby warned that any transaction whatsoever with respect to the said property would at their own risk.

**J.K. MANJUNATH,** Advocate
J.K. Advocates
No.7/16, Manjunatha Complex, 2nd Floor,
4th Main Road, SSA Road, Hebbal,
Bangalore-560024.

---

**ಸಾರ್ವಜನಿಕ ಪ್ರಕಟಣೆ**

ಸಾರ್ವಜನಿಕರ ಗಮನಕ್ಕೆ, ಶ್ರೀ. ವಿಜಯ್ ಎನ್ ಬಿನ್ ಶ್ರೀ ನಾರಾಯಣ ರವರು, ಬೆಂಗಳೂರು ಉತ್ತರ ತಾಲ್ಲೂಕು ಕಸಬಾ ಹೋಬಳಿ, ನಾಗಾವಾರ ವಿಲೇಜ್ ಸೈಟ್ ನಂ.32, ವಿ.ಪಿ. ಖಾತಾ ನಂ.37/4, ರ ವಿಸ್ತೀರ್ಣ ಪೂರ್ವ ಪಶ್ಚಿಮ 25 ಅಡಿ ಉತ್ತರ ದಕ್ಷಿಣ 30 ಅಡಿಗಳುಳ್ಳ ಸ್ವತ್ತಿಗೆ ಸಂಬಂಧಿಸಿದಂತೆ ಈ ಕೆಳಗೆ ನಮೂದಿಸಿರುವ ಮೂಲ ಅಸಲಿ ಶುದ್ಧ ಕ್ರಯ ಪತ್ರವನ್ನು ಕಳೆದುಕೊಂಡಿರುತ್ತಾರೆ. ದಾಖಲೆ ವಿವರ: ದಿನಾಂಕ: 19.05.2003 ರಂದು, ಬೆಂಗಳೂರು ಉತ್ತರ ತಾಲ್ಲೂಕು ಹಿರಿಯ–ಉಪ–ನೋಂದಣಾಧಿಕಾರಿಗಳ ಕಛೇರಿಯಲ್ಲಿ, 1ನೇ ಪುಸ್ತಕದ, ಸಿಡಿ ನಂ.127, 5635/2003–04ನೇ ನಂಬರಾಗಿ ನೋಂದಣಿಯಾಗಿರುವ ಮೂಲ ಅಸಲಿ ಶುದ್ಧಕ್ರಯಪತ್ರ, ಈ ವಿಷಯವಾಗಿ ಬೆಂಗಳೂರು ಕ್ರೈಂ ಬ್ರ್ಯಾಂಚ್ ಪೊಲೀಸ್ ಠಾಣೆಯಲ್ಲಿ ದಿನಾಂಕ: 11.03.2026 ರಂದು ದೂರು ಸಲ್ಲಿಸಲಾಗಿದೆ. ಈ ಮೇಲ್ಕಂಡ ಮೂಲ ದಾಖಲೆ ಸಿಕ್ಕಿದಲ್ಲಿ/ದೊರೆತಲ್ಲಿ 07 (ಏಳು) ದಿನದೊಳಗೆ / ಕೂಡಲೆ ಪೊಲೀಸ್ ಠಾಣೆ ಅಥವಾ, ಈ ಕೆಳಕಂಡ ವಿಳಾಸಕ್ಕೆ ಮರಳುವಿಕೆ ಅಥವ ಖುದ್ದು ಸಂಪರ್ಕಿಸಲು ಕೋರಿದೆ.

ಶ್ರೀಯುತ ಪ್ರತಾಪ್.ಎನ್ ಬಿ.ಸಿ.ಎ, ಎಲ್.ಎಲ್.ಬಿ,
ವಕೀಲರು
ನಂ.782/11, ನೆಲಮಹಡಿ, 17ನೇ 'ಬಿ' ಮುಖ್ಯರಸ್ತೆ,
60ನೇ ಅಡ್ಡರಸ್ತೆ, ಲಕ್ಷ್ಮಣ್ ರಾವ್ ಸ್ಕಿನ್ ಕ್ಲಿನಿಕ್ ಹತ್ತಿರ,
5ನೇ ಬ್ಲಾಕ್, ಬಾಷ್ಯಂ ಸರ್ಕಲ್, ರಾಜಾಜಿನಗರ,
ಬೆಂಗಳೂರು – 560 010.

---

**ಪ್ರಮಾಣ ಪತ್ರ**

[illegible] **MOHAMMED YOUSUF KHAN** [illegible] **OGTPK7204R** [illegible] **MOHAMMED YOUSUF KHAN** [illegible] **MOHAMAD YOUSUF KHAN** [illegible]

---

# CHANGE OF NAME

I, **MANOJ KUMAR TARACHAND,** aged 44 years, S/o Tarachand, R/a Flat #MB2101, B-Wing, Maple Tower Parkwest, 11, Hosakere Road, Binnypet, Magadi Road, Bengaluru-560023, Karnataka have changed my name from **MANOJ KUMAR TARACHAND** (Old Name) to **MANOJ KUMAR** (New Name) vide affidavit dt. 12.03.2026 before Notary **Sivakumara M N,** Bangalore.

---

## ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ.

ಕುಲಸಚಿವರ ಕಛೇರಿ, ಜ್ಞಾನ–ಶಕ್ತಿ ಆವರಣ (ತೊರವಿ)

ದೂರವಾಣಿ: 08352–220951, ವೆಬ್‌ಸೈಟ್:www.kswu.ac.in

ಸಂಖ್ಯೆ:ಕರಾಅಮವಿವಿ/ಉಗ್ರಾಣ/ಕ್ರೀಡಾ.ಸಾ/ಇ–ಟೆಂಡರ್/2025–26/3463

ದಿನಾಂಕ:12.03.2026

**ಅಲ್ಪಾವಧಿ ಟೆಂಡರ್ ಅಧಿಸೂಚನೆ ಪ್ರಕಟಣೆ**
**ಎರಡು ಲಕೋಟೆ ಪದ್ಧತಿ (ಇ–ಪ್ರಾಕ್ಯೂರ್‌ಮೆಂಟ್)**

ಕರ್ನಾಟಕ ಸರ್ಕಾರದ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1992–2000ರ ಪ್ರಕಾರ ಅಧಿನಿಯಮ 2000ರ ನಿಯಮದಂತೆ ನೊಂದಾಯಿತ ಅರ್ಹ ಏಜೆನ್ಸಿ/ಸರಬರಾಜುದಾರರಿಂದ/ಗುತ್ತಿಗೆದಾರರಿಗೆ ಇ–ಪ್ರಾಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಕಂಡ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ.

1) ಟೆಂಡರ್‌ಗಳನ್ನು ಸ್ವೀಕರಿಸುವ ಪ್ರಾರಂಭ **ದಿನಾಂಕ: 11.03.2026 ಮಧ್ಯಾಹ್ನ 4.00 ಗಂಟೆಗೆ.**

2) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ: 23.03.2026 ರ ಮಧ್ಯಾಹ್ನ 4.00 ಗಂಟೆಯವರೆಗೆ.**

3) ಎಲ್ಲಾ ದಾಖಲೆಗಳನ್ನು ಸಲ್ಲಿಸುವ (ಹಾರ್ಡ್ ಕಾಫಿ) **ದಿನಾಂಕ: 24.03.2026 ಮಧ್ಯಾಹ್ನ 4.00 ಗಂಟೆಯವರೆಗೆ.**

4) ಟೆಕ್ನಿಕಲ್ ಬಿಡ್ ತೆರೆಯುವ **ದಿನಾಂಕ: 24.03.2026 ಮಧ್ಯಾಹ್ನ 4.00 ಗಂಟೆಯವರೆಗೆ.**

5) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 26.03.2026 ಮಧ್ಯಾಹ್ನ 4.00 ಗಂಟೆ ಅಥವಾ ನಂತರ.**

ಉಳಿದ ವಿವರಗಳನ್ನು ಗುತ್ತಿಗೆ ದಸ್ತಾವೇಜುಗಳಲ್ಲಿ ನೋಡಬಹುದು.

**01. ಕಾಮಗಾರಿಯ ಹೆಸರು: Supplying of Sports Materials to Physical Education Dept at KSAWU, Vijayapura. For the year 2025-26. ಟೆಂಡರ್ ಮೊತ್ತ (ರೂ.ಗಳಲ್ಲಿ) 8,68,182/– + GST. ಟೆಂಡರ್ ಸಂಖ್ಯೆ: KSAWUV/Store/Sports/Materials/2025-26/IND/.** ಬಡ್ಡಿ ರಹಿತ ಇ.ಎಂ.ಡಿ ರೂ. **43,409/–. ಟೆಂಡರ್ ಅವಧಿ: 45 days.**

ಹೆಚ್ಚಿನ ವಿವರ / ವಿಚಾರಣೆಗೆ ಇ–ಪ್ರಾಕ್ಯೂರುಮೆಂಟ್‌ನ http://eproc.karnataka.gov.in ನಿಂದ ಟೆಂಡರ್ ದಾಖಲಾತಿಗಳನ್ನು ಡೌನಲೋಡ್ ಮಾಡಿಕೊಳ್ಳಬಹುದಾಗಿದೆ. ಏಜೆನ್ಸಿದಾರರ ಅರ್ಹತೆ / ಟೆಂಡರಿನ ನಿಯಮ/ಟೆಂಡರ್ ಪ್ರೋಸೆಸ್ಸಿಂಗ್ ಶುಲ್ಕ, ತುಂಬುವ ವಿಧಾನ ಇತ್ಯಾದಿ ವಿವರಗಳಿಗೆ http://eproc.karnataka.gov.in ಮೂಲಕ ಮಾಹಿತಿಯನ್ನು ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಸದರಿ ಕಛೇರಿಯಿಂದ ಹಾಗೂ ಸಹಾಯಕ ದೂರವಾಣಿ ಸಂಖ್ಯೆ:080–25501216, 9449662003 ರಿಂದ ಪಡೆಯಬಹುದಾಗಿದೆ.

ಸಹಿ/– ಕುಲಸಚಿವರು,
ಕರ್ನಾಟಕ ರಾಜ್ಯ ಅಕ್ಕಮಹಾದೇವಿ
ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ

ವಾಸಾಸಂಇ/ವಿಜಯಪುರ/800/ಕೆಎಸ್ಎಂಸಿಎ/2025–26

---

**BEFORE THE TECHNICAL ASSISTANT TO DEPUTY COMMISSIONER & EX-OFFICIO DEPUTY DIRECTOR LAND RECORDS, BANGALORE DISTRICT, BANGALORE**

**Appeal No.108/2025**

**BETWEEN: Smt. Gowramma... APPELLANT**

**AND: The Assistant Director, Land Records** & Survey Settlement Anekal Taluk, Bangalore Urban District, Bangalore and others... **RESPONDENTS**

**NOTICE TO RESPONDENT No. 5 to 8 UNDER ORDER 5 RULE 20 (2) OF CPC.**

**5. Smt. Munirathanamma,** W/o Srinivas, aged about 61 years. **6. Sri. Chinnappa,** S/o Chikkamuniyappa, aged about 58 years. **7. Sri. Ravikumar,** S/o Byrappa, aged about 45 years. **8. Sri. Junjappa,** S/o Kallappa, aged about 48 years, The respondent No. 5 to 8 are R/at-Balluru Village, Attibele Hobli, Anekal Taluk, Bangalore Urban District... **RESPONDENTS**

Whereas the appellant have above appeal challenging impugned order respondent no. 1 to 3 authority/survey department Anekal Taluk dt. 15-02-2023 in case No. MRT52/2022-2023 in respect of the land bearing Sy.No. 140/1A newly assigned by the respondent no. 1 to 3 authority as Sy. No. 140/1A, 140/3, 140/4, 140/5, 140/6 and 140/7, totally measuring 3 acre 17 guntas including kharab of 4 gunta, situated at Balluru Village, Attibel Hobli-1, Anekal Taluk, Bangalore District. which are the appeal land in question.

The respondent no. 5 to 8 hereby summoned to appear before the respondent no. 5 to 8 Before the Deputy Director Land Records, Bangalore on **16-03-2026** at 03:00 P.M either in person or through Pleader in support of his case. Take notice, that in case of default the matter will be heard and decided in your absence.

Given under my hand and seal of this Authority, on this 09-03-2026 at Bangalore.

By order of the Court, Deputy Director Land Records, Bengaluru.

---

**IN THE COURT OF THE HON'BLE II ADDL. DISTRICT AND SESSIONS JUDGE AT MYSORE**

**Com O. S. No: 136 of 2024.**

**Plaintiff: Smt. Rani Jain -VS-**

**Defendant: M/s Eminence Homes and Spaces**

**To: M/s. Eminence Homes and spaces Eminence Chambers** No. 5910/B, Ground Floor, General Thimmaiah Road, Vijaynagar, 2nd Stage, Devaraj Mohalla, Mysore-570 017

Represented by its Authorized Signatory

Sri. Sukanand.P.C, Aged above 50 years.

Sub: Summons to Defendant through Paper Publication.

**PAPER PUBLICATION**

Take notice, that the Plaintiff has preferred the above original suit against the Defendant seeking for the relief of recovery of **Rs.9,65,081/-** This notice is caused to intimate the Defendant that the above suit is posted for appearance of the Defendant on 26-03-2026.

In the event of failure of the Defendant to appear before the Hon'ble Court on the said date, the matter will be proceeded with exparte.

**BY ORDER OF THE COURT**
**Chief Administrative Officer, District & Sessions Court, Mysore.**

Advocate for Plaintiff :
**Rakhee Jain,** Place:Date:: 12/03/2026.

---

ಗೌರವಾನ್ವಿತ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ ಕೃಷ್ಣರಾಜಪೇಟೆ

ಅಸಲು ದಾವಾ ಸಂಖ್ಯೆ : 2/2023

ವಾದಿಯರು:– ನಾಗಮ್ಮ ಮತ್ತು ಇತರರು

ಪ್ರತಿವಾದಿಯರು:– ಸುಂದರಮ್ಮ ಮತ್ತು ಇತರರು

2ನೇ ಪ್ರತಿವಾದಿ : ಪೃಥ್ವಿರಾಜ್ ಬಿನ್ ಲೇಟ್ ಎ.ಎಸ್.ಮಹೇಶ್ ವಯಸ್ಸು 40 ವರ್ಷ, ವಾಸ:– ಅಗ್ರಹಾರಬಾಚಹಳ್ಳಿ ಗ್ರಾಮ ಮತ್ತು ಅಂಚೆ ಕಸಬಾ ಹೋಬಳಿ, ಕೃಷ್ಣರಾಜಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ

**ಪತ್ರಿಕಾ ಪ್ರಕಟಣೆ**

ಮೇಲ್ಕಂಡ ದಾವೆಯನ್ನು ವಾದಿಯು ಪ್ರತಿವಾದಿಯರ ವಿರುದ್ಧ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನ ಕೋರಿ ದಾವೆ ಸಲ್ಲಿಸಿದ್ದು, ಸದರಿ ದಾವೆಯಲ್ಲಿ 2ನೇ ಪ್ರತಿವಾದಿಯರಾದ ನಿಮಗೆ ನ್ಯಾಯಾಲಯವು ಸಮನ್ಸ್ ಮೂಲಕ ಮತ್ತು ಅಂಚೆ ಮೂಲಕ ನಿಮಗೆ ನೋಟೀಸ್ ಅನ್ನು ಜಾರಿ ಮಾಡಲಾಗಿ ತಾವುಗಳು ವಿಳಾಸದಲ್ಲಿ ವಾಸವಿಲ್ಲ ಎಂದು ಷರಾ ಮೂಲಕ ನೋಟೀಸ್ ನ್ಯಾಯಾಲಯಕ್ಕೆ ಹಿಂದಿರುಗಿರುತ್ತದೆ. ಆ ಕಾರಣ ಈ ದಾವೆಯ ದಿನಾಂಕ : 23.03.2026 ರ ಬೆಳಗ್ಗೆ 2ನೇ ಪ್ರತಿವಾದಿಯಾದ ನೀವು ಸದರಿ ದಿನಾಂಕದಂದು ಖುದ್ದಾಗಿ ಆಗಲಿ ಅಥವಾ ವಕೀಲರ ಮೂಲಕವೇ ಆಗಲಿ ನ್ಯಾಯಾಲಯಕ್ಕೆ ಹಾಜರಾಗಿ ನಿಮ್ಮಗಳ ತಕರಾರು ಏನಾದರೂ ಇದ್ದಲ್ಲಿ ಸಲ್ಲಿಸುವಂತೆ ಪತ್ರಿಕಾ ಪ್ರಕಟಣೆ ಆದೇಶಿಸಿರುತ್ತದೆ. ಈ ಪತ್ರಿಕಾ ಪ್ರಕಟಣೆ ನಂತರವು ಸಹ ನೀವುಗಳು ನ್ಯಾಯಾಲಯಕ್ಕೆ ಹಾಜರಾಗದಿದ್ದರೆ ನಿಮ್ಮ ಗೈರು ಹಾಜರಾತಿಯನ್ನು ಮಾನ್ಯ ನ್ಯಾಯಾಲಯವು ನಿಮ್ಮಗಳ ವಿರುದ್ಧ ಏಕಪಕ್ಷೀಯವಾಗಿ ಪರಿಗಣಿಸಿ ವಾದಿಯ ವಾದಪತ್ರವನ್ನು ತೀರ್ಮಾನಿಸಲಾಗುವುದು ಎಂದು ಈ ಮೂಲಕ ಪ್ರಕಟಿಸಲಾಗಿದೆ.

ಘನ ನ್ಯಾಯಾಲಯದ ದಸ್ತಿತ್ತಿನೊಂದಿಗೆ ದಿನಾಂಕ: 09.03.2026ರಂದು ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು, ಮಾನ್ಯ ಅಪರ ಹಿರಿಯ ಸಿವಿಲ್
ನ್ಯಾಯಾಧೀಶರ ನ್ಯಾಯಾಲಯ ಕೃಷ್ಣರಾಜಪೇಟೆ

ವಾದಿಯ ಪರ ವಕೀಲರು : ಎ.ಟಿ.ಜಯಕುಮಾರ್, ವಕೀಲರು, ಕೆ.ಎ.ಆರ್.3017/2001,ಶ್ರೀರಂಗಪಟ್ಟಣ

---

**IN THE COURT OF HON'BLE SENIOR CIVIL JUDGE AT K.G.F.**

**P & Sc.No. 4/2026**

**PETITIONER: Smt.Nagamma,** W/o Channaiah, Aged about 62 years,R/at, Lanke Village, Chandravadi Post, Saraburu Hobli, H.D.Kote Taluk, Mysore District. Ph.7259972395.

**RESPONDENT: Canara Bank** Bangarpet Branch Represented by its Manager

**PUBLIC NOTICE**

It is hereby informed that the petitioners have filed above petition for the relief of Grant Succession Certificate for release of Gold Ornaments mortgaged by deceased Sudharani who is the daughter of the petitioner.

Take notice that if any interested persons having any interest or claim of whatsoever are hereby summoned to appear before this Hon'ble Court in person or through an advocate on 27/04/2026 at 11.00 am otherwise the petition will be disposed off in accordance with law.

**SCHEDULE**

The Plain chain weighing 5.800gms, Tops & Matilu 1.800gms Rings & Tops & Jumuki, totally weighing 38.200gms pledged on 19/06/2023 in Gold Loan Account No.180191626514 (Correct amount should be furnished by Respondant

Given under my hand and seal of this Court on 12/3/2026 at Bangarpet.

**By Order of the Court.**
**Senior Sheristedar, Addl. Senior Civil Judge and JMFC K.G.F.**

Advocate for Petitioner
**M.Prasanna Kumar,** Advocate,Niharika Law Chambers, 1st Floor, Camping Ground, Kolar Main Road, Bangarpet Town, Ph-94482960921

---

**IN THE COURT OF THE HON'BLE ADDL CIVIL JUDGE AND JMFC AT BANGARPET**

**C.M.C No: 812 /2025**

**PETITIONER: 1. Sri. Srinivasa** S/o Late Byatappa, Aged About 50 years, **2. Smt. Narayanamma,** D/o Late Byatappa Aged About 52 years, **3. Smt. Bagyamma** W/o D.B.Srinivasa, Aged About 45 years, All are Residing at Doddrahalli Village, Kasaba Hobli, Bangarpet Taluk

**RESPONDENT : The Thasildar** Bangarpet Taluk, Bangarpet

**NOTICE**

It is hereby informed that the petitioners have filed the above petition seeking an order of death certificate to direct the respondent to incorporate in their concerned registered the date of death and place of death the Mother of Petitioners by name Late Dyaviramma W/o Late Byatappa died on dated; 26.01.2017 in the residence at Doddrahalli Village, Kasaba Hobli, Bangarpet Taluk, and to issue the death certificate of said Late Dyaviramma the mother of petitioners.

Hence any interested person/s having objection may appear either personally or through their Advocate before the Addl Civil Judge Court at Bangarpet **on 27/04/2026 at 11.00 Am,** failing which the matter will be disposed in accordance with Law.

Given under my hand and seal of this court, 23/02/26.

**By order of this court**
**Sheristedar, Addl civil judge Court Bangarpet**

**S.Narayanappa** BALLB, Advocate, Old MM Road, Near Dr. Sridhar clinic, Bangarpet

---

**IN THE COURT OF THE HON'BLE ADDL CIVIL JUDGE AND JMFC AT BANGARPET**

**C.M.C No: 816 /2025**

**PETITIONER:1.Sri Srinivasa,**S/o Late Byatappa, Aged About 50 years, **2. Smt. Narayanamma,** D/o Late Byatappa Aged About 52 years, **3. Smt.Bagyamma** W/o D.B.Srinivasa Aged About 45 years, All are Residing at Doddrahalli Village, Kasaba Hobli, Bangarpet Taluk

**RESPONDENT: The Thasildar** Bangarpet Taluk, Bangarpet

**NOTICE**

It is hereby informed that the petitioners have filed the above petition seeking an order on to direct the respondent to incorporate in their concerned register of the date of death and place of Death of the father of Petitioners by name Late Byatappa S/o Late Gopanna who died on dated; 04.01.2002 in his residence at Doddrahalli Village, Kasaba Hobli, Bangarpet Taluk, and to issue the Death certificate of said Late Byatappa, the father of petitioners.

Hence any interested person/s having objection may appear either personally or through their advocate before the Honble Additional Civil Judge and JMFC Court At Bangarpet **on 27-04-2026 at 11.00am** Failing which the petition will be disposed of in accordance with Law. Given under my hand and seal of the court, this the-26th day of Feb 2026

**By order of this court**
**Sheristedar, Addl civil judge and jmfc Court Bangarpet**

**S.Narayanappa** BA,LLB Advocate
Old MM Road, Near Dr.Sridhar clinic Bangarpet

---

**BEFORE THE DEPUTY COMMISSIONER, BANGALORE URBAN DISTRICT AT BANGALORE**

**PTCL SR (D). 76 /2025**

**BETWEEN: Venkatamma** & others Represented by GPA Holder Chandranna **...Petitioners**

**AND: Jayamma** and others **...Respondent**

**SUMMONS/NOTICE TO RESPONDENT No. 1 TO 10.**

**1. Jayamma,** W/o. S. Sonappa, D/o. Kaverappa, R/at Rampura Village, Bidarahalli Hobli, Veergonagara Post, Bangalore East Taluk, **2. Nagaraj,** S/o. Late Hanumantappa, aged about 58 years, **3. Subramani,** Late. Hanumantappa, aged about 51 years, **4. Krishnamurthy,** Late. Hanumantappa, aged about 47 years, **5. R. K. Doddasubbarayappa,** S/o. Late. Kaverappa, aged about 73 years, **6. R. K. Venkateshappa,** Late. Kaverappa, aged about 71 years, **7. R.K. Subbarayappa @ ChikkaSubarayappa,** Late. Kaverappa, aged about 73 years, **8. SRI. R.V. Srinivas,** S/o. Venkateshappa, aged about 50 years, **9. SRI. R.V. Manjunatha,** S/o. Venkateshappa, aged about 47 years, **10. SRI. R.V. Lokesha,** S/o. Venkateshappa, aged about 40 years, The Respondent No. 2 to 10 are R/at Rampura Village, Bidarahalli Hobli, Virgonagar Post, Bengaluru East Taluk, Bengaluru- 560049

Whereas the above named Petitioner's have instituted the above Petition against you for Restoration/Resumption of Land granted in favour of their forefather in Sy. 20, measuring to an extent of 2 acres 1 guntas of land in Vaderahalli Village, Bidarahalli Hobli, K. R. Puram Taluk. You are hereby summoned to appear in this court in person or by pleader on **09/04/2026** at **03:00 PM** to answer the same. Failing which the same will be decided in your absence.

**PETITION SCHEDULE PROPERTY**

All that piece and parcel of the property bearing Old Sy. No. 15 later renumbered as Survey No. 20, Vaderahalli Village, Bidarahalli Hobli, Hoskote Taluk, Bangalore South, measuring to an extent of 3 Acres 01 guntas and Bounded on the: **East by:** Sy.No. 21, **West by:** Sy. No. 19, **North by:** Sy.No. 23 & 24, **South by:** Sy.No. 17, 18 & 27.

Given under my hand and the seal of the Court on this 09/03/2026.

By order of the Court, Deputy Commissioner, Bengaluru Urban District, Bengaluru

Advocate for petitioner: **GIRI. K**

---

## ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ,
ಕನೀನಿನಿ, ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ ನಂ–1, ಮುಂಡರಗಿ, ಗದಗ ಜಿಲ್ಲೆ. **Ph No: 08371 – 295016**

E-mail ID : **eeslis1mdg@gmail.com**

**ಅಲ್ಪಾವಧಿ ಟೆಂಡರ್ ಪ್ರಕಟಣೆ**
**(ONLY THROUGH "KPP-Procurement" SYSTEM)**

ಉಲ್ಲೇಖ : 1. ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ: 1546/2025–26 ದಿನಾಂಕ: 12.03.2026

ಸಿಂಗಟಾಲೂರು ಏತ ನೀರಾವರಿ ಯೋಜನೆ ಮುಂಡರಗಿ ಕಛೇರಿವತಿಯಿಂದ ಗದಗ ಜಿಲ್ಲೆ ಮುಂಡರಗಿ ತಾಲೂಕಿನ ರಾಮೇನಹಳ್ಳಿ ಮತ್ತು ಬೆನ್ನಿಹಳ್ಳಿ ಗ್ರಾಮಗಳ ನಡುವೆ ಇರುವ ಚೆಕ್ ಡ್ಯಾಂ ದುರಸ್ಥಿ ಕಾಮಗಾರಿಗೆ ಲೆಕ್ಕಶೀರ್ಷಿಕೆ **4701** ರಡಿ ಉಲ್ಲೇಖ(1)ರ ಟೆಂಡರ್ ಪ್ರಕಟಣೆಯಲ್ಲಿ ಸೂಚಿಸಿರುವಂತೆ, ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಕೆಪಿಪಿ–ಪೋರ್ಟಲ್ ಮೂಲಕ **Work Indent No.4198** ರಂತೆ ಟೆಂಡರನ್ನು ಆಹ್ವಾನಿಸಲಾಗಿದೆ. ಅದರಂತೆ, ಸದರಿ ಕಾಮಗಾರಿಯ ಟೆಂಡರ್‌ಗೆ ಇಟ್ಟ ಮೊತ್ತವು (ಜಿ.ಎಸ್.ಟಿ. ಸೇರಿ) ರೂ. **197.06** ಲಕ್ಷ ಆಗಿರುತ್ತದೆ ಹಾಗೂ ಈ ಕಾಮಗಾರಿಗೆ ಇ.ಎಂ.ಡಿ. ಮೊತ್ತವು ರೂ. **2.51** ಲಕ್ಷಗಳು ಆಗಿರುತ್ತದೆ. ಇನ್ನುಳಿದಂತೆ, ಸದರಿ ಟೆಂಡರಿಗೆ ಸಂಬಂಧಿಸಿದ ಷರತ್ತು / ನಿಯಮಾವಳಿಗಳ ಮಾಹಿತಿಯನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ದಿನಾಂಕ : **12.03.2026** ರ ನಂತರ **"https://kppp.karnataka.gov.in"** ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯೂಮೆಂಟ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಬಿಡ್‌ನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಕಾಮಗಾರಿಯ ಟೆಂಡರ್‌ಗೆ ಬಿಡ್ಡನ್ನು ಸಲ್ಲಿಸಲು ಕೊನೆಯ ದಿನಾಂಕ : **24.03.2026** ಎಂದು ಮತ್ತು ಟೆಂಡರ್ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ : **25.03.2026** ಎಂದು ನಿಗದಿಪಡಿಸಿದೆ. ಅದರಂತೆ, ಸದರಿ ಟೆಂಡರ್‌ಗಳ ಕುರಿತು **Pre-bid** ಸಭೆಯನ್ನು ದಿನಾಂಕ : **17.03.2026** ರಂದು ಕಾರ್ಯಪಾಲಕ ಇಂಜನೀಯರ್‌ರವರ ಕಛೇರಿ, ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ–01 ಮುಂಡರಗಿ ಕಛೇರಿಯಲ್ಲಿ ನಿಗದಿಪಡಿಸಲಾಗಿರುತ್ತದೆ. ಇನ್ನಿತರೆ ಹೆಚ್ಚಿನ ಮಾಹಿತಿಯನ್ನು **KPP-Procurement Helpdesk Phone No : 080–46010000, 080–68948777, 09240214000 & 09240214001** ಸಂಪರ್ಕಿಸಿ ಪಡೆಯಬಹುದಾಗಿದೆ. ನಿಬಂಧನೆಗೊಳಪಟ್ಟ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರ ಪಡೆದಿರುವ ಅಧಿಕಾರಿಯು ಎಲ್ಲಾ ಅಥವಾ ಯಾವುದೇ ಟೆಂಡರ್‌ನ್ನು ಕಾರಣ ನೀಡದೆ ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಸಿಂ.ಏ.ನೀ.ಯೋಜನೆ, ನಂ. 1 ವಿಭಾಗ, ಕ.ನೀ.ನಿ.ನಿ., ಮುಂಡರಗಿ, ಜಿ॥ ಗದಗ

ವಾಸಾಸಂಇ/ಗದಗ/ಕೆಎಸ್ಎಂಸಿಎ/706/2025–26

---

**IN THE COURT OF THE PRINCIPAL DISTRICT AND SESSIONS JUDGE AT RAMANAGARA**

**P & Sc. No.71/2025**

**Between: Sri. Nagaraju, .... Petitioner.**
**And: Nil : Respondent.**

**NOTICE**

Whereas, the Petitioner has filed the above petition under Sec. 276 of the Hindu Succession Act for Succession Certificate to issue probate in respect of the registered Will dated 27.05.2024 executed by the deceased Smt. Gangamma W/o Late Sri. Muniyappa who died on 22.06.2024.

You are hereby summoned/notice to appear before the Ist Addl. District and Session Judge, Ramanagara, in person or by a pleader on 22.06.2026 at 11.00 a.m. to answer the same, failing which, the Petition will be disposed of in your absence with respect to schedule property. Given under my hand and seal of court, on this.. 07.03.2026.

**SCHEDULE**

All that piece and parcel of the agricultural land bearing Sy. No. 39/1 (old Sy. No. 39), measuring 36 1/4 guntas along with 17 X 25 feet ACC sheet roofed house of Vishwanathapura Village, Kasaba Hobli, Magadi Taluk, Bengaluru South District and bounded on the: East by: Land belongs to Sri. Gunnappa. West by : Road.North by : Gramatana. South by : Land belongs to Sri. Hanumaiah.

**BY ORDER OF COURT,**
**Shirestedar, Prl. District and Session judge Ramangara.**

**Advocate for the Petitioner:**
**Sri. N. Sridhar,** Advocate, No. 113, 3rd Floor, Hospital Road, Bengaluru-560053, Ph: 8105659114.

---

**IN THE COURT OF THE PRL. SENIOR CIVIL JUDGE AT HASSAN**

**F.D.P. No. 31/2025**

**Petitioner : Sri H.K.Keshavamurthy and others -Vs-**
**Respondents: K.P.Hanumanthegowda and others**

**5. Sri Vasudev @ Vasudevaiah.H.K.,** S/o Late H.S.Keshavaiah, Aged about 75 Years. **6. Sowmya.H.V.,** D/o Sri Vasudev@ Vasudevaiah.H.K., Aged about 27 Years. **7. Sri H.V.Vinay,** D/o Sri Vasudev@ Vasudevaiah.H.K., Aged about 32 Years. Respondent No.5 to 7 are R/o No.37, 2nd Cross Road, Ramaiah Nagara, Kumaraswamy Layout, 1st Stage, Bengaluru-560 078

**PUBLIC NOTICE TO RESPONDENT NO.5 TO 7**

The above Final Decree Proceedings have been suo motto initiated by the Hon'ble Court in pursuance of the Judgment and Decree passed in O.S.No.298/2022 dated 03.03.2025 on the file of this Hon'ble Court.

The above case is posted for the appearance of the Respondent No.5 to 7. If the Respondent No.5 to 7 are interested to resist the claim of the Petitioners, you may appear before the above said Hon'ble court on 06/06/2026 at 11AM to oppose the Petition either personally or through counsel. Otherwise, the Court will proceed with the matter by placing you exparte.

Given under my hand on 12th Day of March, 2026.

**By order of the court**
**Chief Administration Officer, Prl. Senior Civil Judge & CJM At Hassan**

Advocate for Petitioner
**H.S.Manjunatha Murthy** Advocate,
Place: Hassan, Date : 7.03.2026

---

# PUBLIC NOTICE

Under the instructions from my client The Branch Manager, M/s ShriramFinance Ltd, Gudur Branch, Nellore District, Andhra Pradesh. I issue the following notice to the general public. My clients intends to grant loan to 1) Smt.VemareddyMunishaW/o V.Balakrishnareddy, Aged about 51 Years, R/at H. No. 6-6-661/10/1, Flat No. 402, Aruna Towers, Sangeeth Nagar, Somanjiguda, Hyderabad and Smt.KatamreddyAnisha W/o Sundararamireddy, Aged about 61 Years, R/at Chinnapadugupadu, Kovur, Nellore, Andhrapradhesh, more fully described here under a security by way of Regd. Mortgage, as such if any body have any claims, charges, mortgages, sale agreements, court attachments, court disputes etc., shall be informed to the address mentioned below with in 7 days from the date of Notice other wise, later objections will not be bind on any claims in this regards.

**SCHEDULE PROPERTIES**

All that piece and parcel of Site No.4, Document no. 2767585, Property No. 80/303, EPID No. 1214285287, measuring East to West 18.3 meters and North to South 9.4 meters, on the part of the land bearing Sy. No. 90/3, PattanduruAgrahara Village, K.R.PuramHobli, Bangalore East Taluk, now comes within the Jurisdiction of Ward No. 83, Kadugodi, Bangalore East NagaraPalike, Bangalore, bounded on the East by Road, West by Private Property, North by Site No.2, South by Site No.4.

ADDRESS
**C.M.Niranjana Swamy,** B.Sc., LLM., Advocate, 4th Cross, Gowripet, Kolar, Kolar-563101. Mobil No. 9448402783.
Your'sFaithfully,
**C.M.Niranjana Swamy,** Advocate.
Place: Kolar. Date: 13/03/2026

---

## ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಾರ್ಯಾಲಯ, ಜೆಸ್ಕಾಂ ಗುಲಬರ್ಗಾ. ಪಿನ್ ನಂ.585102 ದೂ.: 08472 256881
CIN: U04010KA2002SGC030436, ಇ.ಮೇಲ್: eeprojectsgescom@gmail.com

ಸಂಖ್ಯೆ:–ಜೆಸ್ಕಾಂ/ಮು.ಅ.ವಿ(ಕಾ)/ಅ.ಅ.ವಿ(ಯೋ)/ಕಾ.ನಿ.ಅ.(ಯೋ)/ಸ.ಕಾ.ನಿ.ಅ/ಸ.ಅ–2/2025–26/94322–33
ದಿನಾಂಕ: 13–03–2026

**ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ)**

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತದಿಂದ ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ **ಉಜಳಾಂಬ ಗ್ರಾಮದಲ್ಲಿ** ಹೊಸದಾಗಿ 33/11ಕೆ.ವಿ., ವಿದ್ಯುತ್ ಉಪ–ಕೇಂದ್ರ ಹಾಗೂ **15ಕೀ.ಮೀ 33ಕೆ.ವಿ ವಿದ್ಯುತ್ ಮಾರ್ಗವನ್ನು 110/33/11ಕೆ.ವಿ ಮಂಠಾಳ ವಿದ್ಯುತ್ ಉಪ–ಕೇಂದ್ರದಿಂದ** ನಿರ್ಮಿಸುವುದು ಮತ್ತು **10ಕೀ.ಮೀ 11ಕೆ.ವಿ ವಿದ್ಯುತ್ ಲಿಂಕ್ ಲೈನ್‌ಗಳನ್ನು** ನಿರ್ಮಿಸಲು ಬೇಕಾಗಿರುವ ಎಲ್ಲಾ ವಸ್ತುಗಳ ಪೂರೈಕೆ, ನಿರ್ಮಾಣ, ಪರೀಕ್ಷೆ ಮತ್ತು ಕಾರ್ಯಾರಂಭ ಸೇರಿದಂತೆ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ ಕೈಗೆತ್ತಿಕೊಳ್ಳಲು ಸ್ಪರ್ಧಾತ್ಮಕ ಬಿಡ್ಡಿಂಗ್ **ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್** ಮುಖಾಂತರ ಅರ್ಹ ಬಿಡ್‌ರುಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಸದರಿ ಕಾಮಗಾರಿಗೆ ತಗಲುವ ಅಂದಾಜು ಟೆಂಡರ್ ಮೊತ್ತದ ವಿವರ (ಜಿ.ಎಸ್.ಟಿ. ಹೊರತುಪಡಿಸಿ) ಹಾಗೂ ಬಿಡ್ಡು ದಾಖಲೆಗಳು ದಿನಾಂಕ: 20.03.2026 ರಂದು ಅಥವಾ ನಂತರ https://kppp.karnataka.gov.in ನಲ್ಲಿ ಲಭ್ಯವಿರುತ್ತವೆ. ಬಿಡ್ಡದಾರರು ಟೆಂಡರ್‌ಗಳಲ್ಲಿ ಭಾಗವಹಿಸಲು ಹೆಚ್ಚಿನ ವಿವರಗಳಿಗಾಗಿ ನಿಗಮ ಕಛೇರಿ, ಯೋಜನೆಗಳ ಶಾಖೆ, ಜೆಸ್ಕಾಂ, ಕಲಬುರಗಿ ರವರಿಂದ ಪಡೆಯಬಹುದಾಗಿದೆ.

ಸಹಿ/– ಮುಖ್ಯ ಇಂಜಿನಿಯರ್ (ವಿ),
(ಕಾರ್ಯಚರಣೆ), ನಿಗಮ ಕಛೇರಿ, ಜೆಸ್ಕಾಂ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/1175/ಕೆ.ಎಸ್.ಎಂ.ಸಿ.&ಎ/2025–26

---

## ಕೃಷಿ ಮಾರಾಟ ಇಲಾಖೆ
## ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೈಲಹೊಂಗಲ.

ಬೆಳಗಾವಿ ರಸ್ತೆ, ಬೈಲಹೊಂಗಲ–591102, ಜಿಲ್ಲೆ:ಬೆಳಗಾವಿ, ರಾಜ್ಯ:ಕರ್ನಾಟಕ.
Email-apmcbailhongal@gmail.com, (ದೂ):08288–233136

ಕ್ರಸಂ.ಕೃಉಮಾಸ(ಬೈ)/ಅಭಿ/ಆರ್‌ಐಡಿಎಫ್–31/516/2025–26 ದಿನಾಂಕ:12/03/2026.

**ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ**

ಸನ್ 2025–26 ನೇ ಸಾಲಿನ ಆರ್‌ಐಡಿಎಫ್–31 ಯೋಜನೆಯಡಿ ಮಂಜೂರಾದ Construction of CC Roads, Drains and CC Parking, Compound wall & Providing electrification at Bailhongala APMC (under NABARD RIDF-31 Scheme) (APMC/2025-26/RD/WORK_INDENT853) ನಿರ್ವಾಣ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (ಕೆಪಿಪಿ) ಮೂಲಕ Standard Tender Document KW-4 ರನ್ವಯ ಸ್ಪರ್ಧಾತ್ಮಕ ಐಟಂವಾರು ಟೆಂಡರನ್ನು ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ವಿಳಾಸ https://kppp.karnataka.gov.in

ಕ್ರ ಸಂ:01:ಕಾಮಗಾರಿಯ ವಿವರ:Construction of CC Roads, Drains and CC Parking, Compound wall & Providing electrification at Bailhongala APMC under NABARD RIDF-31 Scheme, ಟೆಂಡರ್‌ಗಿಟ್ಟ ಮೊತ್ತ (ರೂ.):4,15,92,796.00 (EXCLUSIVE OF GST), ಇಎಂಡಿ ಮೊತ್ತ (ರೂ.):6,24,000.00, ಟೆಂಡರ್ ಪ್ರೋಸೆಸಿಂಗ ಫೀ:As per KPPP Portal, ಅವಧಿ:6 Months (Excluding monsoon), ಗುತ್ತಿಗೆದಾರರ ದರ್ಜೆ:As per KW-4 Eligible

**ಟೆಂಡರ ಪ್ರಕ್ರಿಯೆ ವೇಳಾ ಪಟ್ಟಿ**

1:ಪ್ರೀ ಬಿಡ್ ಮೀಟಿಂಗ್:02/04/2026 ರಂದು 11.00 ಗಂಟೆಗೆ ಬೈಲಹೊಂಗಲ ಎಪಿಎಂಸಿ ಕಚೇರಿಯಲ್ಲಿ, 2:ಟೆಂಡರ್ ಕುರಿತು ಸ್ಪಷ್ಟೀಕರಣ :08/04/2026 ರ 4.30 ರವರೆಗೆ ಬೈಲಹೊಂಗಲ ಎಪಿಎಂಸಿ ಕಚೇರಿಯಲ್ಲಿ, 3:ಭರ್ತಿಮಾಡಿದ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 16/04/2026 ರ 4.00 ಗಂಟೆಯವರೆಗೆ. 4:ತಾಂತ್ರಿಕ ಬಿಡ್ ತೆರೆಯುವ ದಿನಾಂಕ:18/04/2026 ರ 4.30 ಗಂಟೆಗೆ, 5:ಆರ್ಥಿಕ ಬಿಡ್ ತೆರೆಯುವ ದಿನಾಂಕ:28/04/2026 ರ 4.00 ಗಂಟೆಗೆ.

ಇ–ಟೆಂಡರ್ ಪ್ರೋಸೆಸ್ಸಿಂಗ್ ಶುಲ್ಕ ಹಾಗೂ ಇ.ಎಂ.ಡಿ ಮೊತ್ತವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (ಕೆಪಿಪಿ) ಮೂಲಕ ಸಂದಾಯ ಮಾಡುವುದು ಮತ್ತು ಟೆಂಡರ್ ಷರತ್ತು ವ ನಿಬಂಧನೆಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ ರಜಾ ದಿನಗಳನ್ನು ಹೊರತುಪಡಿಸಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (ಕೆಪಿಪಿ) ಸಹಾಯವಾಣಿ ಸಂಖ್ಯೆ 9240214000 ಮತ್ತು ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೈಲಹೊಂಗಲ (08288–233136) ಇವರಿಂದ ಪಡೆಯಬಹುದಾಗಿದೆ. ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೆ ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/– (ಎಸ್.ಎಸ್.ಅರಳೀಕಟ್ಟಿ)
ಕಾರ್ಯದರ್ಶಿ
ಕೃಉಮಾಸ, ಬೈಲಹೊಂಗಲ

ಸಹಿ/–(ಹನಮಂತ ಶಿರಹಟ್ಟಿ)
ಆಡಳಿತಾಧಿಕಾರಿಗಳು
ಕೃಉಮಾಸ, ಬೈಲಹೊಂಗಲ

DIPR/BGM/RO-NO-2076/KSMCA/2025-26

---

## ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಾರ್ಯಾಲಯ, ಖರೀದಿ ಶಾಖೆ, ಚಾವಿಸನಿನಿ, ಮೈಸೂರು–570017, ದೂರವಾಣಿ ಸಂಖ್ಯೆ: 94489994705
ಇ–ಮೇಲ್ ಐಡಿ: gmpurc@cescmysore.org ವೆಬ್‌ಸೈಟ್:www.cescmysore.org

ಚಾವಿಸನಿನಿ/ಪ್ರವ್ಯ/ಟಿ.ಎto ಎಂ.ಡಿ/2025–26/42323 ದಿನಾಂಕ: 12.03.2026

**ಅಲ್ಪಾವಧಿ ಟೆಂಡರ್ ಪ್ರಕಟಣೆ (ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)**

ಚಾವಿಸನಿನಿ ವತಿಯಿಂದ ಅರ್ಹ ಬಿಡ್ಡುದಾರರಿಂದ ಈ ಕೆಳಕಂಡ ಕಾಮಗಾರಿಯನ್ನು ನಿರ್ವಹಿಸಲು ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿದೆ.

| ಕ್ರಸಂ | ಸಾಮಾಗ್ರಿಗಳ ವಿವರ | ವಿಚಾರಣೆ ಸಂಖ್ಯೆ/ದಿನಾಂಕ |
|---|---|---|
| 1 | ಚಾವಿಸನಿನಿಯ ನಿಗಮ ಕಛೇರಿ ಹಾಗೂ ವ್ಯವಸ್ಥಾಪಕ ನಿರ್ದೇಶಕರವರ ಗೃಹ ಕಛೇರಿಯಲ್ಲಿ ಶಕ್ತಿ ಸಂರಕ್ಷಣೆಗಾಗಿ IoT ಆಧಾರಿತ ವೈರ್‌ಲೆಸ್ ಸ್ಮಾರ್ಟ್ ಆಫೀಸ್ ಆಟೊಮೇಷನ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸುವ ಕಾಮಗಾರಿ | C2-6480/12.03.2026 |

ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://kppp.karnataka.gov.in** ನಲ್ಲಿ ದಿನಾಂಕ: **16.03.2026** ನಂತರ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹೆಲ್ಪ್‌ಲೈನ್ +91–8046010000, +91–8068948777 ಅಥವಾ ಇ–ಮೇಲ್ ವಿಳಾಸ **support@eprochelpdesk.com.** ವ್ಯವಹರಿಸಲು ಕೋರಲಾಗಿದೆ.

**ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ: 1912**

ವಾಸಾಸಂಇ/ಮೈಸೂರು/1829/ಎಸ್‌ಎಸ್‌ಸಿ/2025–26 ಸಹಿ/– ಪ್ರಧಾನ ವ್ಯವಸ್ಥಾಪಕರು (ಖರೀದಿ) ಚಾವಿಸನಿನಿ, ಮೈಸೂರು

---

## ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ,
ಕೇಂದ್ರ ಕಚೇರಿ, ಹುಬ್ಬಳ್ಳಿ

ಟೆಂಡರ್ ಪ್ರಕಟಣೆ ಸಂ. 14/2025–26 ದಿನಾಂಕ: 13–03–2026

**ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ವೇದಿಕೆ (ಕೆಪಿಪಿ) ಯ ಮೂಲಕ**

ಆಸಕ್ತ ಬಿಡ್‌ದಾರರಿಂದ ಈ ಕೆಳಗೆ ತೋರಿಸಿದಂತೆ ಸಾಮಗ್ರಿಗಳ ಸರಬರಾಜಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

| ಕ್ರ.ಸಂ. | ಟೆಂಡರ್ ವಿವರಣೆ | ಅಂದಾಜು ಮೌಲ್ಯ |
|---|---|---|
| 1 | ಟೈರ್, ಟ್ಯೂಬ್ ಮತ್ತು ಫ್ಲ್ಯಾಪ್‌ಗಳು. | ರೂ. 1817.00 ಲಕ್ಷ |
| 2 | ಗೇರ್ ಮತ್ತು ಗೇರ್ ಬಿಡಿಭಾಗಗಳು. | ರೂ. 819.00 ಲಕ್ಷ |
| 3 | ಪಿಸಿಟಿಆರ್ (ಟ್ರೆಡ್ ರಬ್ಬರ್) ಮತ್ತು ಸಂಯೋಜಿತ ಸಾಮಗ್ರಿಗಳು. | ರೂ. 642.00 ಲಕ್ಷ |
| 4 | ಗ್ಯಾಸ್ಕೆಟ್‌ಗಳು. | ರೂ. 234.00 ಲಕ್ಷ |
| 5 | ಟೈ ರಾಡ್, ಪುಶ್ ರಾಡ್ ಕಿಟ್ಸ್, ಎಂಡ್ಸ್ ಮತ್ತು ಅಸೆಂಬ್ಲಿಗಳು | ರೂ. 145.00 ಲಕ್ಷ |
| 6 | ಫೀನಾಲ್ ಬಾಂಡೆಡ್ ಡೆನ್ಸಿಫೈಡ್ ಕಾಂಪ್ರೆಸ್ಡ್ ವುಡನ್ ಫ್ಲೋರ್ ಬೋರ್ಡ್‌ಗಳು. | ರೂ. 82.00 ಲಕ್ಷ |
| 7 | ಪ್ಲೈವುಡ್ ಶೀಟ್‌ಗಳು. | ರೂ. 64.02 ಲಕ್ಷ |

ಬಿಡ್ ಸಲ್ಲಿಕೆಯ ಕೊನೆಯ ದಿನಾಂಕ ಮತ್ತು ಸಮಯ: ಟೆಂಡರ್ ಕ್ರಸಂ. 1 ರಿಂದ 4 ರಲ್ಲಿನ ಟೆಂಡರ್‌ಗಳಿಗೆ **13–04–2026.** ಕ್ರ. ಸಂ. 5 ರಿಂದ 7 ರಲ್ಲಿರುವ ಟೆಂಡರ್ ಗಳಿಗೆ **ದಿನಾಂಕ: 02–04–2026 ಗಂಟೆ: 17:30** ರವರೆಗೆ.

ವಿವರಗಳಿಗಾಗಿ ವೆಬ್ ಸೈಟ್: **http://kppp.karnataka.gov.in** ಅಥವಾ ಮೊಬೈಲ್ ಫೋನ್ ಸಂಖ್ಯೆ **7022009113** ಗೆ ಸಂಪರ್ಕಿಸಿ.

ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಕರು,
(ಟೆಂಡರ್ ಕರೆಯುವ ಪ್ರಾಧಿಕಾರ)

ವಾ.ಸಾ.ಇ/ಧಾರವಾಡ/1352/ದೇಶಪಾಂಡೆಪಬ್ಲಿಸಿಟಿ/2025–26

---

ಕರ್ನಾಟಕ ಸರ್ಕಾರ

## ಜಿಲ್ಲಾ ಪಂಚಾಯತ್, ಕೊಪ್ಪಳ. ಕಾರ್ಯಪಾಲಕ ಇಂಜನೀಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೊಪ್ಪಳ.

ಸಂಖ್ಯೆ:ಗ್ರಾ.ಕು.ನೀ & ನೈ/ವಿಕೊ/ಟೆಂಡರ್/2025–26/1476 ದಿನಾಂಕ: 13.03.2026

**ಟೆಂಡರ್ ಪ್ರಕಟಣೆ**

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ, ಪಾರದರ್ಶಕತೆ ಅಧಿನಿಯಮ 1999 ರ ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ Standard Bid Document KW ರ ನಿಯಮಗಳನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ http://kppp.karnataka.gov.in ಪೋರ್ಟ್‌ಲ್, ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ 2026–27 ನೇ ಸಾಲಿನ ವಿಭಾಗ ಮತ್ತು ಉಪ–ವಿಭಾಗ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಸಮಾಲೋಚಕರು ಒದಗಿಸುವ ಕುರಿತು ಟೆಂಡರ್ ಆಹ್ವಾನಿಸಿದೆ. ಅರ್ಹ ಗುತ್ತಿಗೆದಾರರು ಇ–ಪ್ರೋಕ್ಯೂರಮೆಂಟ್ ಪೋರ್ಟ್‌ಲ್ http://kppp.karnataka.gov.in ಮುಖಾಂತರ ಭಾಗವಹಿಸಬಹುದು.

**ಸಾಮಾನ್ಯ ಸೂಚನೆಗಳು:** 1) ಗುತ್ತಿಗೆದಾರರು ಟೆಂಡರ್ ಬಿಡ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗದಿತ ಇ.ಎಮ್.ಡಿ ಹಣವನ್ನು ಆನ್‌ಲೈನ್ ಮೂಲಕ ನಿಗದಿಪಡಿಸಿದಂತೆ ಸಂದಾಯ ಮಾಡಬೇಕು. 4) ಡಬಲ್ ಕವರ್ ಟೆಂಡರ್ ಆಹ್ವಾನಿಸಿದೆ.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿ ಕೆಲಸದ ವೇಳೆಯಲ್ಲಿ ಅಥವಾ email:eerwsskpl@gmail.com ದ್ವಾರ ಮಾಹಿತಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟಿನಲ್ಲಿ ದಿನಾಂಕ: **17/03/2026** ರಿಂದ Download ಮಾಡಿಕೊಳ್ಳಬಹುದಾಗಿದೆ.

ಟೆಂಡರ್ ಪ್ರೋಸೆಸಿಂಗ್ ಶುಲ್ಕ: ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿರುವಂತೆ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿತ ಕಾಲಾವಧಿ: 12 ತಿಂಗಳು ಟೆಂಡರ್ ಆಕ್ಷೇಪಣೆ/ ಸ್ಪಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು: **17/03/2026** ಸಮಯ 10:00 ಗಂಟೆಯಿಂದ **26/03/2026** ಸಮಯ 16:00 ಗಂಟೆವರೆಗೆ ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ : **17/03/2026** ಸಮಯ 10:00 ಗಂಟೆಯಿಂದ **26/03/2026** ಸಮಯ 16:00 ಗಂಟೆವರೆಗೆ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ: **27/03/2026** ರಂದು 16:30 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾಇದ್ದ ಪಕ್ಷದಲ್ಲಿ ಮರುದಿನ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ **30/03/2026** ರಂದು ಅಥವಾ ತಾಂತ್ರಿಕ ಬಿಡ್ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದ ನಂತರ

**ಟಿಪ್ಪಣಿ:** ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ ಹಾಗೂ ಇತರೆ ಪ್ರಮಾಣ ಪತ್ರಗಳ ಮೂಲ ದಾಖಲೆಗಳನ್ನು ಬಿಡ್ ತೆರೆದ ನಂತರ ವಿಭಾಗ ಕಛೇರಿಗೆ ಪರಿಶೀಲನೆಗಾಗಿ ಒದಗಿಸತಕ್ಕದ್ದು.

ಸಹಿ/–ಕಾರ್ಯಪಾಲಕ ಅಭಿಯಂತರರು,
ಗ್ರಾ.ಕು.ನೀ & ನೈರ್ಮಲ್ಯ ವಿಭಾಗ, ಕೊಪ್ಪಳ

ಡಿಐಪಿಆರ್/ಕೊಪ್ಪಳ/752/ಕೆಎಸ್ಎಂಸಿಎ/2025–26



# ಯುದ್ಧದ ತೀವ್ರತೆ ಮತ್ತಷ್ಟು ಹೆಚ್ಚಳ

## ಟೆಹ್ರಾನ್‌ನಲ್ಲಿ ಅಮೆರಿಕ- ಇಸ್ರೇಲ್ ವಿರುದ್ಧ ಸಾವಿರಾರು ಜನ ಸೇರಿದ್ದ ಪ್ರತಿಭಟನೆ ಸಮೀಪದಲ್ಲೇ ಭಾರೀ ಸ್ಫೋಟ

**ಟೆಹ್ರಾನ್/ದುಬೈ:** ಇರಾನ್ ರಾಜಧಾನಿ ಟೆಹ್ರಾನ್‌ನ ಕೇಂದ್ರ ಭಾಗದಲ್ಲಿ ಶುಕ್ರವಾರ ಭಾರೀ ಸ್ಫೋಟ ಸಂಭವಿಸಿದೆ. ಸಾವಿರಾರು ಜನರು ಸೇರಿದ್ದ ಸರ್ಕಾರ ಪ್ರಾಯೋಜಿತ ಕುದ್ಸ್ ಡೇ ಪ್ರತಿಭಟನೆ ನಡೆಯುತ್ತಿದ್ದ ಪ್ರದೇಶದ ಸಮೀಪದಲ್ಲೇ ಈ ಸ್ಫೋಟ ಸಂಭವಿಸಿದೆ. ಇಸ್ರೇಲ್ ವಿರುದ್ಧ ಘೋಷಣೆಗಳನ್ನು ಕೂಗಲು ಪ್ರತಿವರ್ಷ ನಡೆಯುವ ಈ ರ್‍ಯಾಲಿಯ ಸಮಯದಲ್ಲಿ ಈ ಸ್ಫೋಟ ಸಂಭವಿಸಿದೆ.

ಸ್ಫೋಟಕ್ಕೂ ಮೊದಲು ಕೇಂದ್ರ ಟೆಹ್ರಾನ್ ಪ್ರದೇಶವನ್ನು ಗುರಿಯಾಗಿಸಬಹುದು ಎಂದು ಇಸ್ರೇಲ್ ಎಚ್ಚರಿಕೆ ನೀಡಿತ್ತು. ಆದರೆ ತಕ್ಷಣದಂತೆ ಯಾವುದೇ ಸಾವುನೋವುಗಳ ಮಾಹಿತಿ ಲಭ್ಯವಾಗಿಲ್ಲ. ಆದರೂ ಈ ಘಟನೆ ಎರಡು ವಾರಗಳಿಂದ ಮುಂದುವರಿಯುತ್ತಿರುವ ಯುದ್ಧದ ತೀವ್ರತೆಯನ್ನು ಮತ್ತಷ್ಟು ಹೆಚ್ಚಿಸಿದೆ.

ಇರಾನ್ ಪ್ರತಿದಿನವೂ ಇಸ್ರೇಲ್ ಹಾಗೂ ಪರ್ಷಿಯನ್ ಗಲ್ಫ್ ಪ್ರದೇಶದ ಕೆಲವು ರಾಷ್ಟ್ರಗಳ ಮೇಲೆ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳನ್ನು ನಡೆಸುತ್ತಿದ್ದು, ಜಾಗತಿಕವಾಗಿ ವ್ಯಾಪಾರವಾಗುವ ತೈಲದ ಸುಮಾರು ಐದನೇ ಭಾಗ ಸಾಗುವ ಹಾರ್ಮುಜ್ ಜಲಸಂಧಿಯನ್ನು ಕೂಡ ಬಹುತೇಕ ಮುಚ್ಚಿದೆ. ಇದೇ ವೇಳೆ ಅಮೆರಿಕ ಮತ್ತು ಇಸ್ರೇಲ್ ಯುದ್ಧ ವಿಮಾನಗಳು ಇರಾನ್‌ನ ಸೇನಾ ಹಾಗೂ ಇತರ ಪ್ರಮುಖ ಗುರಿಗಳ ಮೇಲೆ ನಿರಂತರ ದಾಳಿಗಳನ್ನು ಮುಂದುವರಿಸುತ್ತಿವೆ.

### ರ್‍ಯಾಲಿ ಪ್ರದೇಶದಲ್ಲಿ ಭಾರೀ ಸ್ಫೋಟ

ಶುಕ್ರವಾರ ಮಧ್ಯಾಹ್ನ ವೇಳೆಗೆ ಟೆಹ್ರಾನ್‌ನ ಫರ್ಡೋಸಿ ಚೌಕದ ಬಳಿ ಸ್ಫೋಟ ಸಂಭವಿಸಿದೆ. ಇಲ್ಲಿ ಸಾವಿರಾರು ಜನರು 'ಇಸ್ರೇಲ್‌ಗೆ ಮರಣ', 'ಅಮೆರಿಕಗೆ ಮರಣ' ಎಂಬ ಘೋಷಣೆಗಳನ್ನು ಕೂಗುತ್ತಾ ಪ್ರತಿಭಟಿಸುತ್ತಿದ್ದರು.

ಸ್ಫೋಟಕ್ಕೂ ಸ್ವಲ್ಪ ಹೊತ್ತಿಗೆ ಮೊದಲು ಇಸ್ರೇಲ್ ಫಾರ್ಸಿ ಭಾಷೆಯ ಎಕ್ಸ್ ಖಾತೆಯ ಮೂಲಕ ಆ ಪ್ರದೇಶವನ್ನು ಖಾಲಿ ಮಾಡುವಂತೆ ಎಚ್ಚರಿಕೆ ನೀಡಿತ್ತು. ಆದರೆ ಯುದ್ಧ ಆರಂಭವಾದ ನಂತರದಿಂದ ಇರಾನ್‌ನಲ್ಲಿ ಇಂಟರ್ನೆಟ್ ಬಳಕೆ ಬಹುತೇಕ ಸ್ಥಗಿತಗೊಂಡಿರುವುದರಿಂದ ಬಹುತೇಕ ಜನರಿಗೆ ಈ ಸಂದೇಶ ತಲುಪಿರಲಿಲ್ಲ.

ಸ್ಫೋಟದ ನಂತರ ಪ್ರದೇಶದಲ್ಲಿ ಹೊಗೆ ಏರುತ್ತಿರುವ ದೃಶ್ಯಗಳು ಕಂಡುಬಂದಿದ್ದು, ಜನರು 'ಅಲ್ಲಾಹು ಅಕ್ಬರ್' ಎಂದು ಘೋಷಣೆಗಳನ್ನು ಕೂಗುತ್ತಿರುವ ವಿಡಿಯೋಗಳು ಹರಿದಾಡಿವೆ.

ಆ ಸಂದರ್ಭದಲ್ಲಿ ಇರಾನ್ ನ್ಯಾಯಾಂಗ ಮುಖ್ಯಸ್ಥ ಗೊಳಾಮ್‌ಹೊಸೇನ್ ಮೊಹ್ಸೆನಿ ಈ ಸ್ಥಳದಲ್ಲೇ ಸರ್ಕಾರಿ ಟಿವಿಗೆ ಸಂದರ್ಶನ ನೀಡುತ್ತಿದ್ದರು. ಸ್ಫೋಟದ ನಂತರ ಅವರ ಭದ್ರತಾ ಸಿಬ್ಬಂದಿ ಅವರನ್ನು ಸುತ್ತುವರಿದು ರಕ್ಷಣೆ ನೀಡಿದರು. ಈ ಸಂದರ್ಭದಲ್ಲೂ ಅವರು 'ಕ್ಷಿಪಣಿಗಳ ಮಳೆಯಲ್ಲಿಯೂ ಇರಾನ್ ಹಿಂದೆ ಸರಿಯುವುದಿಲ್ಲ' ಎಂದು ಘೋಷಿಸಿದರು. ಮತ್ತೊಬ್ಬ ಹಿರಿಯ ಭದ್ರತಾ ಅಧಿಕಾರಿ ಅಲಿ ಲಾರಿಜಾನಿ ಈ ದಾಳಿ 'ಇಸ್ರೇಲ್‌ನ ನಿರಾಶೆಯ ಸಂಕೇತ' ಎಂದು ಹೇಳಿದ್ದಾರೆ.

ಇದರ ಜತೆಗೆ ಕಳೆದ 24 ಗಂಟೆಗಳಲ್ಲಿ 200ಕ್ಕೂ ಹೆಚ್ಚು ಗುರಿಗಳನ್ನು ಹೊಡೆದಿದ್ದಾಗಿ ಇಸ್ರೇಲ್ ಘೋಷಿಸಿದೆ. ಕ್ಷಿಪಣಿ ಉಡಾವಣಾ ತಾಣಗಳು, ರಕ್ಷಣಾ ವ್ಯವಸ್ಥೆಗಳು ಮತ್ತು ಶಸ್ತ್ರಾಸ್ತ್ರ ಉತ್ಪಾದನಾ ಕೇಂದ್ರಗಳು ಇದರಲ್ಲಿ ಸೇರಿವೆ.

### ಗಲ್ಫ್‌ನಲ್ಲಿ ಇರಾನ್ ದಾಳಿ

ಗಲ್ಫ್ ಪ್ರದೇಶದ ತೈಲ ಮತ್ತು ಇತರ ಮೂಲಸೌಕರ್ಯಗಳ ಮೇಲೂ ಇರಾನ್ ದಾಳಿಗಳನ್ನು ಮುಂದುವರಿಸಿದೆ. ಸೌದಿ ಅರೇಬಿಯಾದ ಪ್ರಕಾರ ಸುಮಾರು 50 ಡ್ರೋನ್‌ಗಳನ್ನು ಅವರು ಹೊಡೆದುರುಳಿಸಿದ್ದಾರೆ. ಒಮಾನ್‌ನ ಸೋಹಾರ್ ಕೈಗಾರಿಕಾ ಪ್ರದೇಶದಲ್ಲಿ ಎರಡು ಡ್ರೋನ್‌ಗಳು ಪತನಗೊಂಡ ಪರಿಣಾಮ ಇಬ್ಬರು ಮೃತಪಟ್ಟಿದ್ದಾರೆ ಎಂದು ಒಮಾನ್ ಸುದ್ದಿಸಂಸ್ಥೆ ತಿಳಿಸಿದೆ. ಬಹ್ರೈನ್‌ನಲ್ಲಿ ಕೂಡ ಕ್ಷಿಪಣಿ ಎಚ್ಚರಿಕೆ ಸೈರನ್‌ಗಳು ಮೊಳಗಿದರೆ, ದುಬೈನಲ್ಲಿ ತಡೆದ ಡ್ರೋನ್ ಅವಶೇಷಗಳಿಂದ ಕೈಗಾರಿಕಾ ಪ್ರದೇಶದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ದುಬೈ ಅಂತಾರಾಷ್ಟ್ರೀಯ ಹಣಕಾಸು ಕೇಂದ್ರದಲ್ಲಿನ ಒಂದು ಕಟ್ಟಡಕ್ಕೂ ಅವಶೇಷಗಳು ಬಿದ್ದು ಹಾನಿಯಾಗಿದೆ.

ಇರಾನ್ ಈ ವಾರದ ಆರಂಭದಲ್ಲಿ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳನ್ನು ಗುರಿಯಾಗಿಸುವುದಾಗಿ ಹೇಳಿತ್ತು.



### ಇಸ್ರೇಲ್- ಹಿಜ್ಬುಲ್ಲಾ ಸಂಘರ್ಷ ಹೆಚ್ಚಳ

ಲೆಬನಾನ್‌ನ ಇರಾನ್ ಬೆಂಬಲಿತ ಹಿಜ್ಬುಲ್ಲಾ ಗುಂಪು ಉತ್ತರ ಇಸ್ರೇಲ್ ಕಡೆಗೆ ಹಲವಾರು ರಾಕೆಟ್ ದಾಳಿಗಳನ್ನು ನಡೆಸಿದೆ. ಇದರಿಂದ ಸುಮಾರು 60 ಜನರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಬೇರುತ್‌ನ ದಕ್ಷಿಣ ಪಶ್ಚಿಮ ಭಾಗದಲ್ಲಿ ನಡೆದ ಇಸ್ರೇಲ್ ದಾಳಿಯಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟಿದ್ದಾನೆ. ಮತ್ತೊಂದು ದಾಳಿಯಲ್ಲಿ ಒಂದು ಅಪಾರ್ಟ್‌ಮೆಂಟ್ ಕಟ್ಟಡ ಬೆಂಕಿಗಾಹುತಿಯಾಗಿದೆ.

## ರಾಷ್ಟ್ರಗಳ ಗಮನಸೆಳೆದ ಕ್ವಾಡ್ ಕಾಪ್ಟರ್

**ಕೈವ್:** ಸಾಂಪ್ರದಾಯಿಕ ವೈಮಾನಿಕ ರಕ್ಷಣಾ ಮಾದರಿ ಬದಲಾಗುತ್ತಿದ್ದು, ಉಕ್ರೇನ್‌ನ ಕಡಿಮೆ-ವೆಚ್ಚದ ಇಂಟರ್‌ಸೆಪ್ಟರ್ ಡ್ರೋನ್‌ಗಳ ಬಳಕೆ ಪೆಂಟಗನ್ ಮತ್ತು ಮಧ್ಯಪ್ರಾಚ್ಯ ಮಿತ್ರರಾಷ್ಟ್ರಗಳ ಗಮನ ಸೆಳೆಯುತ್ತಿದೆ. ಇರಾನ್ ವಿನ್ಯಾಸದ ಶಾಹೆದ್-136 ಡ್ರೋನ್‌ಗಳ ನಿರಂತರ ದಾಳಿಯನ್ನು ಎದುರಿಸುತ್ತಿರುವ ಉಕ್ರೇನ್ ಪಡೆಗಳು, ಆರ್ಥಿಕ ಮತ್ತು ಯುದ್ಧತಂತ್ರದ ದೃಷ್ಟಿಯಿಂದ ಸುಸ್ಥಿರ ಡ್ರೋನ್ ವಿರೋಧಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿವೆ.


**ವೆಚ್ಚ ಅಜಗಜಾಂತರ:** ಆಧುನಿಕ ಯುದ್ಧದ ನಿರ್ಣಾಯಕ ವ್ಯತ್ಯಾಸ ವೆಚ್ಚವೇ ಆಗಿದೆ. ಒಂದು ಶಾಹೆದ್ ಡ್ರೋನ್‌ನ ಬೆಲೆ ಅಂದಾಜು 30,000 ಆಗಿದ್ದರೆ, ಅದನ್ನು ಹೊಡೆದುರುಳಿಸಲು ಬಳಸುವ ಪೇಟ್ರಿಯಾಟ್ ಪಿಎಸಿ-3 ಕ್ಷಿಪಣಿಗಳ ಬೆಲೆ ಲಕ್ಷಾಂತರ ಡಾಲರ್‌ಗಳು. ಇದನ್ನು ಸರಿಪಡಿಸಲು, ವೈಲ್ಡ್ ಹಾರ್ನೆಟ್ಸ್ ತಯಾರಿಸಿದ ಹೆಚ್ಚಿನ ವೇಗದ ಸ್ಟಿಂಗ್ ಕ್ವಾಡ್‌ಕಾಪ್ಟರ್‌ಗಳನ್ನು ನಿಯೋಜಿಸಲಾಗುತ್ತಿದೆ. ಅಂದಾಜು 2,500 ವೆಚ್ಚದ ಈ ಇಂಟರ್‌ಸೆಪ್ಟರ್‌ಗಳು, 2022 ರಿಂದ ಉಕ್ರೇನ್ ಮೇಲೆ ನಡೆದ 57,000ಕ್ಕೂ ಹೆಚ್ಚು ಡ್ರೋನ್ ದಾಳಿಗಳನ್ನು ಕಡಿಮೆ ವೆಚ್ಚದಲ್ಲಿ ತಡೆದಿವೆ ಎನ್ನಲಾಗಿದೆ.

**ತಾಂತ್ರಿಕ ಶ್ರೇಷ್ಠತೆ:** ಸ್ಟಿಂಗ್ ಡ್ರೋನ್ ಅನ್ನು ವಿಶೇಷವಾಗಿ ವಾಯುದಾಳಿಯನ್ನು ವಿಫಲಗೊಳಿಸಲು ವಿನ್ಯಾಸಗೊಳಿಸಲಾಗಿದೆ. ಗಂಟೆಗೆ 150-170 ಕಿಮೀ ವೇಗದಲ್ಲಿ ಚಲಿಸುವ ಈ ಬುಲೆಟ್ ಆಕಾರದ ಯುನಿಟ್‌ಗಳನ್ನು ವಿಶೇಷ ಪತ್ತೆ ಜಾಲಗಳ ಮೂಲಕ ನಿಯಂತ್ರಿಸಲಾಗುತ್ತದೆ. ಜನವರಿ 2026 ರ ಹೊತ್ತಿಗೆ ಸರಿಸುಮಾರು ಶೇ.70 ಶಾಹೆದ್ ಡ್ರೋನ್‌ಗಳನ್ನು ಇಂತಹ ಇಂಟರ್‌ಸೆಪ್ಟರ್ ಡ್ರೋನ್‌ಗಳ ಮೂಲಕವೇ ಹೊಡೆದುರುಳಿಸಲಾಗಿದೆ ಎಂದು ವರದಿಯಾಗಿದೆ. ಜೆಟ್ ಚಾಲಿತ ಗೆರಾನ್-3ನಂತಹ ವೇಗದ ಡ್ರೋನ್‌ಗಳನ್ನು ಎದುರಿಸಲು ಎಐ-ಸಂಯೋಜಿತ ಮಾರ್ಗದರ್ಶನ ಮತ್ತು ಜೆಟ್-ಬೂಸ್ಟೆಡ್ ಮಾದರಿಗಳನ್ನು ಅಭಿವೃದ್ಧಿಪಡಿಸಲಾಗುತ್ತಿದ್ದು, ಇವುಗಳ ಯಶಸ್ಸಿನ ಪ್ರಮಾಣ ಶೇ.90ಕ್ಕೆ ಏರುವ ನಿರೀಕ್ಷೆಯಿದೆ.

**▸▸ ಜಾಗತಿಕ ಡ್ರೋನ್ ರಕ್ಷಣಾ ವ್ಯವಸ್ಥೆಯಲ್ಲಿ ಹೊಸ ಬದಲಾವಣೆ**

**ರಫ್ತಿನ ಕಡೆಗೂ ಗಮನ:** ಪೆಂಟಗನ್ ಈ ಹೆಚ್ಚಿನ ವೇಗದ ಇಂಟಸೆರ್‌ಪ್ಟರ್‌ಗಳ ಮೇಲೆ ಗಮನ ಕೇಂದ್ರೀಕರಿಸಿದೆ. ವಿಶೇಷವಾಗಿ, ಈ ಹಿಂದೆ ಯುಎಸ್ ಸೌಲಭ್ಯಗಳನ್ನು ಗುರಿಯಾಗಿಸಿಕೊಂಡಿದ್ದ ಗಲ್ಫ್ ಪ್ರದೇಶದಲ್ಲಿ ಇವುಗಳನ್ನು ಬಳಸಲು ಆಸಕ್ತಿ ವಹಿಸಿದೆ. ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ, ಉಕ್ರೇನಿಯನ್ ಮಿಲಿಟರಿ ತಜ್ಞರನ್ನು ಕತಾರ್, ಯುಎಇ, ಸೌದಿ ಅರೇಬಿಯಾ ಮತ್ತು ಜೋರ್ಡಾನ್‌ಗೆ ಕಳುಹಿಸಿರುವುದನ್ನು ಖಚಿತಪಡಿಸಿದ್ದಾರೆ. ಈ ವಿನಿಮಯ, ಉಭಯ ದೇಶಗಳಿಗೆ ಪ್ರಯೋಜನಕಾರಿ ಎಂದು ಪರಿಗಣಿಸಲಾಗಿದೆ.

ಉಕ್ರೇನಿಯನ್ ಡ್ರೋನ್ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಮೂಲಕ, ಮಿತ್ರರಾಷ್ಟ್ರಗಳು ತಮ್ಮ ದುಬಾರಿ ಕ್ಷಿಪಣಿಗಳನ್ನು ಬ್ಯಾಲಿಸ್ಟಿಕ್ ಬೆದರಿಕೆಗಳಿಗಾಗಿ ಉಳಿಸಿಕೊಳ್ಳಬಹುದು ಮತ್ತು ಕಡಿಮೆ ವೆಚ್ಚದ ಇಂತಹ ಆವಿಷ್ಕಾರಗಳನ್ನು ಹೆಚ್ಚು ಬಳಸಿಕೊಳ್ಳಬಹುದು ಎಂಬ ಲೆಕ್ಕಾಚಾರ ಇದರ ಹಿಂದಿದೆ.



## ಅಮೆರಿಕ ಇಂಧನ ಮರುಪೂರಣ ವಿಮಾನ ಇರಾಕ್‌ನಲ್ಲಿ ಪತನ

**ವಾಷಿಂಗ್ಟನ್:** ಮಿಲಿಟರಿ ಕಾರ್ಯಾಚರಣೆಯ ಸಂದರ್ಭದಲ್ಲಿ ಅಮೆರಿಕದ ಕೆಸಿ-135 ಇಂಧನ ಮರುಪೂರಣ ವಿಮಾನವೊಂದು ಪಶ್ಚಿಮ ಇರಾಕ್‌ನಲ್ಲಿ ಪತನಗೊಂಡಿದೆ. ವಿಮಾನದಲ್ಲಿದ್ದ ಅಮೆರಿಕ ಸೇನೆಯ ನಾಲ್ಕು ಸಿಬ್ಬಂದಿ ಮೃತರಾಗಿದ್ದಾರೆ. ಗುರುವಾರ ರಾತ್ರಿ ಆಪರೇಷನ್ ಎಪಿಕ್ ಫ್ಯೂರಿ ಭಾಗವಾಗಿ ಹಾರಾಡುತ್ತಿದ್ದಾಗ ಈ ಘಟನೆ ಸಂಭವಿಸಿದೆ ಎಂದು ಅಮೆರಿಕ ಸೇನೆ ತಿಳಿಸಿದೆ.

ಇರಾನ್ ಸಂಘರ್ಷಕ್ಕೆ ಸಂಬಂಧಿಸಿದ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದಾಗ ಒಂದು ವಿಮಾನ ಪಶ್ಚಿಮ ಇರಾಕ್‌ನಲ್ಲಿ ಪತನಗೊಂಡರೆ, ಎರಡನೆಯದು ಸುರಕ್ಷಿತವಾಗಿ ಇಳಿದಿದೆ. ಅಪಘಾತಕ್ಕೆ ಶತ್ರುಪಡೆಗಳ ಅಥವಾ ಮಿತ್ರಪಡೆಗಳ ದಾಳಿ ಕಾರಣವಲ್ಲ ಎಂದು ಹೇಳಲಾಗಿದೆ. ಆದರೆ, ಇರಾಕ್‌ನ ಇಸ್ಲಾಮಿಕ್ ರೆಸಿಸ್ಟೆನ್ಸ್ ಎಂಬ ಸಶಸ್ತ್ರ ಇರಾನ್ ಬೆಂಬಲಿತ ಗುಂಪು ವಿಮಾನವನ್ನು ಹೊಡೆದುರುಳಿಸಿರುವುದಾಗಿ ಹೇಳಿಕೊಂಡಿದೆ.

**ಕೆಸಿ-135 ವಿಮಾನದ ಬಗ್ಗೆ:** ಬೋಯಿಂಗ್ ಕೆಸಿ-135 ಸ್ಟ್ರಾಟೋಟ್ಯಾಂಕರ್ ವಿಮಾನವನ್ನು ಅಮೆರಿಕದ ವಾಯುಪಡೆಯ ಯುದ್ಧ ವಿಮಾನಗಳಿಗೆ ಆಕಾಶದಲ್ಲೇ ಇಂಧನ ತುಂಬಿಸಲು ಬಳಸುತ್ತದೆ. ಬೋಯಿಂಗ್ 707 ವಿಮಾನದ ವಿನ್ಯಾಸವನ್ನು ಆಧರಿಸಿದ ಇದು ಕಳೆದ ಆರು ದಶಕಗಳಿಂದ ಸೇವೆಯಲ್ಲತ್ತು. ಪ್ರಸ್ತುತ ಅಮೆರಿಕದ ವಾಯುಪಡೆ ಇಂತಹ 376 ವಿಮಾನಗಳನ್ನು ಹೊಂದಿದೆ.

**ಸರಣಿ ವಿಮಾನ ಅಪಘಾತಗಳು:** ಇರಾನ್ ವಿರುದ್ಧದ ಇಸ್ರೇಲ್ ಮಿಲಿಟರಿ ಕಾರ್ಯಾಚರಣೆಗೆ ಅಮೆರಿಕ ಕೈಜೋಡಿಸಿದ ಎರಡು ವಾರಗಳಲ್ಲಿ ಸಂಭವಿಸಿದ ನಾಲ್ಕನೇ ವಿಮಾನ ನಷ್ಟ ಇದಾಗಿದೆ. ಇದಕ್ಕೂ ಮೊದಲು, ಕುವೈತ್‌ನಿಂದ ತಪ್ಪಾಗಿ ನಡೆಸಿದ ದಾಳಿಯಿಂದ ಮೂರು ಅಮೆರಿಕನ್ ಫೈಟರ್ ಜೆಟ್‌ಗಳು ಪತನಗೊಂಡಿದ್ದವು. ಈ ಸಂಘರ್ಷದಲ್ಲಿ ಇದುವರೆಗೆ ಏಳು ಅಮೆರಿಕನ್ ಸೈನಿಕರು ಮೃತಪಟ್ಟಿದ್ದು, ಸುಮಾರು 140 ಮಂದಿ ಗಾಯಗೊಂಡಿದ್ದಾರೆ ಎಂದು ಪೆಂಟಗನ್ ವರದಿ ಮಾಡಿದೆ.

## ಕಿರುಸುದ್ದಿ

### ಇರಾನಿನ ರೆಡ್ ಕ್ರೆಸೆಂಟ್ ಸೊಸೈಟಿಗೆ ಚೀನಾ ಸಹಾಯ

**ಬೀಜಿಂಗ್:** ಮಧ್ಯಪ್ರಾಚ್ಯ ಯುದ್ಧದ ಮಧ್ಯೆ ಇರಾನಿನ ರೆಡ್ ಕ್ರೆಸೆಂಟ್ ಸೊಸೈಟಿಗೆ 2,00,000 ಡಾಲರ್ ಮೌಲ್ಯದ ಮಾನವೀಯ ನೆರವನ್ನು ಒದಗಿಸುತ್ತದೆ ಎಂದು ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಗುವೊ ಜಿಯಾಕುನ್ ಘೋಷಿಸಿದ್ದಾರೆ. ವರದಿಗಳ ಪ್ರಕಾರ, ಸಂಘರ್ಷದ ವೇಳೆ ನಾಗರಿಕರು ಮತ್ತು ಸೈನಿಕೇತರ ಗುರಿಗಳ ಮೇಲೆ ವಿವೇಚನಾರಹಿತ ದಾಳಿಗಳನ್ನು ಗುವೊ ತೀವ್ರವಾಗಿ ಖಂಡಿಸಿದ್ದಾರೆ. ಈ ಪ್ರದೇಶದಲ್ಲಿ ಉದ್ವಿಗ್ನತೆಯನ್ನು ಕಡಿಮೆ ಮಾಡಲು ಸಹಾಯ ಮಾಡಲು ಒಳಗೊಂಡಿರುವ ಎಲ್ಲಾ ಪಕ್ಷಗಳೊಂದಿಗೆ ಸಂವಹನವನ್ನು ನಿರ್ವಹಿಸಲು ಚೀನಾ ಸಿದ್ಧವಾಗಿದೆ ಎಂದು ಹೇಳಿದರು.

### ವಾಯು ರಕ್ಷಣಾ ವ್ಯವಸ್ಥೆ ಬಲಪಡಿಸುವುದು ಅಗತ್ಯ

**ಹೊಸದಿಲ್ಲಿ:** ಪ್ರಸ್ತುತ ಜಗತ್ತಿನ ಯುದ್ಧ ಸನ್ನಿವೇಶಗಳ ಮಧ್ಯೆ, ಹೆಚ್ಚಿನ ಶಸ್ತ್ರಾಸ್ತ್ರ ವ್ಯವಸ್ಥೆಗಳು, ರಾಡಾರ್‌ಗಳು ಮತ್ತು ಇತರ ಕಾರ್ಯಾಚರಣೆಯ ಸಾಮರ್ಥ್ಯಗಳೊಂದಿಗೆ ಅತ್ಯಂತ ಬಲವಾದ ವಾಯು ರಕ್ಷಣೆ ನಿರ್ಮಿಸುವ ಅವಶ್ಯಕತೆಯಿದೆ ಮಾಜಿ ಐಎಎಫ್ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ವಿ. ಆರ್. ಚೌಧರಿ ಅವರು ಎಂದು ಹೇಳಿದ್ದಾರೆ.

## ಪಾಕ್ ಮೇಲೆ ಅಫ್ಘಾನಿಸ್ತಾನ ಪ್ರತೀಕಾರದ ಡ್ರೋನ್ ದಾಳಿ

**ಕಾಬೂಲ್:** ಅಫ್ಘಾನ್ ವಾಯುಪಡೆ ಶುಕ್ರವಾರ ಪಾಕಿಸ್ತಾನದ ಕೊಹತ್ ಪ್ರದೇಶದ ಸೇನಾ ಕೋಟೆಯ ಮೇಲೆ ಪ್ರತೀಕಾರದ ಡ್ರೋನ್ ದಾಳಿಗಳನ್ನು ನಡೆಸಿದೆ. ಕಾಬೂಲ್ ಮತ್ತು ಕಂದಹಾರ್‌ನಲ್ಲಿ ಆರು ಮಂದಿಯನ್ನು ಬಲಿಪಡೆದ ಪಾಕಿಸ್ತಾನದ ರಾತ್ರಿಕಾಲದ ವೈಮಾನಿಕ ದಾಳಿಗೆ ಪ್ರತಿಯಾಗಿ ಅಫ್ಘಾನಿಸ್ತಾನ ಈ ಕ್ರಮ ಕೈಗೊಂಡಿದೆ.

**ನಿರ್ದಿಷ್ಟ ಗುರಿಗಳ ಮೇಲೆ ದಾಳಿ :** ಖೈಬರ್ ಪಖ್ತುಂಖ್ವಾದಲ್ಲಿರುವ ಕೊಹತ್ ಸೇನಾ ಕೋಟೆ ಬೆಳಗಿನ ಕಾರ್ಯಾಚರಣೆಯಲ್ಲಿ



ಧ್ವಂಸಗೊಂಡಿದೆ ಎಂದು ಅಫ್ಘಾನ್ ರಾಷ್ಟ್ರೀಯ ರಕ್ಷಣಾ ಸಚಿವಾಲಯ ದೃಢಪಡಿಸಿದೆ. ಇದರೊಂದಿಗೆ, ಡುರಾಂಡ್ ಲೈನ್ ಸಂಘರ್ಷದ ವಿಶೇಷ ಕಮಾಂಡ್ ಸೆಂಟರ್ ಮತ್ತು ಕಮಾಂಡರ್ ಕಚೇರಿಯನ್ನು ನಿಖರವಾಗಿ ಗುರಿಯಾಗಿಸಿ ದಾಳಿ ಮಾಡಲಾಗಿದೆ. ಈ ಕೇಂದ್ರಗಳು ಮುಖ್ಯ ಕೋಟೆಯ ಎರಡು ಕಿಲೋಮೀಟರ್ ವ್ಯಾಪ್ತಿಯಲ್ಲಿದ್ದವು.

**ಪ್ರತೀಕಾರದ ಹಿನ್ನೆಲೆ** ಅಫ್ಘಾನಿಸ್ತಾನದ ಪ್ರಮುಖ ನಗರಗಳ ಮೇಲೆ ಪಾಕಿಸ್ತಾನ ದಾಳಿ ನಡೆಸಿತ್ತು. ಇದರಿಂದ ಕಾಬೂಲ್‌ನಲ್ಲಿನ ಮನೆಗಳು ನಾಶವಾಗಿದ್ದವು ಮತ್ತು ಕಂದಹಾರ್ ವಿಮಾನ ನಿಲ್ದಾಣದ ಇಂಧನ ಡಿಪೋ ನಾಶವಾಗಿತ್ತು. ಗಡಿ ಘರ್ಷಣೆಯನ್ನು ಪಾಕಿಸ್ತಾ ಇತ್ತೀಚೆಗೆ ಮುಕ್ತ ಯುದ್ಧ ಎಂದು ಕರೆದ ನಂತರ ಉಭಯ ರಾಷ್ಟ್ರಗಳ ನಡುವೆ ಉದ್ವಿಗ್ನತೆ ಹೆಚ್ಚಾಗಿದೆ. ಪರಮಾಣು ಶಸ್ತ್ರಸಜ್ಜಿತ ನೆರೆಯ ರಾಷ್ಟ್ರದ ಆಕ್ರಮಣದ ವಿರುದ್ಧ ತನ್ನ ಸಾರ್ವಭೌಮತ್ವವನ್ನು ರಕ್ಷಿಸಲು ಈ ದಾಳಿಗಳು ಅನಿವಾರ್ಯ ಎಂದು ಅಫ್ಘಾನ್ ಅಧಿಕಾರಿಗಳು ಸಮರ್ಥಿಸಿಕೊಂಡಿದ್ದಾರೆ.

## ಸಿಇಸಿ ಪದಚ್ಯುತಿಗೆ ಪ್ರತಿಪಕ್ಷಗಳ ನೋಟಿಸ್

**ಹೊಸದಿಲ್ಲಿ:** ಲೋಕಸಭಾ ಸಭಾಪತಿ ಓಂ ಬಿರ್ಲಾ ಪದಚ್ಯುತಿ ಯತ್ನ ವಿಫಲಗೊಂಡ ಬೆನ್ನಲ್ಲೇ, ಇದೀಗ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಪದಚ್ಯುತಿ ಆಗ್ರಹಿಸಿ, ವಿಪಕ್ಷ ಸಂಸದರು ಸಂಸತ್ತಿನ ಉಭಯ ಸದನಗಳಲ್ಲೂ ನೋಟೀಸ್ ಹೊರಡಿಸಿದ್ದಾರೆ. ಲೋಕಸಭೆಯ 130 ವಿಪಕ್ಷ ಸಂಸದರು ಹಾಗೂ ರಾಜ್ಯಸಭೆಯ 63ಸಂಸದರು ನೋಟೀಸ್‌ಗೆ ಸಹಿ ಹಾಕಿದ್ದಾರೆಂದು ಮೂಲಗಳು ತಿಳಿಸಿವೆ. ಇಂಡಿ ಕೂಟದ ಮಿತ್ರಪಕ್ಷಗಳ ಸದಸ್ಯರು ಮಾತ್ರವಲ್ಲ ವಿಪಕ್ಷ ಮಿತ್ರಕೂಟದ ಭಾಗವಲ್ಲದ ಆಪ್ ಸದಸ್ಯರು ಕೂಡ ಸಹಿ ಹಾಕಿದ್ದಾರೆಂದು ಮೂಲಗಳು ತಿಳಿಸಿವೆ. ಕೆಲವು ಪಕ್ಷೇತರ ಸಂಸದರು ಕೂಡ ನೋಟೀಸ್‌ಗೆ ಸಹಿ ಹಾಕಿದ್ದಾರೆ. ಇನ್ನು ಕೆಲವರು ಈ ಉಪಕ್ರಮಕ್ಕೆ ಕೈಜೋಡಿಸುವ ಆಸಕ್ತಿ ತೋರಿದ್ದಾರೆಂದು ಮೂಲಗಳು ವಿವರಿಸಿವೆ. ಮುಖ್ಯ ಚುನಾವಣಾ ಆಯುಕ್ತರ ವಿರುದ್ಧ ಈ ತೆರ ನೋಟೀಸ್ ಹೊರಡಿಸಿದ್ದು ಇದೇ ಮೊದಲು. ಮುಖ್ಯ ಚುನಾವಣಾ ಆಯುಕ್ತರು ಪಕ್ಷಪಾತಿ, ತಾರತಮ್ಯ ಧೋರಣೆ ಹೊಂದಿದ್ದಾರೆ. ಚುನಾವಣಾ ವಂಚನೆ ತನಿಖೆಗೆ ಉದ್ದೇಶಪೂರ್ವಕ ತಡೆಯೊಡ್ಡುತ್ತಾರೆ. ಸಾಕಷ್ಟು ಮತದಾನ ಹಕ್ಕು ನಿರಾಕರಣೆ ಮಾಡುತ್ತಾರೆಂಬ ಆರೋಪ ಸಹಿತ ನೋಟೀಸ್‌ನಲ್ಲಿ ಜ್ಞಾನೇಶ್‌ಕುಮಾರ್ ಅವರ ವಿರುದ್ಧ ಇಂಡಿ ಕೂಟ ಏಳು ಆರೋಪಗಳನ್ನು ಮಾಡಿದೆ. ವೋಟ್‌ಬ್ಯಾಂಕ್‌ಗಾಗಿ ಧಾರಾಳ ಸಂಖ್ಯೆಯಲ್ಲಿ ಅಕ್ರಮ ನುಸುಳುಕೋರರನ್ನು ಮತದಾರ ಪಟ್ಟಿಗೆ ಸೇರ್ಪಡೆ ಮಾಡುವ ಮುಖೇನ ವಿವಿಧ ವಲಯಗಳ ಜನಸಂಖ್ಯಾ ಸ್ವರೂಪವನ್ನೇ ವ್ಯತ್ಯಯಗೊಳಿಸಿ, ರಾಷ್ಟ್ರೀಯ ಭದ್ರತೆಗೇ ಗಂಡಾಂತರ ಒಡ್ಡಿರುವ ವಿಪಕ್ಷ ಕೂಟ, ಇದಕ್ಕೆ ವಿರುದ್ಧವಾಗಿರುವ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಅಭಿಯಾನಕ್ಕೂ ವಿರೋಧ ವ್ಯಕ್ತಪಡಿಸಿದೆ.

## ದೇಶ ರಕ್ಷಣೆಗೆ ನೂತನ ಆರ್ಥಿಕ ಸ್ಥಿರೀಕರಣ ನಿಧಿ

**ಹೊಸದಿಲ್ಲಿ:** ಅನಿರೀಕ್ಷಿತ ಜಾಗತಿಕ ಬಿಕ್ಕಟ್ಟುಗಳ ವಿರುದ್ಧ ರಾಷ್ಟ್ರೀಯ ಆರ್ಥಿಕತೆಯನ್ನು ರಕ್ಷಿಸಲು 1 ಲಕ್ಷ ಕೋಟಿ ರೂ. ಮೊತ್ತದ ಆರ್ಥಿಕ ಸ್ಥಿರೀಕರಣ ನಿಧಿ ಸ್ಥಾಪಿಸಲಾಗಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಶುಕ್ರವಾರ ಘೋಷಿಸಿದರು. ಲೋಕಸಭೆ ಈ ನಿಧಿಗೆ ಧ್ವನಿಮತದ ಮೂಲಕ ಅನುಮೋದನೆ ನೀಡಿತು. ಪಶ್ಚಿಮ ಏಷ್ಯಾ ವಲಯದ ಅಸ್ಥಿರತೆ ಮತ್ತು ಪೂರೈಕೆ ಸರಪಳಿಯ ವ್ಯತ್ಯಯಗಳನ್ನು ಎದುರಿಸಲು ಈ ನಿಧಿಯನ್ನು ರೂಪಿಸಲಾಗಿದೆ. ಈ ಯೋಜನೆಗೆ ಒಟ್ಟು 1 ಲಕ್ಷ ಕೋಟಿ ರೂ. ನಿಗದಿಪಡಿಸಲಾಗಿದ್ದರೂ, ನಿವ್ವಳ ನಗದು ವೆಚ್ಚ 57,381 ಕೋಟಿ ರೂ.ಗೆ ಸೀಮಿತವಾಗಿದೆ. ಉಳಿದ ಮೊತ್ತವನ್ನು ಸರ್ಕಾರದ ಉಳಿತಾಯದಿಂದ ಪಡೆಯಲಾಗಿದೆ. ಈ ಹೆಚ್ಚುವರಿ ವೆಚ್ಚದ ಹೊರತಾಗಿಯೂ, 2025-26ರ ಹಣಕಾಸಿನ ಕೊರತೆಯನ್ನು ಜಿಡಿಪಿಯ ಶೇ.4.4 ರಷ್ಟರಲ್ಲಿಯೇ ಕಾಯ್ದುಕೊಳ್ಳುವ ನಿರೀಕ್ಷೆಯಿದೆ. ಸಾಮಾಜಿಕ ಮತ್ತು ಕೃಷಿ ಕ್ಷೇತ್ರಗಳಿಗೂ ಮಹತ್ವದ ಮೊತ್ತವನ್ನು ಮೀಸಲಿಡಲಾಗಿದೆ. ನರೇಗಾ ಬಾಕಿ ತೀರಿಸಲು 30,000 ಕೋಟಿ ರೂ., ರಸಗೊಬ್ಬರ ಸಬ್ಸಿಡಿಗಾಗಿ 19,230 ಕೋಟಿ ರೂ. ಮತ್ತು ಆಹಾರ ಸಬ್ಸಿಡಿಗಾಗಿ 23,641 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದೆ. ಇದಲ್ಲದೆ, ರಕ್ಷಣಾ ಸಚಿವಾಲಯಕ್ಕೆ 41,822 ಕೋಟಿ ರೂ.ಅನುಮೋದಿಸಲಾಗಿದೆ. ಕಳಪೆ ಬಜೆಟ್ ಎಂಬ ವಿರೋಧ ಪಕ್ಷದ ಆರೋಪಗಳನ್ನು ಸರ್ಕಾರ ತಳ್ಳಿಹಾಕಿದ ವಿತ್ತ ಸಚಿವೆ, ಆರ್ಥಿಕತೆಯಲ್ಲಿ ವಿಚಲಿತರಾಗದೆ ಬಾಹ್ಯ ಆಘಾತಗಳನ್ನು ಎದುರಿಸಲು ಸ್ಥೂಲ ಆರ್ಥಿಕ ಚೌಕಟ್ಟನ್ನು ಬಲಪಡಿಸಲಾಗಿದೆ ಎಂದರು.

## ರಾಜ್ಯಗಳಿಗೆ ಹೆಚ್ಚುವರಿ ಸೀಮೆಎಣ್ಣೆ ಪೂರೈಕೆ

**ಹೊಸದಿಲ್ಲಿ:** ವಾಣಿಜ್ಯ ಅಡುಗೆ ಅನಿಲ ಪೂರೈಕೆಯಲ್ಲಿ ಕಂಡುಬಂದ ವ್ಯತ್ಯಯಗಳ ನಡುವೆಯೇ , ಕೇಂದ್ರ ಸರಕಾರವು ರಾಜ್ಯಗಳಿಗೆ 40,000ಕಿಲೋ ಲೀಟರ್ ಸೀಮೆ ಎಣ್ಣೆಯನ್ನು ಹೆಚ್ಚುವರಿಯಾಗಿ ಪೂರೈಸಿದೆ.ದೇಶದಲ್ಲಿ ಎಲ್‌ಪಿಜಿ ಉತ್ಪಾದನೆಯನ್ನು ಕಳೆದ 5ದಿನಗಳಲ್ಲಿ ಶೇ.28ರಷ್ಟು ಹೆಚ್ಚಳಗೊಳಿಸಿದೆ. ಅಲ್ಲದೆ ಇನ್ನಷ್ಟು ಪ್ರಮಾಣದಲ್ಲಿ ಎಲ್‌ಪಿಜಿ ಸಂಗ್ರಹಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ.ಬುಕಿಂಗ್ ಬಳಿಕ ಸಿಲಿಂಡರ್ ವಿತರಣೆ ಅವಧಿ 2.5ದಿನಗಳೇ ಇರುತ್ತವೆ. ಇದರಲ್ಲಿ ಯಾವುದೇ ಬದಲಾವಣೆ ಇಲ್ಲ,ಹಾಗೆಯೇ ದೇಶದ 33ಕೋಟಿ ಕುಟುಂಬಗಳ ಅಡುಗೆ ಮನೆಗಳಿಗೆ ,ಹಾಗೆಯೇ ಬಡ ಮತ್ತು ದುರ್ಬಲವರ್ಗಗಳವರಿಗೆ ಎಲ್‌ಪಿಜಿ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ನೋಡಿಕೊಳ್ಳಲು ಕೇಂದ್ರ ಗರಿಷ್ಠ ಆದ್ಯತೆ ನೀಡಿದೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ಸಚಿವ ಹರ್ದೀಪ್‌ಸಿಂಗ್ ಪುರಿ ತಿಳಿಸಿದ್ದಾರೆ. ಸಂಗ್ರಹ ಧಾವಂತ ಮತ್ತು ವಿತರಕರು ಮತ್ತು ಚಿಲ್ಲರೆ ಮಾರಾಟ ಮಟ್ಟದಲ್ಲಿ ಆತಂಕಿತ ಬುಕ್ಕಿಂಗ್‌ಗಳ ಬಗೆಗೆ ತಳಮಟ್ಟದಿಂದ ಬರುತ್ತಿರುವ ವರದಿಗಳು ಗ್ರಾಹಕರ ಆತಂಕದಿಂದ ಉದ್ಭವಾಗಿರುವಂಥವುಗಳೇ ವಿನಾ ವಾಸ್ತವಿಕ ಪೂರೈಕೆ ಕೊರತೆಗಳಿಂದಲ್ಲ ಎಂಬುದಾಗಿ ಸಚಿವರು ಸ್ಪಷ್ಟಪಡಿಸಿದರು.

### ಸ್ಫೋಟದ ಸದ್ದು ಹಿಂದೆ ಈ ವಲಯದಲ್ಲಿ ಸಾಮಾನ್ಯವಾಗಿತ್ತು: ಮೋದಿ

## ಈಶಾನ್ಯದಲ್ಲಿ ಬಿಜೆಪಿಯಿಂದ ಶಾಂತಿ ಖಾತ್ರಿ

**ಗುವಾಹತಿ:** ಬಾಂಬ್ ಸ್ಫೋಟದ ಸದ್ದು, ಗುಂಡಿನ ಸುರಿಮಳೆ ಈಶಾನ್ಯ ವಲಯದಲ್ಲಿ ಹಿಂದೆ ಮಾಮೂಲಾಗಿತ್ತು. ಆದರೆ, ಬಿಜೆಪಿ ಈ ವಲಯದಲ್ಲಿ ಶಾಶ್ವತವಾಗಿ ಶಾಂತಿ ನೆಲೆಯೂರುವಂತೆ ಮಾಡಿದೆ. ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಸ್ವಾರ್ಥಯುಕ್ತ ರಾಜಕೀಯ ಹಿತಾಸಕ್ತಿಗಾಗಿ ವಿವಿಧ ಒಪ್ಪಂದಗಳಿಗೆ ಸಹಿ ಹಾಕಿತ್ತು ವಿನಾ ಜನರ ಮೇಲಿನ ಕಾಳಜಿಯಿಂದ ಅಲ್ಲ. ಯಾಕೆಂದರೆ ಕಾಂಗ್ರೆಸ್‌ಗೆ ಆಶ್ವಾಸನೆಗಳ ಸಾಕಾರದ ಧ್ಯೇಯವೇ ಇಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದ್ದಾರೆ.



ಡಬಲ್ ಇಂಜಿನ್ ಸರಕಾರದಲ್ಲಿ ರಾಜ್ಯವು ಶಾಂತಿ ಮತ್ತು ಅಭಿವೃದ್ಧಿಯ ಹೊಸ ಅಧ್ಯಾಯ ಬರೆಯುತ್ತಿದೆ ಎಂದು ಪ್ರಧಾನಿ ಮೋದಿ ಗಮನ ಸೆಳೆದರು. ಮಳೆಯಿಂದಾಗಿ ಪ್ರವಾಸ ಪಟ್ಟಿಯಲ್ಲಿ ವ್ಯತ್ಯಾಸವಾದ್ದರಿಂದ, ಅಸ್ಸಾಂನ ಕೊಕ್ರಜಾರ್ ಜಿಲ್ಲೆಯಲ್ಲಿ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬೇಕಿದ್ದ ಪ್ರಧಾನಿ ಮೋದಿ, ಗುವಾಹತಿಯಿಂದ ವರ್ಚ್ಯುಲ್ ನೆಲೆಯಲ್ಲಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

**ನುಸುಳುಕೋರರಿಗೆ ಜಾಗ ಇಲ್ಲ:** ಅಕ್ರಮ ನುಸುಳುಕೋರರಿಗೆ ದೇಶೀಯರ ಭೂಮಿಯನ್ನು ಹಸ್ತಾಂತರಿಸುವ ಮೂಲಕ ಕಾಂಗ್ರೆಸ್ ರಾಷ್ಟ್ರೀಯ ಭದ್ರತೆಗೆ ಗಂಡಾಂತರವೊಡ್ಡಿದೆ. ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸುವ ಮುಖೇನ, ಈ ದೇಶದಲ್ಲಿ ನುಸುಳುಕೋರರಿಗೆ ಜಾಗವಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ಸಾರುವಂತೆ ಜನರಿಗೆ ಕರೆ ನೀಡಿದರು. ಅಕ್ರಮ ನುಸುಳುಕೋರರ ಜತೆ ನಿಕಟ ಸಖ್ಯ ಹೊಂದಿದ್ದ ಕಾಂಗ್ರೆಸ್ ಅಸ್ಸಾಂನ ಮೂಲವಾಸಿ ಜನರಿಗೆ ಯಾವತ್ತೂ ಭೂಮಿಯ ಹಕ್ಕನ್ನು ನೀಡಿರಲಿಲ್ಲ. ಕಾಂಗ್ರೆಸ್ ಪಕ್ಷ ಮೂಲವಾಸಿಗಳ ಭೂಮಿಯನ್ನು ನುಸುಳುಕೋರರಿಗೆ ಹಸ್ತಾಂತರಿಸಿತ್ತು. ಧುಬ್ರಿ ಮತ್ತು ಗೋಲ್ಪಾರಾ ಜಿಲ್ಲೆಗಳಲ್ಲಿ ಪರಿಸ್ಥಿತಿ ಅದೆಷ್ಟು ಕರಾಳವಾಗಿತ್ತೆಂದರೆ , ಕೊಕ್ರಜಾರ್‌ನ ಜನಸಂಖ್ಯಾ ಸ್ವರೂಪ ತೀರಾ ವ್ಯತ್ಯಯವಾಗಿತ್ತು. ಇದೀಗ ಅಸ್ಸಾಂ ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಶರ್ಮಾ ಅತಿಕ್ರಮಿತ ಭೂಮಿಯ ತೆರವಿಗೆ ಬೃಹತ್ ಅಭಿಯಾನವನ್ನೇ ನಡೆಸುತ್ತಿರುವುದು ಸಂತೋಷದ ವಿಚಾರ. ಇಲ್ಲಿನ ಬಿಜೆಪಿ ಸರಕಾರ ಭೂಮಿಯ ಹಕ್ಕನ್ನು ಮರಳಿ ಇಲ್ಲಿನ ಮೂಲವಾಸಿಗಳಿಗೇ ಹಸ್ತಾಂತರಿಸಿದೆ. ಈ ನಿಟ್ಟಿನಲ್ಲಿ ತುಂಬು ಸಹಕಾರ ನೀಡಿರುವ ಇಲ್ಲಿನ ಆದಿವಾಸಿ ಸಮುದಾಯಗಳ ಕೊಡುಗೆಗೆ ತಾನು ಕೃತಜ್ಞನಾಗಿರುವೆ ಎಂದು ಪ್ರಧಾನಿ ಮೋದಿ ಹೇಳಿದರು.

### ಪ.ಬಂಗಾಳಕ್ಕೆ ಇಂದು ಮೋದಿ

**ಕೋಲ್ಕತ್ತಾ:** ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಪಶ್ಚಿಮ ಬಂಗಾಳಕ್ಕೆ ಭೇಟಿ ನೀಡಲಿದ್ದು, ಇಲ್ಲಿನ ಪ್ರತಿಷ್ಠಿತ ಬ್ರಿಗೇಡ್ ಪರೇಡ್ ಮೈದಾನದಲ್ಲಿ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಸುಮಾರು 18,680 ಕೋಟಿ ರೂ. ಮೌಲ್ಯದ ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಲಿದ್ದಾರೆ.

### ಅಪರಾಧಗಳಿಗೆ ಹಂತ, ಹಂತದ ಶಿಕ್ಷೆ ಪರಿಚಯಿಸುವ ಬಿಲ್ ಮಂಡನೆ

## ತೃತೀಯಲಿಂಗಿ ಸ್ಪಷ್ಟ ವ್ಯಾಖ್ಯಾನಕ್ಕೆ ಮಸೂದೆ

**ಹೊಸದಿಲ್ಲಿ:** ತೃತೀಯಲಿಂಗಿ ಎಂಬ ಪದಕ್ಕೆ ನಿಖರ ಕಾನೂನು ವ್ಯಾಖ್ಯಾನ ನೀಡುವ ಮತ್ತು ಅಂತಹ ವ್ಯಕ್ತಿಗಳ ವಿರುದ್ಧ ನಡೆಯುವ ಅಪರಾಧಗಳಿಗೆ ಹಂತ-ಹಂತದ ಶಿಕ್ಷೆಯನ್ನು ಪರಿಚಯಿಸುವ ಮಸೂದೆಯನ್ನು ಶುಕ್ರವಾರ ಲೋಕಸಭೆಯಲ್ಲಿ ಮಂಡಿಸಲಾಯಿತು. ಪ್ರಸ್ತಾವಿತ ಶಾಸನ, ಅಸ್ತಿತ್ವದಲ್ಲಿರುವ ಕಾನೂನಿನ ಅಸ್ಪಷ್ಟತೆಯನ್ನು ನಿವಾರಿಸಲು ಮತ್ತು ತೃತೀಯಲಿಂಗಿ ವ್ಯಕ್ತಿಗಳಿಗೆ ರಕ್ಷಣಾ ವ್ಯವಸ್ಥೆಯನ್ನು ಬಲಪಡಿಸುವ ಗುರಿ ಹೊಂದಿದೆ.

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ವೀರೇಂದ್ರ ಕುಮಾರ್, ತೃತೀಯಲಿಂಗಿ ವ್ಯಕ್ತಿಗಳ(ಹಕ್ಕುಗಳ ರಕ್ಷಣೆ) ತಿದ್ದುಪಡಿ ಮಸೂದೆಯನ್ನು ಮಂಡಿಸಿದರು. ಸರಿಯಾದ ಗುರುತಿಸುವಿಕೆಗಾಗಿ ಮತ್ತು ಪ್ರಸ್ತುತ ಕಾನೂನಿನ ಅಡಿಯಲ್ಲಿ ಸಿಗುವ ಪ್ರಯೋಜನಗಳು ಉದ್ದೇಶಿತ ಫಲಾನುಭವಿಗಳನ್ನು ತಲುಪುವುದನ್ನು ಖಚಿತಪಡಿಸಿಕೊಳ್ಳಲು ಸ್ಪಷ್ಟ ವ್ಯಾಖ್ಯಾನ ಅಗತ್ಯ ಎಂದು ಮಸೂದೆ ಒತ್ತಿಹೇಳುತ್ತದೆ.

ಪ್ರಸ್ತಾವಿತ ತಿದ್ದುಪಡಿಯ ಅನ್ವಯ, ತೃತೀಯಲಿಂಗಿ ಎಂದರೆ ಕಿನ್ನರ, ಹಿಜ್ರಾ, ಅರವಣಿ, ಜೋಗ್ತಾ ಅಥವಾ ನಪುಂಸಕ ಅಂತಹ ಸಾಮಾಜಿಕ-ಸಾಂಸ್ಕೃತಿಕ ಗುರುತುಗಳಿಗೆ ಸೇರಿದ ವ್ಯಕ್ತಿಗಳು, ಹಾಗೆಯೇ ಲಿಂಗ ಗುಣಲಕ್ಷಣಗಳಲ್ಲಿ ಜನ್ಮಜಾತ ವ್ಯತ್ಯಾಸಗಳನ್ನು ಹೊಂದಿರುವ ವ್ಯಕ್ತಿಗಳು, ಎಂದು ವ್ಯಾಖ್ಯಾನಿಸಲಾಗಿದೆ. ಬಲವಂತವಾಗಿ ಅಥವಾ ವಂಚನೆಯ ಮೂಲಕ ಅಂಗವಿಕಲತೆ, ಹಾರ್ಮೋನ್ ಪ್ರಕ್ರಿಯೆಗಳು ಅಥವಾ ಅಂತಹುದೇ ಹಸ್ತಕ್ಷೇಪಗಳ ನಂತರ ತೃತೀಯಲಿಂಗಿ ಎಂದು ಗುರುತಿಸಿಕೊಳ್ಳಬೇಕಾದ ವ್ಯಕ್ತಿಗಳು ಅಥವಾ ಮಕ್ಕಳನ್ನೂ ಇದು ಒಳಗೊಂಡಿದೆ. ಆದರೆ, ವಿಭಿನ್ನ ಲೈಂಗಿಕ ದೃಷ್ಟಿಕೋನ, ಅಥವಾ ಕೇವಲ ಸ್ವಯಂ-ಗ್ರಹಿಸಿದ ಲಿಂಗ ಗುರುತುಗಳನ್ನು ಹೊಂದಿರುವ ವ್ಯಕ್ತಿಗಳು ಈ ವ್ಯಾಖ್ಯಾನದಲ್ಲಿ ಬರುವುದಿಲ್ಲ.

**ಗುರುತಿಸುವಿಕೆಗೆ ಪ್ರಾಧಿಕಾರ:** ಗುರುತಿಸುವಿಕೆಗಾಗಿ ಮೆಡಿಕಲ್ ಬೋರ್ಡ್ ಅನ್ನು ಪ್ರಾಧಿಕಾರ ಎಂದು ನೇಮಿಸಲು ಈ ಶಾಸನದಲ್ಲಿ ಪ್ರಸ್ತಾಪಿಸಿದೆ. ಇದು ಕೇಂದ್ರ, ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶಗಳಿಂದ ನೇಮಕಗೊಂಡ ಮುಖ್ಯ ವೈದ್ಯಕೀಯ ಅಧಿಕಾರಿ ಅಥವಾ ಉಪ ಮುಖ್ಯ ವೈದ್ಯಕೀಯ ಅಧಿಕಾರಿಯ ನೇತೃತ್ವದಲ್ಲಿ ಇರುತ್ತದೆ. ಅಗತ್ಯವಿದ್ದಾಗ ಈ ಪ್ರಾಧಿಕಾರ ತಜ್ಞರ ಸಲಹೆ ಪಡೆಯಬಹುದು.


### ಅಪರಾಧಗಳಿಗೆ ಹಂತ, ಹಂತದ ಶಿಕ್ಷೆ

ಅಸ್ತಿತ್ವದಲ್ಲಿರುವ 2019ರ ಕಾನೂನು ತೃತೀಯಲಿಂಗಿಗಳ ವಿರುದ್ಧದ ಅಪರಾಧಗಳಿಗೆ ಗರಿಷ್ಠ ಎರಡು ವರ್ಷಗಳ ಜೈಲು ಶಿಕ್ಷೆ ವಿಧಿಸುತ್ತದೆ. ಪ್ರಸ್ತಾವಿತ ಮಸೂದೆ, ಅಪಹರಣ, ಖಾಯಂ ದೈಹಿಕ ಹಾನಿ ಅಥವಾ ಬಲವಂತದ ಲಿಂಗ ಬದಲಾವಣೆಯಂತಹ ಪ್ರಕರಣಗಳಿಗೆ, ವಿಶೇಷವಾಗಿ ಇಂತಹ ದೌರ್ಜನ್ಯಕ್ಕೆ ಮಕ್ಕಳು ಬಲಿಯಾದ ಸಂದರ್ಭದಲ್ಲಿ ಹಂತ-ಹಂತದ ಕಠಿಣ ಶಿಕ್ಷೆಯನ್ನು ಶಿಫಾರಸು ಮಾಡುತ್ತದೆ. ಅಲ್ಲದೆ, ಗುರುತಿನ ಪ್ರಮಾಣಪತ್ರ ಹೊಂದಿರುವ ತೃತೀಯಲಿಂಗಿ ವ್ಯಕ್ತಿಗಳು ತಮ್ಮ ಜನನ ಪ್ರಮಾಣಪತ್ರ ಮತ್ತು ಇತರ ಅಧಿಕೃತ ದಾಖಲೆಗಳಲ್ಲಿ ತಮ್ಮ ಹೆಸರು ಬದಲಾಯಿಸಿಕೊಳ್ಳಲು ಇದು ಅವಕಾಶ ನೀಡುತ್ತದೆ.

## ಸಂಪಾದಕೀಯ

# ದಯಾಮರಣದ ಅನುಷ್ಠಾನ

ಸರ್ವೋಚ್ಚ ನ್ಯಾಯಾಲಯವು ಕಳೆದ 13 ವರ್ಷಗಳಿಂದ ಕೋಮಾದಲ್ಲಿರುವ ಹರೀಶ್ ರಾಣಾ ಎಂಬ ವ್ಯಕ್ತಿಗೆ ದಯಾಮರಣಕ್ಕೆ ಅವಕಾಶ ಕಲ್ಪಿಸುವುದರೊಂದಿಗೆ ದೇಶದ ಕಾನೂನು ವ್ಯವಸ್ಥೆಯಲ್ಲಿ ಹೊಸದೊಂದು ಅಧ್ಯಾಯ ತೆರೆದಿದೆ. 13 ವರ್ಷಗಳ ಹಿಂದೆ ಹರೀಶ್ ರಾಣಾ ಕಟ್ಟಡದಿಂದ ಕೆಳಬಿದ್ದು ಮೆದುಳಿಗೆ ಏಟು ಪಡೆದು, ಕೋಮಾ ಸ್ಥಿತಿಯಲ್ಲಿದ್ದಾನೆ. ಆತನಿಗೆ ದಯಾಮರಣ ಕಲ್ಪಿಸಬೇಕೆಂದು ಆಪ್ತ ಬಂಧುಗಳು ನ್ಯಾಯಾಲಯದ ಮೊರೆ ಹೋಗಿದ್ದರು.



ಆತ ಕೇವಲ ಜೀವರಕ್ಷಕ ವ್ಯವಸ್ಥೆಯ ಮೂಲಕವಷ್ಟೇ ಜೀವಂತವಾಗಿದ್ದಾನೆ ಎಂಬುದನ್ನು ವೈದ್ಯರಿಂದ ದೃಢಪಡಿಸಿಕೊಂಡ ನ್ಯಾಯಾಲಯವು ಜೀವರಕ್ಷಕ ವ್ಯವಸ್ಥೆಯನ್ನು ಕಿತ್ತು ಹಾಕುವ ಮೂಲಕ ದಯಾಮರಣಕ್ಕೆ ಅವಕಾಶ ಕಲ್ಪಿಸಬಹುದು ಎಂದು ತೀರ್ಪಿತ್ತಿದೆ. 'ಮನುಷ್ಯನಿಗೆ ಗೌರವದಿಂದ ಬದುಕುವ ಹಕ್ಕಿರುವಂತೆಯೇ ಗೌರವದಿಂದ ಸಾಯುವ ಹಕ್ಕೂ ಇದೆ' ಎಂಬುದಾಗಿ ನ್ಯಾಯಾಲಯವು ಅಭಿಪ್ರಾಯಿಸಿದೆ. ದಶಕದ ಹಿಂದೆಯೇ ನ್ಯಾಯಾಲಯವು ಅರುಣಾ ಶಾನ್‌ಭಾಗ್ ಪ್ರಕರಣದಲ್ಲಿ ಪರೋಕ್ಷ ದಯಾಮರಣಕ್ಕೆ ಸಮ್ಮತಿ ನೀಡಿತ್ತಾದರೂ, ಆಕೆಯನ್ನು ನೋಡಿಕೊಳ್ಳುತ್ತಿದ್ದ ಆಕೆಯ ಆಪ್ತರು ಅದಕ್ಕೆ ಸಮ್ಮತಿಸದ್ದರಿಂದ ದಯಾಮರಣವನ್ನು ಅನುಷ್ಠಾನಿಸಿರಲಿಲ್ಲ. ಹಾಗಾಗಿ ಹರೀಶ್ ರಾಣಾ ಪ್ರಕರಣವು ಭಾರತದಲ್ಲಿ ದಯಾಮರಣ ಅನುಷ್ಠಾನದ ಪ್ರಥಮ ನಿದರ್ಶನ ಎನ್ನಬಹುದು.

ದಯಾಮರಣದ ಕುರಿತಂತೆ ಬಹುಕಾಲದಿಂದಲೇ ಪರ-ವಿರೋಧ ಚರ್ಚೆ ನಡೆಯುತ್ತಿದೆ. ಕೊಲ್ಲುವ ಹಕ್ಕು ಯಾರಿಗೂ ಇಲ್ಲ ಎಂಬುದು ದಯಾಮರಣವನ್ನು ವಿರೋಧಿಸುತ್ತಿರುವವರ ವಾದವಾಗಿದೆ. ಆದರೆ ಹರೀಶ್ ರಾಣಾ ಪ್ರಕರಣದಲ್ಲಿ ನ್ಯಾಯಾಲಯವು ಜೀವರಕ್ಷಕ ವ್ಯವಸ್ಥೆಯನ್ನು ತೆಗೆದು ಆತನ ಸಾವಿಗೆ ಅವಕಾಶ ಕಲ್ಪಿಸಬಹುದು ಎಂದು ಹೇಳಿದೆಯೇ ಹೊರತು, ವಿಷದ ಔಷಧಿ ನೀಡಿ 'ಜೀವವನ್ನು ತೆಗೆಯುವ' ಕಾರ್ಯಕ್ಕೆ ಅನುಮತಿಸಿಲ್ಲ. ಸಾಯಲು ಬಯಸುವ ವ್ಯಕ್ತಿಗಳಿಗೆ ವಿಷಧ ಔಷಧ ನೀಡಿ ಜೀವನ ಕೊನೆಗಾಣಿಸಲೂ ಅವಕಾಶ ನೀಡಬೇಕು ಎಂದು ಕೆಲವರು ಪ್ರತಿಪಾದಿಸುವುದಿದೆ. ಭಾರತದಲ್ಲಿ ದಯಾಮರಣವನ್ನು ನೀಡುವ ಕಾನೂನು ಇಲ್ಲ. ನ್ಯಾಯಾಲಯವು ವಿಶೇಷ ಪ್ರಸಂಗಗಳಲ್ಲಿ ಇಂತಹ ತೀರ್ಪು ನೀಡಿದೆಯಷ್ಟೆ. ಸರಕಾರವು ಈ ನಿಟ್ಟಿನಲ್ಲಿ ಸೂಕ್ತ ಕಾನೂನು ತರುವಂತೆ ನ್ಯಾಯಾಲಯವು ಸಲಹೆ ನೀಡಿರುವುದನ್ನು ಕಡೆಗಣಿಸಲಾಗುವುದಿಲ್ಲ. ಆದರೆ ದಯಾಮರಣವನ್ನು ಕಾನೂನುಬದ್ಧಗೊಳಿಸಿದರೆ ಅದನ್ನು ದುರುಪಯೋಗ ಮಾಡುವ ಸಾಧ್ಯತೆಗಳೂ ಹೆಚ್ಚಿರುತ್ತವೆ. 'ಕೊಲೆ'ಗೆ ದಯಾಮರಣದ ಮುಖವಾಡ ತೊಡಿಸುವ ಸಾಧ್ಯತೆಗಳೂ ಇರುತ್ತವೆ. ಈ ನಿಟ್ಟಿನಲ್ಲಿ ಕಾನೂನು ತರುವ ಮುನ್ನ ಆ ಬಗ್ಗೆ ಹೆಚ್ಚಿನ ಪರಾಮರ್ಶೆಯ ಅಗತ್ಯವಿದೆ.

# ವಿಶುದ್ಧ ಚಕ್ರ ಜಾಗೃತ ಆಗುವುದು ನಿಜವೇ?

ಆಧ್ಯಾತ್ಮಿಕವಾಗಿ ಬೆಳೆಯಲು ಅಪಾರ ಸಮಯ ಬೇಕು. ಅದು ನೀವು ಏನು ಮಾಡುವಿರಿ ಎನ್ನುವುದರ ಮೇಲೆ ನಿಂತಿಲ್ಲ. ನಿಮ್ಮ ಹೃದಯ ಮತ್ತು ಮಿದುಳಿನ ಕಾರ್ಯಕ್ಷಮತೆಯನ್ನು ಅವಲಂಬಿಸಿದೆ.

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ಬೇರೆಲ್ಲಾ ಚಕ್ರಗಳು ಜಾಗೃತವಾದಾಗ ಆಗುವ ಅನುಭವಕ್ಕಿಂತಾ ಮೇಲಿನ ಚಕ್ರಗಳು ಜಾಗೃತವಾಗುವಾಗ ಆಗುವ ಅನುಭವಗಳೇ ಬೇರೇ ರೀತಿ ಇರುತ್ತದೆ. ಹೃದಯ ಚಕ್ರದವರೆಗೆ ಅಂದರೆ ಅನಾಹತ ಚಕ್ರದವರೆಗೆ ಜಾಗೃತವಾದಾಗ ಆಗುವ ಅನುಭವಗಳು ಒಂದು ರೀತಿಯಲ್ಲಿ ಗೋಚರ ಎನ್ನುವಂತೆ ಇದ್ದರೆ, ಇನ್ನು ಮುಂದಿನ ಚಕ್ರಗಳ ಜಾಗೃತಿ ಅನುಭವಗಳು ಸೂಕ್ಷ್ಮವಾಗಿ ಇರುತ್ತವೆ. ಅತ್ಯಂತ ನಿಧಾನವಾಗಿಯೂ ಇರಬಹುದು. ನಿಮಗೆ ಗೋಚರವಾಗುವುದೇ ಇಲ್ಲ. ಕೇವಲ ಅನುಭವಕ್ಕೆ ಮಾತ್ರ ಬರುತ್ತಿರುತ್ತದೆ. ಅದಕ್ಕಾಗಿ ನೀವು ಕಠಿಣ ಪರಿಶ್ರಮ ಪಡುವುದು ಅಗತ್ಯ. ಅಥವಾ ಮೌನವಾಗಿರುವುದು ಅಗತ್ಯ.

**ಬ್ರಹ್ಮ ಗಂಟು**

ಉದಾಹರಣೆಗೆ ವಿಶುದ್ಧ ಜಾಗೃತವಾದಾಗ ಜನ ನಿಮ್ಮ ಕಡೆಗೆ ಆಕರ್ಷಿತರಾಗುವುದು ಸಹಜ. ಈ ಆಕರ್ಷಣೆ ಎನ್ನುವುದು ನಿಮ್ಮ ಸೌಂದರ್ಯದಿಂದ, ನಿಮ್ಮ ವ್ಯಕ್ತಿತ್ವದಿಂದ, ನಿಮ್ಮ ನಡವಳಿಕೆಯಿಂದ, ನಿಮ್ಮ ಹಾಸ್ಯ ಪ್ರವೃತ್ತಿಯಿಂದ, ನಿಮ್ಮ ಗಂಭೀರವಾದ ನೋಟದಿಂದ, ನೀವು ಧರಿಸಿದ ಉಡುಗೆ ತೊಡುಗೆಗಳಿಂದ ಅಲ್ಲ, ಅದು ಕೇವಲ ನಿಮ್ಮ ವಿಚಾರಧಾರೆಯಿಂದ, ಅದನ್ನು ನೀವು ಪ್ರಸ್ತುತ ಪಡಿಸಿದ ರೀತಿಯಿಂದ, ಹಾಗೂ ನಿಮ್ಮ ಮಾತಿನ ದಾಟಿಯಿಂದ ಎನ್ನಬಹುದು. ಹೀಗೆ ನೀವು ಇದ್ದಕ್ಕಿದ್ದಂತೆ ಅವರ ಗಮನವನ್ನು ಸೆಳೆಯುತ್ತೀರಿ ಅಥವಾ ಅವರು ನಿಮ್ಮ ಆಕರ್ಷಣೆಗೆ ಒಳಗಾಗುತ್ತಾರೆ. ಆಗ ಒಮ್ಮಿಂದೊಮ್ಮೆ ನೀವೂ ಸಹಾ ಅವರ ಪ್ರಭಾವದೊಳಕ್ಕೆ ಬೀಳುತ್ತೀರಿ. ಅವರ ಕಣ್ಣುಗಳು ನಿಮ್ಮ ಕಣ್ಣುಗಳನ್ನು ದಿಟ್ಟಿಸುತ್ತವೆ. ಆಗ ನಿಮಗೆ ತಕ್ಷಣದಲ್ಲಿ ಎಚ್ಚರವಾಗಿ ಅವರನ್ನು ನಿಮ್ಮ ಸೆಳೆತಕ್ಕೆ ಸೇರಿಸುತ್ತೀರಿ. ಇದೆಲ್ಲಾ ಆಗುತ್ತಿರುವುದು ವಿಶುದ್ಧ ಚಕ್ರದ ಜಾಗೃತಿಯಿಂದ. ಒಂದೊಮ್ಮೆ ಅವರೂ ಸಹಾ ಚಕ್ರ ಸಾಧಕರಾಗಿದ್ದರೆ ನಿಮ್ಮ ಮಾತುಗಳು ಸರಳವಾಗಿದೆ ಮತ್ತು ಸಮಯಕ್ಕೆ ತಕ್ಕುದಾಗಿದೆ ಎನ್ನುವ ಅನುಭವ ಉಂಟಾಗುತ್ತದೆ. ನೀವು ನಿರಾಳವಾಗುತ್ತೀರಿ. ತಕ್ಷಣದಲ್ಲಿ ನಿಮ್ಮ ಮುಖ ಶಾಂತಿಯನ್ನು ಸೂಸತೊಡಗುತ್ತದೆ.

ನಿಮಗೆ ಯಾರೋ ಒಬ್ಬರನ್ನು ಹೊಸದಾಗಿ ಭೇಟಿ ಮಾಡುವುದಿದೆ. ಆಗ ನೀವು ಅವರ ಬಗ್ಗೆ ತಿಳಿದುಕೊಳ್ಳುತ್ತೀರಿ. ಆಗ ನೀವು ಅರ್ಧ ಬಿದ್ದಂತೆ. ಕಾರಣ ನೀವು ನಿಮ್ಮ ಮೊದಲ ಭೇಟಿಯಲ್ಲಿ ನೋಡಿದ ವ್ಯಕ್ತಿ ಅವನಾಗಿರುವುದಿಲ್ಲ. ಅವನು ನಿಜವಾಗಿಯೂ ನಿಮ್ಮ ಮನದೊಳಗಿದ್ದ ಬೇರೆಯದೇ ಆದ ವ್ಯಕ್ತಿಯಾಗಿರುತ್ತಾನೆ; ನೀವು ಪರಿಕಲ್ಪನೆ ಮಾಡಿಕೊಂಡ ವ್ಯಕ್ತಿಯಾಗಿರುತ್ತಾನೆ. ಒಂದೊಮ್ಮೆ ಅವನು ನಿಮ್ಮ ಪರಿಕಲ್ಪನೆಗೆ ನಿಲುಕದಿದ್ದರೆ ನೀವು ಅವನ ದೂಷಣೆ ಮಾಡುತ್ತೀರಿ. ಏಕೆಂದರೆ ಅವನು ನಿಮ್ಮ ಊಹೆಯಲ್ಲಿ ಇದ್ದ ವ್ಯಕ್ತಿಯೇ ಅಲ್ಲ, ಬೇರೆಯವನು ಅಥವಾ ಅನ್ಯ. ಇಲ್ಲಿ ಅಸ್ತಿತ್ವದ ನಂಬಿಕೆ ಮತ್ತು ನಂಬದೇ ಇರುವಿಕೆಗಳ ನಡುವೆ ಹೊಡೆದಾಟ ಪ್ರಾರಂಭವಾಗುತ್ತದೆ. ನೀವು ನಂಬಿಕೆ ಇರದಿರದ ಕಡೆ ಹೋಗುತ್ತೀರಿ. ಆಗ ವಿಶುದ್ಧ ಚಕ್ರವು ನಿಮ್ಮ ಸಹಾಯಕ್ಕೆ ಬರುತ್ತದೆ. ಅದರಿಂದಾಗಿ ನಿಮ್ಮಲ್ಲಿ ನಂಬಿಕೆಯ ಮೇಲಿನ ವಿಶ್ವಾಸ ಹೆಚ್ಚಿ ನೀವು ವಾಸ್ತವದ ಕಡೆ ನಡೆಯುತ್ತೀರಿ. ಆ ಸಮಯದಲ್ಲಿ ನಿಮ್ಮ ಕೊರಳಿಗೆ ಎಕೆ-47 ಇಟ್ಟರೂ ನೀವು ಅಂಜದೇ ನಗತೊಡಗುತ್ತೀರಿ. ಹೀಗೆ ನೀವು ನಿಮ್ಮನ್ನು ಗೆದ್ದಿರುತ್ತೀರಿ. ಮತ್ತು ಅವರನ್ನೂ ಸಹಾ ಗೆದ್ದಿರುತ್ತೀರಿ.

ನಿಮ್ಮೊಳಗೆ ಒಂದೊಮ್ಮೆ ಸಂದೇಹವಿದ್ದರೆ ಅದನ್ನು ನೀವು ವ್ಯಕ್ತಪಡಿಸುವ ಮೊದಲೇ ಪರಿಹಾರ ಸಹಾ ನಿಮಗೆ ಅಲ್ಲಿಯೇ ಗೋಚರಿಸುತ್ತದೆ. ಹೀಗಾಗಿ ನಿಮ್ಮ ಪ್ರತಿಕ್ರಿಯೆ ಸಕಾರಾತ್ಮಕವಾಗಿ ಇರುತ್ತದೆ. ನಿಮ್ಮ ಅಸ್ತಿತ್ವದ ಮೇಲಿನ ನಂಬಿಕೆ ಹೆಚ್ಚುತ್ತದೆ. ನೀವು ಮತ್ತು ಅವರು ಪರಸ್ಪರ ನಂಬಲು ಪ್ರಾರಂಭಿಸುತ್ತೀರಿ. ಇದು ಇಡೀ ಸಭೆಯನ್ನೇ ಸಂಮೋಹನಗೊಳಿಸುವ ಕ್ರಿಯೆಯಾಗಿರುತ್ತದೆ. ನಿಮ್ಮ ಮಾತೆಲ್ಲವೂ ಅಂತರಾಳದಿಂದ ಬಂದ ಕಾರಣ ಅವರೆಲ್ಲರೂ ಯಾವುದೇ ವಿರೋಧವಿಲ್ಲದೇ ಒಪ್ಪತೊಡಗುತ್ತಾರೆ.

ನೀವು ಇಂತಹಾ ಅನುಭವಕ್ಕೂ ಮೊದಲು ಬೇಕಾದಷ್ಟು ಸವಾಲುಗಳನ್ನು ಎದುರಿಸಿ ಅನುಭವ ಹೊಂದಿದ ಕಾರಣ ನೀವು ಯಾವುದೇ ಪ್ರಶ್ನೆ ಬಂದರೂ ತಕ್ಷಣ ಅದನ್ನು ಅರ್ಥ ಮಾಡಿಕೊಂಡು ಉತ್ತರಿಸಲು ತೊಡಗುತ್ತೀರಿ ಮತ್ತು ಸಮಾಧಾನವನ್ನೂ ನೀಡುತ್ತೀರಿ. ಮೊಂಡುವಾದ ಮಾಡುವವರನ್ನು ಗೊಂದಲಕ್ಕೆ ಸಿಲುಕಿಸುವುದೂ ಸಹಾ ನಿಮಗೆ ಪ್ರೀತಿಯ ಅಭ್ಯಾಸ. ಹೀಗೆ ನಿಮ್ಮ ನಗು ನಿಮ್ಮ ಮುಖದಿಂದ ಮಾಸುವುದೇ ಇಲ್ಲ, ನಿಮ್ಮ ಸ್ವರ ತಗ್ಗುವುದೇ ಇಲ್ಲ.

**ವಿಷ್ಣು ಗಂಟು**

ನೀವೀಗ ಬದಲಾಗಿದ್ದೀರಿ. ಎಲ್ಲವನ್ನೂ ನೀವು ಕರುಣೆಯಿಂದ ನೋಡಲು ಕಲಿತಿದ್ದೀರಿ. ನಿಮ್ಮೊಳಗೆ ಅಪಾರವಾದ ಶಕ್ತಿ ಇರುವುದು ನಿಮ್ಮ ಅರಿವಿಗೆ ಬಂದಿದೆ. ನೀವು ನಿಮ್ಮ ಸುತ್ತಲಿನ ಪರಿಸರ, ಜೀವಿಗಳು, ಬ್ರಹ್ಮಾಂಡ ಹೀಗೆ ಎಲ್ಲದರೊಂದಿಗೂ ಸೌಹಾರ್ದ ಸಂಬಂಧ ಹೊಂದಿದ್ದೀರಿ ಎನ್ನುವುದೂ ಸಹಾ ನಿಮ್ಮ ಅರಿವಿಗೆ ಬಂದಿದೆ. ನೀವೀಗ ಕೇವಲ ಪ್ರೀತಿ ಸ್ವರೂಪರು. ನೀವು ಅವರ ಎಲ್ಲಾ ಅನುಮಾನಗಳನ್ನು ಗುಣಪಡಿಸಬಲ್ಲಿರಿ. ಅವರ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಬಲ್ಲಿರಿ. ನೀವು ಅವರ ಎಲ್ಲಾ ನೋವುಗಳನ್ನು ಶಮನ ಮಾಡಬಲ್ಲಿರಿ. ನೀವು ಅವರನ್ನು ಹೊಸ ವ್ಯಕ್ತಿಯನ್ನಾಗಿ ಮಾಡಬಲ್ಲಿರಿ.

ನೀವೀಗ ನಿಮ್ಮ ಕಣ್ಣುಗಳನ್ನು ಬಳಸುವುದನ್ನು ಕಲಿಯಿರಿ; ಆಗ ಸಂಮೋಹನ ಸುಲಭವಾಗುತ್ತದೆ. ನೀವು ನಿಮ್ಮ ಮುಖವನ್ನು ಬಳಸುವುದನ್ನು ಕಲಿಯಿರಿ; ಆಗ ಅವರನ್ನು ಸೆಳೆಯುವುದು ಸುಲಭವಾಗುತ್ತದೆ. ನೀವು ನಿಮ್ಮ ದೇಹವನ್ನು ಬಳಸುವುದನ್ನು ಕಲಿಯಿರಿ; ನಿಮ್ಮ ಕೆಲಸ ಸುಲಭವಾಗುತ್ತದೆ. ನೀವು ಪರಿಶುದ್ಧ; ಪಾರದರ್ಶಕ. ಪ್ರಾಮಾಣಿಕ. ಅದಕ್ಕಾಗಿ ನಿಮ್ಮ ಮನಸ್ಸು ಇನ್ನೊಬ್ಬರ ಮನಸ್ಸನ್ನು ಸುಲಭವಾಗಿ ಓದಬಲ್ಲದು. ನೆನಪಿಡಿ ನೀವು ಲೌಕಿಕದಲ್ಲಿ ಇದ್ದೀರಿ; ಅದಕ್ಕಾಗಿ ನಿಮ್ಮ ಶುದ್ಧತೆ ಸ್ವಲ್ಪ ಸಮಯದ್ದು, ಅನಿರ್ದಿಷ್ಟ ಅವಧಿಯದ್ದು, ಕ್ಷಣಿಕವಾದದ್ದು. ಅದಕ್ಕಾಗಿ ನೀವು ನಿಮ್ಮ ನಿರಂತರತೆಯನ್ನು ಕಾಯ್ದುಕೊಳ್ಳಬೇಕು. ನಿಮ್ಮ ಮಟ್ಟವನ್ನು ಉಳಿಸಿಕೊಳ್ಳಲು ಸತತ ಅನುಷ್ಠಾನವನ್ನು ಮಾಡಬೇಕು.

ನೀವು ಎಲ್ಲವನ್ನೂ ಹೊಂದಿದ್ದೀರಿ ಎಂದು ಭಾವಿಸಿದರೆ ಅಲ್ಲಿಂದ ನಿಮ್ಮ ಅವನತಿ ಪ್ರಾರಂಭವಾಗುತ್ತದೆ. ನೀವು ಗದ್ದಲದ ಮಧ್ಯೆ ಸಿಕ್ಕಿಕೊಳ್ಳುತ್ತೀರಿ. ನಿಮ್ಮ ಮತ್ತು ಸಭೆಯ ನಡುವೆ ವಾದ ನಡೆಯುತ್ತದೆ. ಅದು ವಿಕೋಪಕ್ಕೆ ಹೋಗುತ್ತದೆ. ನಿಮ್ಮ ಶಕ್ತಿ ವ್ಯಯವಾಗುತ್ತದೆ. ನೀವು ಸೋತು ಸೊಪ್ಪಾಗುತ್ತೀರಿ. ಬಾಡಿಹೋಗುತ್ತೀರಿ. ಅದೇ ನೀವು ತಟಸ್ಥವಾಗಿದ್ದರೆ; ನಿಮ್ಮ ರೂಪಾಂತರ ಎಲ್ಲರಿಗೂ ಗೋಚರವಾಗುತ್ತದೆ. ಅಲ್ಲೊಂದು ಮೌನ ಉಂಟಾಗುತ್ತದೆ. ಶಾಂತಿ, ನೆಮ್ಮದಿ ಇರುತ್ತದೆ. ಸುಸ್ಥಿರತೆ ಕಾಣಿಸುತ್ತದೆ. ಅಲ್ಲಿರುವುದು ನೀವೇ ಆದರೂ ನೀವಲ್ಲವೇನೋ ಎನ್ನುವ ಅನುಭವವೂ ಆಗುತ್ತದೆ.

**ರುದ್ರ ಗಂಟು**

ನೀವೀಗ ಸ್ಥಿರವಾದ ನಿಲುವನ್ನು, ವ್ಯಕ್ತಿತ್ವವನ್ನು, ಮನಸ್ಸನ್ನು ಹೊಂದಿದವರು. ನಿಮ್ಮಲ್ಲಿ ಯಾವುದೇ ದ್ವಂದ್ವ ಇಲ್ಲ. ನಿಮ್ಮ ಮಾತಿಗೆ ನೀವು ಬದ್ಧರು. ನಿಮ್ಮ ಅಸ್ತಿತ್ವಕ್ಕೆ ಬದ್ಧರು. ನೀವು ಈಗ ನಿಮ್ಮದೊಂದೇ ದೃಷ್ಟಿಯಿಂದಲ್ಲ, ಎಲ್ಲರ ದೃಷ್ಟಿಯಿಂದಲೂ ನೋಡುವುದನ್ನು ಕಲಿತಿದ್ದೀರಿ. ಹಾಗಾಗಿ ನೀವು ಒಂದೇ ವ್ಯಕ್ತಿಯಲ್ಲ; ಬಹುಮುಖಿಗಳು. ವಿಭಿನ್ನವಾದ ಆಯಾಮಗಳು ನಿಮಗೆ ಗೋಚರವಾಗಲು ತೊಡಗುತ್ತದೆ. ನೀವೀಗ ಎಲ್ಲವನ್ನೂ ಸಮಾನವಾಗಿ ತೆಗೆದುಕೊಳ್ಳಬಲ್ಲ ಆಧ್ಯಾತ್ಮಿಕರಾಗಿದ್ದೀರಿ. ನಿಮ್ಮೊಳಗಿನ ಸಾಕ್ಷಿಯನ್ನು ಯಾವಾಗಲೂ ಎಚ್ಚರದಿಂದ ಇಟ್ಟುಕೊಳ್ಳುತ್ತೀರಿ. ಯಾವುದೇ ಪೂರ್ವಾಗ್ರಹವಿಲ್ಲದೇ ಇರಬಲ್ಲಿರಿ. ನಿಮ್ಮೊಳಗಿನ ಉಪಪ್ರಜ್ಞೆ ಸದಾ ಎಚ್ಚರದಿಂದ ಇರುತ್ತದೆ. ನಿಮ್ಮ ಜೀವನದ ಉದ್ದೇಶ ಮತ್ತು ಸ್ಪಷ್ಟತೆ ನಿಮ್ಮ ಅರಿವಿಗೆ ಬಂದಿರುತ್ತದೆ. ನೀವು ಎಲ್ಲವನ್ನು ಸರಿಯಾಗಿಯೇ ಅದಿರುವಂತೆಯೇ ನೋಡಬಲ್ಲಿರಿ, ಅಥವಾ ಅವೆಲ್ಲಾ ನೈಜವಾಗಿಯೇ ಗೋಚರಿಸುತ್ತವೆ.

ನಿಮ್ಮ ಪೀಡಿತ ಮನಸ್ಸು ಮರಣ ಹೊಂದಿದೆ. ನಿಮ್ಮ ಅಹಂಕಾರ ಸತ್ತು ಹೋಗಿದೆ. ನಿಮ್ಮ ಅರಿಷಡ್ ವರ್ಗಗಳು ನಿರ್ನಾಮವಾಗಿವೆ. ಸುಳ್ಳು ಮತ್ತು ಭ್ರಮೆಗಳು ನಿಮ್ಮನ್ನು ಬಿಟ್ಟು ಓಡಿಹೋಗಿವೆ. ನೀವೀಗ ವಾಸ್ತವವಾದಿಗಳು, ಸಮನ್ವಯಕರು, ನ್ಯಾಯ ಚಿಂತಕರು, ಸಮಾಧಾನಿಗಳು, ಸುಸ್ಥಿರರು, ಶಾಂತಿದೂತರು.....ನೀವೀಗ ಮೊದಲ ಬಾರಿಗೆ ನಿಮ್ಮ ಆತ್ಮವನ್ನು ಭೇಟಿ ಮಾಡುತ್ತೀರಿ. ಮತ್ತು ಅದನ್ನು ನೋಡುತ್ತೀರಿ ಮಾತ್ರ. ಅಲ್ಲಿ ಗಂಡು ಹೆಣ್ಣು ಎನ್ನುವುದೇ ಇಲ್ಲ. ಅಲ್ಲಿ ಯಾವುದೂ ಎರಡು ಇಲ್ಲ; ಅಂದರೆ ಸತ್ಯ-ಸುಳ್ಳು, ನೋವು-ನಲಿವು, ಕಷ್ಟ-ಸುಖ, ಒಳಿತು- ಕೆಡುಕು, ಮೇಲು-ಕೀಳು ಹೀಗೆ ಯಾವುದೂ ಇಲ್ಲ, ಎಲ್ಲವೂ ಮಾಯವಾಗಿವೆ. ಮತ್ತು ನಿಮಗೆ ಅವೆಲ್ಲಾ ಇತ್ತು ಎಂದೂ ಸಹಾ ಅನಿಸುತ್ತಲೇ ಇಲ್ಲ.

ಆದರೆ ನಿಮ್ಮ ವಿಶುದ್ಧ ಚಕ್ರವು ತೆರೆಯಲು ನೀವು ಎಲ್ಲದರಿಂದ ಮುಕ್ತವಾಗಬೇಕು. ಆಧ್ಯಾತ್ಮಿಕವಾಗಿ ಬೆಳೆಯಲು ಅಪಾರವಾದ ಸಮಯ ಬೇಕು. ಅದು ನೀವು ಏನು ಮಾಡುವಿರಿ ಎನ್ನುವದರ ಮೇಲೆ ನಿಂತಿಲ್ಲ. ನಿಮ್ಮ ಹೃದಯ ಮತ್ತು ಮಿದುಳಿನ ಕಾರ್ಯಕ್ಷಮತೆಯನ್ನು, ಸಮನ್ವಯತೆಯನ್ನು ಅವಲಂಬಿಸಿದೆ. ನಿಮ್ಮೊಳಗಿನ ನೀವು ಮಾತ್ರ ಸಾರ್ವತ್ರಿಕ ಸತ್ಯ. ಅದು ಸುಲಭದಲ್ಲಿ ಅರಿವಾಗುವ ಸಂಗತಿಯಲ್ಲ. ಆಧ್ಯಾತ್ಮಿಕ ಸಾಧನೆ ಕಠಿಣವಾಗಿರುತ್ತದೆ. ನಿಯಂತ್ರಣದಲ್ಲಿ ಇರುತ್ತದೆ. ಪ್ರಯತ್ನ ಮಾತ್ರ ಇದನ್ನು ಸಾಧ್ಯವಾಗಿಸುತ್ತದೆ. ಪರಿಶ್ರಮ ಮಾತ್ರ ನಿಮಗೆ ಜ್ಞಾನವನ್ನು ನೀಡುತ್ತದೆ. ಜ್ಞಾನೋದಯವೇ ನಿಮ್ಮ ಗುರಿಯಾಗಿರುತ್ತದೆ.

# ಬಡವನಾಗಿ ಸಾಯುವುದು ತಪ್ಪು

**ಅಕಿಂಚನೋ ಜಾಯತೇ ಚೇತ್ ನರೋನ್ಯೈವಾಪರಾಧ್ಯತಿ ।**
**ನೂನಂ ತಸ್ಯಾಪರಾಧೋಽಸ್ತಿ ಮ್ರಿಯತೇ ಚೇದಕಿಂಚನ ॥ -ಸುವಚನಶತಕಂ**

ಬಡವನಾಗಿ ಹುಟ್ಟಿದರೆ ಅದು ಮನುಷ್ಯನ ತಪ್ಪಲ್ಲ, ಆದರೆ ಬಡವನಾಗಿ ಸತ್ತರೆ ಅದು ಅವನದೇ ತಪ್ಪು - ಎಂಬುದು ಶ್ಲೋಕಾರ್ಥ.

ಹುಟ್ಟು ಸಾವುಗಳೆರಡೂ ನಮ್ಮ ಕೈಯಲ್ಲಿಲ್ಲ, ಭಗವಂತನ ಸಂಕಲ್ಪದಂತೆ ಒಂದು ದಿನ ಹುಟ್ಟಿ ಇನ್ನೊಂದು ದಿನ ಸಾಯುತ್ತೇವೆ. ಆದರೆ ಹುಟ್ಟು ಸಾವುಗಳ ನಡುವಿನ ಬದುಕು ನಮ್ಮ ಕೈಯಲ್ಲಿದೆ. ಬದುಕನ್ನು ಎತ್ತರಕ್ಕೆ ಕೊಂಡೊಯ್ಯುವುದಕ್ಕೂ ಅಧಃಪತನಕ್ಕೆ ಒಯ್ಯುವುದಕ್ಕೂ ನಾವೇ ಕಾರಣವಾಗುತ್ತೇವೆ. ಧರ್ಮಯುಕ್ತ ಬದುಕಿಗೂ ಅಧರ್ಮದ ಬದುಕಿಗೂ ನಾವೇ ಕಾರಣರಾಗುತ್ತೇವೆ. ಧರ್ಮದ ನಡೆ ಉನ್ನತಿಗೆ ಕಾರಣವಾದರೆ ಅಧರ್ಮದ ನಡೆ ಅವನತಿಗೆ ಕಾರಣ.




ಹುಟ್ಟು ಎಲ್ಲಾಗುತ್ತದೆ? ಶ್ರೀಮಂತನ ಮನೆಯಲ್ಲೂ ಹುಟ್ಟಬಹುದು. ಬಡವನ ಮನೆಯಲ್ಲೂ ಹುಟ್ಟಬಹುದು. ಶ್ರೀಮಂತ ಕುಟುಂಬದಲ್ಲಿ ಹುಟ್ಟಿ ಶ್ರೀಮಂತ ಬದುಕನ್ನೇ ಬಾಳಬೇಕು. ಇದ್ದದನ್ನೆಲ್ಲ ಕಳೆದು ತಿರುಪೆ ಎತ್ತುವ ಮಟ್ಟಕ್ಕಿಳಿಯಬಾರದು. ಇರುವ ಮಟ್ಟದಿಂದ ಮೇಲಕ್ಕೆ ಇರಬೇಕು. ಆಗಲೇ ಹುಟ್ಟಿದ್ದು ಸಾರ್ಥಕ. ಬಡವನಾಗಿ ಹುಟ್ಟಿದರೆ ಅದು ಅವನ ತಪ್ಪಲ್ಲ, ಬಡವನಾಗಿಯೇ ಸತ್ತರೆ ಅದು ಅವನ ತಪ್ಪು. ಬಡವನಾದರೂ ಸಾಧಿಸಿ ಉನ್ನತ ಮಟ್ಟಕ್ಕೆ ಏರಿದವರ ಜೀವನ ಗಾಥೆ ಸಾಕಷ್ಟಿದೆ. ಇದು ಬಡವನಿಗೆ ಪ್ರೇರಣೆಯಾಗಬೇಕು. ತಾನು ಬಡವ ಎಂದುಕೊಂಡೇ ಬದುಕಿದರೆ ಪ್ರಯೋಜನವಿಲ್ಲ. ಬಡತನದ ಮೂಲವನ್ನು ಶೋಧಿಸಿ, ಅದರಿಂದ ಹೊರಬರಬೇಕು. ಇದಕ್ಕೆ ಪ್ರಾಮಾಣಿಕತೆ, ಪರಿಶ್ರಮ, ಅಧ್ಯಯನ, ವ್ಯವಹಾರ ಚತುರತೆ ಇವೆಲ್ಲವೂ ಬೇಕಾಗುತ್ತದೆ.

ಉತ್ತಮ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ನೂರಾರು ಮಾರ್ಗಗಳಿವೆ. ಅದನ್ನು ಕಂಡುಕೊಳ್ಳಬೇಕು. ಪ್ರಾಮಾಣಿಕ ಪರಿಶ್ರಮ ಚೆಲ್ಲುವವನಿಗೆ ಶ್ರೀಮಂತನಾಗುವುದಕ್ಕೆ, ಬಡತನದಿಂದ ಹೊರಬರುವುದಕ್ಕೆ ಸಾಕಷ್ಟು ಮಾರ್ಗಗಳಿವೆ. ಸನ್ನಿವೇಶವನ್ನು ಅರ್ಥ ಮಾಡಿಕೊಂಡು ಮುಂದುವರಿಯಬೇಕು. ಬಡತನವನ್ನೇ ಜಪಿಸುತ್ತ ತನ್ನನ್ನೇ ಹಳಿದುಕೊಳ್ಳುತ್ತ ದಿನವನ್ನು ಕಳೆಯುವವನು ಉದ್ಧಾರನಾಗಲಾರ.

ಹೀಗೊಂದು ಘಟನೆಯನ್ನು ಹೇಳುತ್ತಾರೆ. ತಂದೆ ಕುಡುಕ, ತಾಯಿ ಪರಿಶ್ರಮಿ. ಅವರಿಗೆ ಇಬ್ಬರು ಮಕ್ಕಳು. ಗಂಡ ಯಾವಾಗಲೂ ದುಡಿದ ಹಣವನ್ನು ಮದ್ಯದಂಗಡಿಗೆ ಹಂಚುತ್ತಿದ್ದ. ನಿತ್ಯವೂ ಕುಡಿದು ಬಂದು ಹೆಂಡತಿ, ಮಕ್ಕಳಿಗೆ ಬಡಿಯುತ್ತಿದ್ದ. ಇದನ್ನು ನೋಡಿ ಮಕ್ಕಳಿಬ್ಬರೂ ಬೆಳೆದರು. ಅವರಲ್ಲಿ ಒಬ್ಬ ತಂದೆಯಂತೆ ಕುಡುಕನಾದ. ಒಬ್ಬ ಶ್ರೀಮಂತನಾದ. ಕುಡುಕ ಮಗನಲ್ಲಿ 'ನೀನು ಹೀಗಾಗಲು ಕಾರಣವೇನು?' ಎಂದು ಕೇಳಲು 'ತಂದೆಯೇ ಇದಕ್ಕೆ ಕಾರಣ. ತಂದೆ ಓದಿಸಲಿಲ್ಲ, ಅವನನ್ನು ನೋಡಿ ನಾನು ಅವನಂತಾದೆ. ತಂದೆ ಒಳ್ಳೆಯವನಾಗಿದ್ದರೆ ನಾನೂ ಒಳ್ಳೆಯವನಾಗುತ್ತಿದೆ'' ಎಂದ.

ಶ್ರೀಮಂತನಾದ ಮಗನಲ್ಲಿ ನಿನ್ನ ಈ ಸ್ಥಿತಿಗೆ ಕಾರಣ ಯಾರು? ಎಂದು ಕೇಳಲು 'ತಂದೆಯೇ ಕಾರಣ' ಎಂದ. 'ಹೇಗೆ' ಎಂದು ಕೇಳಿದಾಗ ಆತ ತಂದೆಯ ''ದುರಭ್ಯಾಸ, ದುರ್ನಡತೆ, ಕುಡಿತದ ಚಟ, ಜನರು ಮಾಡುವ ಅಪಹಾಸ್ಯಗಳನ್ನು ನೋಡಿ, ನಾನೆಂದೂ ಹೀಗಾಗಬಾರದು, ಸಾಧಿಸಬೇಕು ಎಂದು ಸಂಕಲ್ಪ ಮಾಡಿ ಓದಿ, ದುಡಿದ ಕಾರಣದಿಂದಾಗಿ ಹೀಗಾದೆ. ಹೀಗಾಗಲು ತಂದೆ ಕಾರಣ'' ಎಂದ.

ಭಗವಂತ ಬುದ್ಧಿ ಕೊಟ್ಟಿದ್ದಾನೆ. ವಿವೇಕವಿತ್ತಿದ್ದಾನೆ. ಲೋಕ ವಿಶಾಲವಾಗಿದೆ. ದುಡಿಯುವವನಿಗೆ ಕೈತುಂಬ ಕೆಲಸವಿದೆ. ಆದ್ದರಿಂದ ಶ್ರಮ ವಹಿಸಿ ದುಡಿದು ಬಡತನದಿಂದ ಹೊರಬರಬೇಕು. ಜೀವನದಲ್ಲಿ ಸಾಧಿಸಬೇಕು. ಹೀಗೆ ಮಾಡದಿದ್ದರೆ ಅದು ಅವನದೇ ತಪ್ಪು.

# ಯುಗಾದಿ: ಹಿಂದು ಹೊಸವರ್ಷ

ಒಳನೋಟ
• ಹೆ.ಬಾ. ಮಲ್ಯ



ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ವಯಂಸೇವಕರಿಗೆ ಯುಗಾದಿ ಎರಡು ದೃಷ್ಟಿಯಿಂದ ಮಹತ್ವದ್ದಾಗಿದೆ. ಯುಗಾದಿ ಹಿಂದುಗಳ ಹೊಸವರ್ಷದ ದಿನ ಎಂಬುದು ಒಂದು. ಎರಡನೆಯದು ಸಂಘ ಸಂಸ್ಥಾಪಕ ಡಾಕ್ಟರ್ ಹೆಡ್ಗೇವಾರರ ಜನ್ಮದಿನವೂ ಯುಗಾದಿಯಂದೇ. ಸಂಘ ಆಚರಿಸುವ ಆರು ಉತ್ಸವಗಳಲ್ಲಿ ಯುಗಾದಿ ಉತ್ಸವ ಬಹಳ ಮಹತ್ವದ್ದು. ಡಾಕ್ಟರ್‌ಜೀ ಓರ್ವ ಯುಗಪುರುಷ ಎಂಬುದರಲ್ಲಿ ಸಂಶಯವಿಲ್ಲ. ಸಾವಿರ ವರ್ಷಗಳ ಸಂಘರ್ಷದಿಂದ ಸೋತು ಮಲಗಿದ್ದ ಹಿಂದು ಸಮಾಜವನ್ನು ಸಂಘಟಿಸಿ ಮತ್ತೆ ಅದರಲ್ಲಿ ಹೊಸ ಚೈತನ್ಯ, ಆತ್ಮವಿಶ್ವಾಸ ತುಂಬಿದ ಮಹಾನ್ ವ್ಯಕ್ತಿ ಡಾಕ್ಟರ್‌ಜೀ. ಸಂಘದಲ್ಲಿ ವ್ಯಕ್ತಿ ಆರಾಧನೆಯ ಪದ್ಧತಿ ಇಲ್ಲದಿದ್ದರೂ ಅಂಥ ಯುಗ ದ್ರಷ್ಟಾರನನ್ನು ಸ್ಮರಿಸುವುದು ಸೂಕ್ತವಾಗಿದೆ.

ನೂರು ವರ್ಷಗಳ ಹಿಂದೆ ಡಾಕ್ಟರ್‌ಜೀ ಸಂಘ ಸ್ಥಾಪನೆ ಮಾಡಿ ಹಿಂದೂ ಸಂಘಟನೆಯ ಕಾರ್ಯದಲ್ಲಿ ತೊಡಗಿದರು. ಅನಂತರ ಅವರು ಬದುಕಿದ್ದು 15 ವರ್ಷ ಮಾತ್ರ. ಆದರೆ ಅಷ್ಟರೊಳಗೆ ಸಂಘ ಕಾರ್ಯವನ್ನು ಸಣ್ಣ ರೂಪದಲ್ಲಾದರೂ ದೇಶಾದ್ಯಂತ ವಿಸ್ತರಿಸುವುದರಲ್ಲಿ ಯಶಸ್ವಿಯಾದರು. ಅವರ ಅದ್ಭುತ ಕಾರ್ಯಶೈಲಿ ಹಾಗೂ ಅವರ ನಿಷ್ಠೆ, ಪರಿಶ್ರಮ, ಪ್ರಾಮಾಣಿಕತೆ ಇದಕ್ಕೆ ಕಾರಣ. ನಂತರ ನೂರಾರು ಕಾರ್ಯಕರ್ತರು ಅವರ ಜೀವನದಿಂದ ಪ್ರೇರಣೆ ಪಡೆದು ಪೂರ್ಣಾವಧಿ ಪ್ರಚಾರಕರಾದರು. ಸಂಘಕಾರ್ಯವನ್ನು ಬೆಳೆಸಿದರು. ದೇಶದಲ್ಲಿ ಮಾತ್ರವಲ್ಲ ವಿದೇಶಗಳಲ್ಲೂ ಸಂಘ ಕಾರ್ಯ ವಿಸ್ತರಿಸಿತು. ಹಿಂದು ತರುಣ ಪೀಳಿಗೆಯಲ್ಲಿ ಮತ್ತೆ ಹಿಂದುತ್ವದ ಬಗ್ಗೆ ಜಾಗೃತಿ ಮೂಡಿತು. ಸಮಾಜದ ವಿಭಿನ್ನ ಕ್ಷೇತ್ರಗಳಲ್ಲಿ ಕಾರ್ಯಕರ್ತರು ಸಂಘಟನೆಗಳನ್ನು ಕಟ್ಟಿ ಆಯಾ ಕ್ಷೇತ್ರಗಳಲ್ಲಿ ರಾಷ್ಟ್ರೀಯ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾದರು.

ದೇಶದ ರಾಜಕೀಯ ಕ್ಷೇತ್ರದಲ್ಲಿ ಕೂಡಾ ಅದ್ಭುತ ಪ್ರಗತಿ ಆಗಿರುವುದನ್ನು ನಾವೆಲ್ಲರೂ ಕಾಣಬಹುದು. ಸಂಘದ ಪ್ರಚಾರಕ ನರೇಂದ್ರ ಮೋದಿಯವರು ಪ್ರಧಾನಿಯಾಗಿ ಅದ್ಭುತ ಕಾರ್ಯ ಮಾಡಿದ್ದಾರೆ. ಸಂಘ ನೂರು ವರ್ಷಗಳಲ್ಲಿ ಏನು ಸಾಧಿಸಿದೆ ಎಂದು ಕೇಳುವವರಿಗೆ, ಒಂದು ವೇಳೆ ಅಂದು ಡಾಕ್ಟರ್‌ಜೀ ಸಂಘ ಪ್ರಾರಂಭಿಸದೇ ಹೋಗಿದ್ದರೆ ಇಂದು ದೇಶದ ಪರಿಸ್ಥಿತಿ ಏನಾಗುತ್ತಿತ್ತು? ಎಂದು ಮರು ಪ್ರಶ್ನೆ ಕೇಳಬೇಕು. ಸಂಘ ಇಲ್ಲದೇ ಹೋಗಿದ್ದರೆ ಮೋದಿ ಪ್ರಧಾನಿಯಾಗುತ್ತಿರಲಿಲ್ಲ. ಮೋದಿ ಪ್ರಧಾನಿಯಾಗದೇ ಹೋಗಿದ್ದರೆ ಇಂದು ದೇಶದ ಆಡಳಿತ ಸೂತ್ರ ಯಾರ ಕೈಯಲ್ಲಿರುತ್ತಿತ್ತು ಎಂಬುದನ್ನು ಯೋಚಿಸಬೇಕು.

ಡಾಕ್ಟರ್‌ಜೀಯವರು ಸಂಘದ ತತ್ವ-ಸಿದ್ಧಾಂತಗಳನ್ನು ಮಾತ್ರ ಬೋಧಿಸಿದ್ದಲ್ಲ, ಪ್ರತ್ಯಕ್ಷ ಆದರ್ಶಗಳನ್ನು ಯುವ ಪೀಳಿಗೆಯ ಮುಂದಿಟ್ಟು ಹೋದರು. ಆ ಕಾಲದಲ್ಲಿ ಮಸೀದಿ ಮುಂದೆ ಹಿಂದುಗಳು ವಾದ್ಯ ಬಾರಿಸಿಕೊಂಡು ಹೋಗುವಂಥ ಪರಿಸ್ಥಿತಿ ಇರಲಿಲ್ಲ. ಡಾಕ್ಟರ್‌ಜೀ ಸ್ವತಃ ಡೋಲು ಬಾರಿಸುತ್ತಾ ಸ್ವಯಂಸೇವಕರೊಂದಿಗೆ ಮೆರವಣಿಗೆಯಲ್ಲಿ ಮಸೀದಿಯ ಮುಂದೆ ಸಾಗುವ ಧೈರ್ಯ ತೋರಿದರು. ಕಟುಕನೊಬ್ಬ ಕಸಾಯಿಖಾನೆಗೆ ಹಸುವನ್ನು ಕೊಂಡು ಹೋಗುತ್ತಿದ್ದುದನ್ನು ನೋಡಿ ಅವನೊಂದಿಗೆ ವಾದ ಮಾಡಿ ಆ ಹಸುವನ್ನು ಬಿಡಿಸಿಕೊಂಡರು. ಅದರ ಬೆಲೆಯನ್ನು ಅವನಿಗೆ ತನ್ನ ಜೇಬಿನಿಂದ ತೆತ್ತರು. ಲಕ್ಷ್ಮೀ ಪೂಜೆಯ ಸಂದರ್ಭದಲ್ಲಿ ಪ್ರತಿ ವರ್ಷ ವ್ಯಾಪಾರಸ್ಥರು ಅಂಗಡಿಯಲ್ಲಿ ಹಣದ ನೋಟುಗಳು, ಚಿನ್ನಾಭರಣ ಇಟ್ಟು ಪೂಜೆ ಮಾಡುವುದು ಪದ್ಧತಿ. ಅಂದು ಮುಸ್ಲಿಂ ಗೂಂಡಾಗಳು ಅಂಗಡಿಗಳ ಮೇಲೆ ದಾಳಿ ಮಾಡಿ ಹಣ -ಚಿನ್ನಾಭರಣಗಳನ್ನು ದೋಚಿಕೊಂಡು ಪರಾರಿಯಾಗುತ್ತಿದ್ದರು. ಅವರನ್ನು ತಡೆಯುವ ಧೈರ್ಯ ಯಾರಿಗೂ ಇರಲಿಲ್ಲ. ಒಂದು ವರ್ಷ ಡಾಕ್ಟರ್‌ಜೀ ತರುಣ ಸ್ವಯಂಸೇವಕರನ್ನು ಸಂಘಟಿಸಿ ದಂಡ (ಲಾಠಿ)ಗಳೊಂದಿಗೆ ಗಲ್ಲಿಯಲ್ಲಿ ನಿಲ್ಲಿಸಿದರು. ಗೂಂಡಾಗಳು ದೋಚಲು ಬರುತ್ತಿದ್ದಂತೆ ಏಕಾಏಕಿ ಅವರ ಮೇಲೆ ಮುಗಿಬಿದ್ದು ದಂಡದ ರುಚಿ ತೋರಿಸಿದರು. ಅಂದಿನಿಂದ ಗೂಂಡಾಗಳ ಉಪಟಳ ನಿಂತು ಹೋಯಿತು. 1930ರಲ್ಲಿ ಬ್ರಿಟಿಷರ ವಿರುದ್ಧ ಸತ್ಯಾಗ್ರಹ ಮಾಡಿ ಜೈಲಿಗೆ ಹೋದರು. ಒಂದು ವರ್ಷ ಸೆರೆವಾಸ ಅನುಭವಿಸಿದರು. ಹೀಗೆ ತಮ್ಮ ಸ್ವಂತ ಮೇಲ್ಪಂಕ್ತಿಯಿಂದ ಸ್ವಯಂಸೇವಕರಲ್ಲಿ ಧೈರ್ಯ, ಪ್ರೇರಣೆ, ತ್ಯಾಗದ ಮನೋಭಾವನೆ ತುಂಬಿದರು. ಇವು ಸಾಂಕೇತಿಕ ಎನಿಸಿದರೂ ತರುಣರಿಗೆ ಬಲವಾದ ಸಂದೇಶಗಳಾದವು. ಹೀಗೆ ಡಾಕ್ಟರ್‌ಜೀ ದೂರದೃಷ್ಟಿ ಇಟ್ಟುಕೊಂಡು ಆರಂಭಿಸಿದ ಸಂಘ ಇಂದು ಜಗತ್ತಿನಲ್ಲೇ ಬಲಿಷ್ಠ ಸ್ವಯಂಸೇವಕ ಸಂಘಟನೆ ಎಂಬ ಖ್ಯಾತಿ ಪಡೆದಿದೆ.

**ಯುಗಾದಿ ಮಹತ್ವ**

ಯುಗಾದಿ ಹೊಸ ಸಂವತ್ಸರದ ಆರಂಭವಷ್ಟೇ ಅಲ್ಲದೆ ಖಗೋಳ ಶಾಸ್ತ್ರದ ದೃಷ್ಟಿಯಿಂದಲೂ ಮಹತ್ವ ಪಡೆದಿದೆ. ಪ್ರಾಚೀನ ಋಷಿಗಳು ಖಗೋಳ ಶಾಸ್ತ್ರದಲ್ಲಿ ಬಹಳ ಮುಂದಿದ್ದರು. ಕಾಲ ಗಣನ ವಿಜ್ಞಾನಕ್ಕೆ ಭದ್ರವಾದ ಅಡಿಗಲ್ಲನ್ನು ಹಾಕಿಟ್ಟರು. ಭಾರತದಿಂದಲೇ ಈ ಕಾಲಗಣನ ವಿಜ್ಞಾನ ಜಗತ್ತಿನ ಇತರ ದೇಶಗಳಿಗೆ ಹರಡಿತು.

ಭಾರತೀಯರ ಹೊಸ ವರ್ಷ ಆರಂಭವಾಗುವುದು ಜನವರಿ ಒಂದರಿಂದಲ್ಲ, ಯುಗಾದಿಯಿಂದ. ಹಿಂದೂ ಪಂಚಾಂಗವು ಗ್ರಹ, ನಕ್ಷತ್ರ, ಭೂಮಿಗಳ ಚಲನೆಯ ಆಧಾರದ ಮೇಲೆ ರಚಿತವಾಗುತ್ತದೆ. ಪಾಶ್ಚಾತ್ಯರದು ಕೃತಕ ಕಾಲಮಾನ. ಪ್ರಕೃತಿಯ ವಿದ್ಯಮಾನಗಳಿಗೂ ಅದಕ್ಕೂ ಸಂಬಂಧವಿಲ್ಲ. ಅನುಕೂಲತೆ ದೃಷ್ಟಿಯಿಂದ ಸದ್ಯಕ್ಕೆ ಅದನ್ನೇ ಅನುಸರಿಸುವುದರಲ್ಲಿ ತಪ್ಪೇನಿಲ್ಲ. ಅದೊಂದು ಅನಿವಾರ್ಯತೆ. ಆದರೆ ಭಾರತೀಯರಿಗೆ ಸ್ವದೇಶಿ ಕಾಲಗಣನೆಯ ಜ್ಞಾನ ಇರಬೇಕಾದದ್ದು ಅಗತ್ಯ. ಎಲ್ಲಾ ಹಬ್ಬ- ಹರಿದಿನ, ಗ್ರಹಣ, ಶ್ರಾದ್ಧ, ಹೋಮ, ಹವನ, ಯಾಗ, ಯಜ್ಞಗಳು, ಮದುವೆ, ಮುಂಜಿ, ಗೃಹಪ್ರವೇಶಗಳು ಮುಹೂರ್ತಕ್ಕೆ ಸರಿಯಾಗಿ ಇಂದಿಗೂ ನಡೆಯುತ್ತಿರುವುದು ಸಮಾಧಾನಕರ ಸಂಗತಿ.

ಯುಗಾದಿಯಿಂದ ವಸಂತ ಋತು ಆರಂಭವಾಗುತ್ತದೆ. ಈ ಬಾರಿ ಮಾರ್ಚ್ 19ರಂದು ಚಾಂದ್ರಮಾನ ಯುಗಾದಿ. ಏಪ್ರಿಲ್ 15ರಂದು ಸೌರಮಾನ ಯುಗಾದಿ. ವಸಂತ ಋತುವಿನಲ್ಲಿ ಆಹ್ಲಾದಕರ ವಾತಾವರಣವಿರುತ್ತದೆ. ಪ್ರಕೃತಿ ಮತ್ತೆ ಹಸಿರಿನಿಂದ ಕಂಗೊಳಿಸುತ್ತದೆ. ಹೂವು-ಹಣ್ಣುಗಳು ಬಿಡುವ ಕಾಲ. ಪ್ರಕೃತಿಯಲ್ಲಿ ಒಂದು ಆಹ್ಲಾದಕರ ಪರಿವರ್ತನೆಯ ಕಾಲ. ಅದಕ್ಕಾಗಿಯೇ ಪೂರ್ವಜರು ಯುಗಾದಿಯನ್ನು ವರ್ಷಾರಂಭ ಎಂದು ಪರಿಗಣಿಸಿದರು. ಅಂದು ಬೇವು ಬೆಲ್ಲ ಸ್ವೀಕರಿಸುವುದು ವಾಡಿಕೆ. ಮುಂಬರುವ ಜೀವನದಲ್ಲಿ ಸಿಹಿ-ಕಹಿಗಳೆರಡನ್ನೂ ಸಮಾನವಾಗಿ ಸ್ವೀಕರಿಸಬೇಕೆಂಬ ಸಂದೇಶವನ್ನು ಯುಗಾದಿ ಹಬ್ಬ ನೀಡುತ್ತದೆ.

ಸೂರ್ಯ ದಕ್ಷಿಣದಿಂದ ಉತ್ತರಕ್ಕೆ ಚಲಿಸುತ್ತಾ ಯುಗಾದಿಯಂದು ಭೂಮಧ್ಯ ರೇಖೆಯನ್ನು ತಲುಪುತ್ತಾನೆ. ಹಗಲು ಮತ್ತು ರಾತ್ರಿಯದ್ದು ಸಮಾನ ಅವಧಿ. ಇದನ್ನು ವಸಂತ ವಿಷುವ ಎನ್ನುತ್ತಾರೆ. 72 ವರ್ಷಗಳಿಗೊಮ್ಮೆ ಅಯನಬಿಂದು (Equinox) ವಿಷುವದ್ ವೃತ್ತದ ಮೇಲೆ ಒಂದು ಡಿಗ್ರಿಯಷ್ಟು ಅಂದರೆ ಒಂದು ದಿನದಷ್ಟು ಹಿಂದಕ್ಕೆ ಸರಿಯುತ್ತದೆ. ಇದು ಭೂಮಿಯ ಮೂರನೇ ಬಗೆಯ ಚಲನೆ. ಇದನ್ನು ಅಯನಚಲನೆ ಎನ್ನುತ್ತಾರೆ. ಈ ಹಿಂಸರಿತ (Precession)ದ ಕಾರಣ ಆರ್ಯಭಟನ ಕಾಲದಲ್ಲಿದ್ದ (ಕ್ರಿ.ಶ. 500) ಅಯನ ಬಿಂದು ಈ ಒಂದೂವರೆ ಸಾವಿರ ವರ್ಷದಲ್ಲಿ ಸುಮಾರು 22 ದಿನಗಳಷ್ಟು ಹಿಂದೆ ಸರಿದಿದೆ. ಅಂದರೆ ಉತ್ತರಾಯಣ ಬಿಂದು ಮಕರ ಸಂಕ್ರಾಂತಿಯಂದು ಇರದೆ ಧನುರ್ಮಾಸಕ್ಕೆ ಹಿಂದೆ ಸರಿದು ಡಿಸೆಂಬರ್ 21ಕ್ಕೆ ಹೋಗಿದೆ. ಅದೇ ರೀತಿ ಸೌರ ಯುಗಾದಿ ಮಾರ್ಚ್ 21ರಂದು ಘಟಿಸುತ್ತದೆ. ಮೊದಲು ಏಪ್ರಿಲ್ 14ರಂದು ಅಂದರೆ ಮೇಷ ಸಂಕ್ರಮಣದಂದು ಘಟಿಸುತ್ತಿತ್ತು.

ಚಾಂದ್ರಮಾನ ಪ್ರಕಾರ ಚೈತ್ರ ಮಾಸದ ಪ್ರಥಮ ತಿಥಿಯಂದು ಯುಗಾದಿ. ಅಶ್ವಿನಿ ನಕ್ಷತ್ರವೂ ಅಂದೇ ಅಥವಾ ಒಂದು ದಿನ ಆಚೆ ಈಚೆ ಇರುತ್ತದೆ. ಚೈತ್ರ ಮಾಸವು ಸಂವತ್ಸರದ ಮೊದಲ ಮಾಸ. ಅಶ್ವಿನಿ ಮೊದಲ ನಕ್ಷತ್ರ. ಈ ಬಾರಿ ವಿಶ್ವಾವಸು ಸಂವತ್ಸರ ಕಳೆದು ಪರಾಭವ ಸಂವತ್ಸರ ಕಾಲಿಡುತ್ತದೆ. ಸಂಕ್ರಮಣ ಎಂದರೆ ಮೇಷ, ವೃಷಭ ರಾಶಿಗಳಿಗೆ ಸಂಬಂಧಿಸಿದ ವಿದ್ಯಮಾನ. ಅವುಗಳು ಬದಲಾಗುವುದಿಲ್ಲ, ಏಕೆಂದರೆ ರಾಶಿಗಳು ಸ್ಥಿರ. ಅವುಗಳ ಸ್ಥಾನಗಳು ಬದಲಾಗುವುದಿಲ್ಲ, ಆದರೆ ಅಯನ ಬಿಂದುಗಳು ಹಿಂಸರಿತದ ಕಾರಣದಿಂದ ಸ್ಥಾನಪಲ್ಲಟವಾಗುತ್ತವೆ. ಹಿಂದೆ ಉತ್ತರಾಯಣ, ದಕ್ಷಿಣಾಯನ ಕ್ರಮವಾಗಿ ಮಕರ ಸಂಕ್ರಾಂತಿ, ಕರ್ಕಾಟಕ ಸಂಕ್ರಾಂತಿಯಂದೇ ಬರುತ್ತಿದ್ದವು. ಇಂದು ಅಯನ ಮತ್ತು ಸಂಕ್ರಾಂತಿಯ ನಂಟು ಮುರಿದಿದೆ. ಇಂದಿನ ಆಕಾಶದ ಚಿತ್ರ ಅಂದಿಗಿಂತ ಬದಲಾವಣೆಯಾಗಿದೆ. ಇಂದು ದೂರದರ್ಶಕಗಳಿವೆ. ಅವುಗಳ ಮೂಲಕ ಆಕಾಶವನ್ನು ಪರಾಂಬರಿಸಿದರೆ ಈ ಬದಲಾವಣೆ ಗೋಚರವಾಗುತ್ತದೆ. ಈ ಬದಲಾವಣೆ ಮನುಷ್ಯ ಮಾಡಿದ್ದಲ್ಲ, ಪ್ರಕೃತಿಯೇ ಮಾಡಿರುವಂಥದ್ದು. ವಿಜ್ಞಾನವು ಪ್ರಕೃತಿಯನ್ನು ಅನುಸರಿಸಿ ನಡೆಯಬೇಕಾಗುತ್ತದೆ.

ಹಿಂದಿನ ವೈಜ್ಞಾನಿಕ ಗ್ರಂಥಗಳಾದ ಸೂರ್ಯಸಿದ್ಧಾಂತ, ಆರ್ಯಭಟೀಯ, ಬೃಹತ್ ಸಂಹಿತೆ ಮುಂತಾದವುಗಳಲ್ಲಿ ದಾಖಲಾದ ಸಂಗತಿಗಳು ಕಳೆದ ಸಹಸ್ರಾರು ವರ್ಷಗಳಲ್ಲಿ ಬದಲಾಗಿವೆ. ಕಾಲಕಾಲಕ್ಕೆ ಈ ಸಿದ್ಧಾಂತಗಳಲ್ಲಿ ಪರಿಷ್ಕರಣೆ ಆಗಬೇಕಾದುದು ಅಗತ್ಯ. ಸುದೀರ್ಘ ಸಂಘರ್ಷದ ದೆಸೆಯಿಂದ ಈ ಕಾರ್ಯ ನಡೆಯಲಿಲ್ಲ. ಈಗಲಾದರೂ ಜ್ಯೋತಿಷಿಗಳು, ಮಠಾಧಿಪತಿಗಳು, ಆಧುನಿಕ ಖಗೋಳ ವಿಜ್ಞಾನಿಗಳು ಒಂದೆಡೆ ಕಲೆತು ಚರ್ಚಿಸಿ ಸೂಕ್ತ ಪರಿಷ್ಕರಣೆ ಮಾಡುವ ಅಗತ್ಯವಿದೆ.

ಈ ಬಾರಿ ಮಾರ್ಚ್ 19ರಂದು ಅಮಾವಾಸ್ಯೆ ಬಂದಿದೆ. ಯುಗಾದಿ ಅದರ ಮರುದಿನ ಪಾಡ್ಯದಂದು ಬರಬೇಕಾಗಿತ್ತು. ಆದರೆ ಅಮಾವಾಸ್ಯೆ ಅಂದು ಇರುವುದು ಮುಕ್ಕಾಲು ಗಳಿಗೆ (18 ನಿಮಿಷ) ಮಾತ್ರ. ಸೂರ್ಯೋದಯದಲ್ಲಿ ಯಾವ ತಿಥಿ ಇರುತ್ತದೋ ಅಂದು ಇಡೀ ದಿನ ಅದೇ ತಿಥಿ ಎಂದು ಪರಿಗಣಿಸಬೇಕೆಂಬುದು ಸಾಮಾನ್ಯ ನಿಯಮ. ಆದರೆ ಅಂದು ನಂತರ ಇಡೀ ದಿನ ಚೈತ್ರ ಶುದ್ಧ ಪ್ರತಿಪದೆ ಇರುತ್ತದೆ, ಮಾತ್ರವಲ್ಲ ಮರುದಿನ ಸೂರ್ಯೋದಯದೊಳಗೆ ಮುಕ್ತಾಯವಾಗುತ್ತದೆ. ಮರುದಿನ ಸೂರ್ಯೋದಯಕ್ಕೆ ಬಿದಿಗೆ ಇರುತ್ತದೆ. ಹಾಗಾಗಿ 19ರಂದು ಚಾಂದ್ರ ಯುಗಾದಿ ಆಚರಣೆ.

# 'ಹವ್ಯಕ' ಪತ್ರಿಕೆಯ ವಜ್ರಮಹೋತ್ಸವ: ಸಮುದಾಯ ಮಾಧ್ಯಮವೊಂದರ ಸಾರ್ಥಕ ಪಯಣ

ಒಂದು ಸಂಸ್ಥೆಯ ಅಭಿವೃದ್ಧಿ ಪಥದಲ್ಲಿ ಪತ್ರಿಕೆಗಳ ಪಾತ್ರ ಬಹಳ ಮುಖ್ಯವಾಗಿರುತ್ತದೆ. ಹವ್ಯಕ ಮಹಾಸಭೆ ಇಷ್ಟೊಂದು ಎತ್ತರಕ್ಕೆ ಬೆಳೆದು ಹೆಸರು ಗಳಿಸಿದ್ದರ ಹಿಂದೆ ಪತ್ರಿಕೆಯ ಪಾಲು ದೊಡ್ಡದಿದೆ.

▸ ನಾರಾಯಣ ಭಟ್ ಹುಳೇಗಾರು



ವಿಶಿಷ್ಟ ಸಂಸ್ಕೃತಿ, ಮೌಲ್ಯಗಳಿಂದ ತನ್ನದೇ ಆದ ಛಾಪು ಮೂಡಿಸಿ ಸಾವಿರಾರು ವರ್ಷಗಳಿಂದ ಕನ್ನಡ ನೆಲದಲ್ಲಿ ನೆಲೆ ನಿಂತ ಒಂದು ಜನಾಂಗ ಹವ್ಯಕ ಸಮಾಜ. ಒಂದು ಅಪೂರ್ವ ಭಾಷೆಯನ್ನು, ವಿಶಿಷ್ಟ ತಳಿಯನ್ನು ಹೊಂದಿದ ಈ ಜನಾಂಗ ಸಂಘಟನೆಯ ದೃಷ್ಟಿಯಿಂದ ಬೆಂಗಳೂರಿನಲ್ಲಿ 1943ರಲ್ಲಿ ಶ್ರೀ ಅಖಿಲ ಹವ್ಯಕ ಮಹಾಸಭೆಯನ್ನು ಹುಟ್ಟುಹಾಕಿತು. ಇದೊಂದು ಪ್ರಾತಿನಿಧಿಕ ಸಂಸ್ಥೆಯಾಗಿ ಸಾರ್ಥಕ 82 ವಸಂತಗಳನ್ನು ಪೂರೈಸಿ ಸಮಾಜಕ್ಕೆ ಆತ್ಮವಿಶ್ವಾಸವನ್ನು ತುಂಬುವಲ್ಲಿ ತನ್ನೆಲ್ಲಾ ಶ್ರಮ ಹಾಕಿದೆ.

ಇದರ ಮುಖವಾಣಿಯಾಗಿ ಕಳೆದ ಅರವತ್ತು ವರ್ಷಗಳಿಂದ ನಿರಂತರವಾಗಿ ಪ್ರಕಟಗೊಳ್ಳುತ್ತಿರುವ 'ಹವ್ಯಕ ಪತ್ರಿಕೆ'ಯು ಇದೀಗ ವಜ್ರಮಹೋತ್ಸವ ಸಂಭ್ರಮದಲ್ಲಿದೆ. ಹವ್ಯಕ ಸಮಾಜದ ಚಿಂತನೆ, ನಡೆ ನುಡಿ, ಸಂಸ್ಕೃತಿ, ಸಂಪ್ರದಾಯ, ಸಂಸ್ಕಾರ, ಕೃಷಿ, ಸಾಹಿತ್ಯ, ಕಥೆ, ಕವನ ಮತ್ತು ಸಾಮಾಜಿಕ ಜಾಗೃತಿಗೆ ತನ್ನನ್ನು ತೆರೆದುಕೊಂಡ ಒಂದು ಮಹತ್ವಪೂರ್ಣ ಆಕರ ಸಂಚಿಕೆಯಾಗಿದೆ.

1966 ಜೂನ್ 1ರಂದು ಆರಂಭವಾದ ಈ ಪತ್ರಿಕೆ, 60 ವರ್ಷಗಳ ಕಾಲ ನಿರಂತರವಾಗಿ ಸಮಾಜದ ಧ್ವನಿಯಾಗಿ, ಮೌಲ್ಯಗಳ ಪ್ರತಿನಿಧಿಯಾಗಿ ಹಾಗೂ ಸಾಂಸ್ಕೃತಿಕ ಕೊಂಡಿಯಾಗಿಯೇ ಉಳಿದಿದೆ. ಆರಂಭಿಕ ದಿನಗಳಲ್ಲಿ ಪತ್ರಿಕೆ ತ್ರೈಮಾಸಿಕವಾಗಿ ಪ್ರಕಟವಾಗುತ್ತಿತ್ತು. ಅಚ್ಚು ಮೊಳೆ ಜೋಡಿಸಿ ಮುದ್ರಣ ಮಾಡಬೇಕಾಗಿತ್ತು. ಸೀಮಿತ ಸಂಪನ್ಮೂಲಗಳು, ವಿತರಣೆಯ ಅಡಚಣೆಗಳು ಮತ್ತು ಕಾಲದ ತಾಂತ್ರಿಕ ನಿರ್ಬಂಧಗಳ ನಡುವೆಯೂ ಅಖಿಲ ಮಹಾಸಭೆಯ ಮುಖವಾಣಿಯಾಗಿ ಡಿಜಿಟಲ್ ಮುದ್ರಣ ಪತ್ರಿಕೆಗೊಂದು ಹೊಸ ರೂಪವನ್ನು ತಂದಿತು. ಸಂಸ್ಥೆ ಬೆಳೆದಂತೆ, ಸಂಪರ್ಕ ಹೆಚ್ಚಿದಂತೆ 1981 ಜೂನ್ 1ರಿಂದ ಮಾಸ ಪತ್ರಿಕೆಯಾಗಿ ನಿರಂತರವಾಗಿ ಪ್ರಕಟವಾಗುತ್ತಾ ಬಂದಿದೆ. ಈ ರೂಪಾಂತರವು ವಿಷಯ ವೈವಿಧ್ಯತೆ, ಕಾಲಪ್ರಜ್ಞೆ ಮತ್ತು ಓದುಗರ ಸಂಪರ್ಕವನ್ನು ಮತ್ತಷ್ಟು ಗಟ್ಟಿಗೊಳಿಸಿದೆ. ಸಮಾಜದ ಆಗುಹೋಗುಗಳ ಬಗ್ಗೆ ಸೂಕ್ಷ್ಮ ದೃಷ್ಟಿಯನ್ನು ಬೀರಿ ಸಮುದಾಯಕ್ಕೆ ಸಮಾಚಾರವನ್ನು ತಲುಪಿಸುವ, ಹವ್ಯಕ ಮನಸ್ಸುಗಳನ್ನು ಸಾಂಸ್ಕೃತಿಕವಾಗಿ ಮುಟ್ಟುವ, ಗಟ್ಟಿಗೊಳಿಸುವ ಒಂದು ಸಮರ್ಥ ಮಾಧ್ಯಮವಾಗಿ ತನ್ನನ್ನು ತೆರೆದುಕೊಂಡಿದೆ.




ಇಂತಹ ಪತ್ರಿಕೆಗಳಲ್ಲಿ ಮುಖ್ಯವಾಗಿ 2 ವಿಧ. ಒಂದು ವ್ಯವಸಾಯಿ (ವಾಣಿಜ್ಯ) ಪತ್ರಿಕೆಗಳು. ಮತ್ತೊಂದು ಹವ್ಯಕದಂತಹ ಸಂಘ ಸಂಸ್ಥೆಗಳಿಂದ ಪ್ರಕಟವಾಗುವ ಅದರ ಮುಖವಾಣಿ. ಹವ್ಯಕದ ಉದ್ದೇಶ ಹಣ ಗಳಿಕೆಯಲ್ಲ. ಈ ರೀತಿಯ ಪತ್ರಿಕೆಗಳು ಆರ್ಥಿಕ ಮಿತಿ, ಲೇಖನಗಳ ಮಿತಿ, ಲೇಖಕರ ಮಿತಿ, ಓದುಗರ ಮಿತಿ, ಪುಟಗಳ ಮಿತಿ, ಅಂಚೆ ಮಿತಿ ಇತ್ಯಾದಿ ಮಿತಿಗಳ ನಡುವೆ ಕೆಲಸ ಮಾಡಬೇಕಾಗುತ್ತದೆ. ಆದರೂ ಅದನ್ನು ಸವಾಲಾಗಿ ಸ್ವೀಕರಿಸಿದ ಹವ್ಯಕ ಪತ್ರಿಕೆ ಮೌಲಿಕವಾಗಿ ತನ್ನನ್ನು ಗುರುತಿಸಿಕೊಳ್ಳುತ್ತಾ ನಿರಂತರವಾಗಿ ಪ್ರಕಟವಾಗುತ್ತಿರುವುದು ಸಮಾಜಮುಖಿ ಸಂಸ್ಥೆಯ ಮೇಲಿನ ಅಭಿಮಾನದಿಂದ ಮತ್ತು ಅರ್ಥಪೂರ್ಣ ಕಾರ್ಯಕ್ರಮಗಳಿಂದ. ಇಂದು ಅನೇಕ ದೊಡ್ಡದೊಡ್ಡ ಸಂಸ್ಥೆಗಳಿಂದ ಪ್ರಕಟವಾಗುತ್ತಿರುವ ಪತ್ರಿಕೆಗಳು ತನ್ನ ರೆಗ್ಯುಲಾರಿಟಿಯನ್ನು ಕಳೆದುಕೊಂಡು ಸ್ಥಗಿತಗೊಂಡ ಉದಾಹರಣೆಗಳೇ ಹೆಚ್ಚು, ಆದರೆ 'ಹವ್ಯಕ' ಒಂದು ಸೀಮಿತ ಜನಾಂಗದ ಧ್ವನಿಯಾಗಿ ತನ್ನ ನಿರಂತರತೆಗೆ ಎಂದೂ ಬ್ರೇಕ್ ಹಾಕಿಲ್ಲ. ಸಾಮಾಜಿಕ ಪ್ರಜ್ಞೆಯನ್ನು ತನ್ನ ಪುಟ ಪುಟಗಳಲ್ಲಿ ಕಟ್ಟಿಕೊಡುತ್ತಾ 60 ಅನ್ನು ತುಂಬಿಕೊಂಡು, ಪ್ರತಿ ತಿಂಗಳು ಸುಮಾರು 30 ಸಾವಿರ ಕುಟುಂಬಗಳಿಗೆ ತಲುಪುತ್ತಿರುವುದು ಹೆಮ್ಮೆಯ ಸಂಗತಿ. ಕೇವಲ 3-4 ಲಕ್ಷ ಜನಸಂಖ್ಯೆಯನ್ನು ಹೊಂದಿರುವ ಜನಾಂಗದ ಸಂಸ್ಥೆಯಾಗಿದ್ದರೂ ಹವ್ಯಕ ಪ್ರಜ್ಞೆಯನ್ನು ಕಟ್ಟಿಕೊಡುವಲ್ಲಿ ಇಟ್ಟ ಹೆಜ್ಜೆಯನ್ನು ಹಿಂದಿಡಲಿಲ್ಲ.

ಒಂದು ಸಂಸ್ಥೆಯ ಅಭಿವೃದ್ಧಿ ಪಥದಲ್ಲಿ ಪತ್ರಿಕೆಗಳ ಪಾತ್ರ ಬಹಳ ಮುಖ್ಯವಾಗಿರುತ್ತದೆ. ಹವ್ಯಕ ಮಹಾಸಭೆ ಇಷ್ಟೊಂದು ಎತ್ತರಕ್ಕೆ ಬೆಳೆದು ಹೆಸರು ಗಳಿಸಿದ್ದರ ಹಿಂದೆ ಪತ್ರಿಕೆಯ ಪಾಲು ದೊಡ್ಡದಿದೆ. ದೂರದ ಊರುಗಳು ಮತ್ತು ವಿದೇಶಗಳಲ್ಲಿರುವ ಹವ್ಯಕರು ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳಲು ಮತ್ತು ಕೇಂದ್ರ ಸಂಸ್ಥೆಯೊಂದಿಗೆ ಸಂಪರ್ಕ ಇಟ್ಟುಕೊಳ್ಳಲು ಇದು ಮುಖ್ಯ ಮಾಧ್ಯಮವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಪತ್ರಿಕೆಯು 8 ಪುಟಗಳಿಂದ 68 ಪುಟಗಳಿಗೆ ಬೆಳೆದಿದ್ದು, ವೈವಿಧ್ಯಮಯ ವಿಚಾರಗಳೊಂದಿಗೆ ಮಾಹಿತಿ ಪತ್ರಿಕೆಯಾಗಿ ಹೊರಬರುತ್ತಿದೆ. ಇದೀಗ ಹವ್ಯಕ ಪತ್ರಿಕೆಗೆ ಷಷ್ಟ್ಯಬ್ದದ ಸಂಭ್ರಮ. ಇದರ ಸವಿನೆನಪಿಗಾಗಿ ವೈವಿಧ್ಯಮಯ ವಿಷಯಗಳು ಹಾಗೂ ಹೆಸರಾಂತ ಲೇಖಕರ ಲೇಖನಗಳನ್ನೊಳಗೊಂಡ ಎಪ್ರಿಲ್ ಸಂಚಿಕೆಯು ವಿಶೇಷಾಂಕವಾಗಿ ಹೊರಬರಲಿದೆ.

## ಕಿರುಸುದ್ದಿ

### ಉತ್ತಮ ಬದುಕು ಕಟ್ಟಿಕೊಳ್ಳಿ

• **ಆನೇಕಲ್:** ಅಪರಾಧ ಕೃತ್ಯಗಳ ಪೂರ್ವ ಯೋಜಿತ ಸಂಚುಗಳ ಬಗ್ಗೆ ಮಾಹಿತಿ ನೀಡಿ ಸಮಾಜ ಸ್ವಾಸ್ಥತೆಗೆ ನೆರವಾಗಿ ಉತ್ತಮ ಬದುಕು ಕಟ್ಟಿಕೊಳ್ಳಿ ಎಂದು ಬೆಂಗಳೂರು ಗ್ರಾಮಾಂತರ ಪೊಲೀಸ್ ವರಿಷ್ಠಾಧಿಕಾರಿ ಚಂದ್ರ ಕಾಂತ್ ತಿಳಿಸಿದರು. ತಾಲೂಕು ಆನೇಕಲ್ ಪೊಲೀಸ್ ಠಾಣೆ ಮುಂಭಾಗ ರೌಡಿ ಪರೇಡ್ ನಡೆಸಿದ ಅವರು, ಒಟ್ಟು 564 ರೌಡಿಗಳಲ್ಲಿ 327 ರೌಡಿಗಳು ಸ್ಥಳೀಯರಾಗಿದ್ದಾರೆ. ಕೆಲವರು ಬೇರೆ ಊರುಗಳಿಗೆ ತೆರಳಿದ್ದು, ಕೆಲವರು ತಂದೆ ತಾಯಿ ಪೋಷಣೆಯಲ್ಲಿದ್ದಾರೆ. ಪ್ರತ್ಯೇಕವಾಗಿ ರೌಡಿಗಳನ್ನು ಕರೆಸಿ ವಿಚಾರಿಸಿದಾಗ ಯಾರೂ ಹತ್ತನೇ ತರಗತಿವರೆಗೆ ಓದಿಲ್ಲ. ಕೆಲವರಂತೂ ಶಾಲಾ ಮೆಟ್ಟಿಲು ಹತ್ತಿಲ್ಲ ಎಂಬುದು ಗೊತ್ತಾಗಿದೆ ಎಂದು ಮಾಹಿತಿ ನೀಡಿದರು. ಅಪರಾಧ ಪ್ರಕರಣಗಳಲ್ಲಿ ಸಿಲುಕಿಕೊಂಡಿದ್ದಾರೆ. ಅಂತಹವರಿಗೆ ಸಮಾಜದಲ್ಲಿ ಬದುಕುವ ಅವಕಾಶ ಕಲ್ಪಿಸಬೇಕಿದೆ. ಸನ್ನಡತೆ ಹಾಗು ಪೊಲೀಸರಿಗೆ ಸಮಾಜದಲ್ಲಿ ಆಗುವ ಕೃತ್ಯಗಳ ಕುರಿತು ಮೊದಲೇ ಮಾಹಿತಿ ನೀಡಿ ಸಮಾಜದಲ್ಲಿ ಉತ್ತಮ ಪ್ರಜೆಗಳಾಗಿ ನಿಮ್ಮ ಮಕ್ಕಳಿಗಾದರೂ ವಿದ್ಯಾಭ್ಯಾಸ ಕೊಡಿಸಿ ಎಂದು ತಿಳಿಸಿದರು. ಇನ್ನು ತಾಲೂಕಿನ ಭಾಗದಲ್ಲಿ ಗಾಂಜಾ ಮಾರಾಟ ಮಾಡುವವರ ಬಗ್ಗೆ ಎಲ್ಲಾರು ಮಾಹಿತಿ ನೀಡಿ ಯುವ ಪೀಳಿಗೆಯನ್ನು ರಕ್ಷಣೆ ಮಾಡಬೇಕು ಅದಕ್ಕಾಗಿ ಯಾರೇ ಗಾಂಜಾ ಸಾಗಾಣಿಕೆ ಹಾಗೂ ವ್ಯಸಗಳ ಬಗ್ಗೆ ಸಂಬಂದ ಪಟ್ಟ ಪೊಲೀಸರಿಗೆ ಮಾಹಿತಿ ಕೊಡಬೇಕು ಎಂದರು. ಕಾನೂನು ಸಲಹೆಗಳ ಕೊರತೆಯೂ ರೌಡಿಗಳಿಗಿದೆ, ಹೀಗಾಗಿ ಆಯಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಕ್ರಿಯವಲ್ಲದ ರೌಡಿಗಳ ಚಲನ ವಲನ ಗಮನಿಸಿ ಅವರನ್ನು ರೌಡಿಪಟ್ಟಿಯಿಂದ ಕೈಬಿಡಲಾಗುವುದು ಮಾತು ಕೇಳದಿದ್ದಲ್ಲಿ ಹಂತ0ಹಂತವಾಗಿ ಕಾನೂನು ಬಿಗಿಯಲ್ಲಿ ಪಾಠ ಕಲಿಸುತ್ತೇವೆ ಎಂದು ಅವರು ಹೇಳಿದರು. ಡಿವೈಎಸ್ ಪಿ.ಮೋಹನ್ ಕುಮಾರ್ ಮತ್ತು ಇನ್‌ಸ್ಪೆಕ್ಟರ್‌ಗಳಾದ ತಿಪ್ಪೇಸ್ವಾಮಿ, ಮಂಜುನಾಥ್, ನವೀನ್ ರಾಘವೇಂದ್ರ, ಸಂಜೀನ್ ಮಹಾಜನ್ ಹಾಗೂ ಬನ್ನೇರುಘಟ್ಟ ಇನ್‌ಸ್ಪೆಕ್ಟರ್ ತಂಡ ಹಾಜರಿದ್ದಿತ್ತು.

### ಕಳವು ಆರೋಪಿಗಳಿಬ್ಬರ ಸೆರೆ

• **ಬೆಂಗಳೂರು:** ನಗರದ ವಿವಿಧೆಡೆ ಮನೆಗಳ ಬೀಗ ಮುರಿದು ಕಳವು ಮಾಡುತ್ತಿದ್ದ ಇಬ್ಬರು ಆರೋಪಿಗನ್ನು ಎಚ್‌ಎಸ್‌ಆರ್ ಲೇಔಟ್ ಪೊಲೀಸರು ಬಂಧಿಸಿದ್ದಾರೆ. ಬಂಧಿತರಿಂದ 15 ಲಕ್ಷ ರೂ. ಮೌಲ್ಯದ 95 ಗ್ರಾಂ ಚಿನ್ನಾಭರಣ, 88 ಗ್ರಾಂ ಬೆಳ್ಳಿ ವಸ್ತುಗಳು, ಒಂದು ದ್ವಿಚಕ್ರ ವಾಹನ ಹಾಗೂ ಮೊಬೈಲ್ ಫೋನ್ ಅನ್ನು ವಶಪಡಿಸಿಕೊಂಡಿದ್ದಾರೆ. ಎಚ್‌ಎಸ್‌ಆರ್ ಲೇಔಟ್‌ನ 25ನೇ ಕ್ರಾಸ್‌ನ ನಿವಾಸಿಯೊಬ್ಬರು ಕೆಲಸಕ್ಕೆಂದು ಹೋಗಿದ್ದಾಗ, ಅಪರಿಚಿತರು ಮನೆಯ ಮುಂಭಾಗಿಲಿನ ಬೀಗ ಮುರಿದು ಒಳಗಿದ್ದ 30 ಗ್ರಾಂ ಚಿನ್ನಾಭರಣಗಳನ್ನು ಕಳವು ಮಾಡಿದ್ದರು. ಈ ಕುರಿತು ದಾಖಲಾದ ದೂರಿನ ಅನ್ವಯ ತನಿಖೆ ಕೈಗೊಂಡ ಪೊಲೀಸರು, ಫೆ.21ರಂದು ಮೈಸೂರಿನ ಉದಯಗಿರಿಯಲ್ಲಿ ಇಬ್ಬರು ಶಂಕಿತರನ್ನು ವಶಕ್ಕೆ ಪಡೆದ್ದಿದ್ದರು. ಬಂಧಿತರನ್ನು ಸುದೀರ್ಘ ವಿಚಾರಣೆ ನಡೆಸಿದಾಗ, ಬೆಂಗಳೂರಿನ ಎಚ್‌ಎಸ್‌ಆರ್ ಲೇಔಟ್ ಮತ್ತು ಬಾಣಸವಾಡಿ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿದ್ದಾರೆ.

ಆಪರೇಷನ್ ಕಮಲದ ಭೀತಿ ಹಿನ್ನೆಲೆ | ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆ

# ಕುದುರೆ ವ್ಯಾಪಾರಕ್ಕೆ ಅವಕಾಶ ನೀಡಲ್ಲ

• **ರಾಮನಗರ:** ಬಿಜೆಪಿಯವರು ಆಪರೇಷನ್ ಕಮಲದ ಪಿತಾಮಹರು, ಕುದುರೆ ವ್ಯಾಪಾರಕ್ಕೆ ಹೆಸರುವಾಸಿ. ನಾವು ಅದಕ್ಕೆ ಅವಕಾಶ ನೀಡುವುದಿಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬಿಡದಿಯ ರೆಸಾರ್ಟ್ ಬಳಿ ಮಾಧ್ಯಮಗಳ ಪ್ರಶ್ನೆಗಳಿಗೆ ಶಿವಕುಮಾರ್ ಅವರು ಶುಕ್ರವಾರ ಪ್ರತಿಕ್ರಿಯೆ ನೀಡಿದರು.

ಒಡಿಶಾ ಶಾಸಕರು ರಾಮನಗರ ರೆಸಾರ್ಟ್ ನಲ್ಲಿರುವ ಬಗ್ಗೆ ಕೇಳಿದಾಗ, "ರಾಜಕೀಯ ಪಕ್ಷಗಳಿಗೆ ಕುದುರೆ ವ್ಯಾಪಾರದ ಭೀತಿ ಇರುತ್ತದೆ. ರಾಜಕೀಯ ರಂಗದಲ್ಲಿ ಎಲ್ಲಾ ಪಕ್ಷಗಳು ಎದುರಿಸುವ ವಿಚಾರ ಇದು. ಅವರು ಇಲ್ಲಿಗೆ ಬಂದಿರುವಾಗ ಅವರಿಗೆ ನೆರವು ನೀಡುವುದು ನಮ್ಮ ಕರ್ತವ್ಯ. ನಾನು ಹಾಗೂ ನಮ್ಮ ಶಾಸಕರು ಅವರನ್ನು ಭೇಟಿ ಮಾಡಿದ್ದೇವೆ" ಎಂದು ತಿಳಿಸಿದರು.

ಕಾಂಗ್ರೆಸ್ ಪಕ್ಷಕ್ಕೆ ಅವರದೇ ಶಾಸಕರ ಮೇಲೆ ನಂಬಿಕೆ ಇಲ್ಲ ಎಂಬ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಅವರ ಹೇಳಿಕೆ ಬಗ್ಗೆ ಕೇಳಿದಾಗ, "ಹಾಗಿದ್ದರೆ ಅವರು ಕರ್ನಾಟಕದಲ್ಲಿ ಆಪರೇಷನ್ ಕಮಲ ಮಾಡಿದ್ದು ಯಾಕೆ?" ಎಂದು ಪ್ರಶ್ನಿಸಿದರು.

**ನಮ್ಮ ಶಾಸಕರಿಗೆ ದೊಡ್ಡ ಆಫರ್ ಗಳು ಬಂದಿವೆ:** ಇದು ಹೈಕಮಾಂಡ್ ನಾಯಕರು ಕೊಟ್ಟಿರುವ ಟಾಸ್ಕ್ ಆಗಿದೆಯೇ ಎಂದು ಕೇಳಿದಾಗ, ಯಾವ ಟಾಸ್ಕ್ ಕೂಡ ಇಲ್ಲ, ರಾಜ್ಯಸಭಾ ಚುನಾವಣೆ ಇರುವ ಕಾರಣಕ್ಕೆ ಆಪರೇಷನ್ ಕಮಲದ ಭೀತಿ ಎದುರಾಗಿದೆ. ನಮ್ಮವರ ಮೇಲೆ ಒತ್ತಡವಿದೆ. ದೊಡ್ಡ, ದೊಡ್ಡ ಆಫರ್ ಗಳನ್ನು ಕೊಡುತ್ತಿದ್ದಾರೆ. 14-15 ಜನ ಎಂಎಲ್ ಎಗಳು ಇಲ್ಲಿಗೆ ಬಂದಿದ್ದಾರೆ. ಒಡಿಸ್ಸಾ ಪಿಸಿಸಿ ಅಧ್ಯಕ್ಷರು ಕರೆ ಮಾಡಿ ಜಾತ್ಯಾತೀತ ಪಕ್ಷಗಳೆಲ್ಲಾ ಒಂದಾಗಿದ್ದೇವೆ. ಆಪರೇಷನ್ ಕಮಲ ನಡೆಯುವ ಸಂಭವಿದೆ ಎಂದರು. ಪಕ್ಷದ ಅಧ್ಯಕ್ಷರು ಕರೆ ಮಾಡಿದಾಗ ಗೌರವ ನೀಡುವುದು ನಮ್ಮ ಕರ್ತವ್ಯ. ಬನ್ನಿ ಇಲ್ಲೇ ವಾತಾವರಣ ಚೆನ್ನಾಗಿದೆ ಎಂದು ಹೇಳಿದೆ. ಎಲ್ಲಾ ಶಾಸಕರು ಖುಷಿಯಾಗಿದ್ದಾರೆ. ಹೊಸಬರು ಸಹ ಇದ್ದಾರೆ. ಅವರೇ ಬಂದು ಇಲ್ಲಿ ಉಳಿದುಕೊಂಡಿದ್ದಾರೆ. ನಾವು ಅವರ ಯೋಗಕ್ಷೇಮ ವಿಚಾರಿಸುತ್ತಿದ್ದೇವೆ. ಬಿಜೆಡಿ, ಕಮ್ಯುನಿಸ್ಟ್ ಪಕ್ಷ ಹಾಗೂ ನಾವು ಜಂಟಿಯಾಗಿ ಅಭ್ಯರ್ಥಿ ಕಣಕ್ಕೆ ಇಳಿಸಿದ್ದೇವೆ. ಬಿಜೆಪಿ ಮಾಡುವುದು ಮಾಡುತ್ತದೆ, ನಾವು ಮಾಡೋದು ಮಾಡುತ್ತೇವೆ ಎಂದರು.



ಟ್ರಬಲ್ ಶೂಟರ್ ಕೆಲಸ ಸಮಾಪ್ತಿಯಾಗಿದೆ ಎಂದಾಗ, ಮಾಗಡಿ ಬಾಲಕೃಷ್ಣ, ಯೋಗೇಶ್ವರ್ ಇದ್ದಾರೆ. ಅವರ ಅನುಭವ, ಅವರ ಕಸ್ಟಡಿಯಲ್ಲಿ ನಾವಿದ್ದೇವೆ. ಅವರಿಗೂ ಜವಾಬ್ದಾರಿ ಇದೆಯಲ್ಲ, ನಮ್ಮ ಜಿಲ್ಲೆಯ ಎಲ್ಲಾ ಶಾಸಕರಿಗೂ ಜವಾಬ್ದಾರಿಯಿದೆ. ಎಲ್ಲರನ್ನೂ ಕಾಪಾಡಬೇಕಿರುವುದು ನಮ್ಮ ಕರ್ತವ್ಯವಲ್ಲವೇ? ಯಾರೂ ಬರಲ್ಲ ಅದು ಬೇರೆ ವಿಚಾರ. ಯಾರೂ ಬರಲು ಆಗುವುದಿಲ್ಲ, ಮುಟ್ಟಲೂ ಆಗುವುದಿಲ್ಲ, ಮಾತನಾಡುವುದಕ್ಕೂ ಆಗುವುದಿಲ್ಲ, ಅದಕ್ಕೆ ಅವಕಾಶವೂ ಇಲ್ಲ ಎಂದರು.

ಈ ಹಿಂದೆಯೂ ಗುಜರಾತ್ ಚುನಾವಣೆ ಹೊತ್ತಿನಲ್ಲೂ ನೀವು ಇದೇ ರೀತಿ ಪಕ್ಷಕ್ಕೆ ನೆರವಾಗಿದ್ದೀರಿ. ನಿಮ್ಮ ಆಸೆ ಈಡೇರಲಿದೆಯೇ ಎಂದಾಗ, ನಾನು ಇದರ ಬಗ್ಗೆ ಮಾತನಾಡುವುದಿಲ್ಲ. ಕಾದು ನೋಡೋಣ ಎಂದರು. ಇದರಿಂದ ನಿಮ್ಮ ಮುಂದಿನ ಹೆಜ್ಜೆ ನಿಮ್ಮ ಕನಸಿನ ಹತ್ತಿರ ಇರುತ್ತದೆಯೇ ಎಂದಾಗ, ನಾನೇಕೆ ಕನಸು ಕಾಣಲಿ. ಎಲ್ಲಿ ಶ್ರಮ ಇದೆಯೋ ಅಲ್ಲಿ ಫಲವಿದೆ ಎಂದರು. ಯಾವಾಗ ವಾಪಸ್ ಕರೆದುಕೊಂಡು ಹೋಗುವುದು ಎಂದಾಹ, ಅದನ್ನ ನಾವು ತೀರ್ಮಾನ ಮಾಡುತ್ತೇವೆ ಎಂದರು.

### ಅಸ್ಸಾಂನ 10 ಶಾಸಕರು ರೆಸಾರ್ಟ್‌ನಲ್ಲಿ ವಾಸ್ತವ್ಯ

ಆಪರೇಷನ್ ಕಮಲದ ಭೀತಿ ಹಿನ್ನೆಲೆಯಲ್ಲಿ ಅಸ್ಸಾಂನ 10 ಮಂದಿ ಶಾಸಕರನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚನೆಯ ಮೇರೆಗೆ ಬಿಡದಿ ಸಮೀಪದ ವಂಡರ್ ಲಾ ರೆಸಾಟ್ ್‌ಗೆ ಕರೆ ತಂದು ಇರಿಸಲಾಗಿದೆ. ತಡರಾತ್ರಿ 2 ಗಂಟೆಯ ಸುಮಾರಿನಲ್ಲಿ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನನಿಲ್ದಾಣಕ್ಕೆ ಆಗಮಿಸಿದ ಅಸ್ಸಾಂ ಶಾಸಕರುನ್ನು ಕಾಂಗ್ರೆಸ್ ಮುಖಂಡರು 8 ಇನ್ನೋವಾ ಕಾರುಗಳಲ್ಲಿ ವಂಡರ್ ಲಾ ರೆಸಾರ್ಟ್‌ಗೆ ಕರೆತಂದರು. ವಂಡರ್ ಲಾ ರೆಸಾರ್ಟ್‌ಗೆ ಆಗಮಿಸಿದ ಶಾಸಕರನ್ನು ಗುಲಾಬಿ ಹಾರ ಹಾಕಿ ಸ್ವಾಗತಿಸಿದ ಸ್ಥಳೀಯ ಕಾಂಗ್ರೆಸ್ ಮುಖಂಡರು ವಿಶ್ರಾಂತಿ ತೆಗೆದು ಕೊಳ್ಳಲು ಅವರಿಗೆ ಮೊದಲೇಕಾಯ್ದಿರಿಸಿದ ಕೊಠಡಿಗಳಿಗೆ ಕಳುಹಿಸಿದ್ದಾರೆ. ರೆಸಾರ್ಟ್ ಸುತ್ತಾ ಸ್ಥಳೀಯ ಪೊಲೀಸರಿಂದ ಬಿಗಿ ಭದ್ರತೆ ಕಲ್ಪಿಸಲಾಗಿದ್ದು, ಸಾರ್ವಜನಿಕರ ಪ್ರವೇಶಕ್ಕೆ ನಿರ್ಬಂಧ ವಿಧಿಸಲಾಗಿದೆ. ಡಿ.ಕೆ.ಶಿವಕುಮಾರ್ ಆಪ್ತ ಕಾಂಗ್ರೆಸ್ ಮುಖಂಡರಿಗೆ ಮಾತ್ರ ರೆಸಾರ್ಟ್ ಗೆ ಪ್ರವೇಶವಿದ್ದು, ಬೇರೆ ಯಾರೂ ಸುಳಿಯದಂತೆ ಎಚ್ಚರಿಕೆ ವಹಿಸಲಾಗಿದೆ.ಫೆ ಅಸ್ಸಾಂ ವಿಧಾನಸಭೆಗೆ ಮೇ ತಿಂಗಳಲ್ಲಿ ಚುನಾವಣೆ ನಡೆಯಲಿದ್ದು, ಈಗಾಗಲೇ ಕಾಂಗ್ರೆಸ್ ನ ಕೆಲಶಾಸಕರಿಗೆ ಟಿಕೆಟ್ ಕೈತಪ್ಪಲಿದೆ ಎಂಬ ಸುದ್ದಿಯ ಹಿನ್ನೆಲೆಯಲ್ಲಿ ಅಲ್ಲಿನ ಕೈಪಾಳಯದಲ್ಲಿ ಪಕ್ಷಾಂತರ ಪರ್ವ ಆರಂಭವಾಗಿದೆ. ಈಗಾಗಲೇ ಕೆಲಮಂದಿ ಕಾಂಗ್ರೆಸ್ ಪ್ರಮುಖರು ಬಿಜೆಪಿಗೆ ಸೇರ್ಪಡೆಯಾಗಿದ್ದು ಮತ್ತಷ್ಟು ಶಾಸಕರು ಬಿಜೆಪಿ ಸೇರುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಕೈ ಶಾಸಕರನ್ನು ಬಿಜೆಪಿ ಸಂಪರ್ಕಕ್ಕೆ ಸಿಗದಂತೆ ತಪ್ಪಿಸಲು ಅಸ್ಸಾಂ ಚುನಾವಣಾ ಉಸ್ತುವಾರಿ ವಹಿಸಿಕೊಂಡಿರುವ ಕೈಪಾಳಯದ ಟ್ರಬಲ್ ಶೂಟರ್ ಡಿ.ಕೆ. ಶಿವಕುಮಾರ್ ಶಾಸಕರ ರೆಸಾರ್ಟ್ ರಾಜಕಾರಣ ಆರಂಭಿಸಿದ್ದಾರೆ.

## ಏ.15ರಂದು ಕಾನ್ಶಿರಾಮ್ ಜಯಂತಿ

• **ದೇವನಹಳ್ಳಿ:** ಏಪ್ರಿಲ್ 15ರ ರಂದು ದೇವನಹಳ್ಳಿ ಸಂತೆ ಮೈದಾನದಲ್ಲಿ ಬೆಳಗ್ಗೆ 10.30ಕ್ಕೆ ಮಾನ್ಯವಾರ್ ಕಾನ್ಶಿರಾಮ್‌ಜಿ. ರವರ 92ನೇ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಗುವುದು ಎಂದು ರಾಜ್ಯ ಸಂಯೋಜಕರು ಮತ್ತು ಬೆಂಗಳೂರು ವಲಯ ಉಸ್ತುವಾರಿಗಳಾದ ಅಶೋಕ ಚಕ್ರವರ್ತಿ ತಿಳಿಸಿದರು.

ಅವರು ಪಟ್ಟಣದ ಜಿಲ್ಲಾ ಪತ್ರಿಕಾ ಭವನದಲ್ಲಿ ನಡೆದ ಸಭೆಯಲ್ಲಿ ಮಾತನಾಡಿ, ಈ ದೇಶವನ್ನು ಆಳುವ ಸಮಾಜವಾಗುವುದನ್ನು ತಮ್ಮ ಕಣ್ಣಾರೆ ಕಾಣಬೇಕೆಂದು ಬಾಬಾಸಾಹೇಬರು ಕನಸು ಕಂಡಿದ್ದರು. ಅವರ ಆ ಮಹತ್ವಾಕಾಂಕ್ಷೆಯನ್ನು ಈಡೇರಿಸಲೆಂದೇ ನಾನು ನನ್ನ ಜೀವನವನ್ನೇ ಸಮರ್ಪಿಸಿಕೊಂಡಿದ್ದೇನೆ, ಇದು ನನ್ನ ಉಸಿರಿನ ಏಕಮಾತ್ರ ಧ್ಯೇಯವಾಗಿದೆ ಆ ಕನಸು ಕೈಗೂಡದಿದ್ದರೆ ಅಂದು ನಾನು ಬದುಕಿರುವುದಿಲ್ಲ ಎಂದು ಕಾನ್ಶಿರಾಮ್ ತಿಳಿಸಿದ್ದರು ಎಂದರು. ಬೆಂಗಳೂರು ವಲಯ ಉಸ್ತುವಾರಿ ಎಸ್.ಬಿ.ಸುರೇಶ್ ಮಾತನಾಡಿ, ಬಹುಜನ ಸಮಾಜವನ್ನು ಆಳುವ ಸಮಾಜವನ್ನಾಗಿಸುವ ಮಹತ್ವಾಕಾಂಕ್ಷೆಯನ್ನು ಕಾರ್ಯಗತಗೊಳಿಸಲು ಅಗತ್ಯವಾದ ಎಲ್ಲಾ ಹಂತಗಳನ್ನೂ ಯೋಜನಾಬದ್ಧವಾಗಿ ಯಶಸ್ವಿಗೊಳಿಸಿದ್ದ ಮಾನ್ಯವಾರ್ ಕಾನ್ಶಿರಾಮ್‌ಜೀ ಯವರು ಸುವರ್ಣ ಮಹೋತ್ಸವಕ್ಕೆ 5 ದಿನ ಮುನ್ನವೇ ಪರಿನಿರ್ವಾಣ ಹೊಂದಿದರು. ಏಕೆಂದರೆ ಅವರ ಮಹತ್ವಾಕಾಂಕ್ಷೆಯ ಕನಸು ನನಸಾಗಿರಲಿಲ್ಲ. ಈ ವೈಫಲ್ಯಕ್ಕೆ ನೂರಾರು ಹೊರಗಿನ ಕಾರಣಗಳಿರಬಹುದು, ಆದರೆ, ಬಹಳಷ್ಟು ಬಾರಿ ಒಳಗಿನ ಕಾರಣಗಳೇ ಅತ್ಯಂತ ಪ್ರಬಲ ಕಾರಣಗಳಾಗಿರುತ್ತವೆ, ನಮ್ಮ ಬಯಕೆ ಅಥವಾ ಆಸೆಗಳು ಅಪ್ರಾಮಾಣಿಕವಾಗಿದ್ದರೆ, ಕನಸುಗಳನ್ನು ಈಡೇರಿಸಿಕೊಳ್ಳುವ ಶಕ್ತಿಯನ್ನು ಪಡೆದಿರುತ್ತಾರೆ, ಇದುವೇ ಮಾನ್ಯವಾರ್ ಕಾನ್ಶಿರಾಮ್ ಜೀಯವರ ಮಹತ್ತರ ಸಂದೇಶವಾಗಿದೆ. ದೇವನಹಳ್ಳಿ ಪಟ್ಟಣದ ಹಳೆ ಬಸ್‌ನಿಲ್ದಾಣದಲ್ಲಿ ಕಾನ್ಶಿರಾಮ್ ರವರ ಹುಟ್ಟುಹಬ್ಬ ಆಚರಿಸಲಾಗುತ್ತಿದ್ದು ಈ ಕಾರ್ಯಕ್ರಮಕ್ಕೆ ಸುಮಾರು 3 ಸಾವಿರಕ್ಕೂ ಅಧಿಕ ಜನ ಸೇರಲಿದ್ದಾರೆ ಎಂದು ತಿಳಿಸಿದರು.

ಬಿಎಸ್‌ಪಿ ರಾಜ್ಯ ಸಂಯೋಜಕ ಅಶೋಕ ಚಕ್ರವರ್ತಿ ಮತ್ತು ಬೆಂಗಳೂರು ವಲಯ ಉಸ್ತುವಾರಿಗಳಾದ ಎಸ್.ಬಿ.ಸುರೇಶ್, ಕೆ.ಸಿ.ನಾಗರಾಜ್, ರಾಜ್ಯ ಪ್ರಧಾನ ಕಾರ್ಯದರ್ಶಿ ನರಸಿಂಹಯ್ಯ, ಬೆಂ.ಗ್ರಾ.ಜಿಲ್ಲಾಧ್ಯಕ್ಷ ಬಲರಾಮ್ ಚಂದ್ರ, ಉಪಾಧ್ಯಕ್ಷ ಕಾರಹಳ್ಳಿ ಮುನಿರಾಜು, ಪ್ರಧಾನ ಕಾರ್ಯದರ್ಶಿ ಮಂಜುನಾಥ್, ದೇವನಹಳ್ಳಿ ತಾಲೂಕು ಅಧ್ಯಕ್ಷ ರಾಮಾಂಜಿನಪ್ಪ, ಉಪಾಧ್ಯಕ್ಷ ದೇವರಾಜ್, ಪ್ರಧಾನ ಕಾರ್ಯದರ್ಶಿ ನರಸಿಂಹ ಮೂರ್ತಿ, ಖಜಾಂಚಿ ವೆಂಕಟೇಶ್, ಕಚೇರಿ ಕಾರ್ಯದರ್ಶಿ ದರ್ಶನ್, ಟೌನ್ ಅಧ್ಯಕ್ಷ ಪ್ರಜ್ವಲ್, ಅಶೋಕ್ ಇದ್ದರು.

## ಲೀಟರ್ ಹಾಲಿಗೆ ₹1 ಪ್ರೋತ್ಸಾಹಧನ

• **ನೆಲಮಂಗಲ:** ಬೆಂಗಳೂರು ಹಾಲು ಒಕ್ಕೂಟ ಸುರೇಶ್ ಅಧ್ಯಕ್ಷರಾದ ನಂತರ ಅತಿ ಹೆಚ್ಚು ಲಾಭದಾಯಕವಾಗಿದ್ದು, ನೆಲಮಂಗಲ ವ್ಯಾಪ್ತಿಯಲ್ಲಿ ಒಂದು ವರ್ಷಕ್ಕೆ 40ಲಕ್ಷ ಲೀಟರ್ ಹಾಲು ಡೇರಿಗೆ ಸರಬರಾಜು ಮಾಡಿದ್ದು, ಪ್ರತಿ ಲೀಟರ್ ಹಾಲಿಗೆ 1 ರೂಪಾಯಿನಂತೆ 40 ಲಕ್ಷ ರೂಪಾಯಿ ಪ್ರೋತ್ಸಾಹ ಧನ ನೀಡಲಾಗುತ್ತದೆ ಎಂದು ಬಮೂಲ್ ನಿರ್ದೇಶಕ ಭವಾನಿಶಂಕರ್ ಬೈರೇಗೌಡರು ತಿಳಿಸಿದರು.

ತಾಲೂಕಿನ ಸೋಲದೇವನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಬೆಳ್ಳಿ ಹಬ್ಬದ ಸಂಭ್ರಮಾಚರಣೆ, ಹಾಲು ಕರೆಯುವ ಸ್ಪರ್ಧೆ ಹಾಗೂ ಹೈಮಾಸ್ಕ್ ಲೈಟ್ ಲೋಕಾರ್ಪಣೆ ಮಾಡಿ ಮಾತನಾಡಿದರು.

ಒಕ್ಕೂಟದಲ್ಲಿ ನಾವು ನಿರ್ದೇಶಕರಾಗಿ ಹೋದ ಹೊಸ ಬದಲಾವಣೆಗೆ ಸಾಕ್ಷಿಯಾಗಿದ್ದು ಪ್ರತಿ ದಿನ ಒಕ್ಕೂಟದಲ್ಲಿ 16.ಲಕ್ಷ ಕೆ.ಜಿ ಹಾಲು ಶೇಖರಣೆಯಾಗುತ್ತಿದ್ದು 9.71 ಲಕ್ಷ ಲೀಟರ್ ಹಾಲು ಮಾರಾಟವಾಗುತ್ತಿದೆ. ನೆಲಮಂಗಲದಲ್ಲಿ ಪ್ರತಿ ದಿನ 1.14ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಹಾಲು ಉತ್ಪಾದಕರಿಗೆ ವೈದ್ಯಕೀಯ ವೆಚ್ಚ 3.20 ಲಕ್ಷ, ಸದಸ್ಯರ ಮರಣ ಪರಿಹಾರ 17.75ಲಕ್ಷ, ವಿಶೇಷ ಪರಿಹಾರ 60ಸಾವಿರ, ಸಂಘದ ಸಿಬ್ಬಂದಿ ವೈದ್ಯಕೀಯ ವೆಚ್ಚ 11ಲಕ್ಷ, ಸಿಬ್ಬಂದಿ ನಿವೃತ್ತಿ ಪರಿಹಾರ 35ಲಕ್ಷ, ಸಾರ್ವಜನಿಕ ಕೆಲಸ ಕಾರ್ಯಗಳಿಗೆ 15ಲಕ್ಷ



ಸೇರಿದಂತೆ 10ತಿಂಗಳಲ್ಲಿ 84ಲಕ್ಷ ಅನುದಾನ ಬಳಕೆ ಮಾಡಿ ಹಾಲು ಉತ್ಪಾದಕರಿಗೆ ಸಹಕಾರಿಯಾಗಿದೆ. ರಬ್ಬರ್ ಮ್ಯಾಟ್, ಹಾಲುಕರೆಯುವ ಯಂತ್ರ ಸೇರಿದಂತೆ ವಿವಿಧ ಸಲಕರಣೆಗಳನ್ನು ಕಡಿಮೆ ವೆಚ್ಚಕ್ಕೆ ನೀಡಲಾಗುತ್ತಿದೆ. ಅಧ್ಯಕ್ಷರ ಸ್ಪಂದನೆ ರೈತರಿಗೆ ಬಹಳಷ್ಟು ಅನುಕೂಲವಾಗಲಿದೆ. ತಾಲೂಕಿನಲ್ಲಿ 15 ಹೈಮಾಸ್ಕ್ ಲೈಟ್‌ಗಳನ್ನು ಅಳವಡಿಸಲಾಗುತ್ತಿದೆ ಎಂದರು.

**ಹಾಲು ಕರೆಯುವ ಸ್ಪರ್ಧೆ:** ಸೋಲದೇವನಹಳ್ಳಿಯಲ್ಲಿ ಆಯೋಜಿಸಲಾಗಿದ್ದ ಹಾಲು ಕರೆಯುವ ಸ್ಪರ್ಧೆಯಲ್ಲಿ ಅಧಿಕ ಹಾಲು ಕರೆದ ಧರ್ಮನಾಯಕನತಾಂಡ್ಯದ ವಿಠಲ ಪ್ರಥಮ ಸ್ಥಾನ, ಮುನಿರಾಜು ದ್ವಿತೀಯ ಸ್ಥಾನ, ರವಿಕುಮಾರ್ ತೃತೀಯ ಸ್ಥಾನ ಪಡೆದಿದ್ದು ಇವರಿಗೆ ನಟ ವಿನೋಧ್ ರಾಜ್ ನಗದು ಬಹುಮಾನ ನೀಡಿದರು. ಸಂಘ ಹಾಗೂ ಬಮೂಲ್‌ನಿಂದ ಅಭಿನಂದನೆ ಸಲ್ಲಿಸಲಾಯಿತು.ಮಿಶ್ರ ತಳಿ ಕರುಗಳ ಪ್ರದರ್ಶನದಲ್ಲಿ ರಾಮಣ್ಣ ,ಮುನಿರಾಜು ಪ್ರಥಮ, ಹನುಮಂತರಾಜು,ಸಂದೀಶ್ ದ್ವಿತೀಯ, ಜಯರಾಮಯ್ಯ, ಕೃಷ್ಣಪ್ಪ ತೃತೀಯ ಸ್ಥಾನ ಪಡೆದಿದ್ದು ಪಶುಸಂಗೋಪನಾ ಇಲಾಖೆಯಿಂದ ಬಹುಮಾನ ವಿತರಣೆ ಮಾಡಲಾಯಿತು.

**ಹಾಲು ಉತ್ಪಾದಕರಿಗೆ ಬೆಳ್ಳಿ ನಾಣ್ಯ:** ಡೈರಿಯ ಆವರಣದಲ್ಲಿ ಹೈಮಾಸ್ಕ್ ದೀಪವನ್ನು ಬಮೂಲ್ ನಿರ್ದೇಶಕರು ಲೋಕಾರ್ಪಣೆ ಮಾಡಿದರು.

ಮಾನ್ಯ ಗೌರವಾನ್ವಿತ 1ನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ನೆಲಮಂಗಲ
ಸಿ.ಮಿಸ್.ನಂ. 125/2026

ಅಪೀಲುದಾರರು: 1. ಬಿ. ರಾಜಣ್ಣ, ಬಿನ್ ಲೇಟ್ ಬೈಲಪ್ಪ, ವಯಸ್ಸು ಸುಮಾರು 56 ವರ್ಷಗಳು, 2. ಬಿ.ಎಸ್. ಹನುಮಂತರಾಯಪ್ಪ, ಬಿನ್ ಲೇಟ್ ಬೈಲಪ್ಪ, ವಯಸ್ಸು ಸುಮಾರು 53 ವರ್ಷಗಳು, ಇಬ್ಬರೂ ವಾಸ: ಶರಪುರಪಾಳ್ಯ ಗ್ರಾಮ, ಬ್ಯಾಡರಹಳ್ಳಿ ದಾಖಲೆ, ಕಸಬಾ ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. -ವಿರುದ್ಧ-

ಎದುರುದಾರರು: ಮಾನ್ಯ ಕಮೀಷನರ್ ರವರು ಜನನ ಮತ್ತು ಮರಣ ನೊಂದಾಣಾಧಿಕಾರಿಗಳು, ಮುನಿಸಿಪಲ್ ಕೌನ್ಸಿಲ್, ನೆಲಮಂಗಲ [ನಗರಸಭೆ ನೆಲಮಂಗಲ], ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಸಾರ್ವಜನಿಕ ಪ್ರಕಟಣೆ

1 ಮತ್ತು 2ನೇ ಅರ್ಜಿದಾರರ ತಾಯಿಯವರಾದ ಗಂಗಬೈರಮ್ಮ ಕೋಂ ಲೇಟ್ ಬೈಲಪ್ಪ ರವರು ದಿನಾಂಕ 15.03.1998 ರಂದು ಶರಪುರಪಾಳ್ಯ ಗ್ರಾಮ, ಬ್ಯಾಡರಹಳ್ಳಿ ದಾಖಲೆ, ಕಸಬಾ ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಮರಣ ಹೊಂದಿದ್ದು ಮರಣ ದಿನಾಂಕವನ್ನು ನೊಂದಣಿ ಮಾಡಿಕೊಂಡು ಮರಣ ಪ್ರಮಾಣ ಪತ್ರವನ್ನು ಮಾಡಿಕೊಡಲು ಆದೇಶ ಕೋರಿ ಮೇಲ್ಕಂಡ ಮಾನ್ಯ ಗೌರವಾನ್ವಿತ ನ್ಯಾಯಾಲಯದಲ್ಲ ದಾಖಲು ಮಾಡಿದ್ದು ಇದಕ್ಕೆ ಹಿತಾಸಕ್ತಿದಾರರು ಯಾರಾದರೂ ಇದ್ದರೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಲು ಇಚ್ಚಿಸಿದ್ದಲ್ಲಿ ದಿನಾಂಕ: 28/04/2026 ರಂದು ಮಾನ್ಯ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಆಕ್ಷೇಪಣೆಗಳನ್ನು ಸಲ್ಲಿಸಬೇಕು ಇಲ್ಲದೇ ಹೋದರೆ ಏಕಪಕ್ಷೀಯವಾಗಿ ಪ್ರಕರಣವನ್ನು ತೀರ್ಮಾನಿಸಲಾಗುವುದು.

ದಿನಾಂಕ: 13/03/2026 ರಂದು ನ್ಯಾಯಾಲಯದ ಆದೇಶದಂತೆ ಈ ಮೂಲಕ ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ, ಮಾನ್ಯ ಗೌರವಾನ್ವಿತ 1ನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ನೆಲಮಂಗಲ

ಅರ್ಜಿದಾರರ ಪರ ವಕೀಲರು: ಶ್ರೀ. ರೇವಣ್ಣ ಬಿ.ಹೆಚ್. ರಸ್ತೆ, ನೆಲಮಂಗಲ– 562 123.

---

**IN THE COURT OF THE HON'BLE PRL. SENIOR CIVIL JUDGE AND C.J.M. AT TUMAKURU**
**O.S.No. 219/2025**

**Plaintiff:** D. Ganesh Shankar **-V/s-**
**Defendants:** Chief Editor, Vijaywani Kannda Daily News Paper and others. **Summons to defendant No.4 in the above case.** D-4: Saleem Pasha S/o Zameer Pasha, Aged about 40 years, Ex. Employee of the plaintiff Company, R/at Zameer Building, Shanthinagara Main Road, Tumakuru City-572201.

**PAPER PUBLICATION**

WHEREAS, the plaintiff has filed the above suit against the defendants as reliefs sought in the plaint. The plaintiff had taken steps against the **Defendant No.4** by way of ordinary summons and RPAD. But even though the **Defendant No.4** is residing in the same address as given in the cause title, they are deliberately avoiding to take notice/summons of this Hon'ble Court. Hence the summons issued by way of paper publication.

Take this notice that you are hereby called upon to appear before the Hon'ble, Prl. Senior Civil Judge and C.J.M. at Tumakuru on 21-04-2026 at 11.00 a.m. Therefore, you are hereby informed to appear on the said date., Failing which the case shall be heard and determined in your absence.

Give under my hand and the seal of the court on this 11 Day of March 2026 at Tumakuru.

By Order of the Court,
Sd/- **Senior Sheristedar,**
Senior Civil Judge & C.J.M. Court, Tumakuru.
Advocate for Plaintiff
Sd/- **G.K. Srinivas,** Advocate.
G.K. Law Chambers, Shop #10, 1st Floor, 1st Block, HMS Shopping Complex, Behind Ashoka Road, Tumakuru. M. No.9448061155.

---

ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ನೆಲಮಂಗಲ
ಸಿ.ಮಿಸ್.ನಂ. 99/2026

ಅಪೀಲುದಾರರು: 1. ಶ್ರೀಮತಿ. ಮುನಿಯಮ್ಮ, ಕೋಂ. ಲೇಟ್. ಮುನಿಬೈರಯ್ಯ, ವಯಸ್ಸು ಸುಮಾರು 80 ವರ್ಷಗಳು, ವಾಸ: ಹೊಸ ಎ.ಕೆ. ಕಾಲೋನಿ, ತ್ಯಾಮಗೊಂಡ್ಲು, ತ್ಯಾಮಗೊಂಡ್ಲು ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. 2. ಶ್ರೀ ಹನುಮಂತರಾಯಪ್ಪ, ಬಿನ್ ಲೇಟ್ ಮುನಿಬೈರಯ್ಯ, ವಯಸ್ಸು ಸುಮಾರು 55 ವರ್ಷಗಳು, ವಾಸ: ಮಾಚನಹಳ್ಳಿ, ಬಿಲ್ಲನಕೋಟೆ ಅಂಚೆ, ಸೋಂಪುರ ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. 3. ಶ್ರೀ ಗಂಗರಾಜು, ಎಂ, ಬಿನ್ ಲೇಟ್ ಮುನಿಬೈರಯ್ಯ, ವಯಸ್ಸು ಸುಮಾರು 52 ವರ್ಷಗಳು, ವಾಸ: 5ನೇ ಕ್ರಾಸ್, 1ನೇ ಮುಖ್ಯ ರಸ್ತೆ, ಗಜಾನನ ನಗರ, ಹೆಗ್ಗನಹಳ್ಳಿ ಕ್ರಾಸ್, ಬೆಂಗಳೂರು ಉತ್ತರ, ಬೆಂಗಳೂರು –560091. 4. ಶ್ರೀಮತಿ ಭಾಗ್ಯಮ್ಮ, ಬಿನ್ ಲೇಟ್ ಮುನಿಬೈರಯ್ಯ, ಕೋಂ. ಮುನಿಲಕ್ಕಯ್ಯ, ವಯಸ್ಸು ಸುಮಾರು 50 ವರ್ಷಗಳು, ವಾಸ: ಬ್ಯಾತ ಗ್ರಾಮ ಮತ್ತು ಅಂಚೆ, ಬೆಂಗಳೂರು ಉತ್ತರ ತಾಲ್ಲೂಕು. 5. ಶ್ರೀ ಚನ್ನಬೈರಯ್ಯ, ಬಿನ್ ಲೇಟ್ ಮುನಿಬೈರಯ್ಯ, ವಯಸ್ಸು ಸುಮಾರು 48 ವರ್ಷಗಳು, ವಾಸ: 1ನೇ ಕ್ರಾಸ್, ನರಸಿಂಹಸ್ವಾಮಿ ಲೇಔಟ್, ಲಗ್ಗೆರೆ, ಬೆಂಗಳೂರು ಉತ್ತರ, ಪೀಣ್ಯ ಸ್ಮಾಲ್ ಇಂಡಸ್ಟ್ರೀಯಲ್ ಸಬ್–ಡಿವಿಜನ್, ಬೆಂಗಳೂರು. 6. ಶ್ರೀ. ಬೈಲಾಂಜಿನಪ್ಪ, ಬಿನ್ ಲೇಟ್ ಮುನಿಬೈರಯ್ಯ, ವಯಸ್ಸು ಸುಮಾರು 42 ವರ್ಷಗಳು, ವಾಸ: ಮಾಚನಹಳ್ಳಿ, ಬಿಲ್ಲನಕೋಟೆ ಅಂಚೆ, ಸೋಂಪುರ ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

-ವಿರುದ್ಧ-

ಎದುರುದಾರರು: ಮಾನ್ಯ ತಹಶೀಲ್ದಾರ್ ರವರು, ಜನನ ಮತ್ತು ಮರಣ ನೊಂದಾಣಾಧಿಕಾರಿಗಳು, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಸಾರ್ವಜನಿಕ ಪ್ರಕಟಣೆ

1ನೇ ಅರ್ಜಿದಾರರ ಮಾವನವರಾದ, 2 ರಿಂದ 6ನೇ ಅಜ್ಜನವರಾದ ಶ್ರೀ. ಬೈಲಾಂಜಿನಪ್ಪ, ಬಿನ್ ಚಿಕ್ಕಬೈರಯ್ಯ ರವರು ದಿನಾಂಕ 22.06.1965 ರಂದು ಮಾಚನಹಳ್ಳಿ ಗ್ರಾಮ, ಸೋಂಪುರ ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಮರಣ ಹೊಂದಿದ್ದು ಮರಣ ದಿನಾಂಕವನ್ನು ನೊಂದಣಿ ಮಾಡಿಕೊಂಡು ಮರಣ ಪ್ರಮಾಣ ಪತ್ರವನ್ನು ಮಾಡಿಕೊಡಲು ಆದೇಶ ಕೋರಿ ಮೇಲ್ಕಂಡ ಮಾನ್ಯ ಗೌರವಾನ್ವಿತ ನ್ಯಾಯಾಲಯದಲ್ಲ ದಾಖಲು ಮಾಡಿದ್ದು ಇದಕ್ಕೆ ಹಿತಾಸಕ್ತಿದಾರರು ಯಾರಾದರೂ ಇದ್ದರೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಲು ಇಚ್ಚಿಸಿದಲ್ಲಿ ದಿನಾಂಕ: 24/04/2026 ರಂದು ಮಾನ್ಯ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಆಕ್ಷೇಪಣೆಗಳನ್ನು ಸಲ್ಲಿಸಬೇಕು ಇಲ್ಲದೇ ಹೋದರೆ ಏಕಪಕ್ಷೀಯವಾಗಿ ಪ್ರಕರಣವನ್ನು ತೀರ್ಮಾನಿಸಲಾಗುವುದು.

ದಿನಾಂಕ: 13/03/2026 ರಂದು ನ್ಯಾಯಾಲಯದ ಆದೇಶದಂತೆ ಈ ಮೂಲಕ ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ, ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ನೆಲಮಂಗಲ

ಅರ್ಜಿದಾರರ ಪರ ವಕೀಲರು: ಶ್ರೀ. ಶ್ರೀನಿವಾಸಮೂರ್ತಿ.ಟಿ ಕೋರ್ಟ್ ಕಾಂಪ್ಲೆಕ್ಸ್, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

---

ಗೌರವಾನ್ವಿತ 6ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು
ಆರ್.ಎ.ನಂ.66/2018

ಮೇಲ್ಮನವಿದಾರರು: ಪುಟ್ಟರಾಜಮ್ಮ @ ಪುಟ್ಟತಾಯಮ್ಮ –/ವಿರುದ್ಧ/– ಎದುರುದಾರರು: ಸೋಮಶೇಖರಯ್ಯ ಮತ್ತು ಇತರರು. 6ನೇ ಎದುರುದಾರರು: ಸಿದ್ದಗಂಗಮ್ಮ ಕೋಂ. ಶಿವಲಿಂಗಯ್ಯ ಬಿನ್ ಸಿದ್ದಲಿಂಗಪ್ಪ ವಯಸ್ಸು 58 ವರ್ಷ ವಾಸ: ಅಗಲಗುಂಟೆ, ಬೆಳ್ಳಾವಿ ಹೋಬಳಿ, ತುಮಕೂರು ತಾಲ್ಲೂಕು.

ಪ್ರಕಟಣೆ

ಮೇಲ್ಮನವಿದಾರರಾದ ಪುಟ್ಟರಾಜಮ್ಮ ರವರು ಎದುರುದಾರರು ಮತ್ತು ನಿಮ್ಮ ವಿರುದ್ಧ ತುಮಕೂರು 6ನೇ ಅಧಿಕ ಜಿಲ್ಲಾ ಸತ್ರ ನ್ಯಾಯಾಲಯದಲ್ಲಿ ಆರ್.ಎ. 66/2018 ರಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಘನ ನ್ಯಾಯಾಲಯದಿಂದ ನಿಮಗೆ ನೊಂದಾಯಿತ ಅಂಚೆ ಮೂಲಕ ನೋಟೀಸನ್ನು ನೀಡಿದರು ಸಹಾ ನೋಟೀಸನ್ನು ತೆಗೆದುಕೊಳ್ಳದೇ ಇರುವುದರಿಂದ ತಾವಾಗಲೀ ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ದಿನಾಂಕ: 15–04–2026 ರಂದು ಬೆಳಗ್ಗೆ 11:00 ಗಂಟೆಗೆ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸುವ ಸಲುವಾಗಿ ಈ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗಿದೆ ಇಲ್ಲವಾದರೇ ನಿಮ್ಮ ಗೈರು ಹಾಜರಿಯಲ್ಲಿ ಮೇಲ್ಮನವಿಯನ್ನು ಇತ್ಯರ್ಥ ಪಡಿಸಲಾಗುತ್ತದೆ.

ನ್ಯಾಯಾಲಯದ ಮುದ್ರೆಯೊಂದಿಗೆ ದಿನಾಂಕ: 13–03–2026 ರಂದು ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ,
ಸಹಿ/– **CAO,** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು
ಸಹಿ/– **ಷಡಾಕ್ಷರಯ್ಯ** ಬಿ.ಎ., ಎಲ್.ಎಲ್.ಬಿ., ವಕೀಲರು. ಕರಿಬಸವ ಸ್ವಾಮಿ, ಮಠ ಕಾಂಪ್ಲೆಕ್ಸ್, ಹೊರಪೇಟೆ, ತುಮಕೂರು.
ಮೊ.ನಂ. 9480089177

---

## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಸೀತಮ್ಮ ಮತ್ತು ಇತರರು ಹೇಳಿಕೆಯ ಮೇರೆಗೆ ಅರ್ಜಿದಾರರ ತಾಯಿಯವರಾದ ಶ್ರೀಮತಿ ಲೇಟ್ ಗೋಪಮ್ಮ ಕೋಂ ಶ್ರೀ ಲೇಟ್ ದೊಡ್ಡಮುನಿಯಪ್ಪ ರವರು ದಿನಾಂಕ: 26/08/2006 ರಂದು ಸಾತನೂರು ಗ್ರಾಮ, ಬಾಗಲೂರು ಅಂಚೆ, ಜಾಲ ಹೋಬಳಿ, ಯಲಹಂಕ ತಾಲ್ಲೂಕ್, ಬೆಂಗಳೂರು ನಗರ ಜಿಲ್ಲೆ ಮತ್ತು ಕರ್ನಾಟಕ –562157 ಇಲ್ಲಿ ನಿಧನರಾಗಿರುತ್ತಾರೆ. ಸದರಿಯವರ ಮರಣ ಪ್ರಮಾಣ ಪತ್ರವನ್ನು ಪಡೆಯಲು ಪ್ರಧಾನ ಸಿವಿಲ್ ನ್ಯಾಯಧೀಶರ ನ್ಯಾಯಲಯ ಮತ್ತು ಜೆ.ಎಂ.ಎಫ್.ಸಿ ದೇವನಹಳ್ಳಿ ಯಲ್ಲಿ ಸಿ.ಮಿಸ್ ನಂ.171/2026 ರಂತೆ ಅರ್ಜಿಯನ್ನು ಸಲ್ಲಿಸಿದ್ದು ಸದರಿ ಅರ್ಜಿಯು ದಿನಾಂಕ : 25/4/2026 ರಂದು ಬೆಳಗ್ಗೆ 11.00 ಘಂಟೆಗೆ ವಿಚಾರಣೆಯಲ್ಲಿರುತ್ತದೆ. ಸದರಿ ಅರ್ಜಿಯ ಬಗ್ಗೆ ಯಾವುದೇ ತಕರಾರು ಇದ್ದಲ್ಲಿ ಮೇಲ್ಕಂಡ ಘನ ನ್ಯಾಯಲಯದಲ್ಲಿ ಸದರಿ ದಿನದಂದು ಹಾಜರಾಗಲು ಸೂಚಿಸಿದೆ.

ನ್ಯಾಯಾಲಯದ ಆದೇಶದ ಮೇರೆಗೆ ಸಹಿ/– ಚೀಫ್ ಮಿನಿಸ್ಟೀರಿಯಲ್ ಆಫೀಸರ್, ಸಿವಿಲ್ ನ್ಯಾಯಾಧೀಶರ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ದೇವನಹಳ್ಳಿ
ಶ್ರೀ ಎಂ. ರಂಗೇ ಗೌಡ, ವಕೀಲರು

---

## CHANGE OF NAME

I, **MANJUNATH M KASI (MANJUNATH MUNIYAPPA KASI),** S/o. MUNIYAPPA, residing at @ No. 87, 3rd Cross, 1st Main, Chikkajala, Bengaluru-562157, do hereby declare that I have changed my name from **MANJUNATHA .M (MANJUNATHA MUNIYAPPA)** to **MANJUNATH M KASI (MANJUNATH MUNIYAPPA KASI),** vide affidavit dated 12.03.2026, sworn to before Sumithra .N, Advocate & Notary, Govt. of India, Bengaluru.

---

## ಸಾರ್ವಜನಿಕ ಪ್ರಕಟಣೆ

ಅರ್ಜಿ ಸಲ್ಲಿಸಿದವರು – ರಾಕೇಶ್ ಸೈಮನ್ ಆರ್ ಬಿನ್. ರಮೇಶ್ ವಿಲ್ಸನ್ ಸೈಮನ್ ವಯಸ್ಸು 41 ವರ್ಷಗಳು, ವಾಸ : ನಂ.80, ರಾಜಾಸ್ ಸ್ಟ್ರೀಟ್, ಬನ್ನೆರುಘಟ್ಟ ರಸ್ತೆ, ಕೋದಂಡರಾಮ ಮಂದಿರದ ಹತ್ತಿರ, ಹುಳಿಮಾವು, ಬೆಂಗಳೂರು ದಕ್ಷಿಣ, ಬೆಂಗಳೂರು 560076, ಅಗ್ನಿಸ್ ಸೈಮನ್ ಆರ್ ಕೋಂ. ರಮೇಶ್ ವಿಲ್ಸನ್ ಸೈಮನ್ ರವರು ದಿನಾಂಕ 04/03/2010 ರಂದು ನಂ.80, ರಾಮ ದೇಸ್ಥಾನದ, ಬಿ ಜಿ ರೋಡ್, ಹುಳಿಮಾವು, ಬೆಂಗಳೂರು 560076, ಈ ವಿಳಾಸದಲ್ಲಿ ನಿಧನರಾದ ಕಾರಣ ಮೃತ್ಯು ಪ್ರಮಾಣಪತ್ರಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ. ಯಾರಿಗಾದರೂ ಯಾವುದೇ ಆಕ್ಷೇಪಣೆಗಳಿದ್ದರೆ, ಅವರು ದಿನಾಂಕ : 16.03.2026 ರಂದು ಬೆಳಗ್ಗೆ 11.00 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಬಹುದು. ಹಾಜರಾಗದಿದ್ದರೆ, ವಿಷಯವನ್ನು ಏಕಪಕ್ಷೀಯವಾಗಿ ವಿಚಾರಣೆ ಮಾಡಲಾಗುವುದು. ಪ್ರಕರಣ ಸಂಖ್ಯೆ ಕ್ರಿ ಮಿಸ್. ಸಂಖ್ಯೆ. 50161/2026.

ನ್ಯಾಯಾಲಯದ ಆದೇಶದಿಂದ
ಸಹಿ/– ಶಿರಸ್ತೇದಾರ
34ನೇ ಎ.ಸಿ.ಜೆ.ಎಂ., ಬೆಂಗಳೂರು ನಗರ
ಲತಾ. ಎನ್., ವಕೀಲರು

---

**IN THE COURT OF THE SENIOR CIVIL JUDGE AND J.M.F.C. AT SHIDLAGATTA**
**Crl Miss. No.1/2026**

**Petitioner: 1. Smt, Puttamma** W/o Late Muniyappa M, Aged about 70 years, **2. Sri Chendra Shekar M** S/o Late Muniyappa M Aged about: 60 years, **3. Sri, Shankar Narayana M** S/o Late Muniyappa M Aged about :46 years, **4.Sri, Mahesh M** S/o Late Muniyappa M Aged about:42 years,R/at: Ward No 13,K E B opposite Kurubarapete, Sidlaghatta town and taluk, Chickballapur District **-V/S-**
**Respondent: The Commissioner** Births & Deaths,Shidlagatta Town and Taluk, Chickballapur District.

**DRAFT PAPER PUBLICATION**

The petitioners has filed this petition for grant of death certificate of their Grand Mother by name Channamma W/o Late Munishamappa Died on 16.12.1997 at Ward No 13, K E B opposite Kurubarapete Shidlagatta Town and taluk and Chickballapur District. The respondent has given non availability certificate in respect of the death of Channamma W/o Late Munishamappa. If any persons have any objections regarding the issue of death certificate, they can appear before the Hon'ble Court in person or duly instructed by his advocate **on 09.04.2026 at 11 O'clock** If they failed to appear, the Hon'ble Court has proceed and decide the matter according to law. Given under my hand and seal of the court, this 6th Day of March 2026

**By order of the Court**
**Sheristhedar, Sr Civil Judge & JMFC**
**Sidlaghatta**
Advocate for petitioner : **Sri Ananth B.S** Advocate,Chickballapur 562101.

---

**IN THE COURT OF THE PRINCIPAL SENIOR CIVIL JUDGE AT ANEKAL**
**O.S. No. 444/2016**

**BETWEEN: SMT. MANJULA** & OTHERS ... **PLAINTIFFS -V/s-**
**AND: SMT. RATHNAMMA** AND OTHERS ... **DEFENDANTS**

**1. Smt. Rathnamma,** Aged about 70 years, D/o Late. Chinnappa, **2. Smt. Rathnamma,** W/o Late Yellappa, Aged about 48 years, **3.Sri. Manjunath,** Aged about 33 years, S/o Late Yellappa, **4. Srinivas,** Aged about 31 years, S/o Late Yellappa, **5. Smt. Gowramma,** Aged about 68 years, D/o Late Chinnappa, **6. Sri. Jayaram,** Aged about 65 years, S/o Late Chinnappa, **7. Sri. Manjunath,** Aged about 31 years, S/o Jayaram, **8. Sri. Srinivas,** S/o Jayaram, aged about 30 years, **9. Sri. Ramachandra,** S/o Late Chinnappa, Aged about 60 years, **10. Smt. Shashikala,** D/o Ramachandra, Aged about 30 years, **11. Sri. Deepraj,** S/o Ramachandra, Aged about 25 years, **12. Sri. Sampangiramaiah @ Sampangi,** Aged about 50 years, S/o Late Chinnappa, **13. Sri. Arun Kumar,** S/o Sampangiramaiah @ Sampangi, Aged about 21 years, **14. Ashwini,** D/o Sampangiramaiah @ Sampangi, Aged about 20 years, **15. Smt. Muniyamma,** Aged about 68 years, D/o Lakshmaiah, **16. Sri. Doddamuniswamy,** S/o Late Lakshmaiah, Aged about 64 years, **17. Sri. Chikka Muniswamy,** S/o Late Lakshmaiah, Aged about 60 years, **18. Smt. Nanjamma,** D/o Late Lakshmaiah, Aged about 52 years, **19. Sri. Muniraju,** S/o Munirathnamma, Aged about major, Grandson of late Lakshmaiah, **20. Smt. Munivenkatamma,** Aged about 44 years, D/o Late Lakshmaiah, **21. Smt. Munisanjeevamma,** Aged about 38 years, D/o Late Lakshmaiah, Defendants 1 to 21 are Residing at Kithiganahalli Village, Attibele Hobli, Anekal Taluk, Bangalore Urban Dist. **22. Sri. N.H. Bhaskar Reddy,** S/o N.H.P. Shiva Reddy, Aged about 40 years, R/at No.C-17, Kuduremukha Colony, Koramangala, Bangalore-34. **23. Sri. N.H.R. Prasad Reddy,** S/o N.H.P. Shiva Reddy, Aged about 52 years, Residing at No.51, HAL 2nd Stage, Indiranagar, Bangalore-560 038. **25. M/s Naple Infrastructure Pvt. Ltd.,** Having it's registered office at Narayanadath Tiwari Bhavan, 219, Deenadayal Upadyya Marg, New Delhi. Represented by it's Authorized Signatory Deepak Agarwal, Major in age, Represented by it's Director, Ankith Agarwak, Major in age.

**SUIT SUMMONS TO DEFENDANT NO. 1 TO 23 & 25 UNDER ORDER 5 RULE 20 (1)(A) OF CPC**

WHEREAS the plaintiffs filed the said suit against the defendants for the relief of partition and other reliefs in O. S. No. 444/2016. You are hereby summoned to appear in this Hon'ble Principal Senior Civil Judge in person or by an advocate duly instructed on **18-07-2026** at 11:00 A.M. to answer the claim. Take notice that in default of your appearance on the day above mentioned the matter will be heard and decided in your absence as per law.

**SCHEDULE**

All the piece and parcel of land bearing Sy. No. 57/1B, measuring 22.08 Guntas, situated at, Kithiganahalli Village, Attibele Hobli, Anekal Taluk, Bangalore District and bounded on:
East by: Property Belongs to Bhaskar Reddy,
West by: Property Belongs to Bhaskar Reddy,
North by: Property Belongs to Bhaskar Reddy,
South by: Property Belongs to Bhaskar Reddy

Given under my hand and the seal of this court on 09-03-2026.

By order of the court, Chief Ministerial Officer, Senior Civil Judge & JMFC Court at Anekal.
Advocate For Plaintiffs: **R. SHIVA KUMAR**
No.1, RSK Associates, STB Complex, Attibele Road, Bangalore.

---

**BEFORE THE DEPUTY COMMISSIONER, BANGALORE URBAN DISTRICT AT BANGALORE**
**K SC & ST (A). 80/2025**

**BETWEEN: Venkatamma** & others Represented by GPA Holder Chandranna **...Petitioners**
**AND: Venkatesha** and others **...Respondent**

**SUMMONS/NOTICE TO RESPONDENT NO. 1 TO 12**

**R1. Venkatesha,** S/o. Muthanjanappa, aged major. R/at No. Rampura Village, Bidarahalli Hobli, Hoskote Taluk, Bangalore East Taluk, **2) Kallappa,** S/o. Muthappa Rampura Village, Bidarahalli Hobli, Hoskote Taluk, Bangalore East Taluk, **3) Jayamma,** W/o. S. Sonappa, D/o. Kaverappa, aged about 61 years, R/at Rampura Village, Bidarahalli Hobli, Veergonagara Post, Bangalore East Taluk, **4) Nagaraj** S/o. Late. Hanumantappa, aged about 58 years, **5. Subramani,** Late Hanumantappa, aged about 51 years, **6. Krishnamurthy,** Late. Hanumantappa, aged about 47 years, **7. R.K. Doddasubbarayappa,** S/o. Late. Kaverappa, aged about 73 years, **8. R. K. Venkateshappa,** Late. Kaverappa, aged about 71 years, **9. R.K. Subbarayappa @ ChikkaSubarayappa,** Late. Kaverappa, aged about 73 years, **10. SRI. R.V. Srinivas,** S/o. Venkateshappa, aged about 50 years, **11. SRI. R.V. Manjunatha,** S/o. Venkateshappa, aged about 47 years, **12. SRI. R.V. Lokesha,** S/o. Venkateshappa, aged about 40 years, The Respondent No. 4 to 12 are R/at Rampura Village, Bidarahalli Hobli, Virgonagar Post, Bengaluru East Taluk, Bengaluru- 560 049.

Whereas the above named Petitioner's have instituted the above Petition against you for Restoration/ Resumption of Land granted in favour of their forefather in Sy.No.22 of Vaderahalli Village, Bidarahalli Hobli, K.R. Puram Taluk. You are hereby summoned to appear in this court in person or by pleader on **09/04/2026** at **03:00 PM** to answer the same. Failing which the same will be decided in your absence.

**PETITION SCHEDULE PROPERTY**

All that piece and parcel of the property bearing Old Sy. No. 15 later renumbered as Survey No. 22, Vaderahalli Village, Bidarahalli Hobli, Hoskote Taluk, Bangalore South, measuring to an extent of 3 Acres 01 guntas: **East by:** Sy.No.23, **West by:** Hanagalpura Road, **North by:** Sy.No. 25 & Sy.no. 26, **South by:** Sy. no. 19.

Given under my hand and the seal of the Court on this 09/03/2026.

By order of the Court, Deputy Commissioner, Bengaluru Urban District, Bengaluru
Advocate for petitioner: **GIRI. K**

---

**IN THE COURT OF THE PRL. CIVIL JUDGE AND JMFC AT ANEKAL**
**C.Misc. No.394/2026**

**BETWEEN: 1. Smt. Gowramma,** W/o Late Narayanappa, aged about 72 years, R/at Sarjapura Village, Sarjaupra Hobli, Anekal Taluk, Bangalore District. **2. Smt.Lakshmamma,** W/o Rajappa, aged about 55 years, R/at Ittanguru Village, Sarjaupra Hobli, Anekal Taluk, Bangalore District. ... **PETITIONERS**
**AND: The Tahasildhar,** Anekal Taluk ... **RESPONDENT**

**NOTICE**

Whereas the petitioners have filed the above petition for seeking the death certificate of petitioner's grandfather namely Shettappa S/o Late Chikkavenkatappa who was died on 10-08-1986 at Sarjapura Village, Sarjapura Hobli, Anekal Taluk, Bangalore District before the Prl Civil Judge and JMFC at Anekal, whereas the above petition is fixed for hearing date on **23/04/2026** at **11:00 A.M** if anybody interest in this matter regard to appear in this court in person or by a pleader to file objections the same of you failing which the petition will be disposed on enquiry.

Given under my hand and seal of the Court on this 13/03/2026

By order of the Court, Sheristedar, Civil Judge Jr.Dvn and J.M.F.C Court, Anekal

**SRI. T.M. KRISHNAPPA,** Advocate
Office at 1st Floor, Yallappa Building, Attibele Main Road, Anekal Town, Anekal Taluk, Bangalore District.

---

**BEFORE THE MOTOR ACCIDENT CLAIMS TRIBUNAL AT BANGALORE**
**MVC NO. 3710/2024 (SCCH-25)**

**SRI. RUKMANGADA** .....**PETITIONER**
**SRI. GOWDA H.M. AND ANOTHER** ........**RESPONDENTS**

**NOTICE TO PROPOSED RESPONDENT NO.4.**

**Sri. Shantharaj** S/o Father Name not known, Aged Major, R/at No. 325, 2nd Floor, 7th Main 3th Cross, Viveknagar Layout, Viveknagar, Bangalore-550047. ( Insured of the Maruthi Car bearing Reg. No. KA-03-AC-4333)

WHEREAS the petitioner has filed the above petitions under section 166 of the IMV act, in the court of the SCCH-25 at Bangalore for claiming compensation of **Rs. 6,50,000/-** with interest 12% accident on 26-04-2024 at about 12.00 P.M. On NH-48, Tumkur-Bangalore Road, Near Veerananjipura gate, Kasaba Hobli, Nelamangala Taluk Bangalore Rural District. against the respondents. Your vehicle bearing Reg. No. KA-03-AC-4333 Maruthi Car involved in the accident You are hereby summoned to appear before this Hon'ble either in person or through the pleader to contest the above case on dated **22/04/2026 at 11.00 AM,** failing which the above petition will be heard and decided in your absence.

Given under my hand and seal of this court on the **04th day of march 2026.**

**VENKATESHAIAH, Advocate,**
No. 39/2, 6th Floor, A.S.V.N.V.S. Complex, Opp. State Bank of Mysore, (Old Kids Camp) K.G. Road, Bangalore - 560009, PH: 9448192793.

---

**BEFORE THE DEPUTY COMMISSIONER BANGALORE URBAN DISTRICT AT BANGALORE**
**K SC & ST (A). 78/2025**

**BETWEEN: Venkatamma** & others Represented by GPA Holder Chandranna... **PETITIONERS**
**AND: 1. Muniswamy Naidu** S/o. Eshwar Naidu and others... **RESPONDENT**

**SUMMONS/NOTICE TO RESPONDENT No. 1 & 13**

**R1. Munishama Naidu,** S/o. Eshwara Naidu, R/at. Agrahara, Kuyathanapalli Hobli, Krishnagiri, Tamil nadu. **R2. Kaverappa,** S/o Late Subbanna, aged major, R/at Rampura Village, Bidarahalli Hobli, Hoskote Taluk ( presently K.R. Puram East Taluk), Bangalore Urban District. **R3. Syed Mohammed Saheb,** S/o. late Syed Deewan Saheb, R/at Jageesh Belahalli Village, Yelahanka Hobli, Bangalore. **R4. Jacuvappa @ C. Jacob,** S/o. Chinnappa, R/at Kempapura Village, Dakalle Mariyannapalya, H.A. Farm Post, Krishnarajapura Hobli, Bangalore 560024. **R5. Jayamma,** W/o. S. Sonappa, D/o. Kaverappa, R/at Rampura Village, Bidarahalli Hobli, Veergonagara Post, Bangalore East Taluk. **R6. Nagaraj,** S/o. Late Hanumantappa, aged about 58 years. **R7. Subramanya,** Late Hanumantappa, aged about 51 years. **R8. Krishnamurthy,** Late Hanumantappa, aged about 47 years. **R9. R. K. Doddasubbarayappa,** S/o. Late Kaverappa, aged about 73 years. **R10. R. K. Venkateshappa,** Late Kaverappa, aged about 71 years. **R11. R. K. Subbarayappa @ ChikkaSubarayappa,** Late Kaverappa, aged about 73 years. **R12. SRI. R.V. Srinivas,** S/o. Venkateshappa, aged about 50 years. **R13. SRI. R.V. Manjunatha,** S/o. Venkateshappa, aged about 47 years. The Respondent No. 12 & 13 are R/at Rampura Village, Bidarahalli Hobli, Virgonagar Post, Bengaluru East Taluk, Bengaluru 560049.

Whereas the above named Petitioner's have instituted the above Petition against you for Restoration/Resumption of Land granted in favour of their forefather in Sy. 21 of Vaderahalli Village, BIdarahalli Hobli, K. R. Puram Taluk. You are hereby summoned to appear in this court in person or by pleader on **09-04-2026** at 03:00 P.M. to answer the same. Failing which the same will be decided in your absence.

**PETITION SCHEDULE PROPERTY**

All that piece and parcel of the property bearing Old Sy. No. 15 later renumbered as Survey No. 21, Vaderahalli Village, Bidarahalli Hobli, Hoskote Taluk, Bangalore South, measuring to an extent of 3 Acres 01 guntas; bounded on the: **East by:** Sy. No. 27, **West by:** Sy. NO. 20, **North by:** Sy. No. 24 & Sy. no. 30, **South by:** Sy. no. 27.

Given under my hand and the seal of the Court this 09-03-2026

By order of the Court, Deputy Commissioner, Bangalore Urban District, Bangalore.
Advocate for petitioner: **GIRI K.**

---

ಚನ್ನರಾಯಪಟ್ಟಣದ 1ನೇ ಅಧಿಕ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯದಲ್ಲಿ
ಇ.ಸಿ.ಎ : 01/2024

ಅರ್ಜಿದಾರರು: ಬಸವೇಗೌಡ ಮತ್ತು ಇನ್ನೊಬ್ಬರು
1) ಬಸವೇಗೌಡ ಬಿನ್ ಲೇಟ್ ಅಣ್ಣೆಗೌಡ, ಸುಮಾರು 61 ವರ್ಷ, ಕಾರೇಹಳ್ಳಿ ಗ್ರಾಮ, ಬಾಗೂರು ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ. - ವಿರುದ್ಧ-
ರೆಸ್ಪಾಂಡೆಂಟರು: ಪರಮಶಿವಯ್ಯ ಇನ್ನೊಬ್ಬರು
3) ಮೊಹಮ್ಮದ್ ಅಯೂಬ್, ವಯಸ್ಕರು,ನಂ-35, 2ನೇ ಫ್ಲೋರ್, 1ನೇ ಕ್ರಾಸ್, ಬಸವಲಿಂಗಪ್ಪ ನಗರ, ಆರ್.ಕೆ.ಹೆಗ್ಡೆ ನಗರ. ಬೆಂಗಳೂರು-560064.

ಪ್ರಕಟಣೆ

ಅರ್ಜಿದಾರರು ಮೇಲ್ಕಂಡ ಕೇಸನ್ನು ರೆಸ್ಪಾಂಡೆಂಟರುಗಳ ವಿರುದ್ಧ ಅಪಘಾತ ಪರಿಹಾರ ಕೋರಿ ಘನ ನ್ಯಾಯಾಲಯದಲ್ಲಿ ತಂದಿರುತ್ತಾರೆ. ಮೇಲ್ಕಂಡ ಕೇಸಿನಲ್ಲಿ 3ನೇ ರೆಸ್ಪಾಂಡೆಂಟರು ಈ ನ್ಯಾಯಾಲಯದಿಂದ ಕಳುಹಿಸಿದ ನೋಟಿಸ್ ಪಡೆಯದೆ ಉದ್ದೇಶಪೂರ್ವಕವಾಗಿ ನಿಯಂತ್ರಿಸುತ್ತಿರುತ್ತಾರೆ. ಹಾಗಾಗಿ ಮೇಲ್ಕಂಡ ಕೇಸು ದಿನಾಂಕ: 29.04.2026 ರಂದು 3ನೇ ರೆಸ್ಪಾಂಡೆಂಟರುಗಳಾದ ನಿಮ್ಮ ಹಾಜರಾತಿಗಾಗಿ ಇರುತ್ತದೆ. ಆ ದಿನ ಬೆಳಗ್ಗೆ 11-00 ಗಂಟೆಗೆ, ತಾವಾಗಲಿ/ತಮ್ಮ ವಕೀಲರ ಮೂಲಕವಾಗಲೀ, ಹಾಜರಾಗಿ ಮೇಲ್ಕಂಡ ಕೇಸಿಗೆ ಸಂಬಂಧಿಸಿದಂತೆ ತಮ್ಮ ಅಹವಾಲನ್ನು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ತಮ್ಮ ವಿರುದ್ಧ ಏಕಪಕ್ಷೀಯ ಆದೇಶ ಮಾಡಿ ಕೇಸನ್ನು ತೀರ್ಮಾನಿಸಲಾಗುವುದು.

ನ್ಯಾಯಾಲಯದ ಮೊಹರು ಮತ್ತು ನನ್ನ ಸಹಿಯೊಂದಿಗೆ ದಿನಾಂಕ: 12/03/2026 ರಂದು ನೀಡಲಾಗಿದೆ.

ನ್ಯಾಯಾಲಯದ ಆಪ್ಪಣೆಯ ಮೇರೆಗೆ
ಶಿರಸ್ತೇದಾರರು, ಚನ್ನರಾಯಪಟ್ಟಣದ 1ನೇ ಅಧಿಕ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯದಲ್ಲಿ
ಜೆ.ಭರತ್, ವಕೀಲರು ಬಿ.ಎಸ್.ಎನ್.ಎಲ್ ಆಫೀಸ್ ಹಿಂಭಾಗ ಸಮೃದ್ಧಿ, ನಂ.314, 21ನೇ ತಿರುವು, ಕುವೆಂಪು ನಗರ,ಹಾಸನ.

---

**IN THE COURT OF THE III ADDITIONAL CIVIL JUDGE AT ANEKAL**
**C.Misc No.407/2026**

**Between: 1. Nagaraju,** S/o Late Arunachalam, aged about 40 years, **2. Lokesh,** S/o Arunachalam, aged about 38 years, R/ at Kalkere Village, Jigani Hobli, Anekal Taluk, Bangalore District-562 106 ...**PETITIONERS**
**AND: The Thasildhar, Birth & Death Division,** Anekal Taluk ...**RESPONDENT**

**PUBLIC NOTICE**

Whereas, the petitioners has filed the above petition for seeking death certificate of petitioners father of namely **Arunachalam** S/o Late. Ponnappan & Late Muniyamma he was expired on 09-04-2007, at Kalkere Village, Jigani Hobli, Anekal Taluk, Bangalore District, take notice that, any interested person in respect of death certificate of Arunachalam S/o Late Ponnappan, are hereby called upon to appear before this Hon'ble court either personally or through an advocate duly instructed on **25-04-2026** at **11:00 AM,** otherwise, the matter will be heard and decided ex-parte on merits.

Given my hand and seal of the court on this 13/03/2026

By order of the Court, Sheristedar, Civil Judge (Jr.Dvn) and JMFC, Court, Anekal

Advocate for Petitioners: **Ramaswamy**
# No.2, Venkatachalaiah building, Opp. PWD Office, Attibele Main Road, Anekal Town.
Phone No. 9742797405

---

**BEFORE THE MOTOR ACCIDENT CLAIMS TRIBUNAL AT BENGALURU**
**M.V.C. No. 3006/2025**

**BETWEEN: CHANNMMA** & OTHERS **...PETITIONERS**
**AND: K.S.R.T.C** & OTHERS ...**RESPONDENTS**

**NOTICE TO RESPONDENT No. 3**

**HALLEPPA,** R/at Chokkasandra Mahimappa School, Near Venkateshwara Bakery, Peenya Dasarahalli, Bengaluru- 560 057.

The petitioner has filed the above case for claiming compensation of Rs.60,00,000/- for the death of her husband Hanumanth who was pillion rider in a motorcycle bearing No. KA-04-KT-5477, on 09.02.2025 at about 08:30 A.M., on Bengaluru-Tumkur NH-48 Road, Near Bommanahalli U Turn, Bengaluru hit by KSRTC Bus and caused the accident, No.KA-14 F-0129.

You are hereby directed to appear before the Honourable court MACT (SCCH-5) on **21-04-2026** at **11:00 AM** either in person or through your counsel to answer the claim. If you fail to appear before the court on the said day either in person or through your counsel, you will be placed exparte and case will be disposed off in accordance with Law.

Given under my hand and a seal of the court on this 10/03/2026

By order of the Court, Asst. Registrar, Court of Small Causes, Bengaluru.

**R. Chandra Shekhar,** Advocate
Office No.39/2, at ASVNV Bhavan,
Office No.32/D, 2nd Floor,
Kempegowda Road, Bengaluru -560 009

---

# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ಯಮ)
ಗ್ರಾಮೀಣಾಭಿವೃದ್ಧಿ ಭವನ, 4ನೇ ಮತ್ತು 5ನೇ ಮಹಡಿ, ಆನಂದ ರಾವ್ ವೃತ್ತ, ಬೆಂಗಳೂರು – 560 009

ಸಂ: ಕೆಆರ್‌ಐಡಿಎಲ್/ಡಬ್ಲ್ಯೂಕೆಎಸ್/ಸಿಎಂಟಿ/ಟಿಎನ್‌ಡಿ/2025–26 ದಿನಾಂಕ: 13.03.2026

## ಅಲ್ಪಾವಧಿ ಟೆಂಡರ್ ಪ್ರಕಟಣೆ

ಅ) ಟೆಂಡರ್ ಫಾರಂ ಬೆಲೆ **ರೂ. 500/- ಹಿರಿಯ ಉಪನಿರ್ದೇಶಕರು,** ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, ರಾಮನಗರ ರವರ ಹೆಸರಿನಲ್ಲಿ ಡಿ.ಡಿ. ಪಡೆಯತಕ್ಕದ್ದು ಆ) ಟೆಂಡರ್ ಅವಧಿ: 2026-27ನೇ ಸಾಲಿಗೆ **01.04.2026 ರಿಂದ 31.03.2027 ರವರೆಗೆ** ಇ) ಟೆಂಡರ್ ಫಾರಂ ಪಡೆಯ ಬಹುದಾದ **ದಿನಾಂಕ: 13.03.2026 ರಿಂದ 16.03.2026ರ ಸಂಜೆ 4.00 ಗಂಟೆಯವರೆಗೆ ಈ)** ಭರ್ತಿ ಮಾಡಿದ ಟೆಂಡರ್ ಫಾರಂಗಳ ಸಲ್ಲಿಸುವಿಕೆಗೆ ಕೊನೆಯ **ದಿನಾಂಕ: 20.03.2026ರ ಸಂಜೆ 4.00 ಗಂಟೆಯೊಳಗೆ.** ಉ) ಟೆಂಡರ್ ತೆರೆಯುವ **ದಿನಾಂಕ: 20.03.2026 ರ ಸಂಜೆ 5.00 ಗಂಟೆಗೆ** ಅಥವಾ ನಂತರ ನಿಗಧಿಪಡಿಸಿದ ದಿನಾಂಕದಂದು. ಹೆಚ್ಚಿನ ವಿವರಗಳನ್ನು ಕಛೇರಿ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/- **ಹಿರಿಯ ಉಪನಿರ್ದೇಶಕರು.**
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ
ಬೆಂಗಳೂರು ದಕ್ಷಿಣ ಜಿಲ್ಲೆ

DIPR/BSD/698/SA/2025-26

---

**ನಗರಸಭಾ ಕಾರ್ಯಾಲಯ, ನಂಜನಗೂಡು**

ಮೈಸೂರು ಜಿಲ್ಲೆ, ಮೈಸೂರು, ದೂರವಾಣಿ: 08221-226236/08221-226888
ಇ-ಮೇಲ್: itstaff_ulb_nanjangud@yahoo.co.in ವೆಬ್‌ಸೈಟ್ : www.nanjanaguducity.mrc.gov.in

**ಸಂಖ್ಯೆ:** ನನಕಾ/ತಾಂತ್ರಿಕಶಾಖೆ/ಸ.ಇಂ/ಟೆಂ-12/2025-26 **ದಿನಾಂಕ:** 10.03.2026

**ಟೆಂಡರ್ ಪ್ರಕಟಣೆ** (ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ)

ನಂಜನಗೂಡು ನಗರಸಭಾ ವ್ಯಾಪ್ತಿಯಲ್ಲಿ 2025-26ನೇ ಸಾಲಿನ ನಗರಸಭಾ ಅನುದಾನದಲ್ಲಿ ನಗರಸಭಾ ಕಛೇರಿಯ ಪೌರಾಯುಕ್ತರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು(ಪರಿಸರ)ರವರಿಗೆ ಮಾಸಿಕ ಆಧಾರದ ಮೇಲೆ ವಾಹನ ಸರಬರಾಜು ಮಾಡಲು 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ರನ್ನು ಆಹ್ವಾನಿಸಲಾಗಿದೆ. ಇಡೆಂಟ್‌ನಂ: **DMA/2025-26/SE7471** ಆಸಕ್ತಿಯುಳ್ಳ ಅರ್ಹ ಟೆಂಡರ್‌ದಾರರು **https://kppp.karnataka.gov.in** ನಿಂದ ಟೆಂಡರ್ ಷರತ್ತು, ಇಎಂಡಿ ವಿವರ ಹಾಗೂ ಟೆಂಡರ್ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. ಟೆಂಡರ್ ಆಕ್ಷೇಪಣೆಗಳನ್ನು ಸಲ್ಲಿಸುವ ಮತ್ತು ಟೆಂಡರ್ ಫಾರಂ ಡೌನ್‌ಲೋಡ್ ಮಾಡಿಕೊಳ್ಳುವ ಹಾಗೂ ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸುವ ಕಡೆಯ **ದಿನಾಂಕ: 26.03.2026** ಹಾಗೂ ಟೆಂಡರ್ ತೆರೆಯುವ ದಿನಾಂಕ: **27.03.2026.** ಕಾಮಗಾರಿ ನಿಬಂಧನೆ, ಷರತ್ತುಗಳು ಹಾಗೂ ಹೆಚ್ಚಿನ ಮಾಹಿತಿಯನ್ನು ಕಛೇರಿಯ ವೇಳೆಯಲ್ಲಿ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

**ಸೂಚನೆ:-** ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಗುತ್ತಿಗೆದಾರರು **https://kppp.karnataka.gov.in** ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

| ಸಹಿ/- | ಸಹಿ/- |
|---|---|
| **(ಲಕ್ಷ್ಮೀಕಾಂತ ರೆಡ್ಡಿ. ಜಿ.** ಐ.ಎ.ಎಸ್**)** | **(ಬಸವರಾಜು.ಎಂ)** |
| ಜಿಲ್ಲಾಧಿಕಾರಿಗಳು ಹಾಗೂ ಆಡಳಿತಾಧಿಕಾರಿಗಳು ನಗರಸಭೆ, ನಂಜನಗೂಡು. | ಪೌರಾಯುಕ್ತರು, ನಗರಸಭೆ ನಂಜನಗೂಡು. |

DIPR/MYS/1831/SA/2025-26

ಗರಿಷ್ಠ 34° ಕನಿಷ್ಠ 20°

ಹೊಸ ದಿಗಂತ

ಶನಿವಾರ
14 ಮಾರ್ಚ್ 2026

# ಮೈಸೂರು

ಬೀಳ್ಕೊಡುಗೆ....



ಮೈಸೂರು ತಾಲೂಕಿನ ಮೆಲ್ಲಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಏಳನೆಯ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಉತ್ತಮ ವಿದ್ಯಾರ್ಥಿಗಳಿಗೆ ಪುರಸ್ಕಾರ ವಿತರಿಸಲಾಯಿತು. ಮುಖ್ಯ ಶಿಕ್ಷಕಿ ಪಿ.ಎನ್. ವೀಣಾ, ಶಿಕ್ಷಕರಾದ ಟಿ. ಸತೀಶ್ ಜವರೇಗೌಡ, ಪಿ.ಎಲ್. ಭಾಗ್ಯ, ಸುನೀಲ್, ರಂಗಸ್ವಾಮಿ, ಕಲ್ಪನಾ, ವಸಂತಲಕ್ಷ್ಮಿ ಉಪಸ್ಥಿತರಿದ್ದರು.



## ಕಿರುಸುದ್ದಿ

### 'ದಿ ಕೇರಳ ಸ್ಟೋರಿ 2' ಉಚಿತ ಪ್ರದರ್ಶನ

**ಮೈಸೂರು:** ಮೈಸೂರಿನ ಜಯ ಲಕ್ಷ್ಮಿಪುರಂನಲ್ಲಿರುವ ಡಿಆರ್ ಸಿನಲ್ಲಿ ವಿದ್ಯಾರ್ಥಿನಿಯರಿಗೆ ಹಾಗೂ ಮಹಿಳೆಯರಿಗೆ ಲವ್ ಜಿಹಾದ್ ಕುರಿತಂತೆ ಬಂದಿರೋ 'ದಿ ಕೇರಳ ಸ್ಟೋರಿ 2' ಸಿನಿಮಾವನ್ನು ಉಚಿತ ಪ್ರದರ್ಶನ ಮಾಡಲಾಗಿದೆ. ವಿಷನ್ ಟೀಮ್ ಆಫ್ ಮೈಸೂರು ಕಡೆಯಿಂದ ಈ ಕೆಲಸ ಆಗಿದೆ. ಇದಕ್ಕೆ ಬಿಜೆಪಿ-ಹಿಂದು ಮುಖಂಡರು ಸಾಥ್ ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ನಗರ ಮಾಜಿ ಉಪಾಧ್ಯಕ್ಷೆ ಡಾ. ಹೇಮಾನಂದೀಶ್, ಪ್ರತಿಯೊಬ್ಬ ಹಿಂದು ಯುವತಿಯರು ನೋಡಲೇಬೇಕಾದ ಚಿತ್ರ ದಿ ಕೇರಳ ಸ್ಟೋರಿ-2. ಕರ್ನಾಟಕದಲ್ಲಿ ಪ್ರತಿ ಕ್ಷೇತ್ರದಲ್ಲೂ ಆಗಲಿ ಜಾಗೃತಿ. ಎಲ್ಲಾ ಜಿಲ್ಲೆಯ ಹಿಂದು ನಾಯಕರು ನಮ್ಮ ಹೆಣ್ಣು ಮಕ್ಕಳ ರಕ್ಷಣೆಗಾಗಿ ದಿ ಕೇರಳ ಸ್ಟೋರಿ 2' ಉಚಿತ ಪ್ರದರ್ಶನಕ್ಕೆ ಮುಂದಾಗಲಿ ಎಂದರು. ನಮ್ಮ ವಿಷನ್ ಟೀಮ್ ಆಫ್ ಮೈಸೂರು ತಂಡದ ವತಿಯಿಂದ 15 ದಿನಗಳು ಜಯ ಲಕ್ಷ್ಮಿಪುರಂನಲ್ಲಿರುವ ಡಿಆರ್‌ಸಿ ಮಾಲ್‌ನಲ್ಲಿ 10,000ಕ್ಕೂ ಹೆಚ್ಚು ಯುವತಿಯರು ಹಾಗೂ ಮಹಿಳೆಯರಿಗೆ ಉಚಿತ ಪ್ರದರ್ಶನ ನೀಡಲಾಗುವುದು ಎಂದು ಹೇಳಿದರು. ಉಚಿತ ಟಿಕೆಟ್ ಹಾಗೂ ಹೆಚ್ಚಿನ ಮಾಹಿತಿಗಾಗಿ 99865 54557, 9740685611 ಸಂಪರ್ಕಿಸಬಹುದು ಎಂದು ಹೇಳಿದರು. ಇದೇ ಸಂದರ್ಭದಲ್ಲಿ ರೇವತಿ ಕೃಷ್ಣಪ್ಪ, ಪೂರ್ಣಿಮಾ, ಹಾಗೂ ಟೀಮ್ ಎಲ್ಲಾ ಸದಸ್ಯರುಗಳು ಹಾಜರಿದ್ದರು.

### ನಕಲಿ ಅಂಕಪಟ್ಟಿ ನೀಡಿ ಸರ್ಕಾರಿ ಕೆಲಸ: ದೂರು

**ಮೈಸೂರು:** ನಕಲಿ ಪಿಯುಸಿ ಅಂಕಪಟ್ಟಿ ನೀಡಿ ಸರ್ಕಾರಿ ಕೆಲಸಕ್ಕೆ ಸೇರಿದ್ದ ವ್ಯಕ್ತಿಯೊಬ್ಬರ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ವಿಜಯಪುರ ಜಿಲ್ಲೆಯ ಸಿಂಧಗಿ ನಿವಾಸಿ ಸಚಿನ್ ತಳವಾರ್ ಎಂಬವನೇ ನಕಲಿ ಪಿಯುಸಿ ಅಂಕಪಟ್ಟಿ ನೀಡಿ ಸಿಕ್ಕಿ ಬಿದ್ದವ. ಈತನ ವಿರುದ್ಧ ಉಪ ತಹಸಿಲ್ದಾರ್ ಕಿರಣ್ ಎಂಬವರು ನಗರದ ಲಕ್ಷ್ಮೀಪುರಂ ಠಾಣೆಯ ಪೊಲೀಸರಿಗೆ ದೂರು ನೀಡಿದ್ದಾರೆ. 2019-20ರಲ್ಲಿ ನೇರ. ನೇಮಕಾತಿ ಅಡಿಯಲ್ಲಿ ಸಚಿನ್ ಅವರು ಸಿಬಿಎಸ್‌ಇ ಪಿಯುಸಿ ಅಂಕಪಟ್ಟಿಯನ್ನು ನೀಡಿ ಗ್ರಾಮ ಆಡಳಿತಾಧಿಕಾರಿ ಹುದ್ದೆಗೆ ಸೇರಿದ್ದಾರೆ. ಅವರನ್ನು ನಂಜನಗೂಡು ತಾಲ್ಲೂಕು ದಾಸನೂರು ವೃತ್ತದ ಗ್ರಾಮ ಆಡಳಿತಾಧಿಕಾರಿಯನ್ನಾಗಿ 0 ನಿಯೋಜಿಸಲಾಗಿತ್ತು. ಈ ನಡುವೆ ದಾಖಲೆಗಳ ಪರಿಶೀಲನೆ ನಡೆದಿದೆ. ಸಚಿನ್ ಅವರ 50 ಅಂಕಪಟ್ಟಿಯನ್ನು ಚೆನ್ನೈನ ಸಿಬಿಎಸ್‌ಇ ಕಚೇರಿಗೆ ಕಳುಹಿಸಿಕೊಡಲಾಗಿತ್ತು. ಈ ವೇಳೆ ಈ ಅಂಕಪಟ್ಟಿ ನಕಲಿ ಎಂದು ಅಲ್ಲಿನ ಅಧಿಕಾರಿಗಳು ವರದಿ ನೀಡಿದ್ದಾರೆ. ಈ ಅಕ್ರಮ ಕುರಿತು ಕಿರಣ್ ಲಕ್ಷ್ಮೀಪುರಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

### ಉಡುಗೊರೆ ಆಸೆಗೆ ₹10.79 ಲಕ್ಷ ಕಳೆದುಕೊಂಡ ಮಹಿಳೆ

**ಮೈಸೂರು:** ವಿದೇಶಿ ಸ್ನೇಹಿತನ ಉಡುಗೊರೆ ಆಸೆಗೆ ಬಿದ್ದ ಮಹಿಳೆಯೊಬ್ಬರು 10.79 ಲಕ್ಷರೂ ಕಳೆದುಕೊಂಡಿರುವ ಘಟನೆ ಮೈಸೂರಿನಲ್ಲಿ ನಡೆದಿದೆ. ಮೈಸೂರಿನ ಜೆ.ಪಿ.ನಗರದ ಮಹಿಳೆಯೊಬ್ಬರಿಗೆ ವಾಟ್ಸಾ ಪ್ ಮೂಲಕ ಇಂಗ್ಲೆಂಡ್ ಪ್ರಜೆ ಡೇವಿಡ್ ಎಂಬಾತನ ಪರಿಚಯವಾಗಿದ್ದು, ಇಬ್ಬರೂ ಪ್ರತಿದಿನ ವಾಟ್ಸಾ ಪ್ ಮೂಲಕ ಮಾತನಾಡಿ ಸ್ನೇಹ ಬೆಳೆಸಿಕೊಂಡಿದ್ದಾರೆ. ವಿವಾಹಿತರಾದ ಮಹಿಳೆಯು ತನ್ನ ಮಗಳ ಹುಟ್ಟುಹಬ್ಬದ ವಿಚಾರವನ್ನು ಡೇವಿಡ್‌ಗೆ ತಿಳಿಸಿದ್ದಾರೆ. ಆತ ನಿಮ್ಮ ಮಗಳಿಗೆ ಉಡುಗೊರೆ ಕಳುಹಿಸುತ್ತೇನೆ ಎಂದು ನಂಬಿಸಿದ್ದಾನೆ. ಇದಾದ ಕೆಲ ದಿನಗಳ ಬಳಿಕ ಮುಂಬೈ ವಿಮಾನ ನಿಲ್ದಾಣದಿಂದ ಮಾತನಾಡುತ್ತಿದ್ದೇನೆ ಎಂದು ವ್ಯಕ್ತಿಯೊಬ್ಬ ಕರೆ ಮಾಡಿದ್ದಾನೆ. ನಂತರ ನಿಮಗೆ 35 ಸಾವಿರ ಪೌಂಡ್ ಹಣ ಬಂದಿದೆ. ನೀವು ಸೇವಾ ಶುಲ್ಕ ಪಾವತಿಸಬೇಕು ಎಂದು ಹೇಳಿ ಹಂತ ಹಂತವಾಗಿ 10,79,600 ರೂ. ಹಣವನ್ನು ವಿವಿಧ ಖಾತೆಗಳಿಗೆ ಹಾಕಿಸಿಕೊಂಡು ವಂಚಿಸಿದ್ದಾನೆ. ಈ ಸಂಬಂಧ ಮೈಸೂರಿನ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಮೊಬೈಲ್ ಹ್ಯಾಕ್ ಮಾಡಿ 2.71 ಲಕ್ಷ ರೂ. ಕಳವು

**ಮೈಸೂರು:** ನಗರದ ವ್ಯಕ್ತಿಯೊಬ್ಬರ ಮೊಬೈಲ್ ಹ್ಯಾಕ್ ಮಾಡಿರುವ ದುಷ್ಕರ್ಮಿಗಳು, ಅವರ ಖಾತೆಯಲ್ಲಿದ್ದ 2.71 ಲಕ್ಷ ರೂ. ಹಣವನ್ನು ದೋಚಿರುವ ಘಟನೆ ನಡೆದಿದೆ. ಮೈಸೂರಿನ ಭೈರವೇಶ್ವರ ನಗರದ ನಿವಾಸಿ ಜಯಶಂಕರ್ ಹಣ ಕಳೆದುಕೊಂಡವರು. ದುಷ್ಕರ್ಮಿಗಳು ಅವರ ಮೊಬೈಲ್ ಅನ್ನು ಹ್ಯಾಕ್ ಮಾಡಿದ್ದಾರೆ. ಈ ವೇಳೆ ಅವರ ಮೊಬೈಲ್ ಗೆ ಹಲವು ಬಾರಿ ಒಟಿಪಿ ಬಂದಿದೆ.

## ಶ್ರೀಬೀರೇಶ್ವರಸ್ವಾಮಿ ದೇವಾಲಯ ಉದ್ಘಾಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

# ಯಾವ ಧರ್ಮದಲ್ಲೂ ಕೆಟ್ಟದ್ದಿಲ್ಲ: ಸಿಎಂ

**ಮೈಸೂರು:** ಹಿಂದು, ಜೈನ, ಇಸ್ಲಾಂ, ಕ್ರೈಸ್ತ ಸೇರಿದಂತೆ ಯಾವ ಧರ್ಮದಲ್ಲಿ ಕೆಟ್ಟದ್ದು ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಶುಕ್ರವಾರ ಮೈಸೂರು ತಾಲೂಕಿನ ವರಕೋಡು ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀಬೀರೇಶ್ವರಸ್ವಾಮಿ ದೇವಾಲಯವನ್ನು ಉದ್ಘಾಟಿಸಿ ಮಾತನಾಡಿದ ಅವರು, ದೇವರು ಗರ್ಭಗುಡಿಯಲ್ಲಿ ಮಾತ್ರವೇ ಇರುತ್ತಾನೆ ಎನ್ನುವುದು ಸರಿಯಲ್ಲ. ದೇವರು ಎಲ್ಲಾ ಕಡೆಯೂ ಇದ್ದಾನೆ. ನನಗೆ ಒಳಿತಾಗಬೇಕು ಎನ್ನುವುದಕ್ಕಿಂತಲೂ, ಮತ್ತೊಬ್ಬರಿಗೆ ಒಳಿತಾದರೆ ಸಾಕು ಎನ್ನುವಂತೆ ಇರಬೇಕು. ಯಾರನ್ನೂ ದ್ವೇಷಿಸುವ ಭಕ್ತಿ ಇರಬಾರದು ಎಂದು ತಿಳಿಸಿದರು.

ಭಕ್ತಿಯು ದೇವರಲ್ಲಿ ಇರಬೇಕು. ದೇವರು ಇದ್ದಾನೆ. ಭಕ್ತಿ ಎನ್ನುವುದು ಶುದ್ಧವಾದಂತಹ ರೀತಿಯಲ್ಲಿ ಇರಬೇಕು. ಶುದ್ಧ ಇಲ್ಲದಿದ್ದರೆ ಎಷ್ಟೇ ಪೂಜೆ ಮಾಡಿದರೂ ಸಾರ್ಥಕವಾಗಲ್ಲ. ಮಾನವೀಯತೆ, ನಿಷ್ಕಲ್ಮಶ ಭಕ್ತಿ ಇರಬೇಕು. ಯಾರನ್ನು ದ್ವೇಷಿಸುವ ಭಕ್ತಿ ಇರಬಾರದು. ಒಳ್ಳೆಯದು ಮಾಡಬೇಕು ಎಂದರೆ, ನನಗೆ ಕೇಳಿದಂತೆ ಬೇರೆಯವರಿಗೂ ಒಳಿತನ್ನು ಬಯಸಿದರೆ ದೇವರು ಒಲಿಯುತ್ತಾನೆ. ಇದೇ ನಿಜವಾದ ಪ್ರಾರ್ಥನೆ, ಭಕ್ತಿ ಎಂದು ನುಡಿದರು. ದೇವರು ಎಲ್ಲಾ ಕಡೆ ಇದ್ದಾನೆ. ದೇವನೊಬ್ಬ ನಾಮ ಹಲವು ಎನ್ನುವಂತೆ ಆತನು ಸರ್ವಾಂತರಾಮಿ. ಗುಡಿಯಲ್ಲಿ ಮಾತ್ರ ಇರುತ್ತಾನೆ ಎನ್ನುವ ನಂಬಿಕೆ ಸರಿಯಲ್ಲ. ದೇವರು ಎಲ್ಲಾ ಕಡೆಯೂ ಇರುತ್ತಾನೆ. ಭಕ್ತಿಯಿಂದ





ಪೂಜಿಸಿದರೆ ಒಳ್ಳೆಯದನ್ನು ಮಾಡುತ್ತಾನೆ. ಬಸವಣ್ಣ ಹೇಳಿದ ಮಾತಿನಂತೆ, ದೇವರು ನನ್ನಲ್ಲಿ ಮತ್ತು ನಿಮ್ಮಲ್ಲಿ ಇರುತ್ತಾನೆ. ನಾವು ಮಾಡುವ ಕೆಲಸವನ್ನು ನೋಡುತ್ತಾನೆ. ದೇವರನ್ನು ಒಲಿಸಿಕೊಳ್ಳಬೇಕಾದರೆ ಬೇರೆಯವರಿಗೆ ಕೆಟ್ಟದನ್ನು ಬಳಸಬಾರದು. ಇಡೀ ನಾಡಿಗೆ ಒಳ್ಳೆಯದು ವಾಡಲಿ ಎಂದು ಯಾರಿಗೂ ಕೆಟ್ಟದು ಬಯಸೆ, ದ್ವೇಷಿಸದೆ ಒಳ್ಳೆಯದು ಮಾಡಬೇಕು ಎಂದು ಹೇಳಿದರು.

ಬೀರೇಶ್ವರ ಸ್ವಾಮಿಯ ದೇವಸ್ಥಾನವನ್ನು ನೂತನವಾಗಿ ನಿರ್ಮಾಣ ಮಾಡಿರುವುದನ್ನು ಅತ್ಯಂತ ಸಂತೋಷದಿಂದ ಉದ್ಘಾಟಿಸಿದ್ದೇನೆ. ನಾಲ್ಕು ಗ್ರಾಮಗಳ ಜನರು ಸೇರಿಕೊಂಡು ದೇವಸ್ಥಾನವನ್ನು ಸುಂದರವಾಗಿ ನಿರ್ಮಾಣ ಮಾಡಲಾಗಿದೆ. ಪುನರ್ ಪ್ರತಿಷ್ಠಾಪನೆ ಜತೆಗೆ ಜಾತ್ರೆಯು ನಡೆಯುತ್ತಿರುವುದು ಸಂತಸವಾಗಿದೆ. ಜಾತ್ರೆಯಲ್ಲಿ ಅನೇಕ ಕೂಟಗಳು ಭಾಗವಹಿಸಿವೆ. 2 ವರ್ಷಕ್ಕೊಮ್ಮೆ ಜಾತ್ರೆ ನಡೆಯುತ್ತದೆ. ಬಹಳ ಉತ್ಸಾಹ, ಭಕ್ತಿಯಿಂದ ಜಾತ್ರೆಯನ್ನು ನಡೆಸಿಕೊಂಡು ಬರಲಾಗುತ್ತಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, 2008ರಿಂದ ವರುಣ ಕ್ಷೇತ್ರಕ್ಕೆ ಸಾಕಷ್ಟು ಅನುದಾನಗಳ ಸುರಿಮಳೆ ಆಗಿದೆ. ಕ್ಷೇತ್ರದ ಜನರ ಋಣವನ್ನು ಅಭಿವೃದ್ಧಿ ಮೂಲಕ ತೀರಿಸಲಾಗುವುದು ಎಂದು ಹೇಳಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಡಾ.ಯತೀಂದ್ರ ಅವರಿಗೆ ಗ್ರಾಮದ ಪರವಾಗಿ ರೇಷ್ಮೆಗೂಡಿನ ಹಾರ,ರೇಷ್ಮೆ ಶಲ್ಯವನ್ನು ಹಾಕಿ ಬೆಳ್ಳಿ ಗದೆಯನ್ನು ನೆನಪಿನ ಕಾಣಿಕೆಯಾಗಿ ನೀಡಿದರೆ, ದೇವಸ್ಥಾನದ ವತಿಯಿಂದ ಬೃಹತ್ ಗಾತ್ರದ ಮೈಸೂರು ಮಲ್ಲಿಗೆ ಹಾರವನ್ನು ಹಾಕಿ ಅಭಿನಂದಿಸಲಾಯಿತು. ಡಿಸಿ ಜಿ.ಲಕ್ಷ್ಮೀಕಾಂತ್ ರೆಡ್ಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಜಿಪಂ ಸಿಇಒ ಎಸ್.ಯುಕೇಶ್ ಕುಮಾರ್ ಹಾಜರಿದ್ದರು.

### ತೆರೆದ ವಾಹನದಲ್ಲಿ ಅದ್ದೂರಿ ಮೆರವಣಿಗೆ

ವರಕೋಡು ಗ್ರಾಮಕ್ಕೆ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಾ.ಯತೀಂದ್ರ ಸಿದ್ದರಾಮಯ್ಯ ಅವರನ್ನು ತೆರೆದ ವಾಹನದಲ್ಲಿ ಅದ್ದೂರಿಯಾಗಿ ಮೆರವಣಿಗೆ ಮೂಲಕ ದೇವಸ್ಥಾನದ ಸಮೀಪಕ್ಕೆ ಕರೆತರಲಾಯಿತು. ಗ್ರಾಮದ ಹೊರ ವಲಯದ ಬಳಿ ತಾತ್ಕಾಲಿಕವಾಗಿ ತೆರೆದಿದ್ದ ಹೆಲಿಕಾಪ್ಟರ್‌ನಲ್ಲಿ ಬಂದಿಳಿದ ಸಿಎಂ ಸಿದ್ದರಾಮಯ್ಯ ಅವರನ್ನು ಜಿಲ್ಲಾಡಳಿತದ ಪರವಾಗಿ ಬರಮಾಡಿಕೊಳ್ಳಲಾಯಿತು. ನಂತರ, ತೆರೆದ ವಾಹನವನ್ನೇರಿದ ಸಿಎಂ, ಪುತ್ರನೊಂದಿಗೆ ಜನರತ್ತ ಎರಡು ಕೈಗಳನ್ನು ಬೀಸುತ್ತಲೇ ಬಂದರು. ದೇವಸ್ಥಾನದ ಬಳಿ ಬೃಹತ್ ಗಾತ್ರದ ಸೇಬಿನ ಹಾರವನ್ನು ಕ್ರೇನ್‌ನಲ್ಲಿ ಹಾಕಲಾಯಿತು. ನಂತರ, ದೇವಸ್ಥಾನ ಪ್ರವೇಶಿಸಿದ ಸಿಎಂ, ಗಂಟೆಯನ್ನು ಬಾರಿಸಿ ಮಂಗಳಾರತಿ ಪಡೆದರು. ಬಳಿಕ ಕೆಲಕ್ಷಣ ವೀರಮಕ್ಕಳ ಕುಣಿತವನ್ನು ವೀಕ್ಷಿಸಿದರು. ಸಿದ್ದರಾಮಯ್ಯ ಅವರು ಎರಡು ಕುಣಿತ ಸ್ಟೆಪ್ ಹಾಕಬಹುದೆಂದು ಭಾವಿಸಲಾಗಿತ್ತಾದರೂ ಸುಡು ಬಿಸಿಲಿನಿಂದಾಗಿ ಹೆಜ್ಜೆ ಹಾಕದೆ ವೇದಿಕೆಯನ್ನೇರಿದರು. ಹೀಗಾಗಿ,ಸಿಎಂ ಅವರೊಂದಿಗೆ ವೀರಮಕ್ಕಳ ಕುಣಿತ ಮಾಡಬೇಕೆಂದು ಬಯಸಿದ್ದವರಿಗೆ ನಿರಾಶೆಯಾಯಿತು.

> ವರಕೋಡು ಗ್ರಾಮದಲ್ಲಿ ಆರು ವರ್ಷಗಳ ನಂತರ ದೇವಸ್ಥಾನ ಪುನರ್ ಜೀರ್ಣೋದ್ಧಾರ ಮಾಡಿ ಉದ್ಘಾಟನೆ ಮಾಡಲಾಗಿದೆ. ಕಲ್ಯಾಣಿ ನಿರ್ಮಾಣ, ರಸ್ತೆಗಳು, ಚರಂಡಿ ಮೊದಲಾದ ಮೂಲ ಸೌಕರ್ಯಕ್ಕಾಗಿ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಲಾಗಿದೆ. ದೇವಾಲಯ ಪುನರ್ ಪ್ರತಿಷ್ಠಾಪನೆಗೆ ಸರ್ಕಾರದ ವತಿಯಿಂದ ನಾಲ್ಕು ಲಕ್ಷ ರೂಪಾಯಿ ಅನುದಾನ ನೀಡಲಾಗಿದೆ.
>
> ■ ಡಾ.ಯತೀಂದ್ರ ಸಿದ್ದರಾಮಯ್ಯ, ವಿಧಾನ ಪರಿಷತ್ ಸದಸ್ಯ

## ಸಾಧನ ವಿದ್ಯಾರ್ಥಿಗಳಿಗೆ ಸನ್ಮಾನ



**ಪಿರಿಯಾಪಟ್ಟಣ:** ಪಟ್ಟಣದ ಬಿಜಿಎಸ್ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು 2026 ಸಾಲಿನಲ್ಲಿ ನಡೆದ ಮೊದಲನೇ, ಮೂರನೆಯ ಹಾಗೂ ಐದನೇ ಸೆಮಿಸ್ಟರ್ ಪರೀಕ್ಷೆಯಲ್ಲಿ ಬಿ.ಕಾಂ ಹಾಗೂ ಬಿ.ಎ ಪದವಿ ಪರೀಕ್ಷೆಯಲ್ಲಿ ಶೇಕಡಾ 95 ರಷ್ಟು ಫಲಿತಾಂಶ ಗಳಿಸಿ ಕಾಲೇಜಿಗೆ ಕೀರ್ತಿ ತಂದಿರುತ್ತಾರೆ.

ಬಿಜಿಎಸ್ ಪ್ರಥಮ ದರ್ಜೆ ಕಾಲೇಜು ಕಾಲೇಜು ವಿದ್ಯಾರ್ಥಿಗಳು ಮೈಸೂರು ವಿಶ್ವವಿದ್ಯಾಲಯದ ಪದವಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಅಭಿನಂದಿಸಿ ಮಾತನಾಡಿದ ಸಂಸ್ಥೆಯ ವ್ಯವಸ್ಥಾಪಕ ಹೆಚ್ ಎನ್ ಸುಧಾಕರ್ ಗ್ರಾಮೀಣ ವಿದ್ಯಾರ್ಥಿಗಳ ಸಾಧನೆ ಹರುಷ ತಂದಿದೆ ನಮ್ಮ ಶಿಕ್ಷಣ ಸಂಸ್ಥೆಯಲ್ಲಿ ಉತ್ತಮ ವಿದ್ಯಾಭ್ಯಾಸವನ್ನು ನೀಡುತ್ತಿದ್ದೇವೆ

ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ ಗ್ರಾಮೀಣ ಭಾಗದಲ್ಲಿ ಗ್ರಾಮೀಣ ಮತ್ತು ಬಡ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿರುವುದು ಸಂತೋಷದ ವಿಚಾರ ಇದನ್ನು ಎಲ್ಲವಿದ್ಯಾರ್ಥಿಗಳುಸದುಪಯೋಗಪಡಿಸಿಕೊಳ್ಳಬೇಕು ಮೈಸೂರು ಶಾಖಾ ಮಠದ ಪೂಜ್ಯ ಸೋಮೇಶ್ವರನಾಥ ಸ್ವಾಮೀಜಿರವರು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದ್ದಾರೆ ಎಂದು ತಿಳಿಸಿದರು

ಪ್ರಾಂಶುಪಾಲ ಕೆ. ಆರ್. ಪ್ರವೀಣ್ ಮಾತನಾಡಿ ಗ್ರಾಮೀಣ ಪ್ರದೇಶ ವಿದ್ಯಾರ್ಥಿಗಳು ಒಳ್ಳೆಯ ಫಲಿತಾಂಶ ತಂದು ಕೊಡುವುದರ ಮೂಲಕ ಕಾಲೇಜಿಗೆ ಕೀರ್ತಿ ತಂದಿರುತ್ತಾರೆ ಬಿಜಿಎಸ್ ಪ್ರಥಮ ದರ್ಜೆ ಕಾಲೇಜು ಹಲವಾರು ವರ್ಷಗಳಿಂದ ಉತ್ತಮ ಫಲಿತಾಂಶವನ್ನು ಪಡೆಯುತ್ತಿದೆ ಶ್ರೀ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಸಂಸ್ಕಾರಯುತ ಶಿಕ್ಷಣವನ್ನು ನೀಡುತ್ತಿದೆ ಕಡಿಮೆ ಶುಲ್ಕದಲ್ಲಿ ಉತ್ತಮ ಶಿಕ್ಷಣವನ್ನು ನೀಡುವ ಉದ್ದೇಶ ದಿಂದ ಪೂಜ್ಯ ಸ್ವಾಮೀಜಿರವರು ಸಂಸ್ಥೆಯನ್ನು ಪ್ರಾರಂಭಿಸಿದ್ದಾರೆ.

ಪೂರ್ವ ಪ್ರಾಥಮಿಕ ಶಿಕ್ಷಣದಿಂದ ಪದವಿ ಶಿಕ್ಷಣದವರೆಗೂ ಶಿಕ್ಷಣವನ್ನು ನೀಡುತ್ತಿದ್ದು ಪ್ರಸ್ತುತ ವರ್ಷದಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಸ್ನಾತಕೋತರ ಅಧ್ಯಯನ ಕೇಂದ್ರವನ್ನು ತೆರೆಯಲಾಗಿದೆ ಇದರ ಸದುಪಯೋಗವನ್ನು ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು ಎಂದರು. ಈ ಸಂದರ್ಭ ದಲ್ಲಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಮೋಹನ್, ಮಹದೇವ್, ಆನಂದ್, ಮಂಜುನಾಥ್, ಶ್ರುತಿ, ವರ್ಷಿಣಿ ಇದ್ದರು.

## ವಿದ್ಯಾರ್ಥಿಗಳೇ ಸಮಾಜಕ್ಕೆ ಮಾದರಿಯಾಗಿ ಬದುಕಿ




**ಕೆ.ಆರ್.ನಗರ:** ಹಲವುದಾನಿಗಳು ಮತ್ತು ಹಿರಿಯರ ಶ್ರಮದಿಂದ ನಿರ್ಮಾಣವಾಗಿ ಉತ್ತಮ ಹೆಸರುಗಳಿಸಿರುವ ಮಿಥಿಲಾ ವಿದ್ಯಾಸಂಸ್ಥೆಯಲ್ಲಿ ಉತ್ತಮ ವ್ಯಾಸಂಗಮಾಡಿ ಉನ್ನತದರ್ಜೆಯಲ್ಲಿ ತೇರ್ಗಡೆಯಾಗಿ ಸಮಾಜದಲ್ಲಿ ಉನ್ನತಸ್ಥಾನಕ್ಕೆ ಏರಿ ನೀವುಸಹ ಇಲ್ಲದವರಿಗೆ ಒಂದಷ್ಟು ದಾನಮಾಡುವ ಮೂಲಕ ಸಮಾಜಕ್ಕೆ ಮಾದರಿಯಾಗಿ ಬದುಕು ನಡೆಸುವಂತೆ ಮಿರ್ಲೆಯ ಮಿಥಿಲಾ ವಿದ್ಯಾಸಂಸ್ಥೆ ಕಾರ್ಯದರ್ಶಿ ಎಂ.ಬಿ.ಲೋಕ್‌ನಾಥ್ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಮಿರ್ಲೆಯಲ್ಲಿರುವ ಸಂಸ್ಥೆ ಆವರಣದಲ್ಲಿ ಏರ್ಪಡಿಸಲಾಗಿದ್ದ ಮಿಥಿಲಾಫೆಸ್ಟ್ ಹಾಗೂ ಶಾರದಾಪೂಜೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ವಿದ್ಯಾರ್ಥಿಗಳಿಗೆ ಹಿತವಚನಗಳನ್ನು ನುಡಿದರು. ಸಂಸ್ಥೆಯು ಆಂಗ್ಲ ಮತ್ತು ಕನ್ನಡ ಮಾಧ್ಯಮದಲ್ಲಿ ಪ್ರತಿವರ್ಷ ಎಸ್‌ಎಸ್‌ಎಲ್‌ಸಿಯಲ್ಲಿ ಶೇ100% ಸಾಧನೆ ಮಾಡುವ ಮೂಲಕ ಈ ಭಾಗದಲ್ಲಿ ಸಂಸ್ಥೆ ಉತ್ತಮ ಹೆಸರುಗಳಿಸಿದ್ದು ಸಂಸ್ಥೆಯ ಆಡಳಿತ ಮಂಡಳಿ ಹಿರಿಯರು ಹಾಕಿಕೊಟ್ಟಮಾರ್ಗದಲ್ಲಿ ಕೆಲಸ ಮಾಡುತ್ತಿರುವುದರಿಂದ ಹಾಗೂ ಸಂಸ್ಥೆಯ ಶಿಕ್ಷಕ- ಶಿಕ್ಷಕಿಯರ ಶ್ರಮದಿಂದ ವ್ಯಾಸಂಗದಲ್ಲಿ ವಿದ್ಯಾರ್ಥಿಗಳು ಉತ್ತಮ ಅಂಕದೊಂದಿಗೆ ಯಶಸಾಧಿಸಲು ಸಾಧ್ಯವಾಗಿದೆ ಎಂದರು.

ವಿದ್ಯಾರ್ಥಿಗಳು ಶಿಕ್ಷಣದೊಂದಿಗೆ ಉತ್ತಮಸಂಸ್ಕಾರ ಕಲಿಯುವಂತೆ ಸಲಹೆನೀಡಿದ ಲೋಕ್‌ನಾಥ್ ಶಿಕ್ಷಣ ಎಷ್ಟು ಮುಖ್ಯಮೋ ಸಂಸ್ಕಾರಮೂ ಸಹ ಅಷ್ಟೇಮುಖ್ಯವಾಗಿದ್ದು ಶಿಕ್ಷಕರು ಕಲಿಸಿದ ಪಾಠದೊಂದಿಗೆ ಅವರ ನಡೆನುಡಿಗಳನ್ನು ಅಳವಡಿಸಿಕೊಂಡು ಗುರುಗಳು ಹಾಕಿಕೊಟ್ಟ ಮಾರ್ಗದಲ್ಲಿ ಗುರಿ ತಲುಪುವಂತೆ ಕಿವಿಮಾತು ಹೇಳಿದರು.

ಮುಖ್ಯಶಿಕ್ಷಕಿ ಎಂ.ಎನ್.ಅಭಿಲಾಷ, ಮಂಜುನಾಥಕ ಮತಳ್ಳಿ, ಎಲ್.ಸೀಮಾ ಮಾತನಾಡಿ, ವಿದ್ಯಾರ್ಥಿಗಳಿಗೆ ಮನೆಯೆ ಮೊದಲ ಪಾಠಶಾಲೆ ಎನಿಸಿದರೂ ಹೆಚ್ಚಿನ ಸಮಯ ಶಾಲೆಯಲ್ಲಿಯೆ ಕಳೆಯುವುದರಿಂದ ಪೋಷಕರ ಸಲಹೆಯೊಂದಿಗೆ ಶಿಕ್ಷಕರ ಮಾರ್ಗದರ್ಶನದಲ್ಲಿ ಇಷ್ಟಪಟ್ಟು ವ್ಯಾಸಂಗಮಾಡಿದಲ್ಲಿ ಎಸ್‌ಎಸ್‌ಎಲ್‌ಸಿಯಿಂದ ಹಿಡಿದು ಯಾವುದೆಪದವಿಯ ವ್ಯಾಸಂಗ ಕಬ್ಬಿಣದ ಕಡಲೆ ಏನಲ್ಲ ಎಂದು ಹೇಳಿದರು.

ಮಿಥಿಲಾ ಸಂಸ್ಥೆಯ ಅಧ್ಯಕ್ಷ ಎಂ.ಕೆ.ಜಯರಾಂ, ಉಪಾಧ್ಯಕ್ಷ ಎಂ.ವಿ.ವೆಂಕಟೇಶ್ ಮತ್ತಿತರರು ವಿದ್ಯಾರ್ಥಿ ಗಳನ್ನು ಕುರಿತು ಮಾತನಾಡಿದರು. ಸಂಸ್ಥೆಯ ನಿರ್ದೇಶಕ ನಟಶೇಖರಾಚಾರ್ ಹಾಗೂ ಶಾಲಾ ಶಿಕ್ಷಕ-ಶಿಕ್ಷಕಿಯರು ಸಿಬ್ಬಂದಿ ವರ್ಗ, ಪೋಷಕರು ಮತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.

ಇದೇ ಸಂಧರ್ಭದಲ್ಲಿ ಶಾಲಾಮಕ್ಕಳಿಂದ ಸಾಂಸ್ಕೃತಿಕ ಮತ್ತು ಮನರಂಜನೆ ವಿವಿಧ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

## ಮಾ.16ರಂದು ಅಹೋರಾತ್ರಿ ಧರಣಿ

**ಎಚ್.ಡಿ.ಕೋಟೆ:** ಮಡಿವಾಳ ಜನಾಂಗವನ್ನು ಪ.ಜಾತಿ(ಎಸ್.ಸಿ) ಗೆ ಸೇರಿಸುವಂತೆ ಮಾ.16ರಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಶ್ರೀಬಸವ ಮಾಚಿದೇವ ಮಹಾಸ್ವಾಮಿ ಮತ್ತು ಶ್ರೀ ಮುಕ್ತಾನಂದ ಸ್ವಾಮೀಜಿ ನೇತೃತ್ವದಲ್ಲಿ ಅಹೋರಾತ್ರಿ ಧರಣಿ ಕೈಗೊಂಡಿರುವುದರಿಂದ ಎಚ್.ಡಿ.ಕೋಟೆ, ಸರಗೂರು ತಾಲೂಕಿನ ವೀರಮಡಿವಾಳ ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿ ಧರಣಿಯಲ್ಲಿ ಭಾಗವಹಿಸುವಂತೆ ಮಡಿವಾಳರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಹನುಮಂತಪ್ಪ ಆಹ್ವಾನ ನೀಡಿದ್ದ ಹಿನ್ನೆಲೆ ತಾಲೂಕಿನ ಮಡಿವಾಳ ಸಮಾಜದವರು ಸಭೆ ನಡೆಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಲೂಕು ವೀರ ಮಡಿವಾಳ ಸಂಘದ ಅಧ್ಯಕ್ಷ ಎಲೆಹುಂಡಿ ಚಂದ್ರ ಶೆಟ್ಟಿ ಅಧ್ಯಕ್ಷತೆಯಲ್ಲಿ ಸಮುದಾಯದ ಮುಖಂಡರ ಸಭೆ ಸೇರಿ ಮಹಿಳೆಯರು, ಪುರುಷರು ಎಂಬ ಬೇಧವಿಲ್ಲದೇ ಪ್ರತಿಯೊಬ್ಬರೂ ಧರಣಿಯಲ್ಲಿ ಪಾಲ್ಗೊಳ್ಳುವಂತೆ ನಿರ್ಣಯ ಕೈಗೊಳ್ಳಲಾಯಿತು.



ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿವಾಗಿ ಹಾಗೂ ಆರ್ಥಿಕ, ರಾಜಕೀಯವಾಗಿ ಹಿಂದುಳಿದಿರುವ ಮಡಿವಾಳ ಜಾತಿಯನ್ನು ಪ. ಜಾತಿಗೆ ಸೇರಿಸಿ ಎನ್ನುವ ಕುಲಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವರದಿಯನ್ನು 2011ರಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಇಲ್ಲಿಯವರೆಗೆ ಬಂದಿರುವ ಎಲ್ಲಾ ಸರ್ಕಾರಗಳು ಪರಿಗಣಿಸಿ ಪ.ಜಾತಿಗೆಮಡಿವಾಳಸಮಾಜವನ್ನುಸೇರ್ಪಡೆಮಾಡಿಲ್ಲ. ಕುಲಶಾಸ್ತ್ರ ಅಧ್ಯಯನ ವರದಿ ಕಡತವು ಸಮಾಜ ಕಲ್ಯಾಣ ಇಲಾಖೆಯಲ್ಲಿಯೇ ಆ 505 ಐ22 ಇಂದಿಗೂ ಕೊಳೆಯುತ್ತಿದೆ ಎಂದರು.

## ಬಸ್‌ನಲ್ಲಿ ಮಹಿಳೆ ಚಿನ್ನಾಭರಣ ಕಳವು

**ಮೈಸೂರು:** ಬಸ್ ಹತ್ತುತ್ತಿದ್ದ ಮಹಿಳೆಯೊಬ್ಬರ ಬ್ಯಾಗ್‌ನಲ್ಲಿದ್ದ ಚಿನ್ನಾಭರಣವನ್ನು ಖದೀಮರು ಕಳುವು ಮಾಡಿರುವ ಘಟನೆ ಮೈಸೂರಿನಲ್ಲಿ ನಡೆದಿದೆ.

ಮದ್ದೂರು ತಾಲ್ಲೂಕಿನ ಬೊಮ್ಮನಹಳ್ಳಿ ಗ್ರಾಮದ ನಿವಾಸಿ ಮಮತಚಿನ್ನದ ಸರ ಕಳೆದುಕೊಂಡವರು. ಇವರು ಸಂಬಂಧಿಯೊಬ್ಬರು ಮೈಸೂರಿನ ಮೇಟಗಳ್ಳಿ ಬಳಿಯ ಆಸ್ಪತ್ರೆಯಲ್ಲಿ ದಾಖಲಾಗಿದ್ದರಿಂದ ಅವರನ್ನು ಭೇಟಿಯಾಗಲು ಬಂದಿದ್ದಾರೆ. ಅವರ ಭೇಟಿಯ ನಂತರ ವಾಪಸ್ ಊರಿಗೆ ತೆರಳುವ ಸಲುವಾಗಿ ಮೇಟಗಳ್ಳಿ ಬಸ್ ನಿಲ್ದಾಣದಲ್ಲಿ ಬಸ್ ಹತ್ತಿದ್ದಾರೆ. ಈ ವೇಳೆ ಬಸ್‌ನಲ್ಲಿ ನೂಕುನುಗ್ಗಲು ಇತ್ತು ಎನ್ನಲಾಗಿದೆ. ಸಮಯವನ್ನುಉಪಯೋಗಿಸಿಕೊಂಡ ಖದೀಮರು, ಅವರ ಬ್ಯಾಗ್‌ನಲ್ಲಿದ್ದ ಸುಮಾರು 1.50 ಲಕ್ಷ ರೂ. ಮೌಲ್ಯದ 30 ಗ್ರಾಂ ಚಿನ್ನದ ಸರವಿದ್ದ ಪರ್ಸ್ ನ್ನು ಎಗರಿಸಿದ್ದಾರೆ. ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


## ರಸ್ತೆ ಸ್ವಚ್ಛತೆ, ರಥೋತ್ಸವಕ್ಕೆ ರಸ್ತೆ ಒತ್ತುವರಿ ತೆರವು ಪುರಸಭೆ ಅಧಿಕಾರಿಗಳ ಜವಾಬ್ದಾರಿ

# ಏ.2ರಂದು ಗುಂಜಾ ನರಸಿಂಹಸ್ವಾಮಿ ಬ್ರಹ್ಮರಥೋತ್ಸವ

**ತಿ.ನರಸೀಪುರ:** ಏ.2ರಂದು ನಡೆಯುವ ಲಕ್ಷ್ಮೀ ಸಮೇತ ಶ್ರೀ ಗುಂಜಾ ನರಸಿಂಹಸ್ವಾಮಿ ಬ್ರಹ್ಮ ರಥೋತ್ಸವ ಪೂರ್ವಭಾವಿ ಸಭೆಯನ್ನು ತಹಸೀಲ್ದಾರ್ ಟಿ.ಜಿ.ಸುರೇಶ್ ಆಚಾರ್ ಅವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಪಟ್ಟಣದತಾಲೂಕುಪಂಚಾಯಿತಿಸಭಾಂಗಣದಲ್ಲಿ ನಡೆದ ಸಭೆಯಲ್ಲಿ ತಿ.ನರಸೀಪುರ ಆಲಗೂಡು, ಗೋಪಾಲಪುರ ಮತ್ತು ವ್ಯಾಸರಾಜಪುರ ಗ್ರಾಮಸ್ಥರ ಸಮ್ಮುಖದಲ್ಲಿ ಹಲವು ಚರ್ಚೆಗಳನ್ನು ನಡೆಸಿ ತೀರ್ಮಾನವನ್ನು ಕೈಗೊಳ್ಳಲಾಯಿತು.

ಈ ಕುರಿತು ಮಾತನಾಡಿದ ತಹಶೀಲ್ದಾರ್, ಪ್ರತಿ ವರ್ಷದಂತೆ ಈ ಬಾರಿಯೂ ಶ್ರೀ ಗುಂಜಾ ನರಸಿಂಹಸ್ವಾಮಿರಥೋತ್ಸ ವವನ್ನುಸಂಪ್ರದಾಯಿಕವಾಗಿ ನಡೆಸಲಾಗುವುದು. ಈ ವೇಳೆ ರಸ್ತೆ ತಾತ್ಕಾಲಿಕ ದುರಸ್ತಿ, ನೀರು ಸರಬರಾಜು, ರಸ್ತೆ ಸ್ವಚ್ಛತೆ, ರಥೋತ್ಸವಕ್ಕೆ ರಸ್ತೆ ಒತ್ತುವರಿ ತೆರವು ಪುರಸಭೆ ಅಧಿಕಾರಿಗಳ ಜವಾಬ್ದಾರಿಯಾಗಿದೆ. ಪಿಡಬ್ಲ್ಯೂಡಿ ಇಲಾಖೆ ರಥೋತ್ಸವಕ್ಕೆ ರಥ ಮತ್ತು ರಸ್ತೆಗಳ ಸುಭದ್ರತೆ ಬಗ್ಗೆ ತಾಂತ್ರಿಕ ವರದಿ ನೀಡಬೇಕು. ಸೆಸ್ಕ್ ಇಲಾಖೆ ವಿದ್ಯುತ್ ರಥೋತ್ಸವ ದಿನದಂದು ನಿರಂತರ ಸರಬರಾಜು ಮತ್ತು ರಥ



ಸಾಗುವ ಮಾರ್ಗದಲ್ಲಿ ವಿದ್ಯುತ್ ಕಡಿತ ಮಾಡಿ ರಥ ಸುಗಮವಾಗಿ ಸಾಗಲು ಅನುವು ಮಾಡುವುದು. ಪೊಲೀಸ್ ಇಲಾಖೆ ಸೂಕ್ತ ಭದ್ರತೆ ಹೆಚ್ಚುವರಿ ತಕಡಿ ನಿಯೋಜನೆ ಮಾಡುವುದು. ಪಂಚಾಯತ್ ರಾಜ್ಯ ಇಲಾಖೆ ಕುಡಿಯುವ ನೀರಿನ ಸರಬರಾಜು, ರಥ ಸಾಗುವ ರಸ್ತೆಗಳಿಗೆ ನೀರು ಹಾಕುವುದು ಮಾಡುವುದು ಸೇರಿದಂತೆ ವಿವಿಧ ಇಲಾಖೆಗಳು ತಮಗೆ ವಹಿಸಿದ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದು ಸೂಚನೆ ನೀಡಿದರು.

ರಥೋತ್ಸವವನ್ನು ಸುಗಮ ನಡೆಸುವ ಗುರುತರ ಜವಾಬ್ದಾರಿ ಎಲ್ಲ ಗ್ರಾಮಸ್ಥರ ಮೇಲಿದ್ದು, ಪ್ರತಿಯೊಬ್ಬರು ಅವರವರ ಜವಾಬ್ದಾರಿಯನ್ನು ಅರಿತು ರಥೋತ್ಸವಕ್ಕೆ ಚ್ಯುತಿ ಆಗದಂತೆ ನಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಮಾಜಿ ವಿಧಾನ ಪರಿಷತ್ ಸದಸ್ಯ ಸಿ.ರಮೇಶ್, ಶಿರಸ್ತೇದಾರ್ ಮಂಜುಳಾ, ರಾಜೇಶ್, ಅರಣ್ಯಾಧಿಕಾರಿ ಉಮೇಶ್, ಪಿಡಬ್ಲ್ಯೂಡಿ ಎಇಇ ಸತೀಶ್ ಚಂದ್ರನ್, ಸೆಸ್ಕ್ ಎಇಇ ವೀರೇಶ್, ರಾಜೇಶ್, ಸೋಸಲೆ ಕಂದಾಯ ನಿರೀಕ್ಷಕರಾದ ಆನಂದ್, ಮಹೇಂದ್ರ, ಸೋಸಲೆ ರಂಗಸ್ವಾಮಿ, ಪ್ರಧಾನ ಅರ್ಚಕ ಶ್ರೀಧರ್ ಭಟ್, ರಾಜು, ನಂಜುಂಡಸ್ವಾಮಿ, ಭಾಸ್ಕರ್, ಶಾಮಿಯಾನ ಶಿವರಾಜು, ಸಿ.ಮಹದೇವ, ಪುಟ್ಟಾರಿಗೌಡ, ಆಲಗೂಡು ನಾಗರಾಜು, ಕೆಬ್ಬೆಕೃಷ್ಣ, ಮಹದೇವಸ್ವಾಮಿ, ಶಾಂತರಾಜು, ರಾಜು, ನಂಜುಂಡಸ್ವಾಮಿ, ನ್ಯಾಯಬೆಲೆ ಅಂಗಡಿ ಮಹಾದೇವ, ಭಾಸ್ಕರ್, ಶಾಮಿಯಾನ ಶಿವರಾಜು ಇದ್ದರು.

## ಗಾಂಧಿ ಶಿಲ್ಪ ಬಜಾರ್: ಕರಕುಶಲ ವಸ್ತುಗಳ ಸೊಬಗಿನ ಸಮ್ಮಿಲನ

# ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಕರಕುಶಲ ಉತ್ಸವ

**ಮೈಸೂರು:** ನಗರದ ಹೆಬ್ಬಾಳ ರಿಂಗ್ ರಸ್ತೆಯಲ್ಲಿರುವ ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್‌ನಲ್ಲಿ ನಡೆಯುತ್ತಿರುವ ಗಾಂಧಿ ಶಿಲ್ಪ ಬಜಾರ್ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳ ಸಹೃದಯರು ಹಾಗೂ ಕಲಾಸಕ್ತರನ್ನು ಆಕರ್ಷಿಸುತ್ತಿದೆ.

ಸುಮಾರು 70 ಮಳಿಗೆಗಳಲ್ಲಿ ದೇಶದ ವಿವಿಧ ರಾಜ್ಯಗಳಿಂದಬಂದಿರುವಕುಶಲಕರ್ಮಿಗಳುತಮ್ಮ ಕೈಚಳಕದ ಮೂಲಕ ರೂಪುಗೊಂಡ ಕರಕುಶಲ ಮತ್ತು ಕೈಮಗ್ಗ ಉತ್ಪನ್ನಗಳನ್ನು ಪ್ರದರ್ಶನ ಹಾಗೂ ಮಾರಾಟಕ್ಕೆ ಇಡಲಾಗಿದೆ. ಇಲ್ಲಿ ಗ್ರಾಹಕರು ನೇರವಾಗಿ ಕುಶಲಕರ್ಮಿಗಳಿಂದಲೇ ಉತ್ಪನ್ನಗಳನ್ನು ಕೈಗೆಟಕುವ ಬೆಲೆಯಲ್ಲಿ ಖರೀದಿ ಸುವ ಅವಕಾಶ ನೀಡಲಾಗಿದೆ. ಮೇಳದಲ್ಲಿ ಮಣ್ಣಿನ ಮಡಕೆಗಳು ಮತ್ತು ಮಣ್ಣಿನಕಲಾಕೃತಿಗಳುವಿಶೇಷವಾಗಿಜನರ ಗಮನ ಸೆಳೆಯುತ್ತಿವೆ. ಈ ಉತ್ಪನ್ನಗಳಿಗೆ ಉತ್ತಮ ಬೇಡಿಕೆ ವ್ಯಕ್ತವಾಗಿದ್ದು, ಮಳಿಗೆಗಳಲ್ಲಿ ವ್ಯಾಪಾರ ಚಟುವಟಿಕೆ ಜೋರಾಗಿ ನಡೆಯುತ್ತಿದೆ.

ರಾಜಸ್ಥಾನ ರಾಜ್ಯದ ಜೋಧ್‌ಪುರ ಜಿಲ್ಲೆಯ ಶ್ರೀ ಪೂಶಾರಾಮ್ ರಾಮವತ್ ಅವರ



ಕೈಚಳಕದಲ್ಲಿ ಮೂಡಿಬಂದಿರುವ ಮೆಟಲ್ ಕ್ರಾಫ್ಟ್ ಕಲಾಕೃತಿಗಳು ಕಲಾಸಕ್ತರ ಕಣ್ಮನ ಸೆಳೆಯುತ್ತಿವೆ. ಆಂಧ್ರಪ್ರದೇಶದ ಶ್ರೀಮತಿ ಪ್ರಮೀಳಾ ಅವರ ಮಳಿಗೆಯಲ್ಲಿ ಪ್ರದರ್ಶನಗೊಂಡಿರುವ ಕಲಂಕಾರಿ ಸೀರೆಗಳು, ಡ್ರೆಸ್ ಮೆಟೀರಿಯಲ್‌ಗಳು ಮೇಳದ ಪ್ರಮುಖ ಆಕರ್ಷಣೆಗಳಲ್ಲಿ ಒಂದಾಗಿವೆ.

ಇದೇ ವೇಳೆ ನಮ್ಮ ರಾಜ್ಯದ ಕುಶಲಕರ್ಮಿಗಳು ರೂಪಿಸಿರುವ ಮರದ ಕೆತ್ತನೆಗಳು, ಚನ್ನಪಟ್ಟಣದ ಪ್ರಸಿದ್ಧ ಗೊಂಬೆಗಳು ಮತ್ತು ಚಿತ್ರಕಲೆಗಳು ಜನರನ್ನು ಸೆಳೆಯುತ್ತಿವೆ.

ತಮಿಳುನಾಡಿನಕಾಂಜೀವರಂರೇಷ್ಮೆಸೀರೆಗಳು, ಕೇರಳದ ಬೆಡ್‌ಶೀಟ್‌ಗಳು ಮತ್ತು ಟೇಬಲ್ ಕವರ್‌ಗಳು, ಪಶ್ಚಿಮ ಬಂಗಾಳದ ಕಾಂಥಾ ಹಾಗೂ ಬಲುಚೂರಿ ಸೀರೆಗಳು, ಸೆಣಬಿನಿಂದ ಮಾಡಿದ ಆಲಂಕಾರಿಕ ವಸ್ತ್ರಗಳು ಮತ್ತು ವಾಲ್ ಹ್ಯಾಂಗಿಂಗ್‌ಗಳು, ಜಾರ್ಖಂಡ್ ಹಾಗೂ ಬಿಹಾರದ ಟಸ್ಸರ್ ರೇಷ್ಮೆ ಸೀರೆಗಳು, ದೆಹಲಿ ಮತ್ತು ಗೋವಾ ರಾಜ್ಯಗಳ ಕುಶಲಕರ್ಮಿಗಳು ತಯಾರಿಸಿದ ಆಕರ್ಷಕ ನೆಲಹಾಸುಗಳು ಸೇರಿದಂತೆ ಹಲವಾರು ಉತ್ಪನ್ನಗಳು ಮೇಳದಲ್ಲಿ ಗ್ರಾಹಕರನ್ನು ಸೆಳೆಯುತ್ತಿವೆ.

ಸುಮಾರು 15 ರಾಜ್ಯಗಳ ಕೈಮಗ್ಗ ಮತ್ತು ಕರಕುಶಲ ಉತ್ಪನ್ನಗಳು ಒಂದೇ ವೇದಿಕೆಯಲ್ಲಿ ದೊರೆಯುತ್ತಿರುವುದು ಈ ಮೇಳದ ವಿಶೇಷತೆಯಾಗಿದೆ. ಈ ಗಾಂಧಿ ಶಿಲ್ಪ ಬಜಾರ್ ಮೇಳವು ಮಾರ್ಚ್ 15ರವರೆಗೆ ನಡೆಯಲಿದ್ದು, ಪ್ರತಿದಿನ ಬೆಳಿಗ್ಗೆ 10 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ ಸಾರ್ವಜನಿಕರಿಗೆ ಮುಕ್ತವಾಗಿದೆ. ಮೇಳಕ್ಕೆ ಉಚಿತ ಪ್ರವೇಶ ವ್ಯವಸ್ಥೆ ಮಾಡಲಾಗಿದೆ.

## ಕಿರುಸುದ್ದಿ

### ಮಾ.18ರಿಂದ ಏ. 2ರವರೆಗೆ ಪರೀಕ್ಷೆ: ನಿಷೇಧಾಜ್ಞೆ

**ಚಾಮರಾಜನಗರ:** ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳನ್ನು ಮಾರ್ಚ್ 18 ರಿಂದ ಏಪ್ರಿಲ್ 2ರವರೆಗೆ ಜಿಲ್ಲೆಯ ಒಟ್ಟು 47 ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲಿದ್ದು, ಪರೀಕ್ಷಾ ಕಾರ್ಯವು ನ್ಯಾಯೋಚಿತವಾಗಿ ನಡೆಸುವ ಸದುದ್ದೇಶದಿಂದ, ಕಾನೂನು ಸುವ್ಯವಸ್ಥೆಗೆ ಭಂಗ ಉಂಟಾಗದಂತೆ ಪರೀಕ್ಷಾ ಕೇಂದ್ರಗಳ ಸುತ್ತಲ 200 ಮೀಟರ್ ವ್ಯಾಪ್ತಿಯ ಪ್ರದೇಶವನ್ನು ಸಾರ್ವಜನಿಕ ನಿಷೇಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾಧಿಕಾರಿ ಶ್ರೀರೂಪಾ ಆದೇಶ ಹೊರಡಿಸಿದ್ದಾರೆ. ಚಾಮರಾಜನಗರ ತಾಲೂಕಿನ 15, ಕೊಳ್ಳೇಗಾಲ 9, ಗುಂಡ್ಲುಪೇಟೆ 10, ಯಳಂದೂರು 4 ಹಾಗೂ ಹನೂರು ತಾಲೂಕಿನ 9 ಸೇರಿದಂತೆ ಒಟ್ಟು 47 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಪರೀಕ್ಷಾ ಕೇಂದ್ರದ ಸುತ್ತಲ 200 ಮೀಟರ್ ವ್ಯಾಪ್ತಿಯಲ್ಲಿ ಪರೀಕ್ಷಾ ದಿನಗಳಂದು ಬೆಳಗ್ಗೆ 6 ರಿಂದ ಸಂಜೆ 6 ಗಂಟೆಯವರೆಗೆ ನಿಷೇಧಾಜ್ಞೆ ವಿಧಿಸಲಾಗಿದೆ. ಅಲ್ಲದೇ ಸದರಿ ದಿನಗಳಂದು ಪರೀಕ್ಷಾ ಕೇಂದ್ರಗಳ 200 ಮೀಟರ್ ವ್ಯಾಪ್ತಿಯಲ್ಲಿ ಬರುವ ಜೆರಾಕ್ಸ್ , ಕಂಪ್ಯೂಟರ್/ ಸೈಬರ್ ಅಂಗಡಿಗಳನ್ನು ಬೆಳಿಗ್ಗೆ 7 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಮುಚ್ಚುವಂತೆ ಆದೇಶಿಸಿದೆ. ನಿಷೇಧಾಜ್ಞೆ ಆದೇಶವು ಪರೀಕ್ಷೆ ಕೆಲಸಕ್ಕೆ ನಿಯೋಜಿತರಾದ ಅಧಿಕಾರಿ ಸಿಬ್ಬಂದಿ ವರ್ಗದವರಿಗೆ ಮತ್ತು ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಅನ್ವಯವಾಗುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

### ಮಾ. 16ರಂದು ವಿಶೇಷ ಉಪನ್ಯಾಸ ಕಾರ್ಯಕ್ರಮ

**ಚಾಮರಾಜನಗರ:** ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಹಾಗೂ ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಇತಿಹಾಸ ವಿಭಾಗ ಮತ್ತು ಐ.ಕ್ಯು.ಎ.ಸಿ. ಸಹಯೋಗದೊಂದಿಗೆ ಐತಿಹಾಸಿಕ ಸ್ಮಾರಕ, ಸ್ವಚ್ಛತೆ ಮತ್ತು ಸ್ಮಾರಕ ರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಮಾರ್ಚ್ 16ರಂದು ಬೆಳಗ್ಗೆ 10 ಗಂಟೆಗೆ ಚಾಮರಾಜನಗರ ತಾಲೂಕಿನ ಮಲೆಯೂರು ಹತ್ತಿರವಿರುವ ಕನಕಗಿರಿಯಲ್ಲಿ ಆಯೋಜಿಸಲಾಗಿದೆ. ಮೈಸೂರಿನ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಉಪನಿರ್ದೇಶಕರಾದ (ಪರಂಪರೆ) ಡಾ. ಸಿ.ಎನ್. ಮಂಜುಳಾ ಕಾರ್ಯಕ್ರಮ ಉದ್ಘಾಟಿಸುವರು. ಸಹಾಯಕ ನಿರ್ದೇಶಕರಾದ ಎಂ. ಸುನಿಲ್ ಕುಮಾರ್ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಬಿ.ಎಸ್. ಮಹದೇವಸ್ವಾಮಿ ಅವರು ಅಧ್ಯಕ್ಷತೆ ವಹಿಸುವರು. ಗುಂಡ್ಲುಪೇಟೆಯ ಜೆ.ಎಸ್.ಎಸ್. ಪದವಿ ಕಾಲೇಜಿನ ಇತಿಹಾಸ ವಿಭಾಗದ ಡಾ. ಮಂಜುಕುಮಾರ್ ಅವರು ವಿಶೇಷ ಉಪನ್ಯಾಸ ನೀಡುವರು. ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥರಾದ ಡಾ. ಬಿ.ಆರ್. ಜಯಣ್ಣ, ಐ.ಕ್ಯು.ಎ.ಸಿ ಸಂಚಾಲಕರಾದ ಡಾ. ಲಿಖಿತ ಎಸ್. ಅನುರಾಧ, ಇತಿಹಾಸ ವಿಭಾಗದ ಉಪನ್ಯಾಸಕರಾದ ಸಿ. ಮಹೇಶ್ ಅವರು ಗೌರವ ಉಪಸ್ಥಿತಿ ವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

### ಚಿರತೆ ದಾಳಿ: ಕರು ಸಾವು

**ಗುಂಡ್ಲುಪೇಟೆ:** ತಾಲ್ಲೂಕಿನ ಕುಂದಕರೆ ಗ್ರಾಮದಲ್ಲಿ ಮನೆ ಮುಂದೆ ಕಟ್ಟಿಹಾಕಿದ್ದ ಕರುವನ್ನು ಚಿರತೆ ಹೊತ್ತೊಯ್ದು ತಿಂದು ಹಾಕಿರುವ ಘಟನೆ ನಡೆದಿದೆ. ಕುಂದಕರೆ ಗ್ರಾಮದ ರವೀಶ ಬಿನ್ ನಾಗಪ್ಪ ಎಂಬುವವರು ಮನೆಯ ಮುಂದೆ ಮೂರು ಕರುಗಳನ್ನು ಕಟ್ಟಿದ್ದರು ಡೈರಿ ಎದುರು ಗ್ರಾಮದ ಒಳಗೆ ನುಗ್ಗಿದ ಚಿರತೆ ಮೂರು ಕರುಗಳ ಪೈಕಿ ಒಂದು ಕರವನ್ನು ಎಳೆದೊಯ್ದಿದೆ. ಚಿರತೆ ದಾಳಿಯಿಂದ ರೈತ ಕರುವನ್ನು ಕಳೆದುಕೊಂಡಿದ್ದು ಅರಣ್ಯ ಇಲಾಖೆ ಸುಲ್ತ ಪರಿಹಾರ ನೀಡುವುದರ ಜೊತೆಗೆ ಚಿರತೆ ಸೆರೆ ಹಿಡಿಯುವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

### ವಿದ್ಯುತ್ ವ್ಯತ್ಯಯ ಇಂದು

**ಮೈಸೂರು:** ಜಿಲ್ಲೆಯ ಹೆಚ್.ಡಿ ಕೋಟೆ 66/11 ಕೆ.ವಿ ವಿದ್ಯುತ್ ವಿತರಣ ಕೇಂದ್ರದ ವ್ಯಾಪ್ತಿಯ ಮತ್ತು ಯರಹಳ್ಳಿ-ಹ್ಯಾಂಡ್ ಪೋಸ್ಟ್ 66/11 ಕೆ.ವಿ ವಿತರಣ ಕೇಂದ್ರದ ವ್ಯಾಪ್ತಿಯಲ್ಲಿ 4 ನೇತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ಮಾರ್ಚ್ 14 ರಂದು ಕೈಗೊಳ್ಳಲಾಗಿದೆ. ಅಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಹೆಚ್.ಡಿ.ಕೋಟೆ ತಾಲೂಕಿನ ಹೆಚ್.ಡಿ.ಕೋಟೆ ಟೌನ್ ಮೇಟಿಕುಪ್ಪೆ, ಚಕ್ಕೂಡನಹಳ್ಳಿ, ಭೀಮನಹಳ್ಳಿ, ಹಿರೇಹಳ್ಳಿ. ಅಣ್ಣೂರು, ಪಡುವಕೋಟೆ, ಸವ್ವೆ, ನಾಗನಹಳ್ಳಿ ಮತ್ತು ಚಿಕ್ಕಕೆರೆಯೂರು ಪಂಚಾಯಿತಿ ವ್ಯಾಪ್ತಿ ಮತ್ತು ಸುತ್ತಮುತ್ತಲಿನ ಗ್ರಾಮಗಳು. ಹ್ಯಾಂಡ್‌ಪೋಸ್ಟ್. ಹೈರಿಗೆ, ಹೆಬ್ಬಲಗುಪ್ಪೆ ಮತ್ತು ನೂರುಲಕುಪ್ಪೆ ಪಂಚಾಯಿತಿ ವ್ಯಾಪ್ತಿ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಹೆಚ್.ಡಿ.ಕೋಟೆಯ ಚಾ.ವಿ.ಸ.ನಿ.ನಿ. ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಲೈನ್‌ಮ್ಯಾನ್ ದಿವಸ ಅಂಗವಾಗಿ ಚಾಮರಾಜನಗರ ಜಿಲ್ಲೆಯಲ್ಲಿ ಆರೋಗ್ಯ ಉಚಿತ ತಪಾಸಣೆ ಶಿಬಿರ ನಡೆಯಿತು.

## ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ

**ಚಾಮರಾಜನಗರ:** ನಗರದ ಬಿ. ರಾಚಯ್ಯ ಜೋಡಿ ರಸ್ತೆಯಲ್ಲಿರುವ ಸರ್ಕಾರಿ ಶುಶ್ರೂಷಕ ತರಬೇತಿ ಕೇಂದ್ರದಲ್ಲಿ ಕಳೆದ ಸಾಲಿನ ವಾರ್ಷಿಕ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದು ಇಬ್ಬರು ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ಶಾಲೆಯನ್ನು ನಡೆದ ಸರಳ ಕಾರ್ಯಕ್ರಮದಲ್ಲಿ 2025-26 ಸಾಲಿನ ವಾರ್ಷಿಕ ಪರೀಕ್ಷೆಯಲ್ಲಿ ಅಧಿಕ ಅಂಕಗಳಿಸಿ ಶಾಲೆಯ ಕೀರ್ತಿಯನ್ನು ಹೆಚ್ಚಿಸಿದ ಜಿ.ಎನ್.ಎಂ. ಶಾಲೆಯ ವಿಧ್ಯಾರ್ಥಿಗಳಾದ 3ನೇ ವರ್ಷದ ವಿದ್ಯಾರ್ಥಿ ಕು.ಪ್ರೇಮಾ (ಶೇ. 81) 2ನೇ ವರ್ಷದ ವಿದ್ಯಾರ್ಥಿ ಕು. ಮಾನಸ ವೈ ( ಶೇ. 80) ಹಾಗೂ ಕು. ಕೀರ್ತನಾ (ಶೇ. 80) ಅತ್ಯುತ್ತಮ ಶ್ರೇಣಿಯಲ್ಲಿ ಪಾಸಾಗಿದೆ. ಹಾಗೂ 35 ವಿದ್ಯಾರ್ಥಿಗಳು ಪ್ರಥಮ ದರ್ಜೆ ಮತ್ತು 21 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ಜಿ.ಎನ್.ಎಂ ಶಾಲೆಯ ಪ್ರಾಂಶುಪಾಲರಾದ ಕೆ. ಕಮಲ ತಿಳಿಸಿ, ವಿದ್ಯಾರ್ಥಿನಿಯರ ಸಾಧನೆಗೆ ಪ್ರಶಂಸೆ ವ್ಯಕ್ತಪಡಿಸಿದರು. ಸಂಸ್ಥೆಯ ಆಡಳಿತಾಧಿಕಾರಿ ಡಾ ಆಶಾ.ಎಸ್ ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಮಾತನಾಡಿ, ನರ್ಸಿಂಗ್ ತರಬೇತಿಯಲ್ಲಿ ಉತ್ತಮ ಸಾಧನೆ ಮಾಡಿರುವ ಮಕ್ಕಳನ್ನು ಅಭಿನಂದಿಸಿದರು. ದಾನಿಗಳು ಇಚ್ಚಿಸಿದ್ದಲ್ಲಿ ಪುಸ್ತಕ ರೂಪದಲ್ಲಿ ದಾನ ಮಾಡಿ ಮಕ್ಕಳನ್ನ ಪ್ರೋತ್ಸಾಹಿಸುವಂತೆ ಮನವಿ ಮಾಡಿದರು. ಮೈಸೂರಿನ ಪ್ರಾಥಮಿಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ತರಬೇತಿ ಕೇಂದ್ರದ ಅಧಿಕಾರಿ ವೆಂಕಟಲಕ್ಷ್ಮಿ, ರವಿಚಂದ್ರ ಪಿ, ಜಿ.ಎನ್.ಎಂ ಶಾಲೆಯ ಪ್ರಾಂಶುಪಾಲರಾದ ಕೆ. ಕಮಲ ಇದ್ದರು.



ಚಾಮರಾಜನಗರದ ಬಿ. ರಾಚಯ್ಯ ಜೋಡಿ ರಸ್ತೆಯಲ್ಲಿರುವ ಸರ್ಕಾರಿ ಶುಶ್ರೂಷಕ ತರಬೇತಿ ಕೇಂದ್ರದಲ್ಲಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದು ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಸಿಇಒ ಮೋನಾ ರೋತ್ ಸಲಹೆ

## ಆರ್ಥಿಕವಾಗಿ ಸಬಲರಾಗಿ

**ಚಾಮರಾಜನಗರ:** ಮಹಿಳಾ ಸಬಲೀಕರಣಕ್ಕಾಗಿ ಸರ್ಕಾರ ಜಾರಿಗೊಳಿಸಿರುವ ಯೋಜನೆ, ಕಾರ್ಯಕ್ರಮಗಳನ್ನು ಸದ್ಬಳಕೆ ಮಾಡಿಕೊಂಡು ಮಹಿಳೆಯರು ಸಾಮಾಜಿಕ, ಶೈಕ್ಷಣಿಕ, ಆರ್ಥಿಕವಾಗಿ ಸಬಲರಾಗುವಂತೆ ಜಿಪಂ ಸಿಇಒ ಮೋನಾ ರೋತ್ ತಿಳಿಸಿದರು.

ನಗರದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿಂದು ತಾಲೂಕು ಪಂಚಾಯಿತಿ ಹಾಗೂ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸಹಯೋಗದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಇಂದು ದೇಶದ ಎಲ್ಲಾ ಕ್ಷೇತ್ರಗಳಲ್ಲಿನ ಮಹಿಳೆಯರ ಸಾಧನೆಗೆ ಸರ್ಕಾರವು ಸಂವಿಧಾನಾತ್ಮಕವಾಗಿ ನೀಡಿರುವ ಹಕ್ಕುಗಳೇ ಕಾರಣವಾಗಿವೆ. ಆದರೂ ಮಹಿಳೆಯರ ಕೆಲ ಹಕ್ಕುಗಳು ಶೇ. 100ರಷ್ಟು ಕಾರ್ಯರೂಪಕ್ಕೆ ಬರಬೇಕು. ಇತ್ತೀಚೆಗೆ ಸರ್ಕಾರವು ಮಹಿಳೆಯರಿಗೆ ತಿಂಗಳಲ್ಲಿ ಒಂದು ದಿನದ ಋತುಚಕ್ರ ರಜೆಯನ್ನು ಮಂಜೂರು ಮಾಡಿದೆ. ಮಹಿಳೆಯರು ಕಾರ್ಯನಿರ್ವಹಿಸುವ ಸ್ಥಳದಲ್ಲಿ ಇಂದು ಹಲವು ಸಮಸ್ಯೆಗಳು ಹಾಗೂ ಒತ್ತಡದ ಪರಿಸ್ಥಿತಿ ಎದುರಿಸುತ್ತಿರುವುದು ಕಂಡುಬಂದಿದೆ. ಶಿಶುಪಾಲನಾ ರಜೆ ಸಮರ್ಪಕ ಜಾರಿಯಾಗಬೇಕು. ಸಮಾನತೆ ಎಲ್ಲಾ ಕ್ಷೇತ್ರಗಳಲ್ಲೂ ಬರಬೇಕು ಎಂದರು.

ಮಹಿಳೆಯರು ಆರೋಗ್ಯ ಸಮಸ್ಯೆಗಳಿಂದ ಸುಧಾರಣೆ ಹೊಂದಬೇಕು. ಉತ್ತಮ ಆರೋಗ್ಯದಿಂದ ಮಾತ್ರ ಕೆಲಸ-ಕಾರ್ಯಗಳಲ್ಲಿ ಪ್ರಗತಿ ಸಾಧಿಸಬಹುದು. ಎಸ್.ಎಸ್.ಎಲ್.ಸಿ, ಪಿಯುಸಿಯಲ್ಲಿ ಮುಂದಿರುವ ಹೆಣ್ಣು ಮಕ್ಕಳು ಪಿಯುಸಿ ನಂತರ ಐಟಿ, ತಾಂತ್ರಿಕ ಕ್ಷೇತ್ರಗಳಿಗೆ ಮುನ್ನುಗ್ಗಬೇಕು. ಅದಕ್ಕಾಗಿ ಪಿಯುಸಿ ಮುಗಿದ



ತಕ್ಷಣವೇ ಪೋಷಕರು ಹೆಣ್ಣುಮಕ್ಕಳ ಮದುವೆ ಮಾಡದೇ ಉನ್ನತ ಶಿಕ್ಷಣಕ್ಕೆ ಅವಕಾಶ ಮಾಡಿಕೊಡಬೇಕು. ಸರ್ಕಾರ ಜಾರಿಗೊಳಿಸಿರುವ ಗೃಹಲಕ್ಷ್ಮೀ ಹಾಗೂ ಶಕ್ತಿ ಗ್ಯಾರಂಟಿ ಯೋಜನೆಗಳು ಮಹಿಳೆಯರಿಗೆ ಶಕ್ತಿ, ಆತ್ಮಸ್ಥೈರ್ಯ ತುಂಬಲಿವೆ. ದೇಶದ ಅಭಿವೃದ್ಧಿಯಲ್ಲಿ ಮಹಿಳೆಯರು ಪ್ರಮುಖ ಪಾತ್ರ ವಹಿಸಲು ನೆರವಾಗಲಿವೆ ಎಂದರು

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಎಚ್.ವಿ. ಚಂದ್ರು, ಮಾತನಾಡಿ, 50 ವರ್ಷಗಳನ್ನು ಪೂರೈಸಿರುವ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವು ಮಹಿಳೆಯರು ಸ್ವಾಭಿಮಾನ ಪ್ರದರ್ಶಿಸುವ ದಿನವಾಗಿದೆ. ಸ್ತ್ರೀಶಕ್ತಿ ಗುಂಪುಗಳು ಹಾಗೂ ಸ್ವಸಹಾಯ ಸಂಘಗಳಿಂದ ಮಹಿಳೆಯರ ಜೀವನಮಟ್ಟ ಸುಧಾರಿಸಿದೆ. ಸರ್ಕಾರ ಜಾರಿಗೊಳಿಸಿರುವ ಪಂಚ ಗ್ಯಾರಂಟಿ ಯೋಜನೆಗಳು ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ನೆರವಾಗಿವೆ. ಮಹಿಳೆಯರು ಸಾಕಷ್ಟು ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದ್ದಾರೆ. ಜಿಲ್ಲೆಯಲ್ಲಿ ಸಾಕಷ್ಟು ಮಹಿಳಾ ಅಧಿಕಾರಿಗಳು ಇದ್ದಾರೆ. ಸರ್ಕಾರದ ಯೋಜನೆಗಳನ್ನು ಸದುಪಯೋಗ ಮಾಡಿಕೊಂಡು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಬೇಕು ಎಂದರು.

ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಗಿರಿಧರ್, ಸಹಾಯಕ ಕೃಷಿ ನಿರ್ದೇಶಕಿ ರೂಪ, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರಾದ ಮಂಜುಳ, ಚಿನ್ನಸ್ವಾಮಿ, ರಾಜು, ಸುಕುಮಾರ್, ಮಲ್ಲಿಕಾರ್ಜುನ, ಎಂ. ಕುಮಾರ್, ಸಿದ್ದಿಖ್, ರಮೇಶ್, ಕುಮಾರಸ್ವಾಮಿ, ರಾಜೇಶ್, ಗಣೇಶ್‌ಕುಮಾರ್, ಲಿಂಗಣ್ಣ, ರಂಗಸ್ವಾಮಿ, ಜಡೇಯಪ್ಪ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಲಾವತಿ, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಒಳ ಮೀಸಲಾತಿ ಸಾಧಕ-ಬಾಧಕ ಕುರಿತ ವಿಚಾರ ಸಂಕಿರಣ ನಾಳೆ

**ಚಾಮರಾಜನಗರ:** ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ, ಗಡಿಕಟ್ಟೆಯಜಮಾನರುಗಳು ಹಾಗೂ ಆದಿ ಕರ್ನಾಟಕ ಅಭಿವೃದ್ಧಿ ಸಂಘದ ಆಸ್ತಿ ಸಂರಕ್ಷಣಾ ಸಮಿತಿ ಸಹಯೋಗದಲ್ಲಿ ಮಾ.15 ರಂದು ನಗರದಲ್ಲಿ ಒಳ ಮೀಸಲಾತಿ ಸಾಧಕ-ಬಾಧಕ ಕುರಿತು ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ತಾ.ಪಂ. ಮಾಜಿ ಅಧ್ಯಕ್ಷ ಆರ್. ಮಹದೇವ್ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಅಂದು ಬೆಳಗ್ಗೆ 10.30ಕ್ಕೆ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ವಿಚಾರ ಸಂಕಿರಣ ನಡೆಯಲಿದ್ದು, ಮೈಸೂರಿನ ಉರಿಲಿಂಗ ಪೆದ್ದಿಮಠದ ಜ್ಞಾನಪ್ರಕಾಶಸ್ವಾಮೀಜಿ ದಿವ್ಯಸಾನಿಧ್ಯ ವಹಿಸಲಿದ್ದಾರೆ. ಕೊಳ್ಳೇಗಾಲ ಕ್ಷೇತ್ರದ ಶಾಸಕ ಎ.ಆರ್.ಕೃಷ್ಣಮೂರ್ತಿ ಅಧ್ಯಕ್ಷತೆ ವಹಿಸಲಿದ್ದಾರೆ. ರಾಜ್ಯ ಎಸ್ಸಿ, ಎಸ್ಟಿ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಡಿ. ಚಂದ್ರಶೇಖರಯ್ಯ ಅವರು ವಿಚಾರ ಮಂಡನೆ ಮಾಡಲಿದ್ದಾರೆ ಎಂದರು.

ಒಳ ಮೀಸಲಾತಿ ನೀಡುವ ಸಂಬಂಧ ಬಲಗೈ ಸಮುದಾಯಕ್ಕೆ ಭಾರಿ ನ್ಯಾಯ ವಾಗಿದ್ದು, ನ್ಯಾ. ನಾಗಮೋಹನ್ ದಾಸ್ ಅವರು ನಮ್ಮ ಸಮುದಾಯಕ್ಕೆ ದೊಡ್ಡ ವಂಚನೆ ಮಾಡಿದ್ದಾರೆ. ಹೀಗಾಗಿ ರಾಜ್ಯ ಸರ್ಕಾರ ನಾಗಮೋಹನ್ ದಾಸ್ ಆಯೋಗದ ವರದಿಯನ್ನು ತಿರಸ್ಕಾರ ಮಾಡಬೇಕೆಂಬುವುದು ನಮ್ಮೆಲ್ಲ ಒಕ್ಕೊರ ಲಿನ ಅಭಿಪ್ರಾಯವಾಗಿದೆ. ಮೀಸಲಾತಿ ಹಂಚಿಕೆಯ ಗೊಂದಲದಲ್ಲಿ ಬಿಂದು ಅನುಷ್ಠಾನ ಗೊಂದಲವಾಗಿದೆ. ಇದರಿಂದ ಪರಿಶಿಷ್ಟ ಜಾತಿ 101 ಜಾತಿಗಳಿಗೂ ಅನ್ಯಾಯವಾಗುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಅಯ್ಯನಪುರ ಶಿವಕುಮಾರ್, ಹೊಬ್ಬಸೂರು ರಂಗಸ್ವಾಮಿ, ನಗರಸಭಾ ಮಾಜಿ ಸದಸ್ಯ ಆರ್. ಪಿ.ನಂಜುಂಡಸ್ವಾಮಿ, ನಲ್ಲೂರು ಮಹದೇವಸ್ವಾಮಿ, ಚಾಮುಲ್ ನಿರ್ದೇಶಕ ಕಮರವಾಗಿ ರೇವಣ್ಣ, ಸೋಮಣ್ಣ, ನಾಗವಳ್ಳಿ ನಾಗಯ್ಯ ಇತರರು ಇದ್ದರು.



## ಹೆಣ್ಣು ಮನೆಯ ಕಣ್ಣು: ನಾಗರತ್ನಮ್ಮ

**ಗುಂಡ್ಲುಪೇಟೆ:** ಹೆಣ್ಣು ಮನೆಯ ಕಣ್ಣು, ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂಬ ನುಡಿಗಳ ಮೂಲಕ ಮಹಿಳಾ ಸಾಧಕೀಯರ ಆದರ್ಶಗಳನ್ನು ವಿದ್ಯಾರ್ಥಿಗಳಿಗೆ ಹುಣಸಿನಪುರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ಬಿ. ನಾಗರತ್ನಮ್ಮ ತಿಳಿಸಿದರು.

ತಾಲೂಕು ಕಬ್ಬಹಳ್ಳಿ ಗ್ರಾಮದ ಶ್ರೀ ಮದ್ದಾನೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಮಹಿಳಾ ಸಬಲೀಕರಣ ಕೋಶ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಮಹಿಳಾ ಸಾಧಕೀಯರ ಸನ್ಮಾನ ಕಾರ್ಯಕ್ರಮ ಹಾಗೂ ಮಹಿಳಾ ಸಾಧಕೀಯರ ಭಾವಚಿತ್ರಗಳ ಪ್ರದರ್ಶನವನ್ನು ಆಯೋಜಿಸಲಾಗಿತ್ತು.

ಐಕ್ಯೂಎಸಿ ಸಂಚಾಲಕರಾದ ಶ್ರೀ ಮಹದೇವಸ್ವಾಮಿ ಆರ್. ಮಾತನಾಡಿ, ಭಾರತದ ಸಂಸ್ಕೃತಿ ಪರಂಪರೆಯಲ್ಲಿ ಸ್ತ್ರೀಗೆ ವಿಶೇಷ ಸ್ಥಾನಮಾನವಿದ್ದು, ಸಂವಿಧಾನದಲ್ಲಿ ಮಹಿಳೆಗೆ ಸಮಾನ ಅವಕಾಶಗಳನ್ನು ಕಲ್ಪಿಸಿದ್ದು, ಪ್ರಸ್ತುತ ಸಮಾಜದ ಎಲ್ಲಾ ರಂಗಗಳಲ್ಲಿಯೂ ಮಹಿಳೆಯು ತಮ್ಮದೇ ಆದ ವಿಶೇಷ ಛಾಪನ್ನು ಮೂಡಿಸಿದ್ದಾರೆ. ಗ್ರಾಮೀಣ ಮಹಿಳಾ ವಿದ್ಯಾರ್ಥಿಗಳು ಶಿಕ್ಷಣವನ್ನು ಪಡೆದು ಅಷ್ಟಕ್ಕೆ ಸೀಮಿತವಾಗದೆ ಉದ್ಯೋಗಸ್ಥರಾಗಿ, ನಾಯಕತ್ವ ಪಡೆದು ಅಭಿವೃದ್ಧಿಯ ಚಾಲಕರಾಗಬೇಕು ಎಂದು ಹೇಳಿದರು.

ಅಧ್ಯಕ್ಷತೆಯನ್ನು ವಹಿಸಿದ ಪ್ರಾಂಶುಪಾಲ ಡಾ.ಕವಿತಾ ಎಂ.ಎನ್. ಮಾತನಾಡಿ, ಸಮ ಸಮಾಜ ಕಟ್ಟುವಲ್ಲಿ ಹೆಣ್ಣು ಮಕ್ಕಳ ಪಾತ್ರ ಮಹತ್ತರವಾದದ್ದು ಮತ್ತು ಯುದ್ಧ ವಿರೋಧಿಯಾಗಿ ಶಾಂತಿ ಕಟ್ಟುವ ಅದಮ್ಯ ಚೈತನ್ಯ ಹೆಣ್ಣು. ಹೆಣ್ಣನ್ನು ಶೋಷಿಸದೆ ಬೆಳೆಸುವಲ್ಲಿ ಪ್ರತಿಯೊಬ್ಬರು ಭಾಗಿಯಾಗಬೇಕು'' ಎಂದು ಹೇಳಿದರು .

ಕಾರ್ಯಕ್ರಮವನ್ನು ಮಹಿಳಾ ಸಬಲೀಕರಣ ಕೋಶದ ಸಂಚಾಲಕರಾದ ಶ್ರೀಮತಿ ಅಮೂಲ್ಯ ಎಸ್ ಆಯೋಜಿಸಿದ್ದರು. ಪ್ರಾಧ್ಯಾಪಕರಾದ ಡಾ. ತೇಜಸ್ವಿನಿ, ಉಪನ್ಯಾಸಕರುಗಳಾದ ರೂಪ, ಶಾಲಿನಿ, ವಿದ್ಯಾರ್ಥಿ ಪ್ರತಿನಿಧಿ ಐಶ್ವರ್ಯ, ಅಧ್ಯಾಪಕ ವೃಂದ ಮತ್ತು ಅಧ್ಯಾಪಕೇತರ ವರ್ಗ ವಿದ್ಯಾರ್ಥಿಗಳು ಭಾಗವಹಿಸಿದ್ದರು.



## ರಸ್ತೆಯಲ್ಲಿ ಕೊಳಚೆ ನೀರು: ಅಭಿವೃದ್ಧಿ ಮರೆತ ಗ್ರಾಪಂ

**ಗುಂಡ್ಲುಪೇಟೆ:** ತಾಲೂಕಿನ ಬರಗಿ ಗ್ರಾಮದಲ್ಲಿ ಚರಂಡಿ ತುಂಬಿ ರಸ್ತೆಯ ಮೇಲೆ ಚರಂಡಿ ಕೊಳಕು ನೀರು ಹರಿಯುತಿದ್ದರೂ ಪಕ್ಕದಲ್ಲೇ ಗ್ರಾ.ಪಂ ಕಾರ್ಯಾಲಯವಿದ್ದರೂ ಚರಂಡಿ ನೀರು ಸರಾಗವಾಗಿ ಹರಿಯುವ ಸಣ್ಣ ಕೆಲಸವನ್ನೂ ಮಾಡಿಸದ ಗ್ರಾ.ಪಂ ಅಭಿವೃದ್ಧಿ ಅಧಿಕಾರಿ ಯಾವುದೇ ಅಭಿವೃದ್ಧಿ ಕಾರ್ಯ ಮಾಡುತ್ತಿಲ್ಲ ಎಂದು ಗ್ರಾಮದ ಮಹೇಶ್ ಆರೋಪಿಸಿದ್ದಾರೆ.

ಬರಗಿ, ಹೊಂಗಹಳ್ಳಿ,ನಾಗಪಟ್ಟಣ, ಮುಕ್ತಿ ಕಾಲೋನಿ, ಮುಂಟೀಪುರ ಗ್ರಾಮಗಳು ಬರಗಿ ಗ್ರಾ.ಪಂ ವ್ಯಾಪ್ತಿಗೆ ಬರುತ್ತದೆ ಬರಗಿಯಿಂದ ನಾಗಪಟ್ಟಣಕ್ಕೆ, ಬರಗಿ ಫಾರಂ ಕಡೆ ತೆರಳುವ ರಸ್ತೆಯ ಮೇಲೆ ಕೊಳಚೆ ನೀರು ಹರಿಯುತಿದ್ದು ಜಮೀನಿಗೆ ತೆರಳುವ ರೈತರು, ಕೂಲಿ ಕಾರ್ಮಿಗರು ಕೊಳಚೆ ನೀರು ತುಳಿದು ಓಡಾಡುವ ಪರಿಸ್ಥಿತಿ ಇದ್ದು ದುರ್ವಾಸನೆಗೆ ಮೂಗು ಮುಚ್ಚಿ ದಿನ ತಿರುಗಾಡುವ ದಯಸ್ಥಿತಿ ಎದುರಾಗಿದೆ.



ಗ್ರಾ.ಪಂ ಯಿಂದ ನೂರು ಮೀಟರ್ ಅಂತರದಲ್ಲಿ ಇಂತಹ ಸಮಸ್ಯೆ ಬಗೆಹರಿಸದ ಅಭಿವೃದ್ಧಿ ಅಧಿಕಾರಿ ಸುತ್ತಮುತ್ತಲಿನ ಗ್ರಾಮಗಳ ಸಮಸ್ಯೆ ಬಗೆಹರಿಸಲು ಸಾಧ್ಯವೇ, ಜಿ.ಪಂ ಸಿಇಒ ಹಾಗೂ ಇಒ ಏನು ಮಾಡುತಿದ್ದಾರೆ ಗ್ರಾ.ಪಂ ಗಳಿಗೆ ಭೇಟಿ ನೀಡಿ ಸಾರ್ವಜನಿಕರ ಸಮಸ್ಯೆ ಗ್ರಾ.ಪಂ ಅಧಿಕಾರಿಗಳು ನೌಕರರ ಆಡಳಿತ ವೈಖರಿ ಬಗ್ಗೆ ಪರಿಶೀಲಿಸಬೇಕು ಎಂದು ಗ್ರಾಮಸ್ಥ ಮಹೇಶ್ ಒತ್ತಾಯಿಸಿದ್ದಾರೆ. ರಸ್ತೆ ಬದಿಯಲ್ಲಿ ಸಣ್ಣ ಕಾಲುವೆ ತೋಡಿ ಮುಂದೆ ಇಂಗು ಗುಂಡಿಯ ರೀತಿ ಮಾಡಿದರೆ ರಸ್ತೆಗೆ ಚರಂಡಿ ನೀರು ಹರಿಯುವುದು ಕಡಿಮೆಯಾಗುತ್ತದೆ ಆದರೂ ಇಂತ ಸಣ್ಣ ಕೆಲಸವನ್ನು ಗ್ರಾ.ಪಂ ಯವರು ಮಾಡಲಿಲ್ಲ ಎಂದರೆ ಎಂತಹ ದುರ್ದೈವ ಎಂದು ಆರೋಪಿಸಿದರು.

## ಮಾ.16ರಂದು ವಿಚಾರ ಸಂಕಿರಣ, ಕಾರ್ಯಾಗಾರ

**ಚಾಮರಾಜನಗರ:** ತಾಲೂಕು ಆಡಳಿತ, ತಾಲೂಕು ಪಂಚಾಯಿತಿ, ಸಮಾಜಕಲ್ಯಾಣ ಇಲಾಖೆ ಮತ್ತು ಪ್ರಜಾ ಪರಿವರ್ತನಾ ವೇದಿಕೆ ಜಿಲ್ಲಾ ಘಟಕ ಸಂಯುಕ್ತ ಆಶ್ರಯದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮ 1989 ಮತ್ತು ತಿದ್ದುಪಡಿ ಅಧಿನಿಯಮಗಳು ಹಾಗೂ ನಾಗರಿಕ ಹಕ್ಕು ಸಂರಕ್ಷಣಾ ಅಧಿನಿಯಮ ಕುರಿತಾದ ಹರವೆ ಹೋಬಳಿ ಮಟ್ಟದ ವಿಚಾರ ಸಂಕಿರಣ ಮತ್ತು ಕಾರ್ಯಾಗಾರವನ್ನು ಮಾರ್ಚ್ 16 ರಂದು ಬೆಳಗ್ಗೆ 10.30 ಗಂಟೆಗೆ ಚಾಮರಾಜನಗರ ತಾಲೂಕಿನ ಹರವೆ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಹರವೆ ವಿರಕ್ತಮಠದ ಪೀಠಾಧ್ಯಕ್ಷರಾದ ಸರ್ಪಭೂಷಣ ಸ್ವಾಮೀಜಿರವರು ದಿವ್ಯ ಸಾನಿಧ್ಯ ವಹಿಸುವರು. ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ಎನ್. ಮುನಿರಾಜು ಅವರು ಕಾರ್ಯಕ್ರಮ ಉದ್ಘಾಟಿಸುವರು. ತಹಶೀಲ್ದಾರರಾದ ಬಿ. ಗಿರಿಜಾ ಅವರು ಅಧ್ಯಕ್ಷತೆ ವಹಿಸುವರು.

ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಎಂ.ಎಸ್. ಗಿರಿಧರ್, ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರಾದ ಎಂ.ಕೆ. ಮೇಘಾ, ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಸುಬ್ಬರಾಯ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಎಂ. ನಾಗೇಶ್ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಪೊಲೀಸ್ ಉಪಾಧೀಕ್ಷಕರಾದ ಎನ್. ಸ್ನೇಹರಾಜ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಪುಟ್ಟಸ್ವಾಮಿ, ಪ್ರಗತಿಪರ ಚಿಂತಕರಾದ ಅರಕಲವಾಡಿ ನಾಗೇಂದ್ರ ಅವರು ವಿಚಾರ ಮಂಡಿಸುವರು.

ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರಾದ ಕೆರೆಹಳ್ಳಿ ನವೀನ್, ಸರಸ್ವತಮ್ಮ ಸುಬ್ಬನಾಯಕ, ತಾಲೂಕು ಪಂಚಾಯತ್ ಮಾಜಿ ಸದಸ್ಯರಾದ ಎಂ.ಸಿ. ರವಿಕುಮಾರ್ ಅವರು ವಿಶೇಷ ಆಹ್ವಾನಿತರಾಗಿ ಭಾಗವಹಿಸುವರು. ಹರವೆ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರಾದ ಎಂ.ಆರ್. ಸವಿತಾ, ಪ್ರಜಾ ಪರಿವರ್ತನಾ ವೇದಿಕೆ ಜಿಲ್ಲಾಧ್ಯಕ್ಷ ಸಿ.ಎಂ. ಕೃಷ್ಣಮೂರ್ತಿ, ತಾಲೂಕು ಸಂಯೋಜಕರಾದ ಎಂ. ಪುರುಷೋತ್ತಮ್ ಮುಕ್ಕಡಹಳ್ಳಿ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

ಎಲ್ಲೆಂದರಲ್ಲಿ ಕಸ ಸುರಿದರೆ ಬೀಳುತ್ತೆ ದಂಡ: ಪುರಸಭೆಯಿಂದ ಸಿಸಿಟಿವಿ ಕಣ್ಗಾವಲು

## ಸ್ವಚ್ಛ ಪಟ್ಟಣಕ್ಕೆ ಸಹಕರಿಸಲು ಮನವಿ

**ಗುಂಡ್ಲುಪೇಟೆ:** ಪಟ್ಟಣದ ಕೆಲವೆಡೆ ಕಸ ಸುರಿಯದಂತೆ ಎಚ್ಚರಿಕೆ ವಹಿಸಲು ಸಿಸಿ ಟಿವಿ ಅಳವಡಿಸುವಂತೆ ಪುರಸಭೆಯ ಆಡಳಿತಧಿಕಾರಿ ಕೊಳ್ಳೆಗಾಲ ಉಪವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ ಅವರ ಆದೇಶದ ಮೇರೆಗೆ ಪುರಸಭೆ ಯಿಂದ ಸಿಸಿ ಟಿವಿ ಅಲವಡಿಸಲಾಗುತ್ತಿದೆ.

ಪಟ್ಟಣದ ಕೆಇಬಿ ರಸ್ತೆ, ಶಿವಾನಂದ ವೃತ,ಪುರಸಭೆ ಕಛೇರಿ ಮುಂಭಾಗ, ನಾಯಕರ ಬೀದಿ, ಮದ್ದನೇಶ್ವರ ಶಾಲೆ ರಸ್ತೆ ,ಅಂಬೇಡ್ಕರ್ ವೃತ ಬಳಿ ಸಿಸಿ ಕ್ಯಾಮರಾ ಅಲವಡಿಕೆ ಕಾರ್ಯ ನಡೆಯುತಿದ್ದು ಎಲ್ಲೆಂದರಲ್ಲಿ ಕಸ ಹಾಕಿದರೆ ದಂಡ ಹಾಕಲಾಗುವುದು ಎಂದರು.

ಸ್ವಚ್ಛ ಸರ್ವೇಕ್ಷಣ ಪ್ರಾರಂಭವಾಗುತ್ತಿದ್ದು ಭಾರತಾದ್ಯಂತ ನಗರಸಭೆಯ ಸ್ಥಳೀಯ ಸಂಸ್ಥೆಗಳು ಸ್ವಚ್ಛತಾ ವಾಗಿರುವ ಬಗ್ಗೆ ಸ್ವಚ್ಛತಾ ಸ್ಪರ್ಧೆ ಮಾಡಲಾಗುತ್ತಿದೆ ಪ್ರತಿಯೊಂದು ನಗರಸಭೆಗಳು ಮನೆ ಮನೆ ಕಸ ಸಂಗ್ರಹಣೆ, ಕಸ ವಿಲೇವಾರಿ, ಸಾರ್ವಜನಿಕ ಸಮುದಾಯ ಶೌಚಾಲಯ ಬಳಕೆ ಮತ್ತು ಸ್ವಚ್ಛತೆ ಮಾಡುತ್ತಿರುವುದು,ಹಸಿ ಕಸದಿಂದ ಗೊಬ್ಬರವನ್ನು ಮಾಡುತ್ತಿರುವುದು, ಪ್ಲಾಸ್ಟಿಕ್ ಚೀಲ ನಿಷೇಧ



ಮಾಡಿರುವುದು, ಪ್ರತಿದಿನ ವಾಣಿಜ್ಯ ಬೀದಿಗಳಲ್ಲಿ ಕಸ ಗುಡಿಸುವುದು, ಸಾರ್ವಜನಿಕರು ಕಸ ವಿಲ್ಲವಾರಿಯಲ್ಲಿ ಸಹಭಾಗಿತ್ವ ನೀಡುತ್ತಿರುವುದು, ಪಟ್ಟಣದ ಸೌಂದರ್ಯ ಹೆಚ್ಚಿಸುವುದು.

ಮಳೆನೀರು ಚರಂಡಿ ಸ್ವಚ್ಛ ಮಾಡುವುದು ಪೌರಕಾರ್ಮಿಕರಿಗೆ ಆರೋಗ್ಯ ಪರಿಶೀಲನೆ ಮತ್ತು ಅವರಿಗೆ ಸಂಬಂಧಿಸಿದ ಅಗತ್ಯ ಸೇವೆಗಳನ್ನು ನೀಡುತ್ತಿರುವುದು ಈ ಎಲ್ಲಾ ವಿಷಯಗಳ ಬಗ್ಗೆ ಪರಿಶೀಲಿಸಿ ಶ್ರೇಯಾಂಕ ನೀಡುವ ಆಧಾರದ ಮೇರೆಗೆ ಗುಂಡ್ಲುಪೇಟೆ ಪಟ್ಟಣವು ಸ್ವಚ್ಛ ಪಟ್ಟಣ ಎಂದು ಕೇಂದ್ರ ಸರ್ಕಾರದಿಂದ ಸ್ವಚ್ಛ ಗುಂಡ್ಲುಪೇಟೆ ಎಂದು ಪ್ರಮಾಣೀಕರಿಸಲಾಗುವುದು.

ಈ ಸಂಬಂಧ ಗುಂಡ್ಲುಪೇಟೆ ಪಟ್ಟಣದ ಸಾರ್ವಜನಿಕರು ಸ್ವಚ್ಛ ಸರ್ವೇಕ್ಷಣೆ 26 ರಲ್ಲಿ ಭಾಗವಹಿಸಿ ಗುಂಡ್ಲುಪೇಟೆ ಪುರಸಭೆ ನೀಡುವ ನಿರ್ದೇಶನವನ್ನು ಪಾಲಿಸಿ ಸಾರ್ವಜನಿಕರ ಸಹಕಾರದೊಡನೆ ಈ ಒಂದು ಸ್ವಚ್ಛ ಸರ್ವೇಕ್ಷಣೆ ಸ್ಪರ್ಧೆಯಲ್ಲಿ ಭಾಗವಹಿಸಿ ಸ್ವಚ್ಛ ಪಟ್ಟಣ ಬೀರದು ಬರಲು ಪ್ರತಿಯೊಬ್ಬರು ಸ್ವಚ್ಛ ಸರ್ವೇಕ್ಷಾನದಲ್ಲಿ ಭಾಗವಹಿಸಿ ಗುಂಡ್ಲುಪೇಟೆ ಪುರಸಭೆಯು ಸ್ವಚ್ಛಪಟ್ಟಣ ಎಂಬುದಕ್ಕೆ ಹೆಸರು ಪಡೆಯಲು ಸಹಕಾರ ನೀಡಬೇಕು ಎಂದು ಮುಖ್ಯಾಧಿಕಾರಿ ಸರವಣ ಕೋರಿಸಿದರು.

ಜಿಲ್ಲಾ, ತಾಲೂಕುಮಟ್ಟದ ಅಧಿಕಾರಿಗಳ ಸಭೆಯಲ್ಲಿ ಮೋನಾ ರೋತ್ ಸಲಹೆ

## ಹೆಚ್ಚಿನ ಫಲಿತಾಂಶಕ್ಕಾಗಿ ಅಗತ್ಯ ಮಾರ್ಗದರ್ಶನ ನೀಡಿ

**ಚಾಮರಾಜನಗರ:** ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.86.37ರಷ್ಟಿರುವ ಜಿಲ್ಲೆಯ ಫಲಿತಾಂಶವನ್ನು ಈ ಬಾರಿ ಶೇ. 95ಕ್ಕಿಂತ ಹೆಚ್ಚಿನ ಫಲಿತಾಂಶಕ್ಕಾಗಿ ವಿದ್ಯಾರ್ಥಿಗಳಿಗೆ ಅಗತ್ಯ ಮಾರ್ಗದರ್ಶನ ನೀಡಬೇಕು ಎಂದು ಜಿ.ಪಂ. ಸಿಇಒ ಮೋನಾ ರೋತ್ ಸೂಚಿಸಿದರು.

ಎಸ್.ಎಸ್.ಎಲ್.ಸಿ ಫಲಿತಾಂಶವನ್ನು ಉತ್ತಮ ಪಡಿಸುವ ಸಂಬಂಧ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಂದು ನಡೆದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳು ಸರಳ ಪ್ರಶ್ನೆಗಳಿಗೆ ಕಡ್ಡಾಯವಾಗಿ ಉತ್ತರಿಸಲು ಶಿಕ್ಷಕರು ಸೂಕ್ತ ಮಾರ್ಗದರ್ಶನ ನೀಡಬೇಕು. ಎಸ್.ಎಸ್.ಎಲ್.ಸಿ ಪೂರ್ವ ಸಿದ್ಧತಾ ಪರೀಕ್ಷೆ-3ರಲ್ಲಿ ಚಾಮರಾಜನಗರ ತಾಲ್ಲೂಕಿನ ಫಲಿತಾಂಶವು ಉಳಿದ ತಾಲ್ಲೂಕುಗಳಿಗಿಂತ ಕಡಿಮೆ ಇದ್ದು, ಮುಖ್ಯ ಪರೀಕ್ಷೆವರೆಗಿನ ಉಳಿದ ದಿನಗಳಲ್ಲಿ ಫಲಿತಾಂಶವನ್ನು ಉತ್ತಮ ಪಡಿಸಲು ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಬೇಕು ಎಂದರು.

ಪರೀಕ್ಷಾ ಸಮಯದಲ್ಲಿ ಯುಗಾದಿ ಮತ್ತು ರಂಜಾನ್ ಹಬ್ಬಗಳ ಆಚರಣೆ ಇರುವುದರಿಂದ ವಿದ್ಯಾರ್ಥಿಗಳಿಗೆ ಈ ಹಬ್ಬಗಳ ಬಗ್ಗೆ ಮಹತ್ವ ನೀಡದೇ ಪರೀಕ್ಷೆಯ ಗಂಭೀರತೆಯ ಬಗ್ಗೆ ತಿಳಿ ಹೇಳಬೇಕು. ಉತ್ತಮ ಫಲಿತಾಂಶ ಪಡೆಯಲು ಸೂಕ್ತ ಸಲಹೆಗಳನ್ನು ನೀಡಬೇಕು. ಇದಕ್ಕೆ ಪೂರಕವಾಗಿ ಹಬ್ಬದ ದಿನಗಳಂದು ಶಾಲೆ ನಡೆಸಲು ಜಿಲ್ಲೆಯ ಎಲ್ಲಾ ಪ್ರೌಢಶಾಲಾ ಮುಖ್ಯೋಪಾಧ್ಯಾಯರು ಮುಂದಾಗಬೇಕು ಎಂದು ನಿರ್ದೇಶನ ನೀಡಿದರು.

ಪರೀಕ್ಷಾ ಸಮಯದಲ್ಲಿ ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಯಾವುದೇ ರೀತಿಯ ಒತ್ತಡಕ್ಕೆ ಒಳಗಾಗದಂತೆ ಈಗಾಗಲೇ ಸಾಧಿಸಿರುವ ಕಲಿಕಾ ಪ್ರಗತಿಯನ್ನು ಖಾತ್ರಿ ಪಡಿಸಿಕೊಂಡು ಪುನರಾವರ್ತನೆ ಮತ್ತು ಪುನರ್ ಅಭ್ಯಾಸ ಮಾಡಲು ಸಲಹೆ ನೀಡಬೇಕು. ಪೋ?ಕರು ವಿದ್ಯಾರ್ಥಿಗಳ ಅಧ್ಯಯನಕ್ಕೆ ಮನೆಯಲ್ಲಿ ಸೂಕ್ತ ವಾತಾವರಣ, ಅವಕಾಶ ಒದಗಿಸಬೇಕು. ಕಲಿಕೆಗೆ ಸೂಕ್ತವಾದ ಪ್ರೇರಣೆ, ಪ್ರೋತ್ಸಾಹ ನೀಡಬೇಕು. ಇತರೆ ವಿದ್ಯಾರ್ಥಿಗಳೊಡನೆ ಹೋಲಿಕೆ ಮಾಡಿ ಯಾವುದೇ ರೀತಿಯ ಒತ್ತಡ ಹೇರದಂತೆ ವಿದ್ಯಾರ್ಥಿಗಳ ಪೋಷಕರಿಗೆ ತಿಳಿ ಹೇಳಬೇಕು ಎಂದರು.

ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಚಂದ್ರಪಾಟೀಲ್, ಡಯಟ್ ಪ್ರಾಂಶುಪಾಲರಾದ ಕಾಶಿನಾಥ್, ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಶೆಟ್ಟಿ, ಶಿಕ್ಷಣ ಇಲಾಖೆಯ ಇತರೆ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

### ಅಗತ್ಯ ಕ್ರಮ ವಹಿಸಿ

ಪರೀಕ್ಷೆಯು ಮಾರ್ಚ್ 18 ರಿಂದ ಏಪ್ರಿಲ್ 2ರವರೆಗೆ ನಡೆಯಲಿದ್ದು, ಪರೀಕ್ಷಾ ವಿಷಯಗಳ ನಡುವೆ ವಿದ್ಯಾರ್ಥಿಗಳು ಅಭ್ಯಾಸ ಮಾಡಲು ಅನುಕೂಲವಾಗುವಂತೆ ಬಿಡುವಿನ ದಿನಗಳಂದು ಕಡ್ಡಾಯವಾಗಿ ಶಾಲೆ ನಡೆಸಿ ವಿದ್ಯಾರ್ಥಿಗಳಿಗೆ ಅಗತ್ಯ ಸಲಹೆಗಳನ್ನು ನೀಡಬೇಕು. ವಿದ್ಯಾರ್ಥಿನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಹಬ್ಬದ ದಿನಗಳಂದು ಮತ್ತು ಪರೀಕ್ಷಾ ವಿಷಯಗಳ ನಡುವೆ ಇರುವ ಬಿಡುವಿನ ದಿನಗಳಂದು ಮನೆಗೆ ಕಳುಹಿಸಬಾರದು. ವಿದ್ಯಾರ್ಥಿನಿಲಯಗಳಲ್ಲಿಯೇ ಅಭ್ಯಾಸ ನಡೆಸಲು ಅಗತ್ಯ ಕ್ರಮ ವಹಿಸಬೇಕು.

## ಕಿರುಸುದ್ದಿ

### ಕಾಳಮ್ಮದೇವಿ ಹಬ್ಬ

**ಮಂಡ್ಯ:** ತಾಲೂಕಿನ ಹೊಳಲು ಗ್ರಾಮದಲ್ಲಿ ಗಂಗಾ ಮತಸ್ಥರ ಕುಲದೇವತೆಯಾದ ಕಾಳಮ್ಮದೇವಿ ಹಬ್ಬವನ್ನು ಸಂಭ್ರಮ ಸಡಗರದಿಂದ ಆಚರಿಸಿದರು. ರಾತ್ರಿ ದೇವಿಗೆ ತಂಬಿಟ್ಟಿನ ಆರತಿಯನ್ನು ತಮಟೆ-ನಗಾರಿಯೊಂದಿಗೆ ಗ್ರಾಮದ ಹೊರ ವಲಯದಲ್ಲಿರುವ ಶ್ರೀ ಕಾಳಮ್ಮ ದೇವಾಲಯಕ್ಕೆ ಮಹಿಳೆಯರು ಮತ್ತು ಮಕ್ಕಳು ತೆರಳಿ ಪೂಜೆ ಸಲ್ಲಿಸಿದರು. ಶುಕ್ರವಾರ ಮಧ್ಯಾಹ್ನ ಗ್ರಾಮದ ಶ್ರೀರಾಮ ಮಂದಿರದಿಂದ ಬಾಯಿ ಬೀಗ ಧರಿಸಿದ ಮಹಿಳೆಯರು ಮತ್ತು ಮಕ್ಕಳು ಮೆರವಣಿಗೆಯಲ್ಲಿ ತೆರಳಿ ಶ್ರೀ ದೊಡ್ಡಮ್ಮ ತಾಯಿ ದೇವಸ್ಥಾನ, ಶ್ರೀ ಬಲಮುರಿ ಗಣಪತಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ಬಳಿಕ ಶ್ರೀ ಕಾಳಮ್ಮ ದೇವಿಯ ದೇವಸ್ಥಾನಕ್ಕೆ ತೆರಳಿ ಬಾಯಿ ಬೀಗ ತೆಗೆದು, ಅಲ್ಲೇ ಅಡುಗೆ ಮಾಡಿ ದೇವಿಗೆ ಅರ್ಪಿಸಿ ಪೂಜೆ ಸಲ್ಲಿಸಿದರು. ಹಬ್ಬದ ಪ್ರಯುಕ್ತ ದೇವಾಲಯ ಮತ್ತು ದೇವಿಗೆ ವಿಶೇಷ ಹೂವಿನ ಅಲಂಕಾರ ಮಾಡಲಾಗಿತ್ತು.

### ನೀರಿನ ಸಮಸ್ಯೆಯಾದರೆ ಸಹಾಯವಾಣಿ ಬಳಸಿಕೊಳ್ಳಿ

**ಮಳವಳ್ಳಿ:** ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾದರೇ ಸಹಾಯವಾಣಿಗೆ ಕರೆ ಮಾಡುವುದರ ಮೂಲಕ ನೀರಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದಾಗಿದೆ ಎಂದು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಕ ಅಧಿಕಾರಿ ಎಚ್.ಜಿ.ಶ್ರೀನಿವಾಸ್ ತಿಳಿಸಿದರು. ಪ್ರಸಕ್ತ ವರ್ಷ ಮಳೆ ಕಡಿಮೆಯಾಗಿ ಬೇಸಿಗೆ ಆರಂಭ ಮುನ್ನವೇ ತಾಪಮಾನ ಹೆಚ್ಚಾಗಿ ಕುಡಿಯುವ ನೀರಿಗೆ ಅಭಾವ ಉಂಟಾಗಿ, ಅಂತರ್ ಜಲಮಟ್ಟ ಕುಸಿಯುತ್ತಿರುವುದರಿಂದ ಬೆಳಗ್ಗೆ 8 ರಿಂದ ರಾತ್ರಿ 8ಗಂಟೆಯವರೆಗೆ ಸಹಾಯವಾಣಿಯನ್ನು ತೆರೆಯಲಾಗಿದೆ. ಯಾವುದಾದರೂ ದೂರುಗಳಿದ್ದರೆ ತಾಲ್ಲೂಕು ಪಂಚಾಯಿತಿ ಸಹಾಯವಾಣಿ ಸಂಖ್ಯೆ 08231-244000ಗೆ ಕರೆ ಮಾಡುವ ಮೂಲಕ ದೂರುಗಳನ್ನು ದಾಖಲಿಸಬಹುದಾಗಿದೆ ಎಂದು ಹೇಳಿದರು.

### ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಸೇವೆ ಆರಂಭ

**ಮಳವಳ್ಳಿ:** ಜಿಲ್ಲಾಸ್ಪತ್ರೆ ಮತ್ತು ವೈದ್ಯಾಕೀಯ ಆಸ್ಪತ್ರೆಗಳಲ್ಲಿ ಸೀಮಿತಗೊಂಡಿದ್ದ ರೇಡಿಯಾಲಿಜಿಸ್ಟ್ (ಸ್ಕ್ಯಾನಿಂಗ್)ಸೇವೆ ಮಳವಳ್ಳಿ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಆರಂಭಗೊಳ್ಳುತ್ತಿರುವುದು ಸಾರ್ವಜನಿಕರ ಸಮಸ್ಯೆಗೆ ಮುಕ್ತಿ ಸಿಕ್ಕಿದಂತಾಗಿದೆ. ತಾಲ್ಲೂಕು ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಯಂತ್ರ ಇದ್ದರೂ ಕೂಡ ರೇಡಿಯಾಲಿಜಿಸ್ಟ್ ತಜ್ಞ ಇಲ್ಲದಿರುವುದರಿಂದ ಕಳೆದ ಏಳೆಂಟು ವರ್ಷಗಳಿಂದ ಪ್ರಯೋಜನಕ್ಕೆ ಭಾರದೇ ಮೂಲೆಗೆ ಸೇರಲಾಗಿತ್ತು. ಶಾಸಕ ಪಿ.ಎಂ ನರೇಂದ್ರಸ್ವಾಮಿ ಹಿತಾಶಕ್ತಿ ಹಾಗೂ ಆಡಳಿತಾಧಿಕಾರಿ ಡಾ. ಸಂಜಯ್ ಅವರ ಪರಿಶ್ರಮದಿಂದಾಗಿ ಸರ್ಕಾರದಿಂದ ತಜ್ಞವೈದ್ಯರನ್ನು ನೇಮಕ ಮಾಡಲಾಗಿದ್ದು, ಗರ್ಭಿಣಿಯರಿಗಾಗಿ ಅಲ್ಟ್ರಾಸೌಂಡ್, ಸಿ.ಟಿ ಸ್ಕ್ಯಾನ್, ಸೇವೆಗಳನ್ನು ನೀಡಲು ಪೂರ್ವ ಸಿದ್ದತೆ ನಡೆಸಲಾಗುತ್ತಿದೆ. ಗರ್ಭಿಣಿಯರು ಸ್ಕ್ಯಾನಿಂಗ್‌ಗಾಗಿ ಖಾಸಗಿ ಆಸ್ಪತ್ರೆಯಲ್ಲಿ ಸಾವಿರಾರು ಹಣವನ್ನು ಕಟ್ಟಬೇಕಾಗಿತ್ತು. ಸರ್ಕಾರಿ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಆರಂಭಿಸುತ್ತಿರುವುದರಿಂದ ನಿಗಧಿತ ದರದಲ್ಲಿ ಸ್ಥಳೀಯವಾಗಿಯೇ ತಪಾಸಣೆ ಮಾಡಿಸಿಕೊಳ್ಳಬಹುದಾಗಿದೆ. ಆಡಳಿತಾಧಿಕಾರಿ ಡಾ. ಎಂ.ಡಿ ಸಂಜಯ್ ಮಾತನಾಡಿ, ತಾಲ್ಲೂಕು ಆಸ್ಪತ್ರೆಯಲ್ಲಿ ರೋಗಿಗಳಿಗೆ ಎಲ್ಲಾ ರೀತಿಯ ಚಿಕಿತ್ಸೆ ಯನ್ನು ನೀಡುವುದರ ಜೊತೆಗೆ ಎಲ್ಲಾ ರೀತಿಯ ರಕ್ತ ಪರೀಕ್ಷೆಗಳು, ಅಧುನಿಕ ಎಕ್ಸ್ ರೇ ಸೆಂಟರ್ ಸೇರಿದಂತೆ ಹಲವು ರೀತಿಯ ಶಸ್ತ್ರ ಚಿಕಿತ್ಸೆ ಯನ್ನು ನೀಡಲಾಗುತ್ತಿದೆ. ರೋಗಿಗಳಿಗೆ ಅಗತ್ಯವಾಗಿದ್ದ ಸ್ಕ್ಯಾನಿಂಗ್ ಸೇವೆಯನ್ನು ಆರಂಭಿಸಲಾಗುತ್ತಿದ್ದು ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬಹುದಾಗಿದೆ ಎಂದರು. ತಾಲ್ಲೂಕು ಆಸ್ಪತ್ರೆಯಲ್ಲಿ ಫೀಜಿಷಿಯನ್, ಕಣ್ಣು, ಮೂಳೆ, ಇಎನ್‌ಟಿ, ಶಸ್ತ್ರ ಚಿಕಿತ್ಸಾ ಕರು, ಸ್ತ್ರೀ ರೋಗ ತಜ್ಞ ಸೇರಿದಂತೆ ಎಲ್ಲಾ ರೀತಿಯ ವೈದ್ಯರ ಸೇವೆ ಲಭ್ಯವಾಗಿದೆ. ಸುಸರ್ಜಿತ ಕಟ್ಟಡದಲ್ಲಿ ನಿರ್ಮಾಣಗೊಂಡಿರುವ ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ಸ್ವಚ್ಚತೆ, ಮೂಲಭೂತ ಸೌಲಭ್ಯ ಸೇರಿದಂತೆ ಹಲವಾರು ಸೌಲಭ್ಯಗಳನ್ನು ನೀಡಲಾಗುತ್ತಿದೆ ಎಂದರು.

### ರಸ್ತೆ ಕಾಮಗಾರಿಗೆ ಚಾಲನೆ

**ಮಳವಳ್ಳಿ:** ವಿಶೇಷ ಅನುದಾನದಲ್ಲಿ ಮೂಲಭೂತ ಸೌಲಭ್ಯವನ್ನು ಕಲ್ಪಿಸುವುದರ ಮೂಲಕ ಪಟ್ಟಣವನ್ನು ಸಮಗ್ರ ಅಭಿವೃದ್ಧಿಗೆ ಶ್ರಮಿಸುವುದಾಗಿ ಶಾಸಕ ಪಿ.ಎಂ ನರೇಂದ್ರಸ್ವಾಮಿ ತಿಳಿಸಿದರು. ಪಟ್ಟಣದ ಹಲವಾರು ವಾರ್ಡ್‌ಗಳಲ್ಲಿ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿ, ಪಟ್ಟಣದ ಹಲವು ಬಡಾವಣೆಗಳಲ್ಲಿ ಕುಡಿಯುವ ನೀರು, ರಸ್ತೆ, ಚರಂಡಿ ನಿರ್ಮಾಣ ಸೇರಿದಂತೆ ಪಟ್ಟಣಕ್ಕೆ ಬೇಕಾದ ಅವಶ್ಯಕತೆಯನ್ನು ಅರಿತು ಕೆಲಸ ಮಾಡಲಾಗುತ್ತಿದೆ. ಅಭಿವೃದ್ಧಿಗೆ ಸಾರ್ವಜನಿಕರ ಸಹಭಾಗಿತ್ವಮೂ ಮುಖ್ಯವಾಗಿದೆ. ಎಲ್ಲ ಕಾಮಗಾರಿಗಳು ಗುಣಮಟ್ಟದಿಂದ ಕೂಡಿರುವಂತೆ ಮುಖಂಡರು ಗಮನ ಹರಿಸಬೇಕು ಎಂದು ಹೇಳಿದರು. 3ನೇ ವಾರ್ಡ್ ಬಸವೇಶ್ವರ ವೃತ್ತ, ಪ್ರಭಾಕರ್ ವಾಟರ್ ಪ್ಲಾಂಟ್, 6, 12, 20, 21, 22 ಮತ್ತು 23ನೇ ವಾರ್ಡ್ ನ ವಿವಿಧೆಡೆ ಸುಮಾರು 2 ಕೋಟಿ ರೂ.ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಯಿತು.



ಮಂಡ್ಯ ತಾಲೂಕಿನ ಹೊಳಲು ಗ್ರಾಮದಲ್ಲಿ ಗಂಗಾಮತಸ್ಥರ ಕುಲ ದೇವತೆಯಾದ ಕಾಳಮ್ಮದೇವಿ ಹಬ್ಬವನ್ನು ಸಂಭ್ರಮ ಸಡಗರದಿಂದ ಆಚರಿಸಿದರು.

## ಶಿಕ್ಷಣದ ಜತೆಗೆ ಸಂಸ್ಕಾರ ಮುಖ್ಯ

**ಮಳವಳ್ಳಿ:** ಶಿಕ್ಷಕರು ಹಾಗೂ ಗುರುಹಿರಿಯರನ್ನು ಗೌರವಿಸುವುದನ್ನು ವಿದ್ಯಾರ್ಥಿಗಳು ಬಾಲ್ಯದಿಂದಲೇ ರೂಢಿಸಿಕೊಳ್ಳಬೇಕೆಂದು ಕೆಂಗೇರಿಯ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ನಿಶ್ಚಲಾನಂದನಾಥ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಯೂರೋ ಕಿಡ್ಸ್ ಶಾಲೆಯ ವಾರ್ಷಿಕೋತ್ಸ ವದ ಸಾನ್ನಿಧ್ಯ ವಹಿಸಿ ಮಾತನಾಡಿ, ಪ್ರಾಥಮಿಕ ವ್ಯವಸ್ಥೆಯಲ್ಲಿಯೇ ಶಿಕ್ಷಣದ ಜೊತೆಗೆ ಸಂಸ್ಕಾರ ಮುಖ್ಯವಾಗಿದೆ ಎಂದು ಹೇಳಿದರು ಶಿಕ್ಷಣ ಕ್ಷೇತ್ರದಲ್ಲಿ ಅಭಿವೃದ್ಧಿ ಸಾಧಿಸಿದರೇ ಮಾತ್ರ ದೇಶ ಪ್ರಗತಿ ಕಾಣಲು ಸಾಧ್ಯವಾಗುತ್ತದೆ. ಪೋಷಕರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವುದರ ಮೂಲಕ ಉತ್ತಮ ಭವಿಷ್ಯವನ್ನು ರೂಪಿಸಲು ಶ್ರಮಿಸಬೇಕು. ಯೂರೋ ಕಿಡ್ಸ್ ಶಿಕ್ಷಣ ಸಂಸ್ಥೆಯು ಆಧುನಿಕ ಯುಗದ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳನ್ನು ಶಿಕ್ಷಣ ಕ್ಷೇತ್ರದಲ್ಲಿ ಯಾವ ರೀತಿ ತಯಾರು ಮಾಡಬೇಕೆಂಬ ದೂರದೃಷ್ಟಿಯೊಂದಿಗೆ ಶಿಕ್ಷಣವನ್ನು ನೀಡಲಾಗುತ್ತಿದ್ದು, ಗ್ರಾಮೀಣ ಜನರು ಪ್ರಯೋಜನ ಪಡೆದುಕೊಳ್ಳಬೇಕೆಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ನ ಐಬಿಎಂನ ಎಚ್.ಪ್ರದೀಪ್ ಕುಮಾರ್, ಸ್ಪಂದನಾ ಸ್ಕೂಲ್ ನ ಕಾರ್ಯದರ್ಶಿ ಎಚ್.ಕೆ.ಕೃಷ್ಣಮೂರ್ತಿ, ಧ್ವನಿ ಎಂಜುಕೇಷನ್ ಟ್ರಸ್ಟ್ ನಿರ್ದೇಶಕರಾದ ಕಮಲಾ ರಾಜು, ಮೇಘಾಶ್ರೀ, ಮುಖಂಡರಾದ ವೆಂಕಟರಾಜು, ಶಿವಲಿಂಗೇಗೌಡ, ಮುಖ್ಯಶಿಕ್ಷಕಿ ವೇದಾವತಿ, ಶಿಕ್ಷಕಿಯರಾದ ಲಕ್ಷ್ಮಿ ವೀರೇಗೌಡ, ನಂದಿನಿ, ಚೈತ್ರಾ, ಶ್ವೇತಾ ಇದ್ದರು.



ಮಳವಳ್ಳಿ ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಯೂರೋ ಕಿಡ್ಸ್ ಶಾಲೆಯ ವಾರ್ಷಿಕೋತ್ಸವ ನಡೆಯಿತು.

### ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ: ಕಾರ್ಖಾನೆ ಅಧ್ಯಕ್ಷ ಸಿ.ಡಿ.ಗಂಗಾಧರ್ ಮಾಹಿತಿ

# ಕಾರ್ಖಾನೆ ಬಾಯ್ಲಿಂಗ್ ಹೌಸ್‌ಗೆ 60 ಕೋಟಿ

**ಮಂಡ್ಯ:** ಮೈಸೂರು ಸಕ್ಕರೆ ಕಾರ್ಖಾನೆ ಬಾಯ್ಲಿಂಗ್ ಹೌಸ್ ಅಳವಡಿಕೆಗೆ 60 ಕೋಟಿ ರೂ. ಹಣ ಮಂಜೂರು ಮಾಡಿ ಸಚಿವ ಸಂಪುಟ ತೀರ್ಮಾನ ಕೈಗೊಂಡಿದೆ ಎಂದು ಕಾರ್ಖಾನೆ ಅಧ್ಯಕ್ಷ ಸಿ.ಡಿ.ಗಂಗಾಧರ್ ತಿಳಿಸಿದರು.

ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ಮಾ.12ರಂದು ಬೆಂಗಳೂರಿನಲ್ಲಿನಡೆದಸಚಿವಸಂಪುಟಸಭೆಯಲ್ಲಿಈತೀರ್ಮಾನ ಕೈಗೊಳ್ಳಲಾಗಿದೆ. ಬಹು ನಿರೀಕ್ಷಿತ ಬಾಯ್ಲಿಂಗ್ ಹೌಸ್‌ಗೆ ಹಣ ಬಿಡುಗಡೆಗೊಳಿಸುವ ತೀರ್ಮಾನ ಕೈಗೊಳ್ಳುವುದರೊಂದಿಗೆ ಜಿಲ್ಲೆಯ ರೈತರ ಜತೆ ದೃಢವಾಗಿ ನಿಲ್ಲುವ ಎನ್ನುವ ಸಂದೇಶವನ್ನು ಕಾಂಗ್ರೆಸ್ ಸರ್ಕಾರ ರವಾನಿಸಿದೆ ಎಂದು ಹೇಳಿದರು.

ಬಾಯ್ಲಿಂಗ್ ಹೌಸ್ ಅಳವಡಿಕೆ ಕಾರ್ಯಕ್ಕೆ ಏಪ್ರಿಲ್ ಎರಡನೇ ವಾರದಲ್ಲಿ ಟೆಂಡರ್ ಕರೆಯಲಾಗುವುದು. ನಾಲ್ಕೂವರೆ ತಿಂಗಳಲ್ಲಿ ಕಾಮಗಾರಿ ಮುಗಿದು ಆಗಸ್ಟ್ ಅಂತ್ಯದ ವೇಳೆಗೆ ಕಾರ್ಖಾನೆ ಕಾರ್ಯಾರಂಭಕ್ಕೆ ಸಜ್ಜುಗೊಳ್ಳಲಿದೆ. ಈ ಸಾಲಿನಿಂದ ಸಮರ್ಥವಾಗಿ ನಿರೀಕ್ಷಿತ ಪ್ರಮಾಣದ ಕಬ್ಬು ಅರೆಯುವ ವಿಶ್ವಾಸ ವ್ಯಕ್ತಪಡಿಸಿದರು.

2023-24ರಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಇಲ್ಲಿಯವರೆಗೆ 60 ಕೋಟಿ ರೂ. ಹಣವನ್ನು ಸಾಲದ ರೂಪದಲ್ಲಿ ನೀಡಲಾಗಿದೆ. ಈಗ ಬಿಡುಗಡೆ ಮಾಡುತ್ತಿರುವ ಹಣವ ಸಾಲವೋ, ನೆರವೋ ಎನ್ನುವುದು ಇನ್ನೂ ಗೊತ್ತಾಗಿಲ್ಲ. ಕ್ಯಾಬಿನೇಟ್ ತೀರ್ಮಾನವಷ್ಟೇ ಹೊರಬಿದ್ದಿದೆ. ಅಧಿಕೃತ ಆದೇಶ ಕೈಸೇರಿದ ಬಳಿಕ ಅದು ಗೊತ್ತಾಗಲಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕಾರ್ಖಾನೆಯ ನೂತನ ಬಾಯ್ಲಿಂಗ್ ಹೌಸ್ ನಿರ್ಮಾಣಕ್ಕೆ 60 ಕೋಟಿ ರೂ. ನೀಡುವ ತೀರ್ಮಾನ ಕೈಗೊಂಡ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಕ್ಕರೆ ಮಂತ್ರಿ ಶಿವಾನಂದಪಾಟೀಲ್, ಕೃಷಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಸೇರಿದಂತೆ ಕ್ಯಾಬಿನೆಟ್ ಸಚಿವರಿಗೆ ಅಭಿನಂದನೆ ಸಲ್ಲಿಸಿದರು. 2025-26ನೇ ಸಾಲಿನಲ್ಲಿ ಮೈಷುಗರ್ ಕಾರ್ಖಾನೆಯ ನಿರ್ವಹಣೆ ಮತ್ತು ಕಾರ್ಯಾಚರಣೆಯನ್ನು ಉತ್ತರ ಪ್ರದೇಶದ ಶ್ರೇಯಾ ಇನ್ ಸ್ಟಿಟ್ಯೂಷನ್ ಅವರಿಗೆ ಟೆಂಡರ್ ನೀಡಲಾಗಿದೆ. ಪ್ರತಿ ಟನ್‌ಗೆ 880 ರು.ನಂತೆ ಒಪ್ಪಂದವಾಗಿದೆ. ಈಗಾಗಲೇ ಕಾರ್ಖಾನೆಯ ಸ್ವಚ್ಛತಾ ಕೆಲಸಕ್ಕೆ ಅಣಿಗೊಳಿಸಲಾಗುತ್ತಿದೆ. ಕಳೆದ ಮೂರು ವರ್ಷಗಳಿಂದ ಆರ್‌ಬಿ ಟೆಕ್ ಕಂಪನಿಯವರು ಸಮರ್ಥವಾಗಿ ಕಬ್ಬು ನುರಿಸದೆ ಕಾರ್ಖಾನೆಗೆ ನಷ್ಟ ಉಂಟುಮಾಡಿದರು. ಆ ಹಿನ್ನೆಲೆಯಲ್ಲಿ ಅವರನ್ನು ಕೈಬಿಟ್ಟು ಹೊಸಬರಿಗೆ ನೀಡುವುದಕ್ಕೆ ನಿರ್ಧರಿಸಿ ಟೆಂಡರ್ ಕರೆಯಲಾಗಿತ್ತು. ಅದು ಶ್ರೇಯಾ ಇನ್‌ಸ್ಟಿಟ್ಯೂಷನ್ ಅವರಿಗೆ ಟೆಂಡರ್ ಆಗಿರುವುದಾಗಿ ತಿಳಿಸಿದರು.

ಮೈಷುಗರ್ ಕಾರ್ಖಾನೆಗೆ ಸೇರಿದ 27 ಎಕರೆ ಭೂಮಿಯನ್ನು ರಕ್ಷಣೆ ಮಾಡಿಕೊಳ್ಳುವುದಕ್ಕಾಗಿ ನ್ಯಾಯಾಲಯದ ಮೂಲಕ ಕಾರ್ಖಾನೆಯ ಆಸ್ತಿಯಲ್ಲಿ ಅನುಭವದಲ್ಲಿರುವವರಿಗೆ ನೋಟೀಸ್ ಜಾರಿಗೊಳಿಸಲಾಗುತ್ತಿದೆ. ಅವರು ಸರಿಯಾದ ದಾಖಲೆಗಳನ್ನು ಒದಗಿಸದಿದ್ದ ಪಕ್ಷದಲ್ಲಿ ಅವರನ್ನು ತೆರವುಗೊಳಿಸಲು ನ್ಯಾಯಾಲಯವೇ ಸೂಚನೆ ನೀಡಲಿದೆ ಎಂಬುದಾಗಿ ಹೇಳಿದರು.

ಪ್ರಸಕ್ತ ಸಾಲಿನಿಂದ ಸಹ ವಿದ್ಯುತ್ ಘಟಕವನ್ನೂ ಸಮರ್ಥವಾಗಿ ಕಾರ್ಯನಿರ್ವಹಿಸುವಂತೆ ಮಾಡಲಾಗುವುದು. ಮುಂದಿನ ದಿನಗಳಲ್ಲಿ ಸಚಿವ ಎನ್.ಚಲುವರಾಯಸ್ವಾಮಿ ಹಾಗೂ ಶಾಸಕರ ಸಹಕಾರದೊಂದಿಗೆ ಕಾರ್ಖಾನೆಯ ಡಿಸ್ಟಿಲರಿ ಘಟಕ ಆರಂಭಿಸುವುದಕ್ಕೂ ಸರ್ಕಾರದ ಮನವೊಲಿಸಲಾಗುವುದು. ಡಿಸ್ಟಿಲರಿ ಘಟಕ ಆರಂಭವಾದರೆ ಸರ್ಕಾರದ ನೆರವಿಲ್ಲದೆ ಕಾರ್ಖಾನೆಯನ್ನು ಲಾಭದಾಯಕವಾಗಿ ಮುನ್ನಡೆಸಿಕೊಂಡು ಹೋಗಲು ಸಾಧ್ಯವಾಗಲಿದೆ ಎಂದು ನುಡಿದರು. ಗೋಷ್ಠಿಯಲ್ಲಿ ಚಂದಗಾಲು ವಿಜಯಕುಮಾರ್, ದೇಶಹಳ್ಳಿ ಮೋಹನ್ ಕುಮಾರ್, ಎಂ.ಶ್ರೀಧರ್, ನಹೀಂ, ಚಂದ್ರಶೇಖರ್, ಬೋರೇಗೌಡ, ರಾಮಕೃಷ್ಣ, ನಾಗರಾಜು ಇದ್ದರು.




- ಪ್ರಿಲ್ ಎರಡನೇ ವಾರದಲ್ಲಿ ಟೆಂಡರ್
- ಆಗಸ್ಟ್ ಅಂತ್ಯದ ವೇಳೆಗೆ ಕಾರ್ಖಾನೆ ಕಾರ್ಯಾರಂಭ

**ಕಾರ್ಖಾನೆಗೆ ಸಾಲ ಇಲ್ಲ**

ಮೈಷುಗರ್ ಕಾರ್ಖಾನೆಗೆ ಬ್ಯಾಂಕುಗಳ ಸಾಲ ಯಾವುದೂ ಇಲ್ಲ. ಕೆಎಸ್‌ಐಡಿಎಸ್‌ನಲ್ಲಿ 3.5 ಕೋಟಿ ರೂ. ಸಾಲ ಪಡೆದಿದ್ದು 53 ಕೋಟಿ ರೂ. ಬಡ್ಡಿಯಾಗಿದೆ. ಬಡ್ಡಿ ಮನ್ನಾಗೊಳಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆಹಾರ ಸಚಿವಾಲಯದ 19 ಕೋಟಿ ರೂ. ಸಾಲವಿದ್ದು ಇದಕ್ಕೆ ಯಾವುದೇ ಬಡ್ಡಿ ಇರುವುದಿಲ್ಲ. ಮೈಷುಗರ್ ಬಳಿ 5 ರಿಂದ 6 ಕೋಟಿ ರೂ. ಹಣವಿದೆ.

**ಹಣ ಪಾವತಿಗೆ ಕ್ರಮ**

ಕಬ್ಬು ಬೆಳೆಗಾರರಿಗೆ ರಾಜ್ಯಸರ್ಕಾರ ಹಾಗೂ ಸಕ್ಕರೆ ಕಾರ್ಖಾನೆಗಳೆರಡು ಸೇರಿ ಪ್ರತಿ ಟನ್ ಕಬ್ಬಿಗೆ ನೀಡಬೇಕಿರುವ 100 ರೂ. ಹೆಚ್ಚುವರಿ ಹಣ 60 ಲಕ್ಷ ರೂ. ಹಣವನ್ನು ಶೀಘ್ರವೇ ಪಾವತಿಸಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದ ಸಿ.ಡಿ.ಗಂಗಾಧರ್, ಆರ್‌ಬಿ ಟೆಕ್ ಕಂಪನಿಯವರಿಗೆ 2023-24ನೇ ಸಾಲಿನಲ್ಲಿ 59 ಸಾವಿರ ಟನ್‌ಗೆ ಹೆಚ್ಚುವರಿಯಾಗಿ 30 ಕೋಟಿ ರೂ. ಪಾವತಿಸಲಾಗಿದೆ. ಅದರಲ್ಲಿ ಶೇ.5ರಷ್ಟು ಅಂದರೆ 1.75 ಕೋಟಿ ರೂ. ಹಣವನ್ನು ಕಟಾವು ಮಾಡಿಕೊಳ್ಳಲಾಗುವುದು.



## ಮಾ.18ಕ್ಕೆ 52 ಮಳಿಗೆ ಹರಾಜು

**ಕೃಷ್ಣರಾಜಪೇಟೆ:** ತಾಲೂಕು ಪಂಚಾಯತ್ ಒಡೆತನದಲ್ಲಿರುವ ಒಟ್ಟು 52 ವಾಣಿಜ್ಯ ಮಳಿಗೆಗಳನ್ನು ಹರಾಜು ಮೂಲಕ ಪಡೆಯಲು ಇದೇ ಮಾರ್ಚ್ 17ರಂದು ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸಬಹುದಾಗಿದೆ. ಬಿಡ್ ಸಲ್ಲಿಸಲು ಮಾರ್ಚ್ 18ರಂದು ಬೆಳಗ್ಗೆ 11ರಿಂದ 5.30 ರವರೆಗೆ ಆನ್‌ಲೈನ್‌ನಲ್ಲಿ ಬಿಡ್ ಮೂಲಕ ಬಹಿರಂಗ ಹರಾಜು ಮಾಡಲಾಗುತ್ತಿದೆ. ಹಾಗಾಗಿ ಸಾರ್ವಜನಿಕರು ಹರಾಜಿನಲ್ಲಿ ಭಾಗವಹಿಸಿ ಮಳಿಗೆ ಪಡೆದುಕೊಂಡು ವ್ಯಾಪಾರ-ವ್ಯವಹಾರ ಆರಂಭಿಸಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆಯ ಮಂಡ್ಯ ಜಿಲ್ಲಾ ಘಟಕದ ಅಧ್ಯಕ್ಷ ಡಿ.ಎಸ್.ವೇಣುಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಕಳೆದ 25ರಿಂದ 30ವರ್ಷಗಳಿಂದ ಬಾಡಿಗೆಯನ್ನು ಪರಿಷ್ಕರಣೆ ಮಾಡಿರುವುದಿಲ್ಲ. ಮೂಲ ಬಾಡಿಗೆದಾರರು ಯಾರೂ ಸಹ ಅಂಗಡಿಗಳನ್ನು ತೆರೆದು ವ್ಯಾಪಾರ ಮಾಡುತ್ತಿಲ್ಲ. ಮೂಲ ಬಾಡಿಗೆದಾರರು ಕಡಿಮೆ ಬಾಡಿಗೆಯನ್ನು ತಾಲೂಕು ಪಂಚಾಯತ್ ಕಚೇರಿಗೆ ಪಾವತಿಸಿ ಅದೇ ಮಳಿಗೆಗೆ ತಿಂಗಳಿಗೆ 20ರಿಂದ 30ಸಾವಿರದ ವರೆಗೆ ಬಾಡಿಗೆಯನ್ನು ಪಡೆದುಕೊಳ್ಳುತ್ತಿದ್ದಾರೆ. ಹಾಗಾಗಿ ಇದು ಸರ್ಕಾರಕ್ಕೆ ಅಪಾರ ನಷ್ಟವಾಗುತ್ತದೆ. ಹಾಗಾಗಿ ಯಾರು ಮಳಿಗೆಯನ್ನು ಬಾಡಿಗೆಗೆಪಡೆದುಕೊಳ್ಳುತ್ತಾರೋ ಅವರೇ ವ್ಯವಹಾರ ಮಾಡಬೇಕು. ಯಾವುದೇ ಕಾರಣಕ್ಕೂ ಒಳ ಬಾಡಿಗೆ ಬೇರೆಯವರಿಗೆ ಅವಕಾಶ ಮಾಡಿಕೊಡಬಾರದು ಎಂದರು.

ಈ ಸಂದರ್ಭದಲ್ಲಿ ತಾಲ್ಲೂಕು ಕರವೇ ಅಧ್ಯಕ್ಷ ಅಗ್ರಹಾರಬಾಚಹಳ್ಳಿ ಟೆಂಪೋ ಶ್ರೀನಿವಾಸ್, ಕರವೇ ಜಿಲ್ಲಾ ಉಪಾಧ್ಯಕ್ಷ ಶಿವಪ್ರಸಾದ್, ತಾಲ್ಲೂಕು ಸಂಚಾಲಕ ಸ್ವಾಮಿ, ತಾಲ್ಲೂಕು ಯುವ ಘಟಕದ ಕಾರ್ಯದರ್ಶಿ ಮನು, ಕಸಬಾ ಹೋಬಳಿ ಕರವೇ ಅಧ್ಯಕ್ಷ ಕೊಮ್ಮೇನಹಳ್ಳಿ ಅನಿಲ್, ಅಲ್ಪ ಸಂಖ್ಯಾತರ ಘಟಕದ ಅಧ್ಯಕ್ಷ ಜಾಹೀರ್ ಮತ್ತಿತರರು ಇದ್ದರು.



ಕೃಷ್ಣರಾಜಪೇಟೆ ತಾಲೂಕು ಪಂಚಾಯತ್ ವತಿಯಿಂದ ನಿರ್ಮಾಣ ಮಾಡಲಾಗಿರುವ ಒಟ್ಟು 52 ವಾಣಿಜ್ಯ ಮಳಿಗೆಗಳನ್ನು ಹರಾಜು ಮೂಲಕ ಪಡೆಯಲು ಮಾ. 17ರಂದು ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸಬಹುದು ಎಂದು ಕರ್ನಾಟಕ ರಕ್ಷಣಾ ವೇದಿಕೆಯ ಮಂಡ್ಯ ಜಿಲ್ಲಾ ಘಟಕದ ಅಧ್ಯಕ್ಷ ಡಿ.ಎಸ್. ವೇಣು ಪತ್ರಿಕಾಗೋಷ್ಠಿಯಲ್ಲಿ ಮನವಿ ಮಾಡಿದರು.

## ಸಿಸಿಟಿವಿ ಕಣ್ಗಾವಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ

**ಮಂಡ್ಯ:** ಎಸ್‌ಎಸ್‌ಎಲ್‌ಸಿ ಪರೀಕ್ಷೆ ಸಿಸಿ ಟಿವಿ ಕಣ್ಗಾವಲಿನಲ್ಲಿ ಮಾ. 18ರಿಂದ ಏ. 2ರವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯಲಿದ್ದು, ಎಲ್ಲ ಪರೀಕ್ಷಾ ಕೊಠಡಿಯಲ್ಲಿ ಕ್ಯಾಮೆರಾಗಳನ್ನು ಅಳವಡಿಸಬೇಕು. ಪ್ರತಿಯೊಂದು ಪರೀಕ್ಷಾ ಕೊಠಡಿಯಲ್ಲಿ ಸಿಸಿ ಟಿವಿ ಕಡ್ಡಾಯವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಪರೀಕ್ಷೆ ಸಮಯದಲ್ಲಿ ಸಿಸಿಟಿವಿಗಳಲ್ಲಿ ತಾಂತ್ರಿಕ ದೋಷ ಉಂಟಾಗುತ್ತದೆ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಕುಮಾರ ಸೂಚಿಸಿದರು.

ನಗರದ ಜಿಲ್ಲಾಕಾರಿಗಳ ಕಚೇರಿಯ ಸಭಾಂಗಣದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1ನ್ನು ಸುವ್ಯವಸ್ಥಿತವಾಗಿ ನಡೆಸುವ ಕುರಿತು ಆಯೋಜಿಸಲಾಗಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸದರಿ ವರ್ಷದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಒಟ್ಟು 20,650 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಒಟ್ಟು 62 ಪರೀಕ್ಷಾ ಕೇಂದ್ರಗಳಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯಲಿದೆ. ಪರೀಕ್ಷೆ ಸಮಯದಲ್ಲಿ ಪರೀಕ್ಷಾ ಕೇಂದ್ರದ 200 ಮೀ. ವ್ಯಾಪ್ತಿಯಲ್ಲಿ ಜೆರಾಕ್ಸ್ ಹಾಗೂ ಸೈಬರ್ ಕೇಂದ್ರಗಳನ್ನು ಮುಚ್ಚಲಾಗುವುದು. ಜಿಲ್ಲಾ ಖಜಾನೆಯಿಂದ ಪ್ರಶ್ನಾ ಪತ್ರಿಕೆಯನ್ನು ಬಿಗಿ ಪೊಲೀಸ್ ಭದ್ರತೆಯೊಂದಿಗೆ ಪರೀಕ್ಷಾ ಕೇಂದ್ರಗಳಿಗೆ ಒಂದು ಗಂಟೆ ಮುಂಚಿತವಾಗಿ ತಲುಪಿಸಲಾಗುವುದು ಎಂದು ತಿಳಿಸಿದರು. ಸಭೆಯಲ್ಲಿ ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಲೋಕೇಶ್, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಸಿ. ಚಲುವಯ್ಯ, ತಹಸೀಲ್ದಾರ್ ವಿಶ್ವನಾಥ ಇದ್ದರು.




## ಪ್ರಾಯೋಗಿಕ ಉಪನ್ಯಾಸ ಕಾರ್ಯಕ್ರಮ

**ಪಾಂಡವಪುರ:** ಕರ್ನಾಟಕ ಸರ್ಕಾರ, ಕಾಲೇಜು ಶಿಕ್ಷಣ ಇಲಾಖೆ, ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕೆ.ಆರ್.ಪೇಟೆ ಇವರ ಆಶ್ರಯದಲ್ಲಿ ಭೂಗೋಳಶಾಸ್ತ್ರ ವಿಭಾಗ ಹಾಗೂ ಐಕ್ಯೂಎಸಿ ಘಟಕದ ಸಹಯೋಗದೊಂದಿಗೆ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ವೆಬ್ ಜಿಐಸ್ ಅಂಡ್ ಡಿಜಿಟಲ್ ಮ್ಯಾಪಿಂಗ್ ವಿಷಯದ ಮೇಲೆ ಪ್ರಾಯೋಗಿಕ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಈಕಾರ್ಯಕ್ರಮದಅಧ್ಯಕ್ಷತೆಯನ್ನುಕಾಲೇಜಿನಪ್ರಾಂಶುಪಾಲಡಾ.ಅನುರಾಧ ರವರು ವಹಿಸಿಕೊಂಡಿದ್ದರು. ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಡಾ.ಆರ್. ಹನುಮಂತರಾಜು, ಸಹಾಯಕ ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ವಿಭಾಗ, ದಿ ರೂರಲ್ ಕಾಲೇಜ್ ಕನಕಪುರ ಹಾಗೂ ಡಾ.ಬಿ.ಪಿ.ದೀಪು ಮುಖ್ಯಸ್ಥರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪಾಂಡವಪುರ ಇವರು ಆಗಮಿಸಿದ್ದರು. ಇವರು ಭೌಗೋಳಿಕ ಮಾಹಿತಿ ವ್ಯವಸ್ಥೆಯನ್ನು ಮತ್ತು ಅದರ ತಂತ್ರಾಂಶಗಳನ್ನು ಉಪಯೋಗಿಸಿಕೊಂಡು ನಕ್ಷೆಗಳ ತಯಾರಿಕೆ ಹಾಗೂ ವಿವಿಧ ಇಲಾಖೆಗಳಲ್ಲಿ ಅವುಗಳ ಬಳಕೆಯನ್ನು ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಸುಧೀರ್ಘಕಾಲ ನಡೆಸಿಕೊಟ್ಟಿದ್ದಾರೆ. ಕಾರ್ಯಕ್ರಮವನ್ನು ಭೂಗೋಳಶಾಸ್ತ್ರ ವಿಭಾಗದ ವಿದ್ಯಾರ್ಥಿಗಳು ಯಶಸ್ವಿಯಾಗಿ ನಡೆಸಿಕೊಟ್ಟಿದ್ದು ವಿಭಾಗದ ಮುಖ್ಯಸ್ಥೆ ನಫೀಸಾ ನಾಯಕವಾಡಿ, ಕೆ.ಟಿ.ಚಂದ್ರು, ಎ.ಪಿ.ಘಮನಶ್ರೀ ಹಾಜರಿದ್ದರು.



### ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಡಾ. ಕುಮಾರ ಕರೆ

# ಯುವಕರು ಸೇವಾ ಕಾರ್ಯದಲ್ಲಿ ತೊಡಗಿಸಿಕೊಳ್ಳಿ

**ಮಂಡ್ಯ:** ರೆಡ್ ಕ್ರಾಸ್ ಸಂಸ್ಥೆಯು ಮಾನವೀಯತೆಯ ಪ್ರತೀಕವಾಗಿರುವ ಸಂಸ್ಥೆಯಾಗಿದ್ದು, 2024-25ನೇ ಸಾಲಿನಲ್ಲಿ ಅತ್ಯುತ್ತಮ ಸೇವಾ ಕಾರ್ಯಗಳನ್ನು ಮಾಡಿರುವ ಬಗ್ಗೆ ದೆ ಎಂದು ಜಿಲ್ಲಾಧಿಕಾರಿ ಡಾ. ಕುಮಾರ ಪ್ರಶಂಸೆ ವ್ಯಕ್ತಪಡಿಸಿದರು.

ನಗರದ ಮಂಡ್ಯ ಜಿಲ್ಲಾ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯಲ್ಲಿ ನಡೆದ 2024-25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಂಸ್ಥೆಯಲ್ಲಿ ಪ್ರಸ್ತುತ 1124 ಆಜೀವ ಸದಸ್ಯರುಗಳಿದ್ದು, ಇನ್ನೂ ಹೆಚ್ಚು ಸದಸ್ಯರನ್ನು ನೋಂದಣಿ ಮಾಡಿಸಿ, ಯುವಕರನ್ನು ಸೇವಾ ಕಾರ್ಯದಲ್ಲಿ ಹೆಚ್ಚು ತೊಡಗಿಸಿಕೊಳ್ಳಬೇಕೆಂದು ಕರೆ ನೀಡಿದರು.

ಯುವಜನರೇ ದೇಶದ ಸಂಪತ್ತು. ಯುವಕರಿಗೆ ಸರಿಯಾದ ವೇದಿಕೆಯಲ್ಲಿ ನಾಯಕತ್ವ ಬೆಳೆಸುವ ಅವಕಾಶ ಕೊಟ್ಟು, ಸಾಮಾಜಿಕ ಹೊಣೆಗಾರಿಕೆಯನ್ನು ಹೆಚ್ಚಿಸುವಂತಹ ಮೌಲ್ಯಗಳನ್ನು ನೀಡಬೇಕು ಎಂದರು. ಸಂಸ್ಥೆಯ ಜಿಲ್ಲಾ ಸಭಾಧ್ಯಕ್ಷೆ ಡಾ.ಮೀರಾಶಿವಲಿಂಗಯ್ಯ ಮಾತನಾಡಿ, ಸಕ್ರಿಯವಾಗಿ, ಕ್ರಿಯಾತ್ಮಕವಾಗಿ ಉತ್ತಮ ಸೇವಾಕಾರ್ಯಗಳನ್ನು ಮಾಡುತ್ತಿದ್ದು, ಎಲ್ಲರೂ ಸಹಕಾರವನ್ನು ನೀಡಬೇಕು. ಭಾರತೀಯ ರೆಡ್ ಕ್ರಾಸ್ ಮಂಡ್ಯ ಜಿಲ್ಲಾ ಶಾಖೆಯ ವತಿಯಿಂದ ಪ್ರತ್ಯೇಕ ರಕ್ತನಿಧಿ ಕೇಂದ್ರವನ್ನು ತೆರೆಯುವ ಒಂದು ಯೋಜನೆಯನ್ನು ಸಿದ್ಧಪಡಿಸಿ ಕೊಟ್ಟಲ್ಲಿ ಅದಕ್ಕೆ ಸಂಪೂರ್ಣ ಸಹಕಾರವನ್ನು ನೀಡುವುದಾಗಿ ತಿಳಿಸಿದರು.

ಸಂಸ್ಥೆಯ ಉಪಾಧ್ಯಕ್ಷೆ, ಜಿಪಂ ಸಿಇಒ ಕೆ.ಆರ್. ನಂದಿನಿ ಅವರು ಹೆಚ್ಚು ರಕ್ತಚೀಲಗಳನ್ನು ನೀಡಿದ ಕಾಲೇಜುಗಳಿಗೆ ಮತ್ತು ಆರೋಗ್ಯ ಶಿಬಿರಗಳಿಗೆ ಸಹಕರಿಸಿದ ಸಂಸ್ಥೆಗಳಿಗೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿ, ರೆಡ್ ಕ್ರಾಸ್ ಸಂಸ್ಥೆಯ ಮುಖ್ಯ ಕಾರ್ಯಕ್ಷೇತ್ರ ರಕ್ತದಾನ ಶಿಬಿರಗಳನ್ನು ಆಯೋಜಿಸುವುದು. ರಕ್ತಕ್ಕೆ ಪರ್ಯಾಯವಾಗಿ ಯಾವುದೇ ಔಷಧಿ ಇಲ್ಲದಿರುವುದರಿಂದ ಜಿಲ್ಲೆಯಲ್ಲಿ ರಕ್ತಹೀನತೆಯಿಂದ ಬಳಲುವವರಿಗೆ ಮತ್ತು ತಾಯಂದಿರ ಮರಣ ಸಂಖ್ಯೆಯನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ರಕ್ತದ ಅವಶ್ಯಕತೆ ತುಂಬಾ ಇರುತ್ತದೆ. ಹಾಗಾಗಿ ಇನ್ನೂ ಹೆಚ್ಚು ಹೆಚ್ಚು ರಕ್ತದಾನ ಶಿಬಿರಗಳು ಆಯೋಜನೆಗೊಳ್ಳಲಿ ಎಂದರು. ಅಪರ ಜಿಲ್ಲಾಧಿಕಾರಿ ಬಿ.ಸಿ. ಶಿವಾನಂದಮೂರ್ತಿ ಇದ್ದರು.



### ಮನ್‌ಮುಲ್ ವ್ಯವಸ್ಥಾಪಕ ನಿರ್ದೇಶಕ ಡಾ. ಮಂಜೇಶ್ ಮಾಹಿತಿ

# ಹಾಲು ಒಕ್ಕೂಟಕ್ಕೆ ₹12 ಕೋಟಿ ಆದಾಯ

**ಪಾಂಡವಪುರ:** 90 ಕೋಟಿ ರೂ. ಆರ್ಥಿಕ ನಷ್ಟದ ನಡುವೆಯೂ ಮಂಡ್ಯ ಹಾಲು ಒಕ್ಕೂಟವು ಈ ವರ್ಷದ ಮಾರ್ಚ್ ಮಾಹೆಗೆ 12ಕೋಟಿ ರೂ. ಆದಾಯದಲ್ಲಿದೆ ಎಂದು ಮನ್ ಮುಲ್ ವ್ಯವಸ್ಥಾಪಕ ನಿರ್ದೇಶಕ ಡಾ.ಮಂಜೇಶ್ ಹೇಳಿದರು.

ತಾಲೂಕಿನ ಚಿನಕುರಳಿ ಗ್ರಾಮದ ಶ್ರೀರಾಮೇಶ್ವರ ಸಮುದಾಯ ಭವನದ ಆವರಣದಲ್ಲಿ ಮನ್ ಮುಲ್ ಒಕ್ಕೂಟ, ಕೆಎಂಎಫ್ ಹಾಗೂ ಚಿನಕುರಳಿ ಹಾಲು ಉತ್ಪಾದಕರ ಸಹಕಾರದಲ್ಲಿ ಕೃಷ್ಣೋತ್ಸವ ಶೀರ್ಷಿಕೆಯಡಿ ಆಯೋಜಿಸಿದ್ದ ತಾಲೂಕು ಮಟ್ಟದ ಹೆಣ್ಣುಕರುಗಳ ಪ್ರದರ್ಶನ ಕಾರ್ಯಕ್ರಮದ ಬಹುಮಾನ ವಿತರಣಾ ಸಮಾರಂಭದಲ್ಲಿ ಮಾತನಾಡಿ, ಹಸುವಿನಿಂದ ಕೇವಲ ಹಾಲಿನಿಂದಲೇ ಲಾಭ ಮಾಡುವುದಲ್ಲ ಎಂದರು.

ಕೆಎಂಎಫ್ ನಿರ್ದೇಶಕ, ಮಾಜಿ ಶಾಸಕ ಎನ್. ಅಪ್ಪಾಜಿಗೌಡ ಮಾತನಾಡಿ, ಹೈನುಗಾರಿಕೆಯನ್ನು ಉತ್ತೇಜಿಸುವ ಉದ್ದೇಶದಿಂದ ಹೆಣ್ಣುಕರುಗಳ ಪ್ರದರ್ಶನ ಆಯೋಜಿಸಲಾಗಿದೆ. ಸ್ಪರ್ಧೆಯಲ್ಲಿ ಬಹುಮಾನ ಪಡೆಯುವುದಕ್ಕಿಂತಲೂ ಭಾಗವಹಿಸುವಿಕೆ ಮುಖ್ಯ ಎಂದರು. ಮಾಜಿ ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ಹೆಣ್ಣು ಕರುಗಳನ್ನು ಪ್ರೋತ್ಸಾಹಿಸಿ ಉತ್ತೇಜಿಸುವ ಉದ್ದೇಶದಿಂದ ಹೆಣ್ಣು ಕರುಗಳ ಪ್ರದರ್ಶನವನ್ನು ಇದೇ ಮೊದಲ ಬಾರಿಗೆ ತಾಲೂಕಿನಲ್ಲಿ ಆಯೋಜಿಸಲಾಗಿದೆ. ರೈತರು ಕರುಗಳನ್ನು ಉತ್ತಮವಾಗಿ ಸಾಕಾಣಿಕೆ ಮಾಡಿದ್ದಾರೆ ಎಂದು ತಿಳಿಸಿದರು.

ಎಚ್ ಎಫ್, ಜರ್ಸಿ, ದೇಶೀಯ ತಳಿ, ಹಳ್ಳಿಕಾರ್ ಹಾಗೂ ಎಮ್ಮೆ ಐದು ವಿಭಾಗದಲ್ಲಿ ಸ್ಪರ್ಧೆ ಆಯೋಜಿಸಲಾಗಿತ್ತು. ಎಲ್ಲಾ ತಳಿಗಳಲ್ಲೂ 0-4, 4-8 ಹಾಗೂ 8-12 ತಿಂಗಳ ವಿಭಾಗದಲ್ಲಿ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಎಚ್ ಎಫ್, ಜರ್ಸಿ ತಳಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದವು, ದೇಶೀಯ ತಳಿ, ಹಳ್ಳಿಕಾರ್ ಹಾಗೂ ಎಮ್ಮೆಕರುಗಳ ಸಂಖ್ಯೆ ಕಡಿಮೆ ಇದ್ದವು, ವಿಶೇಷವಾಗಿ ಮಲ್ನಾಡ್, ಗಿರ್ ಹಾಗೂ ಪುಂಗನೂರು ತಳಿಯ ಕರುಗಳನ್ನು ಪ್ರದರ್ಶಿಸುವ ಮೂಲಕ ರೈತರು ಗಮನಸೆಳೆದರು.

ಮನ್ ಮುಲ್ ಅಧ್ಯಕ್ಷ ಯು.ಸಿ.ಶಿವಕುಮಾರ್, ನಿರ್ದೇಶಕರಾದ ಎಂ.ಬಿ.ಹರೀಶ್, ಡಾಲು ರವಿ, ಲಕ್ಷ್ಮೀನಾರಾಯಣ, ಡಿ.ಕೃಷ್ಣೇಗೌಡ, ಎಸ್.ಪಿ.ಸ್ವಾಮಿ, ನಾಮಿನಿ ಸದಸ್ಯ ವಿಶ್ವಾಸ್ ಇದ್ದರು.



## ಕಿರುಸುದ್ದಿ

### ಮಾ.18ರಿಂದ ಎಸ್ಎಸ್ಎಲ್ಸಿ ಪರೀಕ್ಷೆ

**ಹಾಸನ:** ಎಸ್ಎಸ್ಎಲ್ಸಿ ಪರೀಕ್ಷೆಯು ಮಾ.18 ರಿಂದ ಏ.2 ವರೆಗೆ ಜಿಲ್ಲೆಯ 78 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು, ವಿದ್ಯಾರ್ಥಿಗಳು ಒಂದು ಗಂಟೆ ಮುಂಚಿತವಾಗಿ ಪರೀಕ್ಷಾ ಕೇಂದ್ರಕ್ಕೆ ಬರುವುದು, ವಿದ್ಯಾರ್ಥಿಗಳು ಕಡ್ಡಾಯವಾಗಿ ಸಮವಸ್ತ್ರ ಧರಿಸುವುದು, ಪ್ರವೇಶ ಪತ್ರ ಮತ್ತು ಅಗತ್ಯ ಲೇಖನ ಸಾಮಾಗ್ರಿಗಳೊಂದಿಗೆ ಹಾಜರಾಗಬೇಕು ಎಂದು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಕರು ತಿಳಿಸಿದ್ದಾರೆ. ಪರೀಕ್ಷೆ ಕುರಿತು ಮಾಹಿತಿ ಪ್ರಕಟಣೆ ನೀಡಿರುವ ಅವರು, ವಿಶೇಷಚೇತನ ಅಭ್ಯರ್ಥಿಗಳಿಗೆ ಪ್ರತ್ಯೇಕ ಕೊಠಡಿ ವ್ಯವಸ್ಥೆ ಮಾಡಲಾಗಿದೆ ಮತ್ತು ಅವಶ್ಯಕತೆ ಇರುವ/ ಸೂಕ್ತ ದಾಖಲೆಗಳೊಂದಿಗೆ ಕೋರಿಕೆ ಮೇರೆಗೆ ಹೆಚ್ಚುವರಿ ಕಾಲಾವಾಕಾಶ ನೀಡಿದೆ, ಸಹಾಯಕ ಬರಹಗಾರರ ಸೌಲಭ್ಯಕ್ಕೆ ಒಂದು ದಿನ ಮುಂಚಿತವಾಗಿ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರನ್ನು ಭೇಟಿ ಮಾಡಿ ವಿವರ ಸಲ್ಲಿಸುವುದು, ಪರೀಕ್ಷೆಯಲ್ಲಿ ಅವ್ಯವಹಾರ ನಡೆಸಿದಲ್ಲಿ ಶಿಸ್ತು ಕ್ರಮಕ್ಕೆ ಒಳಪಡಿಸಲಾಗುವುದು, ಪರೀಕ್ಷಾಕೊಠಡಿಗೆ ಪರೀಕ್ಷೆಗೆ ಸಂಬಂಧಿಸಿದ ಯಾವುದೇ ಸಾಮಗ್ರಗಳನ್ನು ಒಯ್ಯುವಂತಿಲ್ಲ, ಪ್ರತಿ ಪರೀಕ್ಷೆ ಕೇಂದ್ರದಲ್ಲಿ ಪ್ರತಿ ಕೊಠಡಿಗೆ ಸಿ.ಸಿ ಟಿವಿ ಅಳವಡಿಸಿ ವೆಬ್ ಕಾಸ್ಟ್ ವ್ಯವಸ್ಥೆ ಮಾಡಲಾಗಿದೆ, ಎಸ್.ಎಸ್.ಎಲ್.ಸಿ ಪರೀಕ್ಷೆ ವಿಷಯಕ್ಕೆ ಸಂಬಂಧಿಸಿದ ಯಾವುದೇ ಪ್ರಶ್ನೆ ಹಾಗೂ ಸಹಾಯಕ್ಕಾಗಿ ವಿದ್ಯಾರ್ಥಿಗಳು ಮತ್ತು ಪೋಷಕರುಗಳು ತಾಲ್ಲೂಕು ಮತ್ತು ಜಿಲ್ಲಾ ಹಂತದ ಸಹಾಯವಾಣಿಯನ್ನು ಸಂಪರ್ಕ ಮಾಡಬಹುದು ಎಂದು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಸಹಾಯವಾಣಿ 08172-268234 ಹಾಗೂ ಆಲೂರು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯ ಇಸಿಒ, ದಿವಾಕರ 9964663270. ಅರಕಗೂಡು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯ ಇಸಿಒ ಯೋಗೇಶ:9632809685, ಅರಸೀಕೆರೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯ ಇಸಿಒ ಹರೀಶ 9480139144,ಬೇಲೂರು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯ ಇಸಿಒ ನವೀನ 8660948105, ಚನ್ನರಾಯಪಟ್ಟಣ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯ ಇಸಿಒ ಶಿವಾನಂದ 9731703221, ಹಾಸನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯ ಇಸಿಒ ಭಾರತಿ 984412487, ಹೊಳೆನರಸೀಪುರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯ ಇಸಿಒ ರಾಮಚಂದ್ರಪ್ಪ.ಬಿ 9845435332, ಸಕಲೇಶಪುರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯ ಬಿ.ಆರ್.ಪಿ ಸಿದ್ದೇಶ್ 9632025084, ಜಿಲ್ಲಾ ಸಹಾಯವಾಣಿ 08172-268234 ಉಪನಿರ್ದೇಶಕರ ಆಪ್ತ ಸಹಾಯಕರು ಧರ್ಮಪಾಲ್ 9481116958 ತಿಳಿಸಿದರು.

### ವಿದ್ಯುತ್ ವ್ಯತ್ಯಯ ನಾಳೆ

**ಹಾಸನ:** ಕರ್ನಾಟಕ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಹಾಸನ 220 ಕೆ.ವಿ ಚಿಕ್ಕಮಗಳೂರು ಸ್ವೀಕರಣಾ ಕೇಂದ್ರದಲ್ಲಿ (ಮುಗುಳುವಳ್ಳಿ) ತುರ್ತು ನಿರ್ವಹಣಾ ಕೆಲಸವನ್ನು ಹಮ್ಮಿಕೊಂಡಿರುವುದರಿಂದ ಮಾ.15 ರಂದು ಬೆಳ್ಳಗೆ 10 ರಿಂದ ಮದ್ಯಾಹ್ನ 3 ರವರೆಗೆ 66/11 ಕೆ.ವಿ ಹಳೇಬಿಡು, ಗಂಗೂರು, ಬೇಲೂರು, ಉಗನೆ ಮತ್ತು ಗೆಂಡೇಹಳ್ಳಿ ವಿ.ವಿ ಕೇಂದ್ರದಿಂದ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು ಸಾರ್ವಜನಿಕರು ಸಹಕರಿಸುವಂತೆ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

### ಜಮೀನು ವಿವಾದ: ಮೂವರ ಮೇಲೆ ಹಲ್ಲೆ

**ಚನ್ನರಾಯಪಟ್ಟಣ:** ಪಿತ್ರಾರ್ಜಿತ ಜಮೀನು ವಿಚಾರವಾಗಿ ಉಂಟಾಗಿದ್ದ ಸಮಸ್ಯೆಯನ್ನು ಸಂಧಾನದ ಮೂಲಕ ಬಗೆಹರಿಸುವುದಾಗಿ ಮನೆಗೆ ಕರೆಸಿಕೊಂಡ ಮಾಜಿ ಸೈನಿಕನೊಬ್ಬ ಮೂವರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ತಾಲ್ಲೂಕಿನ ಬಾಗೂರು ಗ್ರಾಮದಲ್ಲಿ ನಡೆದಿದೆ.



ಗ್ರಾಮದ ವೆಂಕಟೇಶ್ ಎಂಬಾತ ತನ್ನ ಅತ್ತೆ ಮಗ ಶೇಖರ್ ಹಾಗೂ ಅವರ ಪತಿ ಪತ್ನಿ ಪೇಮಕುಮಾರಿ, ಪುತ್ರ ವೆಂಕಟೇಶ್ ಮೇಲೆ ಮಚ್ಚಿನಿಂದ ಮನಬಂದಂತೆ ಹಲ್ಲೆ ನಡೆಸಿದ್ದಾನೆ.

ಸೈನಿಕನಾಗಿದ್ದ ವೆಂಕಟೇಶ್ ಸೇವೆಯಿಂದ ನಿವೃತ್ತನಾಗಿ ಕೃಷಿ ಕೆಲಸ ಮಾಡಿಕೊಂಡಿದ್ದ ಎನ್ನಲಾಗಿದೆ. ಜಮೀನು ವಿಚಾರವಾಗಿ ಅತ್ತೆ ಮಗ ಶೇಖರ್ ಜೊತೆಗೆ ಮನಸ್ತಾಪವಿತ್ತು. ಇತ್ತೀಚೆಗೆ ಎರಡೂ ಕಡೆಯವರು ಸುಮನಿದ್ದು ತಮ್ಮ ಪಾಡಿಗೆ ತಾವು ಕೆಲಸ ಮಾಡಿಕೊಂಡಿದ್ದರು. ಆದರೆ, ಗುರುವಾರ ಬೆಳಿಗ್ಗೆ ಮಾಜಿ ಸೈನಿಕ ವೆಂಕಟೇಶ್‌ನು, ಶೇಖರ್‌ನನ್ನು ತನ್ನ ಮನೆಗೆ ಕರೆಸಿಕೊಂಡಿದ್ದ ಎಂದು ತಿಳಿದುಬಂದಿದೆ. ರಾಜಿ ಸಂಧಾನದ ವೇಳೆ ಮಾತಿಗೆ ಮಾತು ಬೆಳೆದು ಪರಿಸ್ಥಿತಿ ವಿಕೋಪಕ್ಕೆ ತಿರುಗಿದೆ. ಹತ್ತಿರದಲ್ಲೇ ಇದ್ದ ಮಚ್ಚಿನಿಂದ ಶೇಖರ್ ತಲೆಗೆ ಬೀಸಿದ್ದಾನೆ. ಜಗಳ ಬಿಡಿಸಲು ಬಂದ ಶೇಖರ್ ಪತ್ನಿ ಪ್ರೇಮಕುಮಾರಿ, ಪುತ್ರ ವೆಂಕಟೇಶ್‌ನ ಕುತ್ತಿಗೆಗೂ ಇರಿದಿದ್ದಾನೆ. ಕೆಲವೇ ಕ್ಷಣಗಳಲ್ಲಿ ಮನೆ ಪೂರ್ತಿ ರಕ್ತದ ಮಡುವಿನಲ್ಲಿ ಮುಳುಗಿದ್ದು ಗಂಭೀರ ಗಾಯಗೊಂಡಿದ್ದ ಮೂವರು ನೆಲದ ಮೇಲೆ ಬಿದ್ದು ಹೊರಳಾಡುತ್ತಿದ್ದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಅಕ್ಕ ಪಕ್ಕದ ಮನೆಯವರು ಕೂಡಲೇ ಪೊಲೀಸರಿಗೆ ತಿಳಿಸಿದ್ದಾರೆ. ಅಂಬುಲೆನ್ಸ್ ಮೂಲಕ ಮೂವರನ್ನು ಹಿಮ್ಸ್‌ಗೆ ದಾಖಲಿಸಲಾಯಿತು.



ಕೊಣನೂರು ಹೋಬಳಿಯ ಚಿಕ್ಕಬೊಮ್ಮನಹಳ್ಳಿಯಲ್ಲಿ ಶ್ರೀ ರಂಗನಾಥಸ್ವಾಮಿ ರಥೋತ್ಸವವು ಭಕ್ತಿಭಾವದಿಂದ ಜರುಗಿತು.

## ರಂಗನಾಥಸ್ವಾಮಿ ರಥೋತ್ಸವ

**ಕೊಣನೂರು:** ಬೊಮ್ಮನಹಳ್ಳಿಯ ಶ್ರೀ ರಂಗನಾಥಸ್ವಾಮಿ ರಥೋತ್ಸವವು ಸಂಭ್ರಮದಿಂದ ಜರುಗಿತು.

ಹೋಬಳಿಯ ಚಿಕ್ಕಬೊಮ್ಮನಹಳ್ಳಿಯ ರಂಗನಾಥಸ್ವಾಮಿ ದೇವಾಲಯದ ಆವರಣದಲ್ಲಿ ಶ್ರೀ ಶಂಭುನಾಥಸ್ವಾಮೀಜಿ ಕದಳಿ ಕಡಿದು ರಥೋತ್ಸವಕ್ಕೆ ಚಾಲನೆ ನೀಡಿದ ನಂತರ ಆಕರ್ಷಕ ರಥವನ್ನು ವಿವಿಧೆಡೆಗಳಿಂದ ಆಗಮಿಸಿ ಕಾದು ನಿಂತಿದ್ದ ಭಕ್ತರು ರಥವೆಳೆದರು. ದೇವಾಲಯದ ಆವರಣದಲ್ಲಿ ಗುರುವಾರ ಶ್ರೀ ಶಂಭುನಾಥಸ್ವಾಮೀಜಿಯವರು ಧರ್ಮಧ್ವಜ ಸ್ಥಾಪನೆಯಿಂದ ಪ್ರಾರಂಭವಾದ ರಂಗನಾಥಸ್ವಾಮಿ ಜಾತ್ರಾ ಮಹೋತ್ಸವ ಮತ್ತು ರಥೋತ್ಸವ ನಿಮಿತ್ತ ವಿವಿಧ ಹೋಮಹವನಗಳು ಜರುಗಿದವು. ಬೆಳಿಗ್ಗೆಯಿಂದ ಸಂಜೆಯವರೆಗೂ ವಿವಿಧೆಡೆಗಳಿಂದ ಭಕ್ತರು ದೇವರ ದರ್ಶನ ಪಡೆದರು. ಕಬ್ಬಳಿ ಶಿವಪುತ್ರನಾ ಸ್ವಾಮೀಜಿ, ಮಾಜಿ ಶಾಸಕ ಎ.ಟಿ.ರಾಮಸ್ವಾಮಿ, ಸ್ವಸ್ಥ ಸಮಾಜ ನಿರ್ಮಾಣ ಸಮಿತಿಯ ಅಧ್ಯಕ್ಷ ಎ.ಆರ್. ಪ್ರದೀಪ್ , ಕಾಂಗ್ರೆಸ್ ಮುಖಂಡ ಕೃಷ್ಣೇಗೌಡ, ದಿವಾಕರ್ ಗೌಡ ದಾರ್ಮಿಕ ಕೈಂಕಯಗಳಲ್ಲಿ ಭಾಗಿಯಾದರು. ಹಾರಂಗಿ ಮಹಾಮಂಡಳದ ಅಧ್ಯಕ್ಷ ಎಸ್.ಸಿ.ಚೌಡೇಗೌಡ, ಬಿ ಜಿ ಎಸ್ ಕಾಲೇಜಿನ ಪ್ರಾಂಶುಪಾಲ ಮಹೇಶ್ ಹೊಡೆನೂರು ಸೇರಿದಂತೆ ವಿವಿಧ ಮುಖಂಡರು, ಸ್ಥಳೀಯ ಮತ್ತು ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಇದ್ದರು.



ಹಾಸನ ತಾಲೂಕಿನ ಅಗಲಹಳ್ಳಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಾಲಯದ ನಿರ್ಮಾಣ ಕಾಮಗಾರಿಗೆ ಶಾಸಕ ಸ್ವರೂಪ್ ಪ್ರಕಾಶ್ ಅವರು ಶುಕ್ರವಾರ ಗುದ್ದಲಿಪೂಜೆ ನೆರವೇರಿಸಿದರು.

## ಹಾಸನ ಮೆಗಾ ಡೇರಿ ಉದ್ಘಾಟಿಸಲು ಪ್ರಧಾನಿ ಮೋದಿಗೆ ಆಹ್ವಾನ
# ಮೇ20ರ ಬಳಿಕ ಕಾರ್ಯಾರಂಭ



**ಹಾಸನ:** ಜಿಲ್ಲೆಯ ಹೈನುಗಾರರ ಬಹುಕಾಲದ ಕನಸಾದ, ಸುಮಾರು 830 ಕೋಟಿ ರೂ. ವೆಚ್ಚದ ನೂತನ ಮೆಗಾ ಡೇರಿ ಘಟಕ ಮೇ.20ರ ಬಳಿಕ ಕಾರ್ಯಾರಂಭ ಮಾಡಲಿದ್ದು, ಉದ್ಘಾಟನೆಗೆ ಪ್ರಧಾನಿ ನರೇಂದ್ರ ಮೋದಿ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಕೇಂದ್ರ ಸಚಿವ ಎಚ್‌ಡಿಕೆ, ಸಿಎಂ ಸಿದ್ದರಾಮಯ್ಯ ಅವರನ್ನು ಆಹ್ವಾನಿಸಲಾಗುವುದು ಎಂದು ಹಾಮುಲ್ ಅಧ್ಯಕ್ಷರಾದ ಶಾಸಕ ಎಚ್.ಡಿ.ರೇವಣ್ಣ ತಿಳಿಸಿದರು.

> ಹಾಸನ ಹಾಲು ಒಕ್ಕೂಟವು ಕಳೆದ ಸಾಲಿನಲ್ಲಿ 17.69 ಕೋಟಿ ರೂ. ಲಾಭ ಗಳಿಸುವ ಮೂಲಕ ರಾಜ್ಯದಲ್ಲೇ ಎರಡನೇ ಸ್ಥಾನ ಪಡೆದಿದೆ. 2025-26ನೇ ಸಾಲಿನಲ್ಲಿ 2725 ಕೋಟಿ ರೂ. ವಹಿವಾಟು ನಡೆಸುವ ಗುರಿ ಹೊಂದಲಾಗಿದ್ದು, ಪ್ರಸ್ತುತ 1734 ಸಂಘಗಳಿಂದ ದಿನವಹಿ 13.90 ಲಕ್ಷ ಲೀಟರ್ ಹಾಲು ಸಂಗ್ರಹವಾಗುತ್ತಿದೆ. ಹೈದರಾಬಾದ್ ಸೇರಿದಂತೆ ಹೊರ ರಾಜ್ಯಗಳಲ್ಲೂ ಒಕ್ಕೂಟದ ಮಾರುಕಟ್ಟೆ ವಿಸ್ತರಿಸುತ್ತಿದೆ ಎಂದು ಮಾಹಿತಿ ನೀಡಿದರು.
> ■ ಎಚ್.ಡಿ.ರೇವಣ್ಣ, ಹಾಮುಲ್ ಅಧ್ಯಕ್ಷ, ಶಾಸಕ

ನಗರದಹಾಲುಒಕ್ಕೂಟದಆವರಣದಲ್ಲಿಶುಕ್ರವಾರ ಏರ್ಪಡಿಸಿದ್ದ ಹಾಲು ಉತ್ಪಾದಕರ ವಿಶೇಷ ಸಾಮಾನ್ಯ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉದ್ಘಾಟನಾ ಸಮಾರಂಭವನ್ನು ಕೇವಲ ಕಾರ್ಯಕ್ರಮವನ್ನಾಗಿ ಮಾಡದೆ, ಜಿಲ್ಲೆಯ ಹಾಲು ಉತ್ಪಾದಕರ ಪಾಲಿನ ಹಬ್ಬದಂತೆ ಆಚರಿಸಲಾಗುವುದು. ಪ್ರಧಾನಿಗಳನ್ನು ಆಹ್ವಾನಿಸಲು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಖುದ್ದಾಗಿ ಭೇಟಿ ಮಾಡಿ ಮನವಿ ಮಾಡಿದ್ದಾರೆ ಎಂದು ತಿಳಿಸಿದರು.

ಒಟ್ಟು 830 ಕೋಟಿ ರೂ. ವೆಚ್ಚದ ಈ ಯೋಜನೆಯಲ್ಲಿ ಒಕ್ಕೂಟದ ಸ್ವಂತ ನಿಧಿಯಿಂದಲೇ 400 ಕೋಟಿ ರೂ. ವ್ಯಯಿಸಲಾಗಿದೆ. ಎನ್‌ಡಿಡಿಬಿ ಮೂಲಕ ಸಾಲ ಸೌಲಭ್ಯ ಪಡೆಯಲಾಗಿದೆ. ದಿನಕ್ಕೆ 10 ಲಕ್ಷ ಲೀಟರ್ ಹಾಲು ಸಂಸ್ಕರಣೆ ಮಾಡಲಿದ್ದು, ಭವಿಷ್ಯದಲ್ಲಿ ಇದನ್ನು 15 ಲಕ್ಷ ಲೀಟರ್‌ಗೆ ಹೆಚ್ಚಿಸುವ ಅವಕಾಶವಿದೆ ಎಂದು ತಿಳಿಸಿದರು.

ದಿನಕ್ಕೆ 60 ಟನ್ ಹಾಲಿನ ಪುಡಿ, 40 ಟನ್ ಬೆಣ್ಣೆ, 10 ಟನ್ ತುಪ್ಪ ಹಾಗೂ 5 ಟನ್ ಪನ್ನೀರ್ ಉತ್ಪಾದಿಸುವ ಅತ್ಯಾಧುನಿಕ ಘಟಕಗಳನ್ನು ಮೆಗಾ ಡೇರಿ ಒಳಗೊಂಡಿದೆ. ಪ್ರವಾಸಿಗರನ್ನು ಆಕರ್ಷಿಸಲು 70 ಕೋಟಿ ರೂ. ವೆಚ್ಚದಲ್ಲಿ ಥೀಮ್ ಪಾರ್ಕ್, ವಾಟರ್ ಫೌಂಟನ್ ಹಾಗೂ ಕೆಫೆಟೇರಿಯಾ ನಿರ್ಮಾಣವಾಗುತ್ತಿದ್ದು, ಎರಡು ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ತಿಳಿಸಿದರು.

ಉದ್ಘಾಟನಾ ದಿನದಂದು ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಸದಸ್ಯರು ಭಾಗವಹಿಸುವ ನಿರೀಕ್ಷೆಯಿದೆ. ಅಂದು ಪುರುಷರು ಬಿಳಿ ಪಂಚೆ-ಶರ್ಟ್ ಹಾಗೂ ಮಹಿಳೆಯರು ಒಂದೇ ರೀತಿಯ ಸೀರೆಯನ್ನು ಧರಿಸುವ ಮೂಲಕ ಏಕರೂಪದ ಡ್ರೆಸ್ ಕೋಡ್ ಅನುಸರಿಸಲು ಮನವಿ ಮಾಡಲಾಗಿದೆ. ಬಂದವರಿಗೆಲ್ಲ ಡೇರಿಯ ವತಿಯಿಂದಲೇ ಊಟದ ವ್ಯವಸ್ಥೆ ಇರಲಿದೆ ಎಂದು ಹೇಳಿದರು.

## ಎಚ್‌ಪಿವಿ ಲಸಿಕಾ ಅಭಿಯಾನಕ್ಕೆ ಚಾಲನೆ
# ಹೆಣ್ಣುಮಕ್ಕಳ ಆರೋಗ್ಯ ರಕ್ಷಣೆ ಮಹತ್ವದ ಹೆಜ್ಜೆ

**ಕೊಣನೂರು:** ಸಮುದಾಯ ಆರೋಗ್ಯ ಕೇಂದ್ರದ ಸಭಾಂಗಣದಲ್ಲಿ ನಮ್ಮ ಹೆಣ್ಣು ಮಕ್ಕಳ ಆರೋಗ್ಯ - ನಾಡಿನ ಸುಭದ್ರ ಭವಿಷ್ಯ ಎಂಬ ಘೋಷವಾಕ್ಯದೊಂದಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಆರ್‌ಸಿಎಚ್ ವತಿಯಿಂದ 2026ನೇ ಸಾಲಿನ ಹೆಚ್.ಪಿ.ವಿ ಲ.ಸಿ.ಕಾ ಅಭಿಯಾನಕ್ಕೆ ಜಿ.ಪಂ ಮಾಜಿ ಸದಸ್ಯೆ, ಶಾಸಕ ಎ.ಮಂಜು ಪತ್ನಿ ತಾರಾ ಎ.ಮಂಜು ಅಧಿಕೃತವಾಗಿ ಚಾಲನೆ ನೀಡಿ ಮಾತನಾಡಿ, 9 ವರ್ಷದಿಂದ 14 ವರ್ಷದೊಳಗಿನ ಎಲ್ಲಾ ಹೆಣ್ಣುಮಕ್ಕಳು ಹೆಚ್‌ಪಿವಿ ಲಸಿಕೆ ಹಾಕಿಸಿಕೊಳ್ಳುವುದರ ಮೂಲಕ ಗರ್ಭಕಂಠದ ಸಮಾಜವಾಗುವಂತೆ ನೋಡಿಕೊಳ್ಳಬೇಕು ಕರೆ ನೀಡುತ್ತಾ, ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟುವ ನಿಟ್ಟಿನಲ್ಲಿ ಹಮ್ಮಿಕೊಳ್ಳಲಾಗಿರುವ ಈ ವಿಶೇಷ ಲಸಿಕಾ ಕಾರ್ಯಕ್ರಮವು ಹೆಣ್ಣುಮಕ್ಕಳ ಆರೋಗ್ಯ ರಕ್ಷಣೆಯಲ್ಲಿ ಮಹತ್ವದ ಹೆಜ್ಜೆಯಾಗಿದೆ. ಎಲ್ಲಾ ಹೆಣ್ಣು ಮಕ್ಕಳೂ ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದರು.

ತಾಲೂಕು ಆರೋಗ್ಯಾಧಿಕಾರಿ ಡಾ. ಪುಷ್ಪಲತಾ ಮಾತನಾಡಿ ಹೆಣ್ಣುಮಕ್ಕಳಿಗೆ ಶಾಶ್ವತ ರಕ್ಷಣೆ ನೀಡುವ ಉದ್ದೇಶದಿಂದ ಕೇಂದ್ರ ಸರ್ಕಾರ ಈ ಕರ್ಯಕ್ರಮವನ್ನು ಜಾರಿಗೆ ತಂದಿದ್ದು ಇದರ ಪ್ರಯೋಜನವನ್ನು 1-3-2011 ರಿಂದ 28-2-2012 ರನಡುವೆ ಜನಿಸಿದ ಎಲ್ಲಾ ಹೆಣ್ಣುಮಕ್ಕಳು ಪಡೆದು ಕೊಳ್ಳಬೇಕು. ಈ ಲಸಿಕೆಯ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಇಲ್ಲಸಲ್ಲದ ವದಂತಿಗಳು ಹರಡುತ್ತಿದ್ದು ಅದು ಶುದ್ದ ಸುಳ್ಳಾಗಿದೆ ಎಂದರು.

ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ರಶ್ಮಿ ಶರತ್, ಆರೋಗ್ಯ ರಕ್ಷಾ ಸಮಿತಿ ಅಧ್ಯಕ್ಷ ಕೆ.ವಿ. ಶ್ರೀನಿವಾಸ್ ಮೂರ್ತಿ, ಗ್ರಾಮಪಂಚಾಯತಿ ಅಧ್ಯಕ್ಷ ಬಿ. ನಾಗರಾಜ್ ಉಪಸ್ಥಿತರಿದ್ದರು.



# ಮಕ್ಕಳಲ್ಲಿ ಸಂಸ್ಕಾರ ಬೆಳೆಸಿ

**ಹಾಸನ:** ಸಮಾಜದಲ್ಲಿ ಹೆಣ್ಣು ಪುರುಷರಷ್ಟೇ ಸಮಾನವಾಗಿ ಬೆಳೆದಿದ್ದಾಳೆ. ಎಲ್ಲಾ ರಂಗಗಳಲ್ಲಿಯೂ ತಮ್ಮ ಛಾಪು ಮೂಡಿಸಿ ಸಾಧನೆ ಮಾಡುತ್ತಿದ್ದಾಳೆ, ಹೆಣ್ಣನ್ನು ಭೂಮಿ ತಾಯಿಗೆ ಹೋಲಿಸಲಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದಾಕ್ಷಾಯಿಣಿ ಬಿ.ಕೆ. ತಿಳಿಸಿದ್ದಾರೆ.

ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಜಿಲ್ಲಾ ಪಂಚಾಯಿತಿ, ಸಂಜೀವಿನಿ - ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜಿಲ್ಲಾ ಜೀವನೋಪಾಯ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ'' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಪ್ರಕೃತಿ ಹೆಣ್ಣು, ಭಾರತಾಂಭೆ ಹೆಣ್ಣು. ನದಿಗಳಿಗೆ ಹೆಣ್ಣಿನ ಹೆಸರನ್ನು ಇಡಲಾಗಿದೆ. ಇಂದಿನ ಹೆಣ್ಣು ಮಕ್ಕಳು ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡಬೇಕು. ಹೆಣ್ಣು ಮಕ್ಕಳ ಹಿಂದಿನ ಸಮಸ್ಯೆಗಳಿಗೂ ಈಗಿನ ಸಮಸ್ಯೆಗಳಿಗೂ ಬಹಳಷ್ಟು ವ್ಯತ್ಯಾಸವಿದೆ. ಪುರುಷ ಸಮಾಜದಿಂದ ಮಹಿಳೆಯರು ಇನ್ನೂ ಹೆಚ್ಚಿನ ಸ್ವಾವಲಂಬನೆಯನ್ನು ಪಡೆಯಬೇಕು, ಮಕ್ಕಳನ್ನು ಸಂಸ್ಕಾರವಂತರನ್ನಾಗಿ ಬೆಳೆಸಬೇಕು ಎಂದು ತಿಳಿಸಿದರು.

ಜಿ.ಪಂ ಸಿಇಒ ಪೂರ್ಣಿಮಾ ಬಿ.ಆರ್ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಮಾತನಾಡಿ ಹೆಣ್ಣು ಕಚೇರಿಯಲ್ಲಿ ಒಬ್ಬ ಅಧಿಕಾರಿಯಾಗಿ ಅಥವಾ ಸಿಬ್ಬಂದಿಯಾಗಿ, ಮನೆಯಲ್ಲಿ ಗಂಡನಿಗೆ ಹೆಂಡತಿಯಾಗಿ, ಮಕ್ಕಳಿಗೆ ಉತ್ತಮ ತಾಯಿಯಾಗಿ ಅಣ್ಣ ತಮ್ಮ ಅಕ್ಕ ತಂಗಿಯರಿಗೆ ಸಹೋದರಿಯಾಗಿರಬೇಕು. ಹೆಣ್ಣಿಗೆ ಸ್ವಾತಂತ್ರ್ಯವಿದೆ. ಆದರೆ ಅದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಬೇಕು ಎಂದರು.

ವಿವಿಧ ಕಾರ್ಯರಂಗಗಳಲ್ಲಿ ಉನ್ನತ ಹುದ್ದೆಯಲ್ಲಿದ್ದರೂ ಯಾವುದೇ ಅಹಂ ಇಲ್ಲದೇ ಮನೆಗಳಲ್ಲಿ ಒಬ್ಬ ಗೃಹಿಣಿಯಾಗಿದ್ದರೆ ಮಹಿಳೆಯರ ಜೀವನ ಸಾರ್ಥಕವಾಗುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಉಪಕಾರ್ಯದರ್ಶಿ ಬಾಬು,ಕೃಷ್ಣಮೂರ್ತಿ, ಮುಖ್ಯ ಯೋಜನಾಧಿಕಾರಿ ಕೃಷ್ಣಮೂರ್ತಿ, ಯೋಜನಾ ನಿರ್ದೇಶಕರು ಚಂದ್ರಮೌಳಿ ಹಾಗೂ ಮತ್ತಿತರರಿದ್ದರು.



# ಸದೃಢವಾಗಿ ಬಿಜೆಪಿ ಕಟ್ಟಲು ಮುಂದಾಗಿ: ಕರೆ

**ಚನ್ನರಾಯಪಟ್ಟಣ:** ಪಟ್ಟಣದ 23 ವಾರ್ಡ್‌ಗಳಲ್ಲಿ ಬಿಜೆಪಿ ಪಕ್ಷವನ್ನ ಸದೃಢವಾಗಿ ಕಟ್ಟುವ ನಿಟ್ಟಿನಲ್ಲಿ ಕಾರ್ಯಕರ್ತರು ಮುಂದಾಗಬೇಕು ಎಂದು ಬಿಜೆಪಿ ಮುಖಂಡ ಸಿ. ಆರ್. ಚಿದಾನಂದ್ ತಿಳಿಸಿದರು.



ಅವರು ಪಟ್ಟಣದ ವಾರ್ಡ್ ನಂಬರ್ 3ರಲ್ಲಿ ಬಿಜೆಪಿ ಪಕ್ಷ ಸೇರ್ಪಡೆ ಕಾರ್ಯಕ್ರಮ ಹಾಗೂ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿ ಮುಂಬರುವ ಪುರಸಭಾ ಚುನಾವಣೆಯಲ್ಲಿ ಬಿಜೆಪಿ ಪಕ್ಷದಿಂದ ಎಲ್ಲಾ ವಾರ್ಡುಗಳಲ್ಲಿ ಬಿಜೆಪಿ ಪಕ್ಷದ ಅಭ್ಯರ್ಥಿಗಳನ್ನ ಚುನಾವಣಾ ಕಣಕ್ಕೆ ನಿಲ್ಲಿಸಲಾಗುವುದು. ಬಿಜೆಪಿ ಪಕ್ಷದ ಸಿದ್ಧಾಂತ ಮತ್ತು ತತ್ವವನ್ನ ನಂಬಿ ಪಟ್ಟಣದಲ್ಲಿ ಜೆಡಿಎಸ್ ಹಾಗೂ ಕಾಂಗ್ರೆಸ್ ಪಕ್ಷವನ್ನು ತೊರೆದು ಬಿಜೆಪಿಗೆ ಉತ್ಸುಕರಾಗಿ ಕಾರ್ಯಕರ್ತರುಗಳು ಸೇರ್ಪಡೆಯಾಗುತ್ತಿರುವುದು ಪಕ್ಷಕ್ಕೆ ಬಲಬಂದಂತಾಗುತ್ತಿದೆ ಈ ನಿಟ್ಟಿನಲ್ಲಿ ನಾವೆಲ್ಲರೂ ಕೂಡ ಸೇರಿ ಪಕ್ಷವನ್ನ ಬೆಳೆಸುವ ಕೆಲಸವನ್ನ ಮಾಡಬೇಕು. ಬಿಜೆಪಿ ಪಕ್ಷ ಕೇವಲ ಒಂದು ಕುಟುಂಬಕ್ಕೆ ಸೀಮಿತವಾದ ಪಕ್ಷವಲ್ಲ ಪಕ್ಷದ ಕಟ್ಟ ಕಡೆಯ ಕಾರ್ಯಕರ್ತರಿಗೂ ಕೂಡ ಅಧಿಕಾರ ಸಿಗಬೇಕೆಂಬುದು ನಮ್ಮ ಸಿದ್ಧಾಂತ ಈ ನಿಟ್ಟಿನಲ್ಲಿ ಎಲ್ಲರೂ ಪ್ರಾಮಾಣಿಕವಾಗಿ ಕೆಲಸ ಮಾಡಿ ಎಂದರು. ಬಿಜೆಪಿ ಮುಖಂಡರಾದ ಹರ್ಷವರ್ಧನ, ನಂಜುಂಡಮ್ಮೈಮ್, ತಿಲಕ್, ಅರ್ಪಿತಪಟೇಲ್, ಮಂಜು ಗುಂಡಶೆಟ್ಟಿಹಳ್ಳಿ, ಮಂಜುಳಪಟೇಲ್, ಅಪೂರ್ವ, ತುಂಗ, ಮಿಥುನ್ ಮತ್ತಿತರಿದ್ದರು.

# ಲಿಂಗ ಸಮಾನತೆಯಿಂದ ಮಹಿಳಾ ಸಬಲೀಕರಣ

**ಹೊಳೆನರಸೀಪುರ:** ಪುರುಷ ಪ್ರಧಾನ ಸಮಾಜದಲ್ಲಿ ಕುಟುಂಬದಿಂದಲೇ ಲಿಂಗ ಸಮಾನತೆ ಮತ್ತು ಗೌರವ ಸಿಕ್ಕಾಗ ಮಾತ್ರ ಮಹಿಳೆ ನಿಜವಾದ ಅರ್ಥದಲ್ಲಿ ಸಬಲಳಾಗಲು ಸಾಧ್ಯ, ಎಂದು ಹಾಸನದ ಸರ್ಕಾರಿ ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಕವಿತಾ ಅಭಿಪ್ರಾಯಪಟ್ಟರು.



ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ 'ಮಹಿಳಾ ದಿನಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಮಹಿಳಾ ದಿನಾಚರಣೆಗಳು ಕೇವಲ ಆಚರಣೆಗೆ ಸೀಮಿತವಾಗಬಾರದು ಎಂದು ಎಚ್ಚರಿಸಿದ ಅವರು, ಹೆಣ್ಣು ಮತ್ತು ಗಂಡು ಒಂದು ರಥದ ಎರಡು ಚಕ್ರಗಳಿದ್ದಂತೆ. ಸಮಾಜದಲ್ಲಿ ಇಂದಿಗೂ ಮನೆ ಮಾಡಿರುವ ಹೆಣ್ಣು ಭ್ರೂಣ ಹತ್ಯೆ, ಲೈಂಗಿಕ ದೌರ್ಜನ್ಯ, ಕೌಟುಂಬಿಕ ಕಿರುಕುಳ ಮತ್ತು ಹೆಣ್ಣನ್ನು ಎರಡನೇ ದರ್ಜೆಯ ಪ್ರಜೆಯನ್ನಾಗಿ ನೋಡುವ ದೃಷ್ಟಿಕೋನ ಬದಲಾಗಬೇಕು, ಎಂದು ಕರೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಎಸ್.ಆರ್. ಮೂರ್ತಿ ಮಾತನಾಡಿ, ಪ್ರತಿಯೊಬ್ಬ ಮಹಿಳೆಯೂ ತನ್ನದೇ ಆದ ರೀತಿಯಲ್ಲಿ ಒಬ್ಬ ಸಾಧಕಿಯಾಗಿರುತ್ತಾಳೆ, ಎಂದು ಶ್ಲಾಘಿಸಿದರು. ಗ್ರಂಥಪಾಲಕ ಕುಮಾರಸ್ವಾಮಿ ಮಾತನಾಡಿ, ಸ್ವಾತಂತ್ರ್ಯ ಚಳವಳಿಯ ಕಾಲದಿಂದಲೂ ಮಹಿಳೆಯರನ್ನು ನಿರ್ಲಕ್ಷಿಸಲಾಗುತ್ತಿದೆ. ಮಹಿಳೆಯರು ತಮ್ಮ ಹಕ್ಕುಗಳಿಗಾಗಿ ಇಂದಿಗೂ ನಿರಂತರ ಹೋರಾಟ ಮಾಡುತ್ತಲೇ ಬರಬೇಕಾದ ಸ್ಥಿತಿ ಇದೆ, ಎಂದು ವಿಷಾದಿಸಿದರು.

ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರುಗಳಾದ ಡಾ. ಪೂರ್ಣಿಮಾ, ಲೋಲಾಕ್ಷಿ, ಲತಾ ಎನ್.ಆರ್., ಡಾ. ಉದಯ್ ಕುಮಾರ್ ಸೇರಿದಂತೆ ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಹಾಗೂ ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

## ಸರ್ಕಾರ, ಅಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳುವಂತೆ ಜಯರಾಂ ಆಗ್ರಹ
# ರೈತರಿಗೆ ಕಾಯಂ ಸಾಗುವಳಿ ಚೀಟಿ ನೀಡಿ

**ಅರಸೀಕೆರೆ:** ಬಗರ್‌ಹುಕುಂ ಸಾಗುವಳಿ ಮಾಡಿದ ರೈತರಿಗೆ ಕಾಯಂ ಸಾಗುವಳಿ ಚೀಟಿ ನೀಡಲು ಸರ್ಕಾರ ಮತ್ತು ಅಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ರಾಜ್ಯ ಅನ್ನದಾತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಜಯರಾಂ ಆಗ್ರಹಿಸಿದರು.



ನಗರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ ಕ್ಷೇತ್ರದ ಶಾಸಕ ಕೆ.ಎಂ.ಶಿವಲಿಂಗೇಗೌಡರು ನಾಲ್ಕು ಅವಧಿಯಿಂದ ಶಾಸಕರಾಗಿದ್ದು, ಅಲ್ಲದೇ ಬಗರ್ ಹುಕುಂ ಸಮಿತಿಗೂ ಅಧ್ಯಕ್ಷರಾಗಿದ್ದಾರೆ ಆದರೆ ಬಗರ್‌ಹುಕುಂ ಸಾಗುವಳಿ ರೈತರಿಗೆ ಸಾಗುವಳಿ ಚೀಟಿ ನೀಡುವಲ್ಲಿ ಕೆಲವು ರೈತರಿಗೆ ಅನ್ಯಾಯವಾಗಿದೆ ಎಂದು ಆರೋಪಿಸಿದರು.

ಆಡಳಿತ ಪಕ್ಷದಲ್ಲಿರುವ ಶಾಸಕರು ಕೂಡಲೇ ಬಗರ್‌ಹುಕುಂ ಸಮಿತಿ ಸಭೆ ಕರೆದು, ಯಾರೆಲ್ಲ ರೈತರ ಅರ್ಜಿಗಳು ವಜಾ ಗೊಂಡಿದೆಯೋ ಅವರಿಗೆ ಮರು ಪರಿಶೀಲನೆ ನಡೆಸಿ ಕಾಯಂ ಸಾಗುವಳಿ ಚೀಟಿ ಮಂಜೂರಾತಿ ನೀಡಲು ಕ್ರಮ ಕೈಗೊಳ್ಳಬೇಕು ಒತ್ತಾಯಿಸಿದರು. ತಾಲೂಕಿನ ಹಲವಾರು ರೈತರು ಹಂಗಾಮಿ ಸಾಗುವಳಿ ಚೀಟಿ ಪಡೆದಿದ್ದರೂ ಅವರಿಗೆ ಕಾಯಂ ಸಾಗುವಳಿ ಚೀಟಿ ನೀಡದಿರುವುದು ಪ್ರಶ್ನಾರ್ಹ ವಾಗಿದೆ. ರೈತರು ಸರ್ಕಾರದ ಮೊರೆ ಹೋಗುತ್ತಿದ್ದರೂ ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ನಮೂನೆ -57 ಅಡಿಯಲ್ಲಿ ಸುಮಾರು 19 ಸಾವಿರ ರೈತರು ಅರ್ಜಿ ಸಲ್ಲಿಸಿದ್ದು, ಡೀಸಿ ಆದೇಶದ ಮೇರೆಗೆ ಅನೇಕ ಅರ್ಜಿಗಳು ತಿರಸ್ಕೃತಗೊಂಡಿವೆ ಎಂದು ತಿಳಿಸಲಾಗಿದೆ. ಆದರೆ ಜಿಲ್ಲಾ ಉಸ್ತುವಾರಿ ಸಚಿವರು ಅರ್ಹ ಫಲಾನುಭವಿಗಳ ಅರ್ಜಿಗಳು ತಿರಸ್ಕೃತಗೊಂಡಿದ್ದರ ವರದಿ ನೀಡಲು ಸೂಚಿಸಿರುವ ಹಿನ್ನೆಲೆಯಲ್ಲಿ ಸರ್ಕಾರ ಈ ವಿಷಯದಲ್ಲಿ ಸ್ಪಷ್ಟ ಕ್ರಮಕೈಕೊಳ್ಳಬೇಕು ಎಂದು ಆಗ್ರಹಿಸಿದರು.

ರೈತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಶುಲ್ಕವನ್ನು ಸಹ ಪಾವತಿಸಿದ್ದಾರೆ. ಸರ್ಕಾರಕ್ಕೆ ಆದಾಯವಾಗಿದ್ದರೂ ಸಮಸ್ಯೆ ಪರಿಹರಿಸು ವಲ್ಲಿ ಏಕೆ ನಿರ್ಲಕ್ಷ್ಯ ವಹಿಸಲಾಗುತ್ತಿದೆ ಎಂದು ಅವರು ಪ್ರಶ್ನೆ ಮಾಡಿದರು. ಇತ್ತೀಚೆಗೆ ಸರ್ಕಾರ ನಡೆಸಿದ ಭೂ ಗ್ಯಾರಂಟಿ ಸಮಾವೇಶದಂತೆ ನಮೂನೆ

57 ಅಡಿಯಲ್ಲಿ ಅರ್ಜಿ ಸಲ್ಲಿಸಿರುವ ಎಲ್ಲ ರೈತರಿಗೆ ಕಾಯಂ ಸಾಗುವಳಿ ಚೀಟಿ ನೀಡಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ತಾಲೂಕು ಅಧ್ಯಕ್ಷ ಮಧುಸೂದನ್, ಜಿಲ್ಲಾಧ್ಯಕ್ಷ ಎನ್ ನಟರಾಜ್ ಉಪಾಧ್ಯಕ್ಷ ಗುರುಮೂರ್ತಿ, ರಾಜ್ಯ ಸಂಚಾಲಕ ಭರತ್, ಮುಖಂಡ ರಾದ ಶಿವರಾಜ್ ಇದ್ದರು.

## ಬೇಸಿಗೆ ಆರಂಭದಲ್ಲೇ ವಿದ್ಯುತ್ ಕೊರತೆ: ರೈತರ ಆಕ್ರೋಶ
# ಸೆಸ್ಕಾಂ ಕಚೇರಿಗೆ ರೈತರಿಂದ ಬೀಗ

**ಅರಸೀಕೆರೆ:** ಬೇಸಿಗೆ ಆರಂಭವಾಗುತ್ತಿದ್ದಂತೆಯೇ ವಿದ್ಯುತ್ ಕೊರತೆ ತೀವ್ರಗೊಂಡ ಹಿನ್ನೆಲೆಯಲ್ಲಿ ಆಕ್ರೋಶಗೊಂಡ ರೈತರು ಅರಸೀಕೆರೆ ತಾಲೂಕಿನ ಜಾವಗಲ್ ಸೆಸ್ಕಾಂ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದ ಘಟನೆ ನಡೆದಿದೆ.



ವಿದ್ಯುತ್ ಪೂರೈಕೆ ಮಾಡಲಾಗುತ್ತಿಲ್ಲವೆಂದು ಆರೋಪಿಸಿದ ರೈತರು ಸೆಸ್ಕಾಂ ಅಧಿಕಾರಿಗಳ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ದಿನಕ್ಕೆ ಕೇವಲ ಒಂದು ರಿಂದ ಎರಡು ಗಂಟೆಗಳ ಕಾಲ ಮಾತ್ರ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ ಎಂದು ಆರೋಪಿಸಿದ ರೈತರು, ಇದರಿಂದ ಕೃಷಿ ಚಟುವಟಿಕೆಗಳಿಗೆ ಭಾರೀ ಅಡಚಣೆ ಉಂಟಾಗಿದೆ ಎಂದು ಹೇಳಿದರು. ಬೇಸಿಗೆ ಆರಂಭದಲ್ಲೇ ವಿದ್ಯುತ್ ಅಭಾವ ಎದುರಾಗಿರುವುದರಿಂದ ಬೋರ್‌ವೆಲ್ ಮತ್ತು ಪಂಪ್‌ಸೆಟ್‌ಗಳನ್ನು ಕಾರ್ಯನಿರ್ವಹಿಸಲು ಸಾಧ್ಯವಾಗುತ್ತಿಲ್ಲ, ಇದರ ಪರಿಣಾಮವಾಗಿ ಬೆಳೆದ ಬೆಳೆಗಳಿಗೆ ನೀರು ಹಾಯಿಸಲು ಸಾಧ್ಯವಾಗದೆ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮರಗೊಂಡನಹಳ್ಳಿ, ತಾವರೆಹಳ್ಳಿ, ಚಿಕ್ಕಜಿಕಟ್ಟೆಹಳ್ಳಿ, ಬಿದರೆಹಳ್ಳಿ, ಎ. ಚಿಕ್ಕಲಿಂಗನಹಳ್ಳಿ, ಸೇರಿದಂತೆ ಸುತ್ತಮುತ್ತಲ ಹಲವಾರು ಗ್ರಾಮಗಳಿಗೆ ಸರಿಯಾದ ರೀತಿಯಲ್ಲಿ ವಿದ್ಯುತ್ ಪೂರೈಕೆ ಆಗುತ್ತಿಲ್ಲ ಎಂದು ರೈತರು ದೂರಿದರು. ಕೃಷಿ ಕಾರ್ಯಗಳಿಗೆ ಮಾತ್ರವಲ್ಲದೆ ಜಾನುವಾರುಗಳಿಗೆ ಕುಡಿಯುವ ನೀರು ಒದಗಿಸಲು ಸಹ ಸಮಸ್ಯೆ ಎದುರಾಗಿದೆ. ವಿದ್ಯುತ್ ಇಲ್ಲದ ಕಾರಣದಿಂದ ನೀರು ಎತ್ತಲು ಸಾಧ್ಯವಾಗದೆ ಜಾನುವಾರುಗಳಿಗೂ ನೀರಿನ ಕೊರತೆ ಉಂಟಾಗಿದೆ ಎಂದು ಹೇಳಿದರು.

ರೈತರು ಬೆಳೆದಿರುವ ಬೆಳೆಗಳು ಒಣಗುವ ಪರಿಸ್ಥಿತಿ ಎದುರಾಗಿದ್ದು, ಈಗಲೇ ಸಮರ್ಪಕ ವಿದ್ಯುತ್ ಪೂರೈಕೆ ಮಾಡದಿದ್ದರೆ ಭಾರೀ ನಷ್ಟ ಎದುರಾಗಲಿದೆ ಎಂದು ಅವರು ಎಚ್ಚರಿಸಿದರು. ಕೃಷಿ ಚಟುವಟಿಕೆಗಳಿಗೆ ವಿದ್ಯುತ್ ಅತ್ಯಂತ ಅಗತ್ಯವಾಗಿದೆ ಎಂದರು.

ಗ್ರಾಮ ಪಂಚಾಯಿತಿ ಸದಸ್ಯ ನವೀನ್, ಸಿದ್ದೇಶ್, ರೈತರಾದ ಗಿರೀಶ್, ನಿರಂಜನ್, ಅಭಿಷೇಕ್, ಪ್ರತಾಪ್, ಸತೀಶ್ ಹರೀಶ್, ಶರತ್, ಮೋಹನ್ ಕುಮಾರ್, ಪರಮೇಶ್ ಇತರರು ಉಪಸ್ಥಿತರಿದ್ದರು.

## ಕಿರುಸುದ್ದಿ

### ಮಕ್ಕಳ ಶೈಕ್ಷಣಿಕ ಮಟ್ಟ ಕಡಿಮೆ: ದೇವರಾಜೇಗೌಡ

**ಚನ್ನರಾಯಪಟ್ಟಣ:** ತಾಂತ್ರಿಕ ಶಾಲಾ ಶಿಕ್ಷಕರಿಗೆ ಇರುವ ಮೂಲ ವೇತನ ಶ್ರೇಣಿಯನ್ನು ಪ್ರೌಢಶಾಲಾ ಸಹ ಶಿಕ್ಷಕರಿಗೆ ಮತ್ತು ತತ್ಸಮಾನ ವೃಂದದ ಶಿಕ್ಷಕರಿಗೆ ನೀಡಬೇಕು ಎಂದು ರಾಜ್ಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ನೂತನ ಪ್ರಧಾನ ಕಾರ್ಯದರ್ಶಿ ದೇವರಾಜೇಗೌಡ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಶಿಕ್ಷಕರ ಮತ್ತು ಪದವೀಧರ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಸದಸ್ಯರು ಹಾಗೂ ಸಂಘದ ಮನವಿಯನ್ನು ಪರಿಗಣಿಸಿ ಎಸ್‌ಎಸ್ ಎಲ್‌ಸಿ ಫಲಿತಾಂಶ ನಿರ್ಣಯ ಮಾನದಂಡವನ್ನು ದೇಶದ ಇತರ ರಾಜ್ಯಗಳಲ್ಲಿರುವಂತೆಯೇ ನಮ್ಮ ರಾಜ್ಯದಲ್ಲೂ ಶೇ.33 ಅಂಕಗಳಿಗೆ ಇಳಿಸುವ ಮೂಲಕ ಮಕ್ಕಳ ಉತ್ತಮ ಭವಿಷ್ಯಕ್ಕೆ ಅವಕಾಶ ಮಾಡಿಕೊಡಲಾಗಿದೆ. ಇದೇ ಕಾರಣದಿಂದ ಈ ವರ್ಷ ರಾಜ್ಯದಲ್ಲಿ ಫಲಿತಾಂಶ ಶೇ.90ರಷ್ಟು ಮೀರಲಿದೆ. ಇದರಿಂದ ಮಕ್ಕಳ ಶೈಕ್ಷಣಿಕ ಮಟ್ಟ ಕಡಿಮೆಯಾಗುತ್ತದೆ ಎನ್ನುವುದಾದರೆ ದೇಶಾದ್ಯಂತ ಎಲ್ಲ ರಾಜ್ಯಗಳಲ್ಲೂ ಶೇ.35ರ ಮಾದರಿಯನ್ನೇ ಮಾಡುವಂತೆಯೂ ನಾವು ಒತ್ತಾಯಿಸಿದ್ದೇವೆ ಎಂದು ತಿಳಿಸಿದರು. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಡಿ. ಎನ್. ರವಿ, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ತಾಲೂಕು ಪ್ರಧಾನ ಕಾವ್ಯದರ್ಶಿ ಎಲ್.ಆರ್.ಸತೀಶ್, ಎಚ್.ಎನ್. ಕೇಶವಮೂರ್ತಿ, ಗುರುರಾಜ್, ಉಮೇಶ್, ರಂಗಸ್ವಾಮಿ, ಪುರುಷೋತ್ತಮ್ ಇತರರಿದ್ದರು.

### ಅಂಗನವಾಡಿ ಕೇಂದ್ರಕ್ಕೆ ಬೆಂಕಿ

**ಹಾಸನ:** ತಾಲೂಕಿನ ಶಾಂತಿ ಗ್ರಾಮ ಹೋಬಳಿ ಹೊಂಗೆರೆ ಗ್ರಾಮದ ಅಂಗನವಾಡಿ ಕೇಂದ್ರಕ್ಕೆ ಆಕಸ್ಮಿಕ ಬೆಂಕಿ ಬಿದ್ದು ನಷ್ಟ ಸಂಭವಿಸಿದೆ. ಬೆಂಕಿಯ ಉರಿಗೆ ಮಕ್ಕಳ ಆಟೋಪಕರಣ, ಆಹಾರ ಪದಾರ್ಥ,ಹಾಲಿನ ಪೌಡರ್, ಸೀಲಿಂಗ್ ಫ್ಯಾನ್, ಬೀರು ಹಾಗೂ ರಿಜಿಸ್ಟರ್ ಸೇರಿ ಕೆಲವು ಪುಸ್ತಕಗಳು ಸುಟ್ಟು ಹೋಗಿವೆ. ಅಂಗನವಾಡಿ ಕೇಂದ್ರದಲ್ಲಿ ಬೆಂಕಿ ಕಾಣಿಸಿಕೊಂಡು ಹೊಗೆ ಏಳುತ್ತಿರುವುದನ್ನು ಗಮನಿಸಿದ ಸ್ಥಳೀಯರು ದೌಡಾಯಿಸಿ ಪರಸ್ಪರ ಸಹಕಾರ ನೀಡುವ ಮೂಲಕ ನೀರು ಚೆಲ್ಲಿ ಬೆಂಕಿಯನ್ನು ನಂದಿಸುವ ಮೂಲಕ ಹಾನಿ ಹೆಚ್ಚಾಗುವುದನ್ನು ತಪ್ಪಿಸಿದ್ದಾರೆ. ಮೊದಲೇ ಅಂಗನವಾಡಿ ಕಟ್ಟಡ ಶಿಥಿಲವಾಗಿದ್ದು, ಕಿಟಕಿ-ಬಾಗಿಲು ಹಳೆಯದಾಗಿದ್ದವು. ಇದರಿಂದ ಲಾಕ್ ಮಾಡಲು ಆಗುತ್ತಿರಲಿಲ್ಲ. ಪರಿಣಾಮ ಯಾರೋ ಕಿಡಿ ಗೇಡಿಗಳು ಹೊತ್ತಿಸಿದ ಕಿಡಿ ಕೊಠಡಿಯೊಳಕ್ಕೆ ವ್ಯಾಪಿಸಿ ಈ ಅನಾಹುತ ಸಂಭವಿಸಿದೆ.ಅದೃಷ್ಟವಶಾತ್ ಅಂಗನವಾಡಿ ಸಮಯ ಮುಗಿದಿದ್ದರಿಂದ ಯಾವುದೇ ಮಕ್ಕಳು ಕೇಂದ್ರದಲ್ಲಿ ಇರದ ಕಾರಣ ಅನಾಹುತವೊಂದು ತಪ್ಪಿದಂತಾಗಿದೆ. ???? 3 ಕಲಿಯುತ್ತಿರುವ ಒಟ್ಟು 18 ಮಕ್ಕಳು ಮನೆಗೆ ತೆರಳಿದ್ದರಿಂದ ಯಾವುದೇ ಅನಾಹುತ ಸಂಭವಿಸಿಲ್ಲ. ಈ ನಡುವೆ ಬೆಂಕಿ ಅನಾಹುತ ದಿಂದ ಸುಟ್ಟು ಹೋಗಿರುವ ಅಂಗನವಾಡಿ ಕೇಂದ್ರದ ಒಳಗೆ ಮದ್ಯದ ಬಾಟಲ್ ಪತ್ತೆಯಾಗಿರುವುದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ. ಈ ಸಂಬಂಧ ಅಂಗನವಾಡಿ ಟೀಚರ್ ನಿಮಿತಾ ಅವರು ನೀಡಿದ ದೂರು ಆಧರಿಸಿ ಶಾಂತಿಗ್ರಾಮ ಠಾಣೆ ಪಿಎಸ್‌ಐ ಅರುಣ್, ಶಾಂತಿಗ್ರಾಮ ಪಂಚಾಯ್ತಿ ಪಿಡಿಒ ಅವಿನಾಶ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ವೇಳೆ ಅಂಗನವಾಡಿ ಕೇಂದ್ರವನ್ನು ಹೊಸದಾಗಿ ನಿರ್ಮಿಸಿಕೊಡುವಂತೆ ಸ್ಥಳೀಯರು ಹಾಗೂ ಮಕ್ಕಳ ಪೋಷಕರು ಮನವಿ ಮಾಡಿದರು.

### ಮಹಿಳಾ ದಿನಾಚರಣೆ

**ಹಾಸನ:** ಮಹಿಳಾ ದಿನಾಚರಣೆಯಂದು ಮಹಿಳೆಯರ ಕಣ್ಣಲ್ಲಿ ನೀರು ತುಂಬಿ ಬಂತು. ಆದರದು ದುಃಖ:ದ ಕಣ್ಣೀರಾಗಿರದೆ, ಆನಂದಬಾಷ್ಪವಾಗಿದ್ದುದು ವಿಶೇಷ ಎನಿಸಿತು. ನಗರದ ರಾಜೀವ್ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ವಿಶಿಷ್ಟ ಹಾಗೂ ಭಾವನಾತ್ಮಕ ಕಾರ್ಯಕ್ರಮ ಮಾತೃ ದೇವೋಭವ ಆಯೋಜಿಸಲಾಗಿತ್ತು. ವಿದ್ಯಾರ್ಥಿಗಳು ತಮ್ಮ ತಾಯಂದಿರನ್ನು ಕಾಲೇಜಿಗೆ ಆಹ್ವಾನಿಸಿ, ಅವರ ಪಾದಪೂಜೆ ಮಾಡಿ, ಹೂವುಗಳನ್ನು ಅರ್ಪಿಸಿ ಗೌರವ ಸಲ್ಲಿಸಿದರು. ಹಲವಾರು ತಾಯಂದಿರು ತಮ್ಮ ಮಕ್ಕಳಿಂದ ದೊರೆತ ಗೌರವಕ್ಕೆ ಸಂತೋಷ ವ್ಯಕ್ತಪಡಿಸಿದರು. ಅವರ ಕಣ್ಣುಗಳಲ್ಲಿ ತುಂಬಿ ಬಂದ ಸಂತೋಷದ ಕಣ್ಣೀರು ತಾಯ್ತನದ ಹೆಮ್ಮೆಯನ್ನು ಇಮ್ಮಡಿಗೊಳಿಸಿತು. ವಿದ್ಯಾರ್ಥಿಗಳ ತಾಯಂದಿರೇ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. ವಿದ್ಯಾರ್ಥಿಗಳು ತಮ್ಮ ತಾಯಿಯ ಕುರಿತು ತಮ್ಮ ಅನುಭವ ಹಂಚಿಕೊಂಡರು. ತಾಯಿ ತಮ್ಮ ಜೀವನದಲ್ಲಿ ನೀಡಿದ ಪ್ರೇರಣೆ, ತ್ಯಾಗ ಮತ್ತು ಬೆಂಬಲವನ್ನು ಮಕ್ಕಳು ಸ್ಮರಿಸಿದರು. ತಾಯಿಯ ಪ್ರೀತಿ ಅನಂತ, ತಾಯಿಯ ಆಶೀರ್ವಾದವೇ ನಮ್ಮ ಯಶಸ್ಸಿನ ಮೂಲ ಎಂಬ ಸಂದೇಶ-ಸಂತೋಷವನ್ನು ವ್ಯಕ್ತಪಡಿಸಿದರು.



ಹಾಸನದ ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಗ್ಯಾಸ್ ಇಲ್ಲದೆ ಅಡುಗೆ ಸಿಬ್ಬಂದಿ ಸೌದೆ ಬಳಸಿ ಅಡುಗೆ ಮಾಡುತ್ತಿದ್ದಾರೆ. ಗ್ಯಾಸ್ ಹೊಂದಿಸಿ ಹಾಸ್ಟೆಲ್ ವಾರ್ಡನ್ ಪರದಾಟುವಂತಾಗಿದ್ದು, ಸಮಯಕ್ಕೆ ಸರಿಯಾಗಿ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಊಟ ನೀಡಲು ಸಿಬ್ಬಂದಿ ಉರಿ ಬಿಸಿಲಿನಲ್ಲಿ ಒಲೆಯಲ್ಲಿ ಅಡುಗೆ ಮಾಡುತ್ತಿದ್ದಾರೆ.

## ಮಹಿಳೆ ದುರ್ಬಲೆಯಲ್ಲ ಮಾನಸಾ

**ಹುಣಸೂರು:** ಮಹಿಳೆ ದುರ್ಬಳಲ್ಲ ಅವಳು ಸಬಲಳು ಎಂದು ಹುಣಸೂರು ನಗರಸಭಾ ಆಯುಕ್ತರಾದ ಮಾನಸ ಹೇಳಿದರು. ನಗರದ ಕಲ್ಕುಣಿಕೆಯ ಗುರುಗಳ ಕಟ್ಟೆಯಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಮತ್ತು ದಲಿತ ಮಹಿಳಾ ಒಕ್ಕೂಟವು ಆಯೋಜಿಸಿದ್ದ ''ಮಹಿಳಾ ದಿನಾಚರಣೆಯ ಅಂಗವಾಗಿ'' ಬಡ ಮಹಿಳೆ ಪಾರ್ವತಮ್ಮಳ ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸಿ ಮಹಿಳೆಯರ ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಮಹಿಳೆಯರಾದ ನಾವು ಅಸಹಾಯಕರು ಎಂಬ ಭಾವನೆಯನ್ನು ಬಿಡಬೇಕು. ನಾನು ಅನಾಥಳು, ನನಗೆ ಯಾರೂ ಇಲ್ಲ, ನನ್ನಿಂದ ಆಗುವುದಿಲ್ಲ, ಎಂಬ ಮನಸ್ಥಿತಿಯಿಂದ ನಾವು ಹೊರಬರಬೇಕು. ಇತಿಹಾಸದ ಕೆಲವು ಘಟನೆಗಳನ್ನು ನಾವು ನೋಡಿದಾಗ ಯಾವುದೇ ಬದಲಾವಣೆ ಒಂದು ಮಹಿಳೆಯಿಂದಲೇ ಆಗಿರುತ್ತದೆ. ಶಿಕ್ಷಣದಿಂದ ವಂಚಿತರಾಗಿ ಅಜ್ಞಾನದಿಂದ ಬಳಲುತ್ತಿದ್ದ ಬಹುಜನರಿಗೆ ಜ್ಯೋತಿಬಾ ಫುಲೆ ರವರ ಪತ್ನಿಯಾದ ಸಾವಿತ್ರಿಬಾಯಿ ಫುಲೆ ರವರು ದಲಿತರ ಕೇರಿಗಳಿಗೆ ಹೋಗಿ ಅವರ ಮಕ್ಕಳಿಗೆ ಶಿಕ್ಷಣ ಕಲಿಸುವ ಸಂದರ್ಭದಲ್ಲಿ ಅವರಿಗೆ ಅನೇಕ ರೀತಿಯ ತೊಂದರೆಗಳನ್ನು ಕೊಡಲಾಗಿತ್ತು. ಅದಕ್ಕೆ ಸಾವಿತ್ರಿಬಾಯಿ ಫುಲೆ ರವರು ಎದೆಗುಂದದೆ ಶಿಕ್ಷಣ ವಂಚಿತ ಸಮುದಾಯಗಳಿಗೆ ಶಿಕ್ಷಣವನ್ನು ಹೇಳಿಕೊಟ್ಟರು. ಇದರಿಂದ ಸಾವಿರಾರು ವರ್ಷಗಳಿಂದ ಅಜ್ಞಾನದಿಂದ ಕೂಡಿದ್ದ ಬಹುಪಾಲು ಸಮಾಜಗಳು ಜ್ಞಾನವನ್ನು ಪಡೆಯುವಂತಾಯಿತು ಎಂದರು.

ಈ ಸಂದರ್ಭದಲ್ಲಿ ದಸಂಸ ದ ಬಲ್ಲೇನಹಳ್ಳಿ ಕೆಂಪರಾಜು, ಕಿರಿಜಾಜಿ ಗಜೇಂದ್ರ, ಅಬ್ದುಲ್ ಮಾಲೀಕ್, ನಾಗನಹಳ್ಳಿ ಮಹದೇವ, ದಲಿತ ಹಿರಿಯ ಮುಖಂಡರಾದ ಬಸವಲಿಂಗಯ್ಯ, ಕೆಂಪ ವಾಡಿ ಗ್ರಾಮದ ಗೌರಮ್ಮ, ದಲಿತ ಮಹಿಳಾ ಒಕ್ಕೂಟದ ಲಕ್ಷ್ಮಿ ಭಾಗವಹಿಸಿದ್ದರು.



ಹುಣಸೂರು ತಾಲೂಕಿನ ಕರ್ನಾಟಕ ದಲಿತ ಸಂಘರ್ಷ ಸಮಿತಿ, ದಲಿತ ಮಹಿಳಾ ಒಕ್ಕೂಟದಿಂದ ಮಹಿಳಾ ದಿನಾಚರಣೆಯ ಅಂಗವಾಗಿ ಮಹಿಳೆಯರ ಜಾಗೃತಿ ಕಾರ್ಯಕ್ರಮ ನಡೆಯಿತು.

ಮಹಿಳೆಯರೊಂದಿಗೆ ಪೊಲೀಸರು ಗೌರವಯುತವಾಗಿ ವರ್ತಿಸಿ: ನಾಗಲಕ್ಷ್ಮೀ ಚೌಧರಿ

# ಜನಸ್ನೇಹಿಯಾಗಿ ಕೆಲಸ ನಿರ್ವಹಿಸಿ



> ಹೆಣ್ಣು ಮಕ್ಕಳ ರಕ್ಷಣೆಗಾಗಿ ಅಕ್ಕ ಪಡೆ ಎಂಬ ಪೊಲೀಸ್ ಇಲಾಖೆ ವಾಹನವು ಮುಖ್ಯವಾಗಿ ಕಾಲೇಜುಗಳು, ತೊಂದರೆ ಇರುವ ಸ್ಥಳಗಳಲ್ಲಿ ಹೆಚ್ಚು ಗಸ್ತು ಮಾಡಲಾಗುತ್ತದೆ. ಮೈಸೂರು ನಗರದಲ್ಲಿಮಾದಕ ವಸ್ತುಗಳ ಸೇವನೆ ಹಾಗೂ ಸಾಗಣಿಕೆಯನ್ನು ತಡೆಗಟ್ಟಲು ವಿಮುಕ್ತಿ ಯೋಜನೆಯನ್ನು ಜಾರಿಗೆ ತರಲಾಗಿದೆ.
> ■ ಸೀಮಾ ಲಾಟ್ಕರ್, ಮೈಸೂರು ನಗರ ಪೊಲೀಸ್ ಆಯುಕ್ತೆ

**ಮಹಿಳೆಯರಿಗೆ ಆತ್ಮವಿಶ್ವಾಸ ತುಂಬಿ**

ಮಹಿಳೆಯರು ಪೊಲೀಸ್ ಠಾಣೆಗೆ ಭೇಟಿ ನೀಡಿದಾಗ, ಸೌಜನ್ಯದಿಂದ ವರ್ತಿಸಿ, ಅವರಲ್ಲಿ ಆತ್ಮವಿಶ್ವಾಸ ತುಂಬಿ. ಮಹಿಳೆಯರು ಪೊಲೀಸ್ ಠಾಣೆಗೆ ಭೇಟಿ ನೀಡಿದಾಗ ಅನುಚಿತ ವರ್ತನೆ ಕಂಡುಬಂದಲ್ಲಿ ಹಿರಿಯ ಅಧಿಕಾರಿಗಳನ್ನು ಭೇಟಿ ಮಾಡಿ ತಪ್ಪದೇ ದೂರು ಸಲ್ಲಿಸಿ.

**ಮೈಸೂರು:** ಪೊಲೀಸ್ ಠಾಣೆಯಲ್ಲಿ ಮಹಿಳೆಯುರು ದೂರು ದಾಖಲಿಸಲು ಅಥವಾ ಯಾವುದೇ ರೀತಿಯ ಮಾಹಿತಿ ಪಡೆಯಲು ಬಂದಾಗ ಅವರೊಂದಿಗೆ ಗೌರವಯುತವಾಗಿ ವರ್ತಿಸಿ ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಪೊಲೀಸರಿಗೆ ತಿಳಿಸಿದರು.

ಶುಕ್ರವಾರ ನಗರದ ಪ್ರಾದೇಶಿಕ ಆಯುಕ್ತರ ಚಾಮುಂಡೇಶ್ವರಿ ಸಭಾಂಗಣದಲ್ಲಿ ಜನ ಸುನ್ವಾಯಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಹಿಳೆಯರು ಯಾವುದೇ ರೀತಿಯ ತೊಂದರೆ ಉಂಟಾದರು ನಿರ್ಭಯವಾಗಿ ಪೊಲೀಸ್ ಠಾಣೆಗೆ ಆಗಮಿಸಿ ದೂರು ಸಲ್ಲಿಸುವಂತಾಗಬೇಕು ಎಂದರು.

ಕಟ್ಟಕಡೆಯ ಮಹಿಳೆಗೂ ನ್ಯಾಯ ಒದಗಿಸುವುದು ಆಯೋಗದ ಉದ್ದೇಶವಾಗಿದೆ. ಪೊಲೀಸ್ ಇಲಾಖೆ ಜನಸ್ನೇಹಿಯಾಗಿ ಕೆಲಸ ನಿರ್ವಹಿಸುತ್ತಿದ್ದು, ಇಲಾಖೆ ವತಿಯಿಂದ ನಡೆಸಲಾಗುವ ಕಾರ್ಯಕ್ರಮದ ಬಗ್ಗೆ ಹೆಚ್ಚಿನ ಪ್ರಚಾರ ನೀಡಿ ಇದರಿಂದ ಜನರಿಗೆ ಅನುಕೂಲವಾಗಲಿದೆ ಎಂದರು. ಸರ್ಕಾರಿ ಸೇರಿದಂತೆ ಖಾಸಗಿ ಸಂಸ್ಥೆಗಳಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ತಡೆಗಟ್ಟಲು ಪಾಷ್ ಸಮಿತಿ ಇದೆ. ಸಮಿತಿ ಮೂರು ತಿಂಗಳಿಗೊಮ್ಮೆ ಸಭೆ ನಡೆಸಬೇಕು.ಇದರ ಅನುಷ್ಠಾನ ಕುರಿತು ಪರಿಶೀಲನೆ ನಡೆಸುವಂತೆ ತಿಳಿಸಿದರು. ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಮಾತನಾಡಿ, ಪೊಲೀಸ್ ಇಲಾಖೆಯಿಂದ ಹಲವಾರು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಹೆಣ್ಣು ಮಕ್ಕಳು ಯಾವುದಾದರೂ ಶೋಷಣೆಗೆ ಒಳಗಾದರೆ ತಕ್ಷಣ ಹತ್ತಿರದ ಪೊಲೀಸ್ ಠಾಣೆಯನ್ನು ಸಂಪರ್ಕಿಸಿ ಎಂದರು.

2023 ನೇ ಸಾಲಿನಿಂದ ಗಮನಿಸಿದರೆ ಮೈಸೂರು ನಗರ ವ್ಯಾಪ್ತಿಯಲ್ಲಿ ಅಪರಾಧಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿರುತ್ತದೆ. ಅಪರಾಧ ಕೃತ್ಯಗಳನ್ನು ತಡೆಗಟ್ಟಲು ಸಾರ್ವಜನಿಕರು ಸಹ ಪೊಲೀಸ್ ಇಲಾಖೆಯೊಂದಿಗೆ ಸಹಕರಿಸಬೇಕು ಎಂದರು. ಸಭೆಗೆ ಬಹಳಷ್ಟು ಮಹಿಳೆಯರು ನಿವೇಶನ, ಮೂಲಭೂತ ಸೌಕರ್ಯಗಳ ಬಗ್ಗೆ ಮನವಿ ಸಲ್ಲಿಸಿದವರಿಗೆ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸುವಂತೆ ಅಪರ ಜಿಲ್ಲಾಧಿಕಾರಿ ಡಾ: ಪಿ ಶಿವರಾಜು ಮಾಹಿತಿ ನೀಡಿದರು. ಎ.ಸಿ.ಪಿ ಗಂಗಾಧರ್ ಸ್ವಾಮಿ ಮಾತನಾಡಿ, ಪ್ರತಿ ಮಾಹೆ ಜನಸಂಪರ್ಕ ಸಭೆ, ಪ್ರತಿ ಮಾಹೆಯ ಕೊನೆಯ ಭಾನುವಾರ ಶೋಷಣೆಗೆ ಒಳಗಾದವರ ದಿನ, ಮನೆ ಮನೆ ಪೊಲೀಸ್ ಸೇರಿದಂತೆ ಪೊಲೀಸ್ ಇಲಾಖೆಯ ವಿವಿಧ ಕಾರ್ಯಕ್ರಮಗಳ ಬಗ್ಗೆ ವಿವರಿಸಿದರು.

ಮಾನವ ಕಳ್ಳಸಾಗಣೆ ತಡೆಗಟ್ಟಲು ಪ್ರತ್ಯೇಕ ಪೊಲೀಸ್ ತಂಡ ಕಾರ್ಯನಿರ್ವಹಿಸುತ್ತಿದ್ದು, ಪ್ರತಿ ಗುರುವಾರ ಈ ತಂಡದಿಂದ ಶಾಲಾ ಕಾಲೇಜು ವಿದ್ಯಾರ್ಥಿಗಳಿಂದ ತೆರೆದ ಮನೆ ಎಂಬ ಕಾರ್ಯಕ್ರಮ ನಡೆಸಲಾಗುತ್ತದೆ. ಇದರೊಂದಿಗೆ ಎರಡು ತಿಂಗಳಿಗೊಮ್ಮೆ ವಿವಿಧ ಇಲಾಖೆ ಹಾಗೂ ಎನ್.ಜಿ. ಒ ಸಂಸ್ಥೆಯೊಂದಿಗೆ ಸಭೆ ನಡೆಸುವುದಾಗಿ ತಿಳಿಸಿದರು.

ಸಭೆಯಲ್ಲಿ ಎ.ಎಸ್.ಪಿ ನಾಗೇಶ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಬಸವರಾಜು ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಕನ್ನಡದಲ್ಲೇ ಸ್ಪರ್ಧಾತ್ಮಕ ಪರೀಕ್ಷೆ ಬರೆಯಬೇಕು



**ಹಾಸನ:** ಭಾಷೆ ಎಂದರೆ ನಮ್ಮಲ್ಲಿ ಹುಟ್ಟುವ ಆಲೋಚನೆ ಹಾಗೂ ಅಭಿವ್ಯಕ್ತಿಸುವ ಪರಸ್ಪರ ವಿನಿಮಯ ಮಾಡಿಕೊಳ್ಳುವ ಸಾಧನವಾಗಿದೆ ಎಂದು ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರದ ಸಹ ಪ್ರಾಧ್ಯಾಪಕ ದೇವರಾಜ ಎಚ್.ಡಿ. ಹೇಳಿದರು.

ನಗರದ ಆರ್.ಸಿ. ರಸ್ತೆ ಗಂಧದಕೋಠಿ ಆವರಣದಲ್ಲಿ ಇರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ವತಿಯಿಂದ ಶುಕ್ರವಾರ ನಡೆದ ವಿಶೇಷ ಉಪನ್ಯಾಸ ಕಾಂರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಆಡಳಿತ ಭಾಷೆಯಾಗಿ ಕನ್ನಡ ಸರ್ಕಾರ ಮತ್ತು ಜನರ ನಡುವೆ ಕಚೇರಿ ಗುಮಸ್ತ ಮತ್ತು ಆದೇಶ ಹೊರಡಿಸುವ ಪತ್ರ ವ್ಯವಹಾರವು ಆಡಳಿತ ಭಾಷೆಯಾದ ಕನ್ನಡದಲ್ಲಿ ಇರುತ್ತವೆ. ಸ್ನಾತಕೋತ್ತರ ಶಿಕ್ಷಣದಲ್ಲಿಯು ಕನ್ನಡವನ್ನು ಓದಬೇಕು. ಸ್ಪರ್ಧಾತ್ಮಕ ಪರೀಕ್ಷೆಯನ್ನು ಕನ್ನಡದಲ್ಲಿಯೇ ಬರಿಯಬೇಕು. ಮೊದಲು ನಮ್ಮ ಭಾಷೆಯನ್ನು ಗಟ್ಟಿಗೊಳಿಸಿಕೊಳ್ಳಬೇಕು. ಕದಂಬ ವಂಶದಿಂದ ಹಿಡಿದು ಮೈಸೂರು ಒಡೆಯರವರೆಗೂ ಕನ್ನಡ ಭಾಷೆಯನ್ನು ಆಡಳಿತ ಭಾಷೆಯಾಗಿ ಬಳಕೆ ಮಾಡಿದ್ದಾರೆ. ನಮ್ಮ ಕನ್ನಡದ ಕಣ್ವ ಎಂದೇ ಪ್ರಸಿದ್ಧವಾದ ಬಿ.ಎಂ.ಶ್ರೀ ಕಂಠಯ್ಯ ಅವರು ನಮ್ಮ ಕರ್ನಾಟಕದ ತಾಯಿ ಭಾಷೆ ಕನ್ನಡ ಎಂದಿದ್ದಾರೆ. ಕನ್ನಡಿಗರಾದ ನಾವೇ ಕನ್ನಡವನ್ನು ಬೆಳೆಸಿ ಉಳಿಸಬೇಕು ಎಂದು ಹೇಳಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಎಂ.ಜಿ. ರಸ್ತೆ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕ ರಾಜಶೇಖರ್ ಜಿ.ಜಿ. ಮಾತನಾಡಿ ಕನ್ನಡವು ಆಡಳಿತ ಭಾಷೆಯಾಗಿ ಇಂದು ಕಡ್ಡಾಯ ಭಾಷೆಯಾಗಿದೆ. ಎಲ್ಲಾ ವ್ಯವಹಾರಗಳು ಮೊದಲು ಕನ್ನಡದಲ್ಲಿ ಇರಬೇಕು. ನಾವು ಮೊದಲು ನಮ್ಮ ಭಾಷೆ ಬಗ್ಗೆ ಗೌರವ ತೋರಬೇಕು. ಕನ್ನಡವು ವ್ಯವಹಾರಿಕವಾಗಿ ಬಹಳ ಮುಂದುವರೆಯಬೇಕು ಮತ್ತು ಸ್ಪರ್ಧಾತ್ಮಕ ಪರೀಕ್ಷೆಯಲ್ಲೂ ಕನ್ನಡ ಭಾಷೆ ಮೊದಲಿರಬೇಕು ಎಂದರು. ಐ.ಕ್ಯೂ.ಎ.ಸಿ. ಸಂಚಾಲಕ ಮೋಹನ್ ಕುಮಾರ್ ಜಿ.ಆರ್. ಕನ್ನಡ ವಿಭಾಗದ ಉಪನ್ಯಾಸಕರಾದ ಪೂರ್ಣಿಮ ಹೆಚ್.ಡಿ. ಕಾಂತರಾಜು ಜಿ.ಎಮ್. ವನಜಾಕ್ಷಿ ಎಂ.ಕೆ. ಡಾ.ಪುಟ್ಟರಾಜು ಸಿ. ಆರ್. ಹಾಜರಿದ್ದರು.

## ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ

**ಹೊಳೆನರಸೀಪುರ:** ವಿಷಯವಾರು ಪರಿಣಿತ ಶಿಕ್ಷಕರು ಲಭ್ಯವಿರುವುದರಿಂದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ದೊರೆಯುತ್ತಿದೆ ಎಂದು ತಾಲೂಕು ಕ್ಷೇತ್ರ ಶಿಕ್ಷಣ ಸಂಯೋಜಕರಾದ ರಾಮಚಂದ್ರ ಅವರು ಅಭಿಪ್ರಾಯಪಟ್ಟರು.

ತಾಲೂಕಿನ ತಟ್ಟೆಕೆರೆಯ ಆದರ್ಶ ವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದ ಶಾರದಾ ಪೂಜೆ ಹಾಗೂ 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿ, ಕಳೆದ 2024-25ನೇ ಸಾಲಿನ ಎಸ್‌ಎಸ್ ಎಲ್‌ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಮೂವರು ವಿದ್ಯಾರ್ಥಿಗಳನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಈ ಶಾಲೆ ಕೇವಲ ಶೈಕ್ಷಣಿಕವಾಗಿ ಮಾತ್ರವಲ್ಲದೆ, ಕ್ರೀಡೆ, ವಿಜ್ಞಾನ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಜಿಲ್ಲಾ ಮಟ್ಟದಲ್ಲಿ ಗುರುತಿಸಿಕೊಳ್ಳುವ ಮೂಲಕ ಶಾಲೆಗೆ ಕೀರ್ತಿ ತಂದಿದೆ ಎಂದು ರಾಮಚಂದ್ರ ಅವರು ಶ್ಲಾಘಿಸಿದರು.

ಮುಖ್ಯ ಶಿಕ್ಷಕ ಮೋಹನ್ ಕುಮಾರ್ ಮಾತನಾಡಿ, ಹಿಂದೆ ಗುರುವಿರಬೇಕು ಎನ್ನುವ ನಾಣ್ಣುಡಿಯಂತೆ ವಿದ್ಯಾರ್ಥಿಗಳು ಶಿಕ್ಷಕರ ಮಾರ್ಗದರ್ಶನದಲ್ಲಿ ಸಾಗಬೇಕು. ಸಹಪಾಠಿಗಳೊಂದಿಗೆ ಸೌಜನ್ಯದಿಂದ ವರ್ತಿಸಿ, ತಂದೆ-ತಾಯಿ ಮತ್ತು ಹಿರಿಯರಿಗೆ ಗೌರವ ನೀಡಿ ಉತ್ತಮ ಅಂಕ ಗಳಿಸುವ ಮೂಲಕ ಶಾಲೆಗೆ ಹೆಸರು ತನ್ನಿ ಎಂದು ಹಿತವಚನ ನೀಡಿದರು.



ಎಸ್‌ಡಿಎಂಸಿ ಅಧ್ಯಕ್ಷ ಗಿರೀಶ್ ಅವರು ಮಾತನಾಡಿ, ಕೇವಲ ಅಂಕ ಗಳಿಕೆಯಷ್ಟೇ ಜೀವನವಲ್ಲ, ವಿದ್ಯಾರ್ಥಿಗಳು ಜೀವನದಲ್ಲಿ ಉತ್ತಮ ಸಂಸ್ಕಾರ, ವಿನಯ ಹಾಗೂ ಸೌಜನ್ಯವನ್ನು ರೂಡಿಸಿಕೊಳ್ಳಬೇಕು. ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಗಮನಹರಿಸಿ ಉತ್ತಮ ಫಲಿತಾಂಶ ತರಬೇಕು ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಶಿಕ್ಷಕರಾದ ಪ್ರಭುರಾಜ್ ಪಿ., ರುದ್ರಪ್ಪಹಳ್ಳಿ, ಸುಜಾತ, ರಾಜೇಶ್, ರವಿ, ಲೋಕೇಶ್, ಸವಿತಾ, ನಳಿನಾ, ರಾಕೇಶ್, ಪ್ರೇಮಲತಾ ಹಾಗೂ ಅತಿಥಿ ಶಿಕ್ಷಕರು ಉಪಸ್ಥಿತರಿದ್ದರು. ಎಸ್‌ಡಿಎಂಸಿ ಉಪಾಧ್ಯಕ್ಷೆ ಕುಸುಮ, ಸದಸ್ಯರಾದ ಅಶೋಕ್, ತಾರಾಮಣಿ, ಕೋಮಲ ಸೇರಿದಂತೆ ವಿದ್ಯಾರ್ಥಿಗಳು ಹಾಗೂ ಪೋಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಸಿಲಿಂಡರ್ ಕೊರತೆ: ದಾಸೋಹ ಸ್ಥಗಿತ

**ಬೇಲೂರು:** ವಿಶ್ವ ವಿಖ್ಯಾತ ಶ್ರೀ ಚನ್ನಕೇಶವ ಸ್ವಾಮಿ ದೇವಾಲಯ ದಾಸೋಹ ವ್ಯವಸ್ಥೆಗೂ ಈಗ ಗ್ಯಾಸ್ ಸಿಲಿಂಡರ್ ಕೊರತೆಯ ಬಿಸಿ ತಟ್ಟಿದೆ. ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮದಿಂದ ಕಮರ್ಷಿಯಲ್ ಗ್ಯಾಸ್ ಸಿಲಿಂಡರ್‌ಗಳ ಅಭಾವ ಉಂಟಾಗಿದ್ದು, ದೇವಾಲಯದಲ್ಲಿ ನಡೆಯುತ್ತಿದ್ದ ದಾಸೋಹ ಸೇವೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ಪ್ರವಾಸಿ ತಾಣವಾಗಿ ಪ್ರಸಿದ್ಧಿಯಾಗಿರುವ ಬೇಲೂರಿನ ಶಿಲ್ಪಕಲೆಗಳ ತವರಾದ ಈ ಸ್ಥಳಕ್ಕೆ ಪ್ರತಿದಿನ ಸಾವಿರಾರು ಭಕ್ತರು ಹಾಗೂ ಪ್ರವಾಸಿಗರು ಆಗಮಿಸುತ್ತಾರೆ. ದೇವಾಲಯಕ್ಕೆ ಆಗಮಿಸುವ ಭಕ್ತರಿಗೆ ಹಲವು ವರ್ಷಗಳಿಂದ ಆಡಳಿತ ಮಂಡಳಿ ದಾಸೋಹ ವ್ಯವಸ್ಥೆ ಕಲ್ಪಿಸಿ ಬಂದಿತ್ತು. ಆದರೆ ಇತ್ತೀಚೆಗೆ ಗ್ಯಾಸ್ ಸಿಲಿಂಡರ್ ಕೊರತೆಯಿಂದಾಗಿ ದಾಸೋಹ



ಅಡುಗೆ ಕಾರ್ಯ ನಿರ್ವಹಿಸಲು ಸಾಧ್ಯವಾಗದೆ, ದೇವಾಲಯದ ಬಳಿ ''ದಾಸೋಹ ಇಲ್ಲ'' ಎಂಬ ನಾಮಫಲಕ ಅಳವಡಿಸಲಾಗಿದೆ. ಇದನ್ನು ನೋಡಿ ಹಲವು ಭಕ್ತರು ನಿರಾಶೆಯಿಂದ ಹಿಂದಿರುಗುತ್ತಿರುವುದು ಕಂಡುಬರುತ್ತಿದೆ. ದಾಸೋಹ ಇಲ್ಲದ ಕಾರಣ ಭಕ್ತರು ಹೋಟೆಲ್‌ಗಳ ಕಡೆ ಮುಖ ಮಾಡುತ್ತಿದ್ದರೂ, ಗ್ಯಾಸ್ ಸಿಲಿಂಡರ್ ಕೊರತೆಯಿಂದ ಅಲ್ಲಿಯೂ ಸಹ ಅಡುಗೆ ವ್ಯವಸ್ಥೆ ಸಮಸ್ಯೆಗೆ ಒಳಗಾಗಿದೆ ಎಂದು ತಿಳಿದುಬಂದಿದೆ. ಸ್ಥಳೀಯ ನಿವಾಸಿಗಳಾದ ಸುರೇಶ್ ಹಾಗೂ ದಬ್ಬೆ ನಾರಾಯಣ್ ಮಾತನಾಡಿ, ''ಪ್ರತಿದಿನ ಸಾವಿರಾರು ಪ್ರವಾಸಿಗರು ಬೇಲೂರಿಗೆ ಆಗಮಿಸುತ್ತಾರೆ. ಹಲವು ವರ್ಷಗಳಿಂದ ಇಲ್ಲಿ ದಾಸೋಹ ನಡೆಯುತ್ತಿದ್ದು, ಕೊರೋನಾ ಕಾಲದಲ್ಲೂ ನಿಲ್ಲಿಸದೇ ಮುಂದುವರಿಸಲಾಗಿತ್ತು. ಆದರೆ ಈಗ ಗ್ಯಾಸ್ ಸಿಲಿಂಡರ್ ಕೊರತೆಯಿಂದ ದೊಡ್ಡ ಸಮಸ್ಯೆ ಉಂಟಾಗಿದೆ. ಇದಕ್ಕೂ ಸೇರಿ ದಾಸೋಹಕ್ಕೆ ಬಳಸುವ ಗೀಸರ್ ಸಹ ಹಾಳಾಗಿರುವುದರಿಂದ ಮತ್ತಷ್ಟು ತೊಂದರೆ ಉಂಟಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳಬೇಕು'' ಎಂದು ಮನವಿ ಮಾಡಿದರು.

भारत सरकार
GOVERNMENT OF INDIA
सत्यमेव जयते



# ಖೇಲೋ ಇಂಡಿಯಾ
# ವೈಬ್ರೆಂಟ್ ಮಂಡ್ಯ

## ಸಕ್ಕರೆನಾಡಿಗೆ **ಶ್ರೀ ನರೇಂದ್ರ ಮೋದಿ** ಅವರ ಸರಕಾರದ ಅಕ್ಕರೆಯ ಕಾಣಿಕೆ

**ಮಂಡ್ಯದ ವಿ.ಸಿ. ಫಾರಂನಲ್ಲಿ ₹14 ಕೋಟಿ** ವೆಚ್ಚದಲ್ಲಿ ಸುಸಜ್ಜಿತ ಬಹುಪಯೋಗಿ ನೂತನ ಕ್ರೀಡಾಂಗಣಕ್ಕೆ ಕೇಂದ್ರ ಸರಕಾರದ ಗೌರವಾನ್ವಿತ ಯುವಜನ ವ್ಯವಹಾರಗಳು ಮತ್ತು ಕ್ರೀಡಾ ಮಂತ್ರಿಗಳಾದ **ಶ್ರೀ ಮನ್ಸುಕ್ ಮಾಂಡವೀಯ** ಅವರಿಂದ ಶಂಕುಸ್ಥಾಪನೆ

**ಸಕ್ಕರೆನಾಡಿಗೆ ಆಗಮಿಸುತ್ತಿರುವ**
**ಶ್ರೀ ಮನ್ಸುಕ್ ಮಾಂಡವೀಯ ಅವರಿಗೆ ಜಿಲ್ಲೆಯ**
**ಸಮಸ್ತ ಜನತೆಯ ಪರವಾಗಿ ಸುಸ್ವಾಗತ**

- **388 ವಿಕಲಚೇತನ ಬಂಧುಗಳಿಗೆ ಎಲೆಕ್ಟ್ರಿಕ್ ವಾಹನಗಳ ನೀಡಿಕೆ**
- **ಸರಕಾರಿ ಶಾಲೆ ಕಾಲೇಜುಗಳಿಗೆ ಕಂಪ್ಯೂಟರ್ ಮತ್ತು ಲ್ಯಾಪ್ ಟಾಪ್ ವಿತರಣೆ**
- **ಸರಕಾರಿ ಆಸ್ಪತ್ರೆಗೆ ಆಂಬುಲೆನ್ಸ್ ಕೊಡುಗೆ**

A CSR Initiative by
सेल SAIL
Infosys Springboard

| ದಿನಾಂಕ | ಸಮಯ | ಸ್ಥಳ |
|---|---|---|
| 14-03-2026 | ಬೆಳಗ್ಗೆ 11:00 ಗಂಟೆಗೆ | ವಿ.ಸಿ. ಫಾರಂ, ಮಂಡ್ಯ |

A CSR Initiative by
TVS

**ಈಡೇರಿದ ಭರವಸೆ | ಸ್ವಾವಲಂಬನೆ ಹೆಜ್ಜೆ | ಶಿಕ್ಷಣಕ್ಕೆ ಬೆಳಕು**
**ಮಂಡ್ಯ ಜಿಲ್ಲೆಯ ಕ್ರೀಡಾ ಭವಿಷ್ಯಕ್ಕೆ ಭವ್ಯ ಬುನಾದಿ**




**ಬನ್ನಿ, ಇದು ನಮ್ಮೆಲ್ಲರ ಕಾರ್ಯಕ್ರಮ**
**ಎಲ್ಲರಿಗೂ ಸುಸ್ವಾಗತ**



ಗರಿಷ್ಠ 34° | ಕನಿಷ್ಠ 19°

ಹೊಸ ದಿಗಂತ

ಶನಿವಾರ
14 ಮಾರ್ಚ್ 2026

# ತುಮಕೂರು



**ಕಾರ್ಡ್ ವಿತರಣೆ** ತುರುವೇಕೆರೆ ತಾಲೂಕಿನ ಕಾರ್ಮಿಕ ಇಲಾಖೆ ತಾಲೂಕಿನ ಸವಿತಾ ಸಮಾಜದ ಅಸಂಘಟಿತ ಕಾರ್ಮಿಕರಿಗೆ ನೀಡಿರುವ ಕಾರ್ಡ್ ಗಳನ್ನು ತಾಲೂಕು ಸವಿತಾ ಸಮಾಜದ ವತಿಯಿಂದ ಎಲ್ಲಾ ಕಾರ್ಮಿಕರಿಗೆ ನೀಡಲಾಯಿತು.

ಮಾ.18ಕ್ಕೆ ಎಸ್ಸೆಸ್ಸೆಲ್ಸಿ ಪರೀಕ್ಷೆ ಆರಂಭ | ೨
ಕರ್ತವ್ಯಲೋಪ ಮಾಡದಿರಿ: ಡಾ.ರವಿ | ೩
ನೀರು ಶುದ್ಧೀಕರಣಕ್ಕೆ ಇಚ್ಛಾಶಕ್ತಿ ಕೊರತೆ | ೪

## ಕಿರುಸುದ್ದಿ

### ನೂತನ ಆಡಳಿತ ಮಂಡಳಿ ರಚನೆ

**ಹುಳಿಯಾರು:** ಹುಳಿಯಾರಿನ ಇತಿಹಾಸ ಪ್ರಸಿದ್ಧ ಶ್ರೀ ಮಲ್ಲೇಶ್ವರ ಸ್ವಾಮಿ ದೇವಸ್ಥಾನದ ಟ್ರಸ್ಟ್ ಕಮಿಟಿಗೆ ನೂತನ ಆಡಳಿತ ಮಂಡಳಿ ರಚನೆ ಮಾಡಲಾಯಿತು. ಅಧ್ಯಕ್ಷರಾಗಿ ಎಂ.ಅಶೋಕ್, ಉಪಾಧ್ಯಕ್ಷರಾಗಿ ಎಚ್.ಎಂ.ಪ್ರಭಾಕರ್, ಕಾರ್ಯದರ್ಶಿಯಾಗಿ ಎಚ್.ಜೆ.ಶಶಿಕಿರಣ್, ಸಹಕಾರ್ಯದರ್ಶಿಯಾಗಿ ಎಚ್.ಸಿ.ಸೋಮಶೇಖರ್, ಖಜಾಂಚಿಯಾಗಿ ಎಚ್.ಎಂ.ಈಶ್ವರಯ್ಯ ಅವರುಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಸದಸ್ಯರುಗಳಾಗಿ ಕೆ.ಜಿ.ದೇವಣ್ಣ, ಎಚ್.ಪಿ.ರಮೇಶ್, ಎಚ್.ಎಂ.ಚನ್ನಬಸವಯ್ಯ, ಎಚ್.ಎಂ.ಮಲ್ಲಿಕಾರ್ಜುನಯ್ಯ, ಎಚ್.ಜಿ.ಸಿದ್ದಲಿಂಗಯ್ಯ, ಎಚ್.ಎಂ.ಚಂದ್ರಶೇಖರ್, ಮರುಳಪ್ಪ ಆಯ್ಕೆಯಾದರು.

### ಕ್ಯಾಂಟರ್, ಬೈಕ್ ನಡುವೆ ಅಪಘಾತ: ಸವಾರ ಸಾವು

**ಕುಣಿಗಲ್:** ಕ್ಯಾಂಟರ್ ಮತ್ತು ಬೈಕ್ ನಡುವೆ ಅಪಘಾತ ಉಂಟಾದ ಹಿನ್ನೆಲೆಯಲ್ಲಿ ದ್ವಿಚಕ್ರವಾಹನದ ಸವಾರ ಸ್ಥಳದಲ್ಲಿ ಮೃತಪಟ್ಟ ಘಟನೆ ಕುಣಿಗಲ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ತಾಲೂಕಿನ ಯಡಿಯೂರು ಹೋಬಳಿ, ರಂಗೇಗೌಡನ ಪಾಳ್ಯ ಗ್ರಾಮದ ಸಂತೋಷ್ 18 ವರ್ಷ ಅಪಘಾತಕ್ಕೀಡಾಗಿ ಸಾವನ್ನಪ್ಪಿದ್ದಾನೆ. ತಾಲೂಕಿನ ಕಸಬಾ ಹೋಬಳಿ ಹಳೆಯ ರಾಷ್ಟ್ರೀಯ ಹೆದ್ದಾರಿ 48ರ ಬಿಳಿ ದೇವಾಲಯ ಸಮೀಪ ಘಟನೆ ಸಂಭವಿಸಿದೆ. ಸಂತೋಷ್ ತನ್ನ ಸ್ನೇಹಿತನ ಬೈಕ್ ನಲ್ಲಿ ಕುಣಿಗಲ್ ಕಡೆಯಿಂದ ರಂಗೇ ಗೌಡನಪಾಳ್ಯಕ್ಕೆ ಹೋಗುತ್ತಿದ್ದಾಗ ಹಾಸನ ಕಡೆಯಿಂದ ತುಮಕೂರಿಗೆ ತೆರಳುತ್ತಿದ್ದ ಕ್ಯಾಂಟರ್ ಚಾಲಕನ ನಿಯಂತ್ರಣ ತಪ್ಪಿ ಬೈಕಿಗೆ ಡಿಕ್ಕಿ ಹೊಡೆದಿದೆ, ಇದರ ಪರಿಣಾಮ ಸಂತೋಷ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಕುಣಿಗಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಮಾ.16ರಂದು ವಿಶ್ವ ಗ್ರಾಹಕರ ದಿನಾಚರಣೆ

**ತುಮಕೂರು:** ಜಿಲ್ಲಾಡಳಿತ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ, ಕಾನೂನು ಮಾಪನ ಶಾಸ್ತ್ರ ಇಲಾಖೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆ, ಕಾನೂನು ಸೇವಾ ಸಮಿತಿ ಹಾಗೂ ಗುಬ್ಬಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಯೋಗದಲ್ಲಿ ಮಾರ್ಚ್ 16ರಂದು ಬೆಳಿಗ್ಗೆ 11.30 ಗಂಟೆಗೆ ಗುಬ್ಬಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ ವಿಶ್ವ ಗ್ರಾಹಕರ ದಿನಾಚರಣೆ-2026ಯನ್ನು ಆಯೋಜಿಸಲಾಗಿದೆ. ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ವಿಜಯಲಕ್ಷ್ಮೀ ಜೆ.ಟಿ. ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು. ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅಧ್ಯಕ್ಷತೆವಹಿಸುವರು. ಮುಖ್ಯ ಅತಿಥಿಗಳಾಗಿ ವಿವಿಧ ಅಧಿಕಾರಿಗಳು, ಗಣ್ಯರು ಆಗಮಿಸುವರು ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ಜಂಟಿ ನಿರ್ದೇಶಕಿ ಸೌಮ್ಯ ತಿಳಿಸಿದ್ದಾರೆ.

### ಅಂಗನವಾಡಿ ಹುದ್ದೆ: ಆಕ್ಷೇಪಣೆ ಸಲ್ಲಿಸಲು ಅವಕಾಶ

**ತುಮಕೂರು:** ಜಿಲ್ಲೆಯಲ್ಲಿ ವಿವಿಧ ಕಾರಣಗಳಿಂದ ಖಾಲಿ ಇದ್ದ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಹುದ್ದೆಗಳ ಭರ್ತಿ ಸಂಬಂಧ ತಾತ್ಕಾಲಿಕವಾಗಿ ಆಯ್ಕೆಯಾಗಿರುವ ಅಭ್ಯರ್ಥಿಗಳ ಕುರಿತು ಆಕ್ಷೇಪಣೆ ಸಲ್ಲಿಸಲು ಮಾರ್ಚ್ 23ರವರೆಗೆ ಕಾಲಾವಕಾಶ ನೀಡಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸಾರ್ವಜನಿಕರ ಮಾಹಿತಿಗಾಗಿ ಆಯ್ಕೆ ಪಟ್ಟಿಯನ್ನು ಸಂಬಂಧಪಟ್ಟ ಅಂಗನವಾಡಿ ಕೇಂದ್ರ, ಗ್ರಾಮ ಪಂಚಾಯತಿ, ಶಾಲೆ, ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಶಿಶು ಅಭಿವೃದ್ಧಿ ಯೋಜನಾ ಕಚೇರಿಯ ನಾಮಫಲಕದಲ್ಲಿ ಪ್ರಕಟಿಸಲಾಗಿದ್ದು, ಆಕ್ಷೇಪಣೆಯನ್ನು ಆಯಾ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾ ಕಚೇರಿಗೆ ಸಲ್ಲಿಸಬೇಕೆಂದು ಅವರು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಆಯಾ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾ ಕಚೇರಿಯನ್ನು ಸಂಪರ್ಕಿಸಬೇಕೆಂದು ಅವರು ತಿಳಿಸಿದ್ದಾರೆ.

ಇ-ಆಸ್ತಿ ಆಂದೋಲನಕ್ಕೆ ಪಾಲಿಕೆ ಆಯುಕ್ತೆ ಶುಭಾ ಹಸಿರು ನಿಶಾನೆ

# ಆಸ್ತಿ ತೆರಿಗೆದಾರರಿಗೆ ಅನುಕೂಲ



**ತುಮಕೂರು:** ಮಹಾನಗರ ಪಾಲಿಕೆಯ ಕಂದಾಯ ಶಾಖೆ ವತಿಯಿಂದ ರಾಜ್ಯದಲ್ಲೇ ಪ್ರಥಮ ಎಂಬಂತೆ ನಗರದ ಆಸ್ತಿ ಮಾಲೀಕರು ಹಾಗೂ ಆಸ್ತಿ ತೆರಿಗೆದಾರರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ನಾಲ್ಕು ಚಕ್ರದ ವಾಹನದಲ್ಲಿ ಇ-ಆಸ್ತಿ ಆಂದೋಲನಕ್ಕೆ ಇಂದು ಚಾಲನೆ ನೀಡಲಾಯಿತು.

ನಗರದ ಮಹಾನಗರ ಪಾಲಿಕೆ ಆವರಣದಲ್ಲಿರುವ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ಮುಂಭಾಗ ನಾಲ್ಕು ಚಕ್ರದ ವಾಹನದಲ್ಲಿ ಇ-ಆಸ್ತಿ ಆಂದೋಲನಕ್ಕೆ ಪಾಲಿಕೆ ಆಯುಕ್ತೆ ಶುಭಾ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ಪಾಲಿಕೆ ಆಯುಕ್ತೆ ಶುಭಾ ಇದು ಮಹಾನಗರ ಪಾಲಿಕೆಯ ಮಹತ್ತರವಾದ ಯೋಜನೆ. ಸಾರ್ವಜನಿಕರ ಮನೆ ಬಾಗಿಲಿಗೆ ಈ ಯೋಜನೆ ಪ್ರಯೋಜನ ತಲುಪಿಸುವ ಕೆಲಸ ಮಾಡಲು ಇದೊಂದು ಪ್ರಮುಖ ಕಾರ್ಯವಾಗಿದೆ ಎಂದರು.

ಇದೊಂದು ವಿನೂತನ ಕಾರ್ಯಕ್ರಮವಾಗಿದ್ದು, ನಗರದ ನಾಗರಿಕರ ಸಹಕಾರ ಅತ್ಯಗತ್ಯವಾಗಿದೆ ಎಂದು ಅವರು ಹೇಳಿದರು.

> **ಹಿರಿಯ ನಾಗರಿಕರು, ಮಹಿಳೆಯರು ಪಾಲಿಕೆ ಕಚೇರಿಗೆ ಅಲೆದಾಡಬಾರದು ಎಂಬ ಉದ್ದೇಶದಿಂದ ನಾಲ್ಕು ಚಕ್ರದ ವಾಹನದ ಮೇಲೆ ಸಾರ್ವಜನಿಕರ ಮನೆ ಬಾಗಿಲಿಗೆ ತೆರಳಿ ಅವರಿಂದ ಅರ್ಜಿ ಪಡೆದು ನಂತರ ಪಾಲಿಕೆ ಕಚೇರಿಯಲ್ಲಿ ಇ-ಆಸ್ತಿ ನೋಂದಣಿ ಮಾಡಿ ಮತ್ತೆ ಅರ್ಜಿದಾರರ ಮನೆಗೆ ತೆರಳಿ ಇ-ಖಾತೆ ನೀಡುವ ಕಾರ್ಯ ಮಾಡಲಾಗುತ್ತಿದೆ.**
> ■ **ಶುಭಾ, ಪಾಲಿಕೆ ಆಯುಕ್ತೆ**

ಸಾರ್ವಜನಿಕರು ಕಚೇರಿಗೆ ಬಂದಾಗ ಅಧಿಕಾರಿಗಳು ಸಿಗುವುದಿಲ್ಲ, ಹಾಗಾಗಿ ಪಾಲಿಕೆಯೇ ನಾಗರಿಕರ ಮನೆ ಬಾಗಿಲಿಗೆ ತೆರಳಿ ಇ-ಆಸ್ತಿ ಆಂದೋಲನ ನಡೆಸಲಾಗುತ್ತಿದೆ. ಜಿಲ್ಲಾ ಉಸ್ತುವಾರಿ ಸಚಿವರು ಸಹ ಪ್ರತಿ ನಾಗರಿಕರ ಮನೆ ಬಾಗಿಲಿಗೆ ಹೋಗಿ ಇ-ಖಾತೆ ನೋಂದಣಿ ಮಾಡಿಕೊಡುವಂತೆ ಸೂಚನೆ ನೀಡಿದ್ದಾರೆ. ಹಾಗಾಗಿ ಈ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಇಂದು ವಾರ್ಡ್ ನಂ. 31 ರಿಂದ 35ರ ವ್ಯಾಪ್ತಿಯಲ್ಲಿ ಬರುವ ಬಡಾವಣೆಗಳ ನಾಗರಿಕರಿಗಾಗಿ ಸಿದ್ದರಾಮೇಶ್ವರ ಬಡಾವಣೆಯ ಬಸವ ಭವನದಲ್ಲಿ ಇ-ಆಸ್ತಿ ಆಂದೋಲನನಡೆಸಿದ್ದು, ಸಾರ್ವಜನಿಕರಿಂದ ಅರ್ಜಿಗಳನ್ನು ಸ್ವೀಕರಿಸಲಾಯಿತು.

ಇ-ಆಸ್ತಿನೋಂದಣಿಗಾಗಿಕ್ರಯಪತ್ರ, ದಾನಪತ್ರ, ವಿಭಾಗಪತ್ರ, ವಿಲ್ ಪತ್ರ, ಭೂಪರಿವರ್ತನಾ ಆದೇಶ ಪ್ರತಿ, ಲೇಔಟ್ ಪ್ರತಿ ಅಥವಾ ಎಂ.ಎ.ಆರ್.19ರ ನಕಲು ಪ್ರತಿ, 01-04-2004 ರಿಂದ ಪ್ರಸ್ತುತ ಸಾಲಿನ ವರೆಗೆ ಇ.ಸಿ.-15, ಸ್ವತ್ತಿನ ಮಾಲೀಕರ ಭಾವಚಿತ್ರ, ಆಧಾರ್ ಕಾರ್ಡ್ ಮತ್ತು ಪ್ರಸ್ತುತ ಸಾಲಿನ ಕಂದಾಯ ಪಾವತಿಸಿರುವ ರಸೀದಿ ಸೇರಿದಂತೆ ಸ್ವತ್ತಿಗೆ ಅವಶ್ಯವಿರುವ ದಾಖಲೆಗಳನ್ನು ತರುವಂತೆಯೂ ಇದೇ ವೇಳೆ ಸಾರ್ವಜನಿಕರಿಗೆ ಪಾಲಿಕೆ ಆಯುಕ್ತೆ ಶುಭ ಅವರು ತಿಳಿಸಿ, ಅರ್ಜಿಗಳನ್ನು ವಿತರಿಸಿದರು.

ಈ ಸಂದರ್ಭದಲ್ಲಿ ಪಾಲಿಕೆ ಉಪಆಯುಕ್ತ ಮನುಕುಮಾರ್, ವಲಯ ಆಯುಕ್ತ ನಾಗರಾಜು, ಕಂದಾಯ ಅಧಿಕಾರಿ ಹಾಗೂ ಕಂದಾಯ ನಿರೀಕ್ಷಕರು ಪಾಲ್ಗೊಂಡಿದ್ದರು.

ಹಿಮೋಗ್ಲೋಬಿನ್ ತಪಾಸಣಾ ಶಿಬಿರದಲ್ಲಿ ಸಲಹೆ

# ವಿದ್ಯಾರ್ಥಿಗಳು ಆರೋಗ್ಯದತ್ತ ಗಮನಹರಿಸಲಿ: ಕುಲಪತಿ

**ತುಮಕೂರು:** ವಿದ್ಯಾರ್ಥಿಗಳ ಕೇವಲ ಭೌತಿಕ ಬೆಳವಣಿಗೆಯಷ್ಟೇ ಅಲ್ಲದೆ, ಅವರ ಮಾನಸಿಕ ಸ್ಥಿತಿಯೂ ಅತ್ಯಂತ ಮುಖ್ಯವಾಗಿರುತ್ತದೆ. ಮಾನಸಿಕವಾಗಿ ಸಧೃಡವಾಗಿರಲು ದೈಹಿಕ ಸಧೃಡತೆಯು ಮುಖ್ಯ. ಈ ನಿಟ್ಟಿನಲ್ಲಿ ಪೋಷಕರು ಮಕ್ಕಳ ಆರೋಗ್ಯದ ಕುರಿತು ಹೆಚ್ಚಿನ ಕಾಳಜಿ ಮತ್ತು ಜಾಗೃತಿಯನ್ನು ಹೊಂದಿರಬೇಕು ಎಂದು ತುಮಕೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎಂ.ವೆಂಕಟೇಶ್ವರಲು ಅವರು ತಿಳಿಸಿದರು.

ನಗರದ ತುಮಕೂರು ವಿಶ್ವವಿದ್ಯಾನಿಲಯದ ವಿಜ್ಞಾನ ಕಾಲೇಜಿನಲ್ಲಿ ಯುವ ರೆಡ್‌ಕ್ರಾಸ್ ಘಟಕ ಹಾಗೂ ವಿಲೇಜ್ ಎಜುಕೇಶನ್ ಅಂಡ್ ಡೆವಲಪ್ಮೆಂಟ್ ಸೊಸೈಟಿ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ಬೃಹತ್ ಹಿಮೋಗ್ಲೋಬಿನ್ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿಲೇಜ್ ಎಜುಕೇಶನ್ ಮತ್ತು ಡೆವಲಪ್ಮೆಂಟ್ ಸೊಸೈಟಿ ಅಧ್ಯಕ್ಷ ವಿನೋದ್ ಜೆ. ಮಾತನಾಡಿ, ಈ ಅಭಿಯಾನವನ್ನು ರಾಜ್ಯಾದ್ಯಂತ ಹಮ್ಮಿಕೊಳ್ಳಲಾಗುತ್ತಿದ್ದು, ಉಚಿತವಾಗಿ ಆಲ್ಬೆಂಡಜೋಲ್ ಮಾತ್ರೆಗಳನ್ನು ನೀಡಲಾಗುತ್ತಿದೆ. ಈವರೆಗೆ ನಡೆಸಲಾದ 44,000 ಕಾರ್ಯಕ್ರಮಗಳಲ್ಲಿ ಸುಮಾರು 3,85,000 ಜನರು ಅನೀಮಿಯಾದಿಂದ ಬಳಲುತ್ತಿರುವುದು ಪತ್ತೆಯಾಗಿದೆ. ಪ್ರತಿಯೊಬ್ಬರೂ ಈ ಬಗ್ಗೆ ಜಾಗೃತರಾಗಬೇಕು ಎಂದರು. ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದವಿಜ್ಞಾನಕಾಲೇಜಿನಪ್ರಾಚಾರ್ಯ ಡಾ. ಎಸ್.ಶ್ರೀನಿವಾಸ ಮಾತನಾಡಿ, ಆರೋಗ್ಯ ರಕ್ಷಣೆಯ ಭಾಗವಾಗಿ ವರ್ಷಕ್ಕೊಮ್ಮೆಯಾದರೂ ಕುಟುಂಬದ ಎಲ್ಲ ಸದಸ್ಯರು ಆಲ್ಬೆಂಡಜೋಲ್ ಮಾತ್ರೆಗಳನ್ನು ಸೇವಿಸಬೇಕು ಎಂದು ತಿಳಿಸಿದರು.

ಪರೀಕ್ಷಾಂಗ ಕುಲಸಚಿವ ಪ್ರೊ.ಮೋಹನ್ ಎಚ್.ಎಸ್., ಕಲಾ ಕಾಲೇಜಿನ ಪ್ರಾಂಶುಪಾಲರಾದ ಡಾ. ಜಿ. ದಾಕ್ಷಾಯಿಣಿ, ಜ್ಞಾನಸಿರಿ ಕ್ಯಾಂಪಸ್ ಸಂಯೋಜಕ ಡಾ. ಸುರೇಶ್ ಜಿ. ಹಾಗೂ ಯುವ ರೆಡ್‌ಕ್ರಾಸ್ ಘಟಕದ ನೋಡಲ್ ಅಧಿಕಾರಿ ಡಾ. ದ್ವಾರಕನಾಥ್ ವಿ. ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.



> **ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಆರೋಗ್ಯದ ಹಿತದೃಷ್ಟಿಯಿಂದ ಜಾರಿಗೆ ತಂದಿರುವ 'ಅನ್ನಪೂರ್ಣೇಶ್ವರಿ' ಯೋಜನೆಯು ಯಶಸ್ವಿಯಾಗಿ 3 ವರ್ಷಗಳನ್ನು ಪೂರೈಸಿದ್ದು, ಸುಮಾರು 4 ಸಾವಿರ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆಯುತ್ತಿದ್ದಾರೆ.**
> ■ **ಪ್ರೊ.ಎಂ.ವೆಂಕಟೇಶ್ವರಲು, ಕುಲಪತಿ**

**ಹಿಮೋಗ್ಲೋಬಿನ್ ಹೆಚ್ಚಿಸಲು ಕ್ರಮ:** ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳಲ್ಲಿ ಅಪೌಷ್ಟಿಕತೆ ಹೆಚ್ಚಾಗಿ ಕಂಡುಬರುತ್ತಿದೆ. ಅದರಲ್ಲೂ ವಿಶೇಷವಾಗಿ ಹೆಣ್ಣು ಮಕ್ಕಳಲ್ಲಿ ಹಿಮೋಗ್ಲೋಬಿನ್ ಅಂಶ ಕಡಿಮೆ ಇರುವುದು ಆತಂಕಕಾರಿ ವಿಷಯವಾಗಿದ್ದು, ಇದು ಅವರ ಮುಂದಿನ ಜೀವನದ ಮೇಲೆ ಗಂಭೀರ ಪರಿಣಾಮ ಬೀರಬಹುದು. ಹಿಮೋಗ್ಲೋಬಿನ್ ಮಟ್ಟವನ್ನು ನೈಸರ್ಗಿಕವಾಗಿ ಹೆಚ್ಚಿಸಿಕೊಳ್ಳಬಹುದು. ವಿದ್ಯಾರ್ಥಿಗಳಲ್ಲಿ ಹಿಮೋಗ್ಲೋಬಿನ್ ಹೆಚ್ಚಿಸಲು ತುಮಕೂರು ವಿವಿಯಿಂದ ಅಗತ್ಯ ಕ್ರಮ. ಹಿಮೋಗ್ಲೋಬಿನ್ ಕಡಿಮೆಯಿದ್ದ ಮಕ್ಕಳಲ್ಲಿ ಅದನ್ನು ಹೆಚ್ಚಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವೆವು ಎಂದು ಕುಲಪತಿ ಪ್ರೊ. ಎಂ. ವೆಂಕಟೇಶ್ವರಲು ಅವರು ಕಿವಿಮಾತು ಹೇಳಿದರು.

# ಕೆರೆ ಏರಿ ರಸ್ತೆ ಅಭಿವೃದ್ಧಿ, ಸೇತುವೆ ನಿರ್ಮಾಣಕ್ಕೆ ರೋಟರಿ ಕ್ಲಬ್ ಒತ್ತಾಯ

**ಹುಳಿಯಾರು:** ಪಟ್ಟಣದಸರ್ಕಾರಿಶಾಲೆಮತ್ತುಕಾಲೇಜುಗಳಿಗೆ ನಿತ್ಯ ಸಂಚರಿಸುವ ಸಾವಿರಾರು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ, ಹುಳಿಯಾರು ಕೆರೆ ಏರಿಯ ರಸ್ತೆ ಅಭಿವೃದ್ಧಿ ಹಾಗೂ ಮಿನಿಸೇತುವೆನಿರ್ಮಾಣಕ್ಕೆ ಆಗ್ರಹಿಸಿ ಹುಳಿಯಾರು ರೋಟರಿ ಸೆಂಟ್ರಲ್ ಕ್ಲಬ್ ಅಧ್ಯಕ್ಷ ಈ.ರವೀಶ್ ಅವರು ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ್ದಾರೆ.

ಹುಳಿಯಾರು-ಕೆಂಕೆರೆ ಮಧ್ಯೆ ಇರುವ ಸುಮಾರು 1 ಕಿ.ಮೀ. ಉದ್ದದ ಕೆರೆ ಏರಿಯ ರಸ್ತೆಯು ಪ್ರಸ್ತುತ ಅತ್ಯಂತ ಕಿರಿದಾಗಿದ್ದು, ವಾಹನಗಳ ಸಂಚಾರ ದಟ್ಟಣೆಯಿಂದ ಕೂಡಿದೆ. ಈ ರಸ್ತೆಯ ಮೂಲಕ ಹುಳಿಯಾರಿನ ಸರ್ಕಾರಿ ಪ್ರೌಢಶಾಲೆ, ಪದವಿ ಪೂರ್ವ ಕಾಲೇಜು ಹಾಗೂ ಪದವಿ ಕಾಲೇಜುಗಳಿಗೆ ನಿತ್ಯ ಸುಮಾರು 1500 ಕ್ಕೂ ಹೆಚ್ಚು ವಿದ್ಯಾರ್ಥಿಗಳು ನಡೆದುಕೊಂಡು ಹೋಗುತ್ತಿದ್ದರು. ಆದರೆ ಜಾಲಿಗಿಡ ಹಾಗೂ ಅಸುರಕ್ಷತೆಯಿಂದ ಕೆರೆ ಏರಿ ಬಿಟ್ಟು ಈಗ ಅನೇಕ ವಿದ್ಯಾರ್ಥಿಗಳುಹೈವೆರಸ್ತೆಯಲ್ಲಿಓಡುತ್ತಿದ್ದಾರೆ. ವಾಹನಗಳಅತಿವೇಗದ ಸಂಚಾರದಿಂದಾಗಿ ವಿದ್ಯಾರ್ಥಿಗಳು ಪ್ರತಿದಿನ ಭಯದ ನೆರಳಿನಲ್ಲಿಯೇ ಓಡಾಡುವಂತಾಗಿದೆ ಎಂದು ಸಮಸ್ಯೆ ವಿವರಿಸಿದ್ದಾರೆ. ರೋಟರಿ ಕ್ಲಬ್ ಅಧ್ಯಕ್ಷ ಈ. ರವೀಶ್, ಸಾವಿರಾರು ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವ ಈ ಯೋಜನೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಬೇಕು ಎಂದು ಒತ್ತಾಯಿಸಿದ್ದಾರೆ.

# ಉಪ್ಪಿನ ಸತ್ಯಾಗ್ರಹ ದಿನ ಸ್ಮರಣೆ ಕಾರ್ಯಕ್ರಮ

**ಮಧುಗಿರಿ:** ಗಾಂಧಿಯವರ ಸತ್ಯಾಗ್ರಹ, ಸ್ವಾತಂತ್ರ್ಯ ಹೋರಾಟ, ಚಳವಳಿಗಳು ಈ ನೆಲದ ಜಲ, ಗಾಳಿ, ಬೆಳಕಿನಲ್ಲಿ ಬೆರೆತು ಇತಿಹಾಸ ಪ್ರಸಿದ್ಧವಾಗಿವೆ ಎಂದು ಹಿರಿಯ ಸಾಹಿತಿ ಪ್ರೊ. ಮಲನಮೂರ್ತಿ ಅಭಿಪ್ರಾಯಪಟ್ಟರು. ಪಟ್ಟಣದ ಸಹೃದಯ ಬಳಗ ಆಯೋಜಿಸಿದ್ದ ಉಪ್ಪಿನ ಸತ್ಯಾಗ್ರಹ ದಿನದ ಸ್ಮರಣೀಯ ಕಾರ್ಯಕ್ರಮದಲ್ಲಿ ಮಾತನಾಡಿ ಈ ಚಳವಳಿ 1930 ರ ಮಾರ್ಚ್ 12 ರಿಂದ ಏಪ್ರಿಲ್ 6ರವರೆಗೆ ನಡೆಯಿತು. ಬ್ರಿಟಿಷ್ ಸರ್ಕಾರ ಸಾಮಾನ್ಯ ಜನರು ಬಳಸುವ ಉಪ್ಪಿನ ಮೇಲೆ ಕರವನ್ನು ವಿಧಿಸಿ ಸರ್ಕಾರ ಬೊಕ್ಕಸ ತುಂಬಿಕೊಳ್ಳುತ್ತಿತ್ತು. ಇದು ಅವರ ಗಮನ ಸೆಳೆಯಿತು. ಈ ಕರದ ವಿರೋಧವು ಎಲ್ಲಾ ಧರ್ಮ, ವರ್ಗ ಪ್ರಾಂತ್ಯದ ಜನರನ್ನು ಹುರಿದುಂಬಿಸಿ ಯಶಸ್ವಿಯಾಯಿತು ಎಂದರು. ಬಳದ ಕಾರ್ಯದರ್ಶಿ ಜಿ.ಎಸ್ ನಾಗಭೂಷಣ ಮಾತನಾಡಿ, ಶಾಂತಿ ಅಹಿಂಸಾತ್ಮಕ ಚಳುವಳಿ ಗಾಂಧಿಯವರ ಆದರ್ಶವಾಗಿತ್ತು. ಅವರನ್ನು ಹೆಸರಿಸದೆ ಭಾರತದ ಇತಿಹಾಸ ಬರೆಯುವಂತಿಲ್ಲ ಎಂದರು.



ಬಳಗದ ಅಮೃತಾ, ಕಾವೇರಿ, ಚಂದನಗಾಂಧಿ ವಿವಿಧ ಸತ್ಯಾಗ್ರಹ ಕುರಿತು ಚರ್ಚೆನಡೆಸಿದರು. ಪ್ರಕಾಶ, ಪ್ರವೀಣ, ರಾಜೇಶ, ರಂಗಸ್ವಾಮಿ, ಗಾಂಧಿ ಯವರ ಸಮಾಜಮುಖಿ ಚಿಂತನೆಗಳನ್ನು ವಿಶ್ಲೇಷಿಸಿದರು. ಬಸಮ್ಮ ಸ್ವಾಗತಿಸಿ, ವಿರೂಪಾಕ್ಷ ನಿರೂಪಿಸಿ, ಮುತ್ತುರಾಜ್ ವಂದಿಸಿದರು.

# ಮನೆ ಗೇಟ್‌ಗೆ ಬೀಗ ಹಾಕಿದ ಆರೋಪ: ಮಹಿಳೆಯಿಂದ ಪೊಲೀಸರಿಗೆ ದೂರು

**ಮಧುಗಿರಿ:** ತಾಲೂಕಿನ ದೊಡ್ಡೇರಿ ಹೋಬಳಿಯ ಹನುಮನಹಳ್ಳಿ ಗ್ರಾಮದಲ್ಲಿ ಅಮಾನವೀಯ ಘಟನೆ ನಡೆದಿದ್ದುಗ್ರಾಮಸ್ಥರಲ್ಲಿಕಳವಳಮೂಡಿಸಿದೆ. ಗ್ರಾಮದ ನಿವಾಸಿಯಾದ ಆಶಾ ಅವರು ಬಡವನಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದು, ತಾಲೂಕು ಪಂಚಾಯಿತಿ ಮಾಜಿ ಸದಸ್ಯ ದೊಡ್ಡಯ್ಯ ಹಾಗೂ ರಾಮಕೃಷ್ಣಯ್ಯ ಅವರು ನಮ್ಮ ಮನೆಯ ಗೇಟ್‌ಗೆ ಬೀಗ ಹಾಕಿದ್ದಾರೆ ಎಂದು ದೂರಿದ್ದಾರೆ.

ಈ ಬಗ್ಗೆ ಪ್ರಶ್ನಿಸಿದಾಗ ನನಗೆ ಹಾಗೂ ನನ್ನ ಪತಿ ಹರೀಶ್‌ಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ನಡೆಸಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ. ಗೇಟ್‌ಗೆ ಬೀಗ ಹಾಕಿದ ಕಾರಣದಿಂದ ಮನೆಯೊಳಗೆ ಹಾಗೂ ಹೊರಗೆ ಹೋಗಲು ಕುಟುಂಬದವರು ಕಾಂಪೌಂಡ್ ಹಾರಿ ಓಡಾಡುವಸ್ಥಿತಿ ನಿರ್ಮಾಣವಾಗಿದೆ ಎಂದು ತಿಳಿಸಿದ್ದಾರೆ. ಈ ಘಟನೆ ಬಗ್ಗೆ ಸಾರ್ವಜನಿಕರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ಯಾವುದೇ ಸಮಸ್ಯೆಗಳಿದ್ದರೆ ಕೂತು ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬೇಕು. ಅದನ್ನು ಬಿಟ್ಟು ಮನೆಯ ಗೇಟ್‌ಗೆ ಬೀಗ ಹಾಕಿ ತೊಂದರೆ ನೀಡುವುದು ಸರಿಯಲ್ಲ ಎಂದು ಹೇಳಿದ್ದಾರೆ. ಪ್ರತಿದಿನ ಕಾಂಪೌಂಡ್ ಹಾರಿಕೊಂಡು ಓಡಾಡುವ ಪರಿಸ್ಥಿತಿ ಉಂಟಾಗಿರುವುದರಿಂದ ತಕ್ಷಣ ಪೊಲೀಸ್ ಇಲಾಖೆ ಮಧ್ಯಪ್ರವೇಶಿಸಿ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.



# ನೆಲಕೆ ಧನ್ಯಧಾರೆ ಕವನ ಸಂಕಲನ ಬಿಡುಗಡೆ ಸಮಾರಂಭ

**ಕುಣಿಗಲ್:** ಜಗದೀಶ್ ನಾಯಕ್ ಶ್ರಮದ ನೆಲಕೆ ಧನ್ಯಧಾರೆ ಎಂಬ ಕವನ ಸಂಕಲನ ಬಿಡುಗಡೆ ಸಮಾರಂಭವನ್ನು ತಾಲೂಕಿನ ಕೊತ್ತಗೆರೆ ಹೋಬಳಿ ಭಕ್ತರಹಳ್ಳಿ ದಯಾ ಭವನದಲ್ಲಿ ಮಾ.15ರ ಭಾನುವಾರ ಹಮ್ಮಿಕೊಳ್ಳಲಾಗಿದೆ ಎಂದು ರಂಗ ವಿಜಯಾ ಟ್ರಸ್ಟ್ ನ ಸಂಸ್ಥಾಪಕ ಅಧ್ಯಕ್ಷ ಮಾಲೂರು ವಿಜಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸ್ಥಳೀಯ ಸಂಸ್ಥೆಗಳಾದ ಭಕ್ತರಹಳ್ಳಿಯ ದಯಾ ಭವನ ಸೇವಾ ಸಂಸ್ಥೆ, ಸ್ನೇಹ ಕಲಾ ಪ್ರತಿಷ್ಠಾನ, ರಂಗ ವಿಜಯಾ ಟ್ರಸ್ಟ್ ಸಹಯೋಗ ದೊಂದಿಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ವೆಗೋಲಾ ಇಂಡಿಯಾ ಕಂಪನಿ ಪ್ರೈವೇಟ್ ಲಿಮಿಟೆಡ್‌ನ ಮಾನವ ಸಂಪನ್ಮೂಲ ವಿಭಾಗದ ಎಜಿಎಂ ಆಗಿ ಕೆಲಸ ನಿರ್ವಹಿಸುತ್ತಿರುವ ಉತ್ತರ ಕನ್ನಡ ಜಿಲ್ಲೆಯ ಗಂಗಾವತಿ ಮೂಲದ ಜಗದೀಶ್ ನಾಯ್ಕ್ ಕವಿ ಹಾಗೂ ನಾಟಕಕಾರರಾಗಿ ಪರಿಚಿತರಾಗಿದ್ದಾರೆ, ಅವರು ತಮ್ಮ 21 ಕವನಗಳ ಕವನ ಸಂಕಲನ ಶ್ರಮದ ನೆಲಕೆ ಧನ್ಯಧಾರೆ ಎಂಬ ಸಂಕಲನ ವನ್ನು ರಂಗ ವಿಜಯಾ ಟ್ರಸ್ಟ್ ಪ್ರಕಟಿಸಿ ಬಿಡುಗಡೆ ಮಾಡುತ್ತಿದೆ ಎಂದರು.

50 ವರ್ಷ ತುಂಬಿದ ಸವಿ ನೆನಪಿಗಾಗಿ ಸುಜನ 50 ಎಂದರೆ ಸುವರ್ಣ ಸಂಭ್ರಮ ಜಗದೀಶ ನಾಯ್ಕ್ ಎಂಬ ಅಡಿಬರಹದಲ್ಲಿ ಅವರ ಸುವರ್ಣ ಸಂಭ್ರಮವನ್ನು ಆಚರಿಸಲಾಗುತ್ತಿದೆ. ಕವನ ಸಂಕಲನ ಬಿಡುಗಡೆ, ಸಂವಾದ, ಕವಿಗೋಷ್ಠಿ ಹಾಗೂ ಅಭಿನಂದನಾ ಗ್ರಂಥ ಬಿಡುಗಡೆ ಮಾಡಲಾಗುವುದು ಎಂದರು. ಕಳೆದ ಹಲವು ವರ್ಷಗಳಿಂದ ಕಾವ್ಯ ಮತ್ತು ನಾಟಕ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸುತ್ತಾ ಬಂದಿರುವ ಜಗದೀಶ ನಾಯ್ಕ್ ಅವರ ಮೊಟ್ಟ ಮೊದಲ ಕವನ ಸಂಕಲನ ಇದಾಗಿದ್ದು ಇದರ ವಿನ್ಯಾಸವನ್ನು ಖ್ಯಾತ ನಾಟಕಕಾರ ಹಾಗೂ ದ್ರಾವಿಡ ವಿಶ್ವವಿದ್ಯಾನಿಲಯದ ಡಾ.ಟಿ.ಲಕ್ಷ್ಮೀನಾರಾಯಣ್ ಅವರು ಮಾಡಿದ್ದು, ಅಭಿನಂದನಾ ಗ್ರಂಥಕ್ಕೂ ಅವರೇ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದಾರೆ ಎಂದ ಅವರು ಸಾಹಿತ್ಯ ಅಭಿಮಾನಿಗಳು, ಕನ್ನಡ ಅಭಿಮಾನಿಗಳು, ಬರಹಗಾರರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದ್ದಾರೆ.

ಮುಖ್ಯ ಅತಿಥಿಗಳಾಗಿ ನಮ್ಮ ನಾಡಿನ ಹೆಮ್ಮೆಯ ನಟ ಶರತ್ ಲೋಹಿತಾಶ್ವ, ಹಾಸ್ಯ ನಟ ತಬಲ ನಾಣಿ, ಹಾಸ್ಯ ಯೂಟ್ಯೂಬ್ ಚಾನೆಲ್‌ನ ಗೀತಾ ರಾಘವೇಂದ್ರ ಹಾಗೂ ಮಂಜು ದೊಡ್ಡಿರಪ್ಪ ಮುಂತಾದವರು ಭಾಗವಹಿಸಲಿದ್ದಾರೆ, ಎಂದರು.

ಸಾಂಸ್ಕೃತಿಕ ಕಾರ್ಯಕ್ರಮ, ಸಂವಾದ, ಕವಿತಾ ವಾಚನ, ರಂಗ ವಿಜಯಾ ಟ್ರಸ್ಟ್ ವತಿಯಿಂದ ಪ್ರಾರಂಭವಾಗುತ್ತಿರುವ ಕಾಮಿಡಿ ಕಟ್ಟೆ ಯುಟ್ಯೂಬ್ ಚಾನೆಲ್ ನ ಮೊದಲ ಕಂತನ್ನು ಬಿಡುಗಡೆ ಮಾಡಲಾಗುವುದು ಎಂದರು.

ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿದ ನಾಹಿದಾ ಜಂ ಜಂ

# ಸಮಾಜದಲ್ಲಿ ಮಹಿಳೆಯರಿಗಿರಲಿ ಸಮಾನತೆ

**ಕುಣಿಗಲ್:** ಹೆಣ್ಣಿಗೆ ಹೆಣ್ಣೇ ಶತ್ರು ಎಂದು ಹೇಳುವ ಕಾಲ ಹೋಯಿತು, ಹೆಣ್ಣಿಗೆ ಹೆಣ್ಣೇ ಮಿತ್ರ. ಹೆಣ್ಣು ಹೆಣ್ಣಾಗಿ ಬದುಕಿ ಮತ್ತೊಂದು ಹೆಣ್ಣಿಗೆ ಆಶ್ರಯ ನೀಡುತ್ತಿರುವುದನ್ನು ಇಂದು ನಾವು ಕಾಣುತ್ತಿದ್ದೇವೆ ಎಂದು ಉಪ ವಿಭಾಗಾಧಿಕಾರಿ ನಾಹಿದಾ ಜಂ ಜಂ ತಿಳಿಸಿದರು.

ಈಶ್ವರಿ ಮಹಿಳಾ ಸಮಾಜ ಕುಣಿಗಲ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ಪಟ್ಟಣದ ಕನ್ನಡ ಭವನದಲ್ಲಿ ನಡೆದ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಹೆಣ್ಣಿನ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು ಇನ್ನೂ ನಿಂತಿಲ್ಲ, ಹೆಣ್ಣು ಮಕ್ಕಳು ನೆಮ್ಮದಿಯಿಂದ ಇರಲು ಸಾಧ್ಯವಾಗಿಲ್ಲ. ದಿನೇ ದಿನೇ ದೌರ್ಜನ್ಯಗಳು ಹೆಚ್ಚಾಗುತ್ತಿವೆ, ನಾವೆಲ್ಲ ಖುಷಿಯಿಂದ ಇದ್ದೇವೆ ಎಂದು ಮಹಿಳೆಯರನ್ನು ಪ್ರಶ್ನಿಸಿದರು. ಅಡಿಗೆ ಮಾಡುವುದು, ಗಂಡ ಮಕ್ಕಳನ್ನು ನೋಡಿಕೊಳ್ಳುವುದು, ಮನೆಯಕೆಲಸಮಾಡುವುದು ಹೆಣ್ಣಿನ ಕೆಲಸವಷ್ಟೇ ಅಲ್ಲ, ಸಮಾಜದಲ್ಲಿ ಮಹಿಳೆ ಇಂದು ಎಲ್ಲರಂತೆ ಸಮಾನವಾಗಿ ದುಡಿಯುತ್ತಿದ್ದಾಳೆ ಎಂದರು.




ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಲಕ್ಷ್ಮಣ ದಾಸ್ ಮಾತನಾಡಿ ಹೆಣ್ಣು ಮಕ್ಕಳ ಬಗ್ಗೆ ಅನುಕಂಪದ ಮಾತುಗಳನ್ನಾಡಿದರೆ ಸಾಲದು ಅದನ್ನ ಪಾಲಿಸಬೇಕು. ತಳ ಸಮುದಾಯದ ಹೆಣ್ಣು ಮಕ್ಕಳು ಸಂಘ ಸಂಸ್ಥೆಗಳನ್ನು ಕಟ್ಟಿ ಹತ್ತಾರು ಹೆಣ್ಣುಮಕ್ಕಳಿಗೆ ಆಶಯ ನೀಡಿ ಬೆಳೆಸುವುದು ಅಷ್ಟು ಸುಲಭವಲ್ಲ, ಅಂತಹ ಕೆಲಸವನ್ನು ಈಶ್ವರಿ ಮಹಿಳಾ ಸಮಾಜ ಮಾಡುತ್ತಿದೆ ಎಂದರು

ಶೋಭಾ ಮತ್ತು ತಂಡದವರಿಂದ ಭಾವಗೀತೆ, ಚಂದ್ರಮ್ಮ ಮತ್ತು ತಂಡದವರಿಂದ ಜನಪದ ನೃತ್ಯ, ಜ್ಯೋತಿ ಮತ್ತು ತಂಡದವರಿಂದ ದೇಶಭಕ್ತಿ ಗೀತೆ, ಗೀತಾ ಮತ್ತು ತಂಡದವರಿಂದ ನೃತ್ಯ, ಲಕ್ಷ್ಮಿದೇವಿ ಮತ್ತು ತಂಡದವರಿಂದ ಕೊಡವ ನೃತ್ಯ, ಮಾನಸ ಮತ್ತು ತಂಡದವರಿಂದ ಕೋಲಾಟ, ನರಸಿಂಹಮೂರ್ತಿ ಮತ್ತು ತಂಡದವರಿಂದ ಜಾನಪದ ಗೀತೆಗಳು ಗಾಯನ ಏರ್ಪಡಿಸಲಾಗಿತ್ತು. ತಹಸೀಲ್ದಾರ್ ಕರಿಯ ನಾಯಕ್, ಕಸಾಪ ಅಧ್ಯಕ್ಷ ರಮೇಶ್, ಮಾಜಿ ತಾಪಂ ಅಧ್ಯಕ್ಷ ಎಸ್.ಆರ್. ಚಿಕ್ಕಣ್ಣ, ಡಾ.ಪ್ರಕಾಶ್ ಪಾಲ್ತ್ಯೆ, ಡಾ ನಾಗಮ್ಮ, ಜ್ಞಾನವಿ ಮಾತನಾಡಿದರು, ಈಶ್ವರಿ ಮಹಿಳಾ ಸಮಾಜದ ಅಧ್ಯಕ್ಷೆ ರಂಗಮ್ಮ, ರಾಜು, ನೂರಾರು ಮಹಿಳೆಯರು ಭಾಗವಹಿಸಿದ್ದರು.

ಚೆನ್ನೈ ಜೆಮ್ಸ್ ಆಸ್ಪತ್ರೆ ನಿರ್ದೇಶಕ ಡಾ.ಪಳನಿವೇಲುಗೆ ಜೀವಮಾನ ಸಾಧನೆ ಪ್ರಶಸ್ತಿ

# ಹಣದ ಬದಲು ವೃತ್ತಿಗಿರಲಿ ಹೆಚ್ಚು ಗೌರವ

**ತುಮಕೂರು:** ಓರ್ವ ವೈದ್ಯನಿಗೆ ರೋಗಿಗಿಂತ ದೊಡ್ಡವರು ಯಾರು ಇಲ್ಲ, ರೋಗಿಯನ್ನು ಉಪಚರಿಸಲು ನಮಗೆ ದೇವರೇ ನೀಡಿದ ಅವಕಾಶ ಎಂದು ತಿಳಿದು ಸೇವೆ ಮಾಡಿದರೆ ಅದಕ್ಕಿಂತ ದೊಡ್ಡ ಕಾರ್ಯ ಮತ್ತೊಂದಿಲ್ಲ ಎಂದು ಎಂದು ಚೆನ್ನೈ ಜೆಮ್ಸ್ ಆಸ್ಪತ್ರೆಯ ನಿರ್ದೇಶಕ ಡಾ.ಪಳನಿವೇಲು ಅಭಿಪ್ರಾಯ ಪಟ್ಟಿದ್ದಾರೆ.

ನಗರದ ಶ್ರೀದೇವಿ ಮೆಡಿಕಲ್ ಕಾಲೇಜು ಸಭಾಂಗಣದಲ್ಲಿ ಶ್ರೀದೇವಿ ಚಾರಿಟೇಬಲ್ ಟ್ರಸ್ಟ್ ಮತ್ತು ಡಾ.ಎಂ.ಆರ್.ಹುಲಿನಾಯ್ಕರ್‌ಪ್ರತಿಷ್ಠಾನವತಿಯಿಂದ ಆಯೋಜಿಸಿದ್ದ ಸಂಸ್ಥೆಯ ಡಾ.ಎಂ.ಆರ್.ಹುಲಿನಾಯ್ಕರ್ ಮತ್ತು ಶಾಂತಾದುರ್ಗಾದೇವಿ ಜೀವಮಾನ ಸಾಧನೆ ಪ್ರಶಸ್ತಿ ಸ್ವೀಕರಿಸಿ ಮಾತನಾಡುತಿದ್ದ ಅವರು, ವೈದ್ಯನಲ್ಲಿರುವ ಅಧ್ಯಾತ್ಮ ಪ್ರಚೋದನೆಗೊಂಡಾಗಲೇ ಒಳ್ಳೆಯ ಸೇವೆ ದೊರೆಯಲು ಸಾಧ್ಯ. ವೃತ್ತಿಗೆ ಹೆಚ್ಚು ಗೌರವ ನೀಡಿ, ಹಣಕ್ಕಲ್ಲ ಎಂದರು.

ಸಮಯವೆಂಬುದು ಬಹು ಅಮೂಲ್ಯ, ಇದನ್ನು ಅರ್ಥ ಮಾಡಿಕೊಂಡು ಮುನ್ನೆಡೆದರೆ ಸಾಧನೆಯ ಹಲವಾರು ಮಜಲುಗಳನ್ನು ದಾಟಬಹುದು. ಇಲ್ಲದಿದ್ದರೆ ನಿಂತಲೇಇರಬೇಕಾಗುತ್ತಿದೆ. ಭಾರತೀಯರಲ್ಲಿಕೌಶಲ್ಯಕ್ಕೆ ಕೊರತೆ ಇಲ್ಲ, ನಮ್ಮಲ್ಲಿ ಸಾಧನೆಯ ಕಡೆಗೆ ಪ್ರಯತ್ನವಿಲ್ಲದೆ ಇನ್ನೊಬ್ಬರನ್ನು ದೂರುವ ಅಗತ್ಯವಿಲ್ಲ ಎಂದು ಡಾ.ಪಳನಿವೇಲು ನುಡಿದರು.



ರಾಷ್ಟ್ರೀಯ ಸ್ವಾಭಿಮಾನ ಪರಿಷತ್‌ನ ರಾಷ್ಟ್ರೀಯ ಅಧ್ಯಕ್ಷ ಬಸವರಾಜ ಪಾಟೀಲ್ ಮಾತನಾಡಿ, ಇಂದು ಪ್ರಪಂಚದಲ್ಲಿಯೇ ಒಳ್ಳೆಯ ವೈದ್ಯರೆನಿಸಿಕೊಂಡಿರುವ ಡಾ.ಫಳನಿವೇಲು ಅವರ ಆತ್ಮಕಥೆ ಹಿಂದಿ, ಒರಿಯಾ, ಕನ್ನಡ ಹೀಗೆ ಹಲವು ಭಾಷೆಗಳಿಗೆ ತರ್ಜುಮೆಯಾಗಿದೆ.ಎಂದರು. ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್ ಮಾತನಾಡಿ, ಡಾ.ಪಳನಿವೇಲು ಅವರು ತಮ್ಮ ಇಡೀ ಜೀವನವನ್ನು ವೈದ್ಯಕೀಯ ಕ್ಷೇತ್ರಕ್ಕೆ ಮುಡಿಪಾಗಿಟ್ಟಿದ್ದಾರೆ. ಅವರಿಗೆ ಬೇರೆಯ ಚಟಗಳಿಲ್ಲ. ವೃತ್ತಿಯನ್ನೇ ಚಟವಾಗಿಸಿಕೊಂಡಿದ್ದಾರೆ ಎಂದರು.

ಡಾ.ಫಳನಿವೇಲು ಅವರ ಕುರಿತು ಅಭಿನಂದನಾ ನುಡಿಗಳನ್ನಾಡಿದ ಕಿಮ್ಸ್ ಆಸ್ಪತ್ರೆಯ ನಿರ್ದೇಶಕ ಡಾ.ಈಶ್ವರ್ ಹೊಸಮನಿ, ಅಧ್ಯಕ್ಷತೆ ವಹಿಸಿದ್ದ ಸುವರ್ಣಮುಖಿ ಸಂಸ್ಕೃತಿ ಧಾಮದ ಸಂಸ್ಥಾಪಕ ಡಾ.ಆಚಾರ್ಯ ಎಂ.ನಾಗರಾಜು, ವೇದಿಕೆಯಲ್ಲಿ ಶಾಂತ ದುರ್ಗಾದೇವಿ, ಡಾ.ರಮಣ್ ಹುಲಿನಾಯ್ಕರ್, ಡಾ.ಲಾವಣ್ಯ ರಮಣ ಹುಲನಾಯ್ಕರ್ ಉಪಸ್ಥಿತರಿದ್ದರು.

## ಕಿರುಸುದ್ದಿ

### ನಾಳೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರ ಜಿಲ್ಲಾ ಪ್ರವಾಸ

**ರಾಮನಗರ:** ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಪುರುಷೋತ್ತಮ ಬಿಳಿಮಲೆ ಅವರು ಮಾ.15ರ ಭಾನುವಾರ ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಅವರು ಮಾ. 15ರ ಭಾನುವಾರ ಬೆಳಿಗ್ಗೆ 8 ಗಂಟೆಗೆ ಬೆಂಗಳೂರಿನಿಂದ ನಿರ್ಗಮಿಸಿ ಬೆಳಿಗ್ಗೆ 10 ಗಂಟೆಗೆ ಬಿಡದಿ ಮಾರ್ಗವಾಗಿ ರಾಮನಗರದ ಜಾನಪದ ಲೋಕಕ್ಕೆ ಆಗಮಿಸುವರು. ನಂತರ ಬೆಳಿಗ್ಗೆ 10.30ಕ್ಕೆ ರಾಮನಗರದ ಜಾನಪದ ಲೋಕದ ಬಯಲು ರಂಗ ಮಂದಿರದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಹಾಗೂ ಕರ್ನಾಟಕ ಜಾನಪದ ಪರಿಷತ್ತಿನ ಸಹಯೋಗದಲ್ಲಿ ಚನ್ನಪಟ್ಟಣದ ಗೊಂಬೆಗಳು: ಕನ್ನಡದ ಅಸ್ಮಿತೆ ಎಂಬ ಶಿಬಿರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಬಳಿಕ ಸಂಜೆ 4 ಗಂಟೆಗೆ ಜಾನಪದ ಲೋಕದಿಂದ ನಿರ್ಗಮಿಸಿ ಸಂಜೆ 5.45ಕ್ಕೆ ಬೆಂಗಳೂರು ತಲುಪುವರು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಆಪ್ತ ಕಾರ್ಯದರ್ಶಿಗಳು ಪ್ರಟಕಣೆಯಲ್ಲಿ ತಿಳಿಸಿದ್ದಾರೆ.

### ನಾಳೆ ಸಚಿವ ಸೋಮಣ್ಣ ಕನಕಪುರ ತಾಲೂಕು ಪ್ರವಾಸ

**ರಾಮನಗರ:** ಕೇಂದ್ರ ಸರ್ಕಾರದ ರಾಜ್ಯ ರೈಲ್ವೇ ಮತ್ತು ಜಲಶಕ್ತಿ ಸಚಿವರಾದ ವಿ. ಸೋಮಣ್ಣ ಅವರು ಮಾ.15ರಂದು ಕನಕಪುರ ತಾಲೂಕಿನ ಪ್ರವಾಸ ಕೈಗೊಂಡಿದ್ದಾರೆ. ಅವರು ಮಾ. 15ರ ಭಾನುವಾರ ಬೆಳಿಗ್ಗೆ 8.30ಕ್ಕೆ ಬೆಂಗಳೂರಿನಿಂದ ನಿರ್ಗಮಿಸಿ ಬೆಳಿಗ್ಗೆ 10 ಗಂಟೆಗೆ ಕನಕಪುರ ತಾಲ್ಲೂಕಿನ ಚಿಕ್ಕಮುದವಾಡಿಯ ಸ್ಥಳೀಯ ಕಾರ್ಯಕ್ರಮದಲ್ಲಿ ಭಾಗವಹಿಸಿ ನಂತರ ಚಿಕ್ಕಮುದವಾಡಿ ಗ್ರಾಮದಿಂದ ನಿರ್ಗಮಿಸಿ ಬೆಂಗಳೂರು ತಲುಪುವರು ಎಂದು ಸಚಿವರ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಅಧಿಕಾರ ಸ್ವೀಕಾರ

**ಕನಕಪುರ:** ಸಾತನೂರು ಪೊಲೀಸ್ ಠಾಣೆಗೆ ನೂತನ ಸಬ್ ಇನ್ಸ್‌ಪೆಕ್ಟರ್ ಆಗಿ ಎನ್.ಎಂ.ಸಮಂತ್ ಗೌಡ ಅಧಿಕಾರ ಸ್ವೀಕರಿಸಿದರು. ಈ ಹಿಂದೆ ಸಬ್‌ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಹರೀಶ್‌ರವರ ವರ್ಗಾವಣೆಯಿಂದ ತೆರವಾಗಿದ್ದ ಸ್ಥಾನಕ್ಕೆ ಸಮಂತ್ ಗೌಡ ಅಧಿಕಾರ ವಹಿಸಿಕೊಂಡಿದ್ದಾರೆ.



### ಬಡಜನರಿಗೆ ದಿನಸಿ ವಿತರಣೆ

**ಕನಕಪುರ:** ತಾಲೂಕಿನ ಆಡನಕುಪ್ಪೆ ಗ್ರಾಮದಲ್ಲಿ ರಂಜಾನ್ ಹಬ್ಬದ ಪ್ರಯುಕ್ತ ನೇಕೀಕಿ ಟೋಕರಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಬಡಜನರಿಗೆ ದಿನಸಿ ಕಿಟ್‌ಗಳನ್ನು ವಿತರಿಸಲಾಯಿತು. ಗುರುವಾರ ಆಡನಕುಪ್ಪೆ ಬಂಗ್ಲೆ ಮೌಲಾ ಅಲಿ ಮಸೀದಿ ಆವರಣದಲ್ಲಿ ನೇಕೀಕಿ ಟೋಕರಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ರಂಜಾನ್ ಹಬ್ಬದ 21ನೇ ಉಪವಾಸ ದಿನದ ಪ್ರಯುಕ್ತ ನಡೆದ ಸರಳ ಕಾರ್ಯಕ್ರಮದಲ್ಲಿ 101 ಬಡಮಂದಿಗೆ ಆಹಾರ ಪದಾರ್ಥಗಳ ದಿನಸಿ ಕಿಟ್‌ಗಳನ್ನು ವಿತರಿಸಲಾಯಿತು. ಟ್ರಸ್ಟ್‌ನ ಅಧ್ಯಕ್ಷ ಸೈಯದ್ ತಾಸುದ್ದೀನ್ ಖಾದ್ರಿ ಮಾತನಾಡಿ, ಸಮಾಜದಲ್ಲಿ ಎಲ್ಲರೂ ಸಮನಾಗಿ ಬದುಕಬೇಕು, ಸ್ಥಿತಿವಂತರೂ ಸಮಾಜದ ನಿರ್ಗತಿಕರಿಗೆ ಸಹಾಯ ಮಾಡುವ ಮೂಲಕ ಮಾನವೀಯತೆ ಮೆರೆಯಬೇಕು, ಹಾಗಾಗಿ ಪವಿತ್ರವಾದ ರಂಜಾನ್ ಹಬ್ಬವನ್ನು ಈ ಮೂಲಕ ಆಚರಿಸಲಾಗುತ್ತಿದೆ ಎಂದರು. ಟ್ರಸ್ಟ್ ಕಾರ್ಯದರ್ಶಿಗಳಾದ ಸೈಯದ್ ಸಿದ್ಧಿಕ್, ಮಹಮ್ಮದ್ ಅಮ್ಮದ್, ಖಜಾಂಚಿ ಸೈಯದ್ ಸಾದತ್, ಸದಸ್ಯರಾದ ನೂರುಲ್ಲಾ, ಸೈಯದ್ ನುಸುರುಲ್ಲಾ, ಮಹಮ್ಮದ್ ಕಲಿಂ, ಮಹಮ್ಮದ್ ಅಕ್ರಂ, ಸೈಯದ್ ಹನೀಫ್, ಸೈಯದ್ ಕಲೀಂ, ಮಹಮ್ಮದ್ ಕಬೀರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

### ವಿದ್ಯುತ್ ಅವಘಡ: ಗ್ರಾಪಂ ನೌಕರ ಸಾವು

**ಚನ್ನಪಟ್ಟಣ:** ವಿದ್ಯುತ್ ಕಂಬಕ್ಕೆ ದೀಪ ಅಳವಡಿಸುವ ವೇಳೆ ವಿದ್ಯುತ್ ಶಾಕ್ ಹೊಡೆದು ಗ್ರಾಮ ಪಂಚಾಯಿತಿ ನೌಕರರೊಬ್ಬರು ಮೃತಪಟ್ಟಿರುವ ದುರ್ಘಟನೆ ತಾಲೂಕಿನ ಮಾಕಳಿ ಗ್ರಾಮದಲ್ಲಿ ನಡೆದಿದೆ. ಮೃತರನ್ನು ಹನುಮಂತಯ್ಯ (59) ಎಂದು ಗುರುತಿಸಲಾಗಿದೆ. ಇವರು ಮಾಕಳಿ ಗ್ರಾಮ ಪಂಚಾಯಿತಿಯಲ್ಲಿ ವಾಟರ್ ಮ್ಯಾನ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಬುಧವಾರ ಸಂಜೆ ಅಂಗನವಾಡಿ ಕೇಂದ್ರದ ಬಳಿ ಇರುವ ವಿದ್ಯುತ್ ಕಂಬಕ್ಕೆ ವಿದ್ಯುತ್ ದೀಪಗಳನ್ನು ಅಳವಡಿಸುತ್ತಿದ್ದ ವೇಳೆ ಅಚಾನಕ್ ವಿದ್ಯುತ್ ಪ್ರವಹಿಸಿ ಅವರು ಕಂಬದಿಂದ ಕೆಳಗೆ ಬಿದ್ದಿದ್ದಾರೆ. ತಕ್ಷಣ ಅವರನ್ನು ಚನ್ನಪಟ್ಟಣ ಸಾರ್ವಜನಿಕ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೆಅವರು ಮೃತಪಟ್ಟಿದ್ದಾರೆ. ಈ ಸಂಬಂಧಎಂ.ಕೆ.ದೊಡ್ಡಿ ಪೊಲೀಸ್‌ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಕನಕಪುರ ನಗರಸಭೆಯಿಂದ ಜರುಗಿದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಧನಂಜಯ್ಯ, ನಟರಾಜು, ಶ್ರೀದೇವಿ, ದಿಲೀಪ್ ನಾಪತ್ ಉಪಸ್ಥಿತರಿದ್ದರು.

## ಮಹಿಳಾ ಪೌರಕಾರ್ಮಿಕರಿಗೆ ಸನ್ಮಾನ

**ಕನಕಪುರ:** ಸಮಾಜದಲ್ಲಿ ಮಹಿಳೆಯರು ಕುಟುಂಬ ಮತ್ತು ಸಮಾಜದಲ್ಲಿ ದೀಪದಂತೆ ಬೆಳಗುತ್ತಾರೆ. ಅವರ ಕಾರ್ಯ ಶ್ಲಾಘನೀಯ ಎಂದು ನಗರಸಭಾ ಪರಿಸರ ಅಭಿಯಂತರ ಧನಂಜಯ್ಯ ಹೇಳಿದರು. ಶುಕ್ರವಾರ ನಗರದ ಡಾ. ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಜರುಗಿದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಮಹಿಳಾ ಪೌರಕಾರ್ಮಿಕರು ಹಾಗೂ ಸ್ವಸಹಾಯ ಗುಂಪಿನ ಮಹಿಳಾ ಸದಸ್ಯರಿಗೆ ಜರುಗಿದ ಸನ್ಮಾನ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಮಹಿಳೆ ಯಾವುದಕ್ಕೂ ಕಮ್ಮಿ ಇಲ್ಲದಂತೆ ಎಲ್ಲಾ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಕಾರ್ಯ ನಿರ್ವಹಿಸುತ್ತಿದ್ದಾರೆ. ಅದರಂತೆ ನಮ್ಮ ನಗರಸಭೆಯಲ್ಲೂ ಸಹ ಮಹಿಳಾ ಪೌರಕಾರ್ಮಿಕರು ನಗರ ಸ್ವಚ್ಛತೆಯಲ್ಲಿ ಅತ್ಯಂತ ಶ್ರಮವಹಿಸಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇದೇ ರೀತಿ ಸ್ವಸಹಾಯ ಸಂಘಗಳಲ್ಲಿ ಮಹಿಳೆಯರು ತಮ್ಮನ್ನು ತಾವು ತೊಡಗಿಸಿಕೊಂಡು ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ, ಇಂತಹ ಮಹಿಳೆಯರನ್ನು ನಗರಸಭಾ ವತಿಯಿಂದ ಸನ್ಮಾನಿಸುತ್ತಿರುವುದು ಔಚಿತ್ಯವೆಂದರು.

ನಗರಸಭೆ ಸಂಘಟಕ ನಟರಾಜು, ವ್ಯವಸ್ಥಾಪಕ ದಿಲೀಪ್ ನಾಪತ್, ಆರೋಗ್ಯ ಕಿರಿಯ ಅಭಿಯಂತರರಾದ ಶ್ರೀದೇವಿ, ಶರಣಪ್ಪ, ಸೇರಿದಂತೆ ನಗರಸಭೆ ಅಧಿಕಾರಿಗಳು, ಪೌರಕಾರ್ಮಿಕರು, ಸಿಬ್ಬಂದಿ ಹಾಜರಿದ್ದರು.



ಹುಳಿಯಾರಿನ ಜ್ಞಾನಜ್ಯೋತಿ ಶಾಲೆಯಲ್ಲಿ ತಂಬಾಕು ಮುಕ್ತ ಯುವ ಅಭಿಯಾನ 3.0 ಕಾರ್ಯಕ್ರಮ ನಡೆಯಿತು.

### ಜಿಲ್ಲೆಯಲ್ಲಿ ಪರೀಕ್ಷೆ ಸುಸೂತ್ರವಾಗಿ ನಡೆಯಲು ಅಗತ್ಯ ಸಿದ್ಧತೆ

# 18ರಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ

**ರಾಮನಗರ:** 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1ರ ಪರೀಕ್ಷೆಗಳು ಇದೇ ಮಾ.18ರಿಂದ ಪ್ರಾರಂಭವಾಗಲಿದ್ದು, ಈ ಪರೀಕ್ಷೆಗಳು ಜಿಲ್ಲೆಯಲ್ಲಿ ಸುಸೂತ್ರವಾಗಿ ನಡೆಯಲು ಎಲ್ಲಾ ರೀತಿಯ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ.

ಪರೀಕ್ಷೆಯ ವೇಳಾಪಟ್ಟಿ ವಿವರ: ಮಾ.18ರ ಬುಧವಾರ ಬೆಳಿಗ್ಗೆ 10ರಿಂದ 1.15ರ ವರೆಗೆ ಪ್ರಥಮ ಭಾಷೆ, ಮಾ. 23ರ ಸೋಮವಾರ ಬೆಳಿಗ್ಗೆ 10 ರಿಂದ 1.15ರ ವರೆಗೆ ವಿಜ್ಞಾನ, ಮಾ. 25ರ ಬುಧವಾರ ಬೆಳಿಗ್ಗೆ 10 ರಿಂದ 1 ಗಂಟೆಯವರೆಗೆ ದ್ವಿತೀಯ ಭಾಷೆ, ಮಾ. 28ರ ಶನಿವಾರ ಬೆಳಿಗ್ಗೆ 10 ರಿಂದ 1.15ರವರೆಗೆ ಗಣಿತ, ಮಾ. 30ರ ಸೋಮವಾರ ಬೆಳಿಗ್ಗೆ 10 ರಿಂದ 1 ಗಂಟೆಯವರೆಗೆ ತೃತೀಯ ಭಾಷೆ ಹಾಗೂ ಏಪ್ರಿಲ್ 2ರ ಶನಿವಾರ ಬೆಳಿಗ್ಗೆ 10 ರಿಂದ 1.15ರ ವರೆಗೆ ಸಮಾಜ ವಿಜ್ಞಾನ ವಿಷಯದ ಪರೀಕ್ಷೆ ನಡೆಯಲಿದೆ.

ಜಿಲ್ಲೆಯಲ್ಲಿ ಒಟ್ಟು 48 ಪರೀಕ್ಷಾ ಪರೀಕ್ಷಾ ಕೇಂದ್ರಗಳನ್ನು ರಚಿಸಲಾಗಿದೆ. ಅವುಗಳಲ್ಲಿ ಚನ್ನಪಟ್ಟಣ-13, ಕನಕಪುರ-13, ಮಾಗಡಿ-9 ಮತ್ತು ರಾಮನಗರ-13 ಕೇಂದ್ರಗಳಾಗಿವೆ. ಪ್ರತಿ ಕೇಂದ್ರದಲ್ಲಿ ಯುಪಿಎಸ್ ಸೌಲಭ್ಯ ಕಲ್ಪಿಸಿಕೊಂಡಿರುವುದನ್ನು ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮತ್ತು ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಮತ್ತು ಶಾಲಾ ಮುಖ್ಯ ಶಿಕ್ಷಕರು ಖಾತ್ರಿಪಡಿಸುವಂತೆ ಈಗಾಗಲೇ ಸೂಚನೆ ನೀಡಲಾಗಿದೆ. ಜಿಲೆಯಲ್ಲಿ ಒಟ್ಟು 13,481 ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದು, ಅವರಲ್ಲಿ ಚನ್ನಪಟ್ಟಣ-3,299, ಕನಕಪುರ-4,139, ಮಾಗಡಿ-2,569 ಮತ್ತು ರಾಮನಗರ-3,474 ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದಾರೆ. ಜಿಲ್ಲೆಯ ಎಲ್ಲಾ ಶಾಲೆಗಳಲ್ಲಿ ಪ್ರಸ್ತುತ ವರ್ಷ ಪರೀಕ್ಷೆ ಬರೆಯುವ ಪ್ರತಿ ವಿದ್ಯಾರ್ಥಿಗೂ ತಾನು ಪರೀಕ್ಷೆ ಬರೆಯುವ ಕೇಂದ್ರದ ಬಗ್ಗೆ ಶಾಲಾ ಮುಖ್ಯ ಶಿಕ್ಷಕರು ಮತ್ತು ಸಹ ಶಿಕ್ಷಕರಿಂದ ಮಾಹಿತಿ ಒದಗಿಸಲಾಗಿದೆ.



### ಸಿಸಿಟಿವಿ ಅಳವಡಿಕೆ

**ಜಿಲ್ಲೆಯ ಎಲ್ಲಾ ಪರೀಕ್ಷಾ ಕೇಂದ್ರಗಳ ಎಲ್ಲಾ ಕೊಠಡಿಗಳಲ್ಲಿ ಸಿಸಿಟಿವಿ ಅಳವಡಿಸಿದ್ದು, ಪ್ರತೀ ಪರೀಕ್ಷಾ ಕೇಂದ್ರದ ಸಿಸಿಟಿವಿ ವೀಕ್ಷಣೆಗೆ ಜಿಲ್ಲಾ ಪಂಚಾಯತ್ ಭವನದಲ್ಲಿ ನಿಯಂತ್ರಣ ಕೊಠಡಿ ಮೂಲಕ ವೆಬ್ ಕ್ಯಾಸ್ಟಿಂಗ್ ವೀಕ್ಷಣೆಗೆ ವ್ಯವಸ್ಥೆ ಮಾಡಿಕೊಳ್ಳಲಾಗಿದೆ.**

ಪ್ರತೀ ಪರೀಕ್ಷಾ ಕೇಂದ್ರದಲ್ಲಿ ಉತ್ತಮ ಶೌಚಾಲಯ ವ್ಯವಸ್ಥೆ, ಪ್ರತಿ ಕೊಠಡಿಗೆ ಗಾಳಿ ಬೆಳಕಿನ ವ್ಯವಸ್ಥೆ, ಆಸನದ ವ್ಯವಸ್ಥೆ ಹಾಗೂ ಅಗತ್ಯವಾಗಿ ಇರಬೇಕಾದ ಮೂಲಭೂತ ಸೌಲಭ್ಯಗಳನ್ನು ಪರಿಶೀಲಿಸಿ ಖಚಿತ ಪಡಿಸಿಕೊಳ್ಳಲು ಜಿಲ್ಲಾ ಹಂತದಲ್ಲಿ ದ್ವಿ-ಸದಸ್ಯ ತಂಡವನ್ನು ರಚಿಸಲಾಗಿದೆ, ಆ ತಂಡಕ್ಕೆ ಚೆಕ್‌ಲಿಸ್ಟ್ ನೀಡಿದ್ದು, ಈ ತಂಡದವರು ಖುದ್ದು ಭೇಟಿ ನೀಡಿ ಮಾಹಿತಿ ಕ್ರೋಢೀಕರಿಸಿರುತ್ತಾರೆ ಮತ್ತು ಅಗತ್ಯ ಕ್ರಮ ವಹಿಸಿರುತ್ತಾರೆ. ಖಾಸಗಿ ಪರೀಕ್ಷಾ ಕೇಂದ್ರಗಳಿರುವುದಿಲ್ಲ ಮತ್ತು ಖಾಸಗಿ ನೋಂದಾಯಿತ ಅಭ್ಯರ್ಥಿಗಳು ಕೂಡ ಸಾಮಾನ್ಯ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಬರೆಯುತ್ತಿದ್ದಾರೆ, ಪರೀಕ್ಷಾ ಕೇಂದ್ರಗಳಲ್ಲಿ ಸೂಕ್ತ ಬಂದೋಬಸ್ತಿಗಾಗಿ ಇಬ್ಬರು ಪೋಲೀಸ್ ಸಿಬ್ಬಂದಿಯನ್ನು ನಿಯೋಜಿಲಾಗಿದೆ. ಪರೀಕ್ಷಾ ಕೇಂದ್ರದ 200 ಮೀಟರ್ ವ್ಯಾಪ್ತಿಯಲ್ಲಿ 144 ಸೆಕ್ಷನ್ ಜಾರಿಗೊಳಿಸಿ ಪರೀಕ್ಷಾ ಕೇಂದ್ರದ ಸುತ್ತ ಇರುವ ಜೆರಾಕ್ಸ್ ಅಂಗಡಿ ಮತ್ತು ಸೈಬರ್ ಕೇಂದ್ರಗಳನ್ನು ಮುಚ್ಚಲು ಜಿಲ್ಲಾಡಳಿತದಿಂದ ಆದೇಶಿಸಲಾಗಿದೆ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಎಸ್ಸೆಸ್ಸೆಲ್ಸಿ ಭವಿಷ್ಯದ ದಿಕ್ಕನ್ನು ನಿರ್ಧರಿಸುವ ಮಹತ್ವ ಘಟ್ಟ

**ಚನ್ನಪಟ್ಟಣ:** ಮಾರ್ಚ್ 18ರಿಂದ ಏಪ್ರಿಲ್ 2ರವರೆಗೆನಡೆಯಲಿರುವ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆ ಯನ್ನು ಗಮನದಲ್ಲಿಟ್ಟುಕೊಂಡು ತಾಲೂಕಿನ ನಾಗವಾರ ಸಾರ್ವಜನಿಕ ಪ್ರೌಢ ಶಾಲೆಯಲ್ಲಿ ನಾಗವಾರ ಗ್ರಾಮ ಪಂಚಾಯತಿ ಜಂಟಿ ಆಶ್ರಯದಲ್ಲಿ ವಿದ್ಯಾರ್ಥಿಗಳನ್ನು ಪ್ರೇರೇಪಿಸುವ ಉದ್ದೇಶದಿಂದ 'ಟಿವಿ, ಮೊಬೈಲ್ ಬಿಡಿ ಪುಸ್ತಕ ಹಿಡಿ' ಎಂಬ ವಿಶೇಷ ಜಾಗೃತಿ ಅಭಿಯಾನವನ್ನು ಹಮ್ಮಿಕೊಳ್ಳಲಾಗಿತ್ತು.

ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಪಿಡಿಒ ಲೀಲಾವತಿ ಅವರು ಮಾತನಾಡಿ, ಎಸ್‌ಎಸ್‌ಎಲ್‌ಸಿ ಪರೀಕ್ಷೆ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಪ್ರಮುಖ ಹಂತವಾಗಿದ್ದು, ಈ ಪರೀಕ್ಷೆಯಲ್ಲಿ ಗಳಿಸುವ ಫಲಿತಾಂಶವು ಅವರ ಮುಂದಿನ ವಿದ್ಯಾಭ್ಯಾಸ ಹಾಗೂ ಭವಿಷ್ಯದ ದಿಕ್ಕನ್ನು ನಿರ್ಧರಿಸುವ ಮಹತ್ವದ ಘಟ್ಟವಾಗಿದೆ. ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದ ನಂತರ ಸಿಗುವ ಅಂಕಪಟ್ಟಿ ಪ್ರತಿಯೊಬ್ಬರಜೀವನದಲ್ಲೂ ಮಹತ್ವದ ದಾಖಲೆಯಾಗುತ್ತದೆ. ಮುಂದಿನ ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆಯುವುದಲ್ಲದೆ, ವಿವಿಧ ಉದ್ಯೋಗಾವಕಾಶಗಳು ಮತ್ತು ಸರ್ಕಾರದ ಅನೇಕ ಸೌಲಭ್ಯಗಳನ್ನು ಪಡೆಯಲು ಸಹ ಎಸ್‌ಎಸ್‌ಎಲ್‌ಸಿ ಪ್ರಮಾಣಪತ್ರ ಅಗತ್ಯವಾಗಿರುವುದರಿಂದ ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ಪಡೆಯುವುದುಅತ್ಯಂತ ಮುಖ್ಯವಾಗಿದೆಎಂದು ಸಲಹೆ ನೀಡಿದರು. ಶಾಲೆ ಹಾಗೂ ಗ್ರಾಮದ ಹೆಮ್ಮೆ ಹೆಚ್ಚಿಸುವಂತೆ ವಿದ್ಯಾರ್ಥಿಗಳು ಶ್ರಮಿಸಬೇಕು ಎಂದು ಹೇಳಿದರು. ಅಭಿಯಾನದ ಭಾಗವಾಗಿ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸ ಹೆಚ್ಚಿಸುವ ಸಲಹೆಗಳು ನೀಡಲಾಗಿದ್ದು, ಮುಂಬರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿಉತ್ತಮ ಸಾಧನೆ ಮಾಡುವಂತೆ ಶುಭಾಶಯಗಳನ್ನು ಕೋರಲಾಯಿತು.



## ಪೊಲೀಸರ ವಿರುದ್ಧ ಸಿಡಿದೆದ್ದ ವಕೀಲರು: ಕಲಾಪ ಬಹಿಷ್ಕಾರ

**ಕನಕಪುರ:** ಸಾತನೂರು ಠಾಣೆಗೆ ಬಂದ ಯುವವಕೀಲನೊಂದಿಗೆ ಪೊಲೀಸರು ಅನುಚಿತವಾಗಿ ವರ್ತಿಸಿ ದೌರ್ಜನ್ಯ ಎಸಗಿದ ಆರೋಪದ ಮೇಲೆ ಪೊಲೀಸರ ವಿರುದ್ಧ ಕನಕಪುರ ತಾಲೂಕು ವಕೀಲರು ಸಿಡಿದೆದ್ದು ನ್ಯಾಯಾಲಯದ ಕಲಾಪ ಬಹಿಷ್ಕರಿಸಿ ಪ್ರತಿಭಟನೆ ನಡೆಸಿದರು.

ಶುಕ್ರವಾರ ಕನಕಪುರ ಜೆಎಂಎಫ್‌ಸಿ ನ್ಯಾಯಾಲಯದ ಆವರಣದಲ್ಲಿ ಜಮಾ ವಣೆಗೊಂಡ ವಕೀಲರು ದೂರುದಾರ ಯುವ ವಕೀಲ ಮಧುಸೂದನ್ ಮೇಲೆ ಸಾತನೂರು ಸಬ್ ಇನ್ಸ್‌ಪೆಕ್ಟರ್ ಸುಮಂತ್‌ಗೌಡ ಹಾಗೂ ಠಾಣಾ ಸಿಬ್ಬಂದಿ ಬಲರಾಮ್ ಅವಹೇಳನಕಾರಿಯಾಗಿ ಮಾತನಾಡಿ, ಸಾರ್ವಜನಿಕವಾಗಿ ನಿಂದಿಸಿದ ಆರೋಪದ ಮೇರೆಗೆ ವಕೀಲರು ತಪ್ಪಿತಸ್ಥರ ವಿರುದ್ಧ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸಭೆ ನಡೆಸಿಒತ್ತಾಯಿಸಿದರು. ಬಳಿಕನ್ಯಾಯಾಲಯದ ಕಲಾಪಗಳನ್ನು ಬಹಿಷ್ಕರಿಸಿ ಕೋರ್ಟ್ ಎದುರು ಕುಳಿತು ಪ್ರತಿಭಟನೆ ನಡೆಸಿದರು. ವಕೀಲರ ಸಂಘದ ಅಧ್ಯಕ್ಷ ಎ.ಸಿ.ಚನ್ನೇಗೌಡ ಹಾಗೂ ಪದಾಧಿಕಾರಿಗಳು ಮಾತನಾಡಿ, ಸಾತನೂರು ಠಾಣೆಗೆ ದೂರು ಕೊಡಲು ತೆರಳಿದ ದೂರುದಾರ ವಕೀಲ ಮಧುಸೂದನ್ ಮೇಲೆ ಪೊಲೀಸರು ಅನುಚಿತವಾಗಿ ವರ್ತಿಸುವುದು ಖಂಡನೀಯ, ಸ್ಥಳಕ್ಕೆ ಸರ್ಕಲ್ ಇನ್ಸ್‌ಪೆಕ್ಟರ್‌ಗಳಾದ ವಿಕಾಸ್‌ಗೌಡ ಹಾಗೂ ಅನಂತರಾಮ್ ಭೇಟಿ ನೀಡಿ ವಕೀಲರ ಮನವಿಯನ್ನ ಸ್ವೀಕರಿಸಿ, ಈ ಬಗ್ಗೆ ಪರಿಶೀಲನೆ ನಡೆಸುವುದಾಗಿ ಅವರನ್ನು ಸಮಾಧಾನ ಪಡಿಸಿದರು. ಈ ವೇಳೆ ವಕೀಲರು ತಪ್ಪಿತಸ್ಥರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳದಿದ್ದರೆ ಮುಂದೆ ನಮ್ಮ ಹೋರಾಟ ಅನಿವಾರ್ಯ ಎಂದು ಎಚ್ಚರಿಸಿದರು. ವಕೀಲರ ಸಂಘದ ಉಪಾಧ್ಯಕ್ಷ ಸಿದ್ಧಾರ್ಥ, ಕಾರ್ಯದರ್ಶಿ ನಾರಾಯಣ್, ಖಜಾಂಚಿ ಸಾಗರ್, ಹಿರಿಯ ವಕೀಲರುಗಳಾದ ನಂಜೇಗೌಡ, ಮಾದೇಗೌಡ, ಶಿವರಾಜು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



ಕನಕಪುರ ಪೊಲೀಸರು ಅನುಚಿತವಾಗಿ ವರ್ತಿಸಿದ್ದಾರೆಂದು ಆರೋಪಿಸಿ ವಕೀಲರು ನ್ಯಾಯಾಲಯದ ಕಲಾಪ ಬಹಿಷ್ಕರಿಸಿ ನ್ಯಾಯಾಲಯದ ಮುಂದೆ ಪ್ರತಿಭಟನೆ ನಡೆಸಿದರು.

## ಲೋಕ ಅದಾಲತ್ ಬಳಸಿಕೊಳ್ಳಲು ನ್ಯಾ.ಅಣ್ಣಯ್ಯ ಕರೆ

**ರಾಮನಗರ:** ಜಿಲ್ಲೆಯನ್ಯಾಯಾಲಯದಲ್ಲಿಬಾಕಿ ಇರುವ ಹಾಗೂ ರಾಜಿ ಆಗಬಹುದಾದ ಪ್ರಕರಣಗಳನ್ನು ಮಾ.14ರಂದು ನಡೆಯಲಿರುವ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಇತ್ಯರ್ಥಗೊಳಿಸಿಕೊಳ್ಳುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಅಧ್ಯಕ್ಷರಾದ ನ್ಯಾ.ಎಂ.ಎಚ್.ಅಣ್ಣಯ್ಯನವರ ಅವರು ಕರೆ ನೀಡಿದ್ದಾರೆ.

ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆಯಾದ್ಯಂತ ಮಾ. 14ರಂದು ರಾಷ್ಟ್ರೀಯ ಲೋಕ ಅದಾಲತ್ ಆಯೋಜಿಸಲಾಗಿದೆ. ಈ ಅದಾಲತ್‌ನಲ್ಲಿ ರಾಜಿ ಸಂಧಾನದ ಮೂಲಕ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಅವಕಾಶವಿದೆ. ಸಾರ್ವಜನಿಕರು ಇದರ ಲಾಭ ಪಡೆದುಕೊಳ್ಳಬಹುದಾಗಿದೆ ಎಂದವರು ತಿಳಿಸಿದ್ದಾರೆ.

ಜಿಲ್ಲೆಯಾದ್ಯಂತ ಏಕಕಾಲಕ್ಕೆ ಮಾ. 14 ರಂದು ನಡೆಯುವಲೋಕಅದಾಲತ್‌ಗಾಗಿಮಾ.13ರವರೆಗೆ ಪ್ರಕರಣಗಳನ್ನು ನೋಂದಣಿ ಮಾಡಿಕೊಳ್ಳಲಾಗಿದೆ. ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆ ಹಾಗೂ ಅಧೀನ ನ್ಯಾಯಾಲಯಗಳಲ್ಲಿ ಕಲಾಪ ನಡೆಯಲಿದೆ. ನ್ಯಾಯಾಲಯದ ಕಲಾಪಗಳಲ್ಲಿ ವಕೀಲರು ಭಾಗವಹಿಸಬಹುದು, ಅವಶ್ಯಕತೆ ಇದ್ದಲ್ಲಿ ಕಕ್ಷಿದಾರರನ್ನು ಆನ್‌ಲೈನ್ ಮೂಲಕ ಸಂಪರ್ಕಿಸಲಾಗುವುದು. ಜಿಲ್ಲೆಯಲ್ಲಿ ಒಟ್ಟು 57,682 ಪ್ರಕರಣಗಳು ಬಾಕಿ ಇದ್ದು, ಅವುಗಳ ಪೈಕಿ ರಾಜಿಯಾಗಬಹುದಾದ ಎಲ್ಲಾ ಪ್ರಕರಣಗಳನ್ನು ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ರಾಜಿ ಪ್ರಕರಣಗಳನ್ನಾಗಿ ಪರಿಗಣಿಸಿ ಕೈಗೆತ್ತಿಕೊಳ್ಳಲಾಗುತ್ತದೆ. ವಕೀಲರು ಖುದ್ದಾಗಿ ಹಾಗೂ ಆನ್‌ಲೈನ್ ಮೂಲಕ ಭಾಗವಹಿಸಲು ಅವಕಾಶ ಮಾಡಿಕೊಡಲಾಗಿದೆ. ಎಲ್ಲರಿಗೂ ನ್ಯಾಯ ದೊರಕಿಸಿ ಕೊಡುವ ಉದ್ದೇಶದಿಂದ ಲೋಕ ಅದಾಲತ್‌ಗೆ ಚಾಲನೆ ನೀಡಲಾಗಿದೆ.

ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆಗೆ ಸಂಬಂಧಿಸಿದ ಪ್ರಕರಣಗಳು ಮತ್ತು ವ್ಯಾಜ್ಯ ಪೂರ್ವ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ. ಆದ್ದರಿಂದ ಸಾರ್ವಜನಿಕರು ಅದಾಲತ್‌ನ ಸದುಪಯೋಗ ಪಡಿಸಿಕೊಳ್ಳುವಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಸವಿತಾ ಪಿ.ಆರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜಿಲ್ಲೆಯಲ್ಲಿ ಗೃಹಬಳಕೆ ಸಿಲಿಂಡರ್‌ಗಳಿಗೆ ಸಮಸ್ಯೆ ಇಲ್ಲ

**ರಾಮನಗರ:** ಪ್ರಸ್ತುತ ಕೊಲ್ಲಿ ರಾಷ್ಟ್ರ ಯುದ್ಧದ ಪರಿಣಾಮವಾಗಿ ಉದ್ಭವಿಸಿರುವ ಎಲ್‌ಪಿಜಿ ಸರಬರಾಜು ಬಗ್ಗೆ ಸಮರ್ಪಕವಾಗಿ ಪರಿಹಾರ ಕಂಡುಕೊಳ್ಳುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಅತ್ಯಂತ ಮಹತ್ವದ ಕ್ರಮಗಳನ್ನು ಕೈಗೊಂಡಿರುತ್ತದೆ.

ಜಿಲ್ಲಾಡಳಿತವು ತೈಲ ಕಂಪನಿಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಲಭ್ಯತೆ ಬಗ್ಗೆ ಮಾಹಿತಿ ಪಡೆದು ಸಮಸ್ಯೆ ಇಲ್ಲದ ಬಗ್ಗೆ ತೈಲ ಕಂಪನಿಯ ಅಧಿ ಕಾರಿಗಳಿಂದ ಖಾತ್ರಿಪಡಿಸಿಕೊಂಡಿದೆ.

ಜಿಲ್ಲೆಯಲ್ಲಿ ಒಟ್ಟು 3,24,161 ಗ್ರಾಹಕರಿದ್ದು, ಅದರಲ್ಲಿ ಐಒಸಿ 1,20,986, ಬಿಪಿಸಿ-97,842, ಎಚ್‌ಪಿಸಿ-1,05,331 ಗ್ರಾಹಕರಿದ್ದು, ದೇಶದಲ್ಲಿ ಪ್ರಸ್ತುತ ಲಭ್ಯವಿರುವ ದೇಶೀಯ ಎಲ್‌ಪಿಜಿ ದಾಸ್ತಾನು ಗೃಹ ಬಳಕೆ ಗ್ರಾಹಕರಿಗೆ ಅಗತ್ಯವಿರುವ ಬಗ್ಗೆ ಮಾಹಿತಿ ನೀಡಿದ್ದು, ಜಿಲ್ಲೆಯ ಎಲ್ಲಾ ಗ್ರಾಹಕರು ಎಲ್‌ಪಿಜಿ ಸರಬರಾಜಿನ ಬಗ್ಗೆ ಯಾವುದೇ ರೀತಿಯ ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ, ಗ್ರಾಹಕರು ಆತಂಕದಲ್ಲಿ ತುರ್ತು ಅನಗತ್ಯ ಬುಕ್ಕಿಂಗ್ ಮಾಡದೇ ಕೃತಕ ಬೇಡಿಕೆ ಸೃಷ್ಟಿಯಾಗದಂತೆ ಸಮರ್ಪಕವಾಗಿ ಬಳಕೆ ಮಾಡಲು ಸಮತೋಲನ ಕಾಪಾಡಿಕೊಳ್ಳುವಂತೆ ತಿಳಿಸಲಾಗಿದೆ.

ಒಂದು ವೇಳೆ ಯಾವುದೇ ಸಮಸ್ಯೆ ಕಂಡುಬಂದಲ್ಲಿ ತಾಲ್ಲೂಕು ಮಟ್ಟದಲ್ಲಿ ಆಯಾ ತಾಲೂಕಿನ ತಹಸೀಲ್ದಾರರಿಗೆ ಹಾಗೂ ಜಿಲ್ಲಾ ಮಟ್ಟದಲ್ಲಿ ಉಪನಿರ್ದೇಶಕರ ಕಚೇರಿಗೆ ಕಚೇರಿ ಸಮಯದಲ್ಲಿ ದೂರವಾಣಿ ಸಂಖ್ಯೆ: 080-27275148 ಮೂಲಕ ಕರೆ ಮಾಡಬಹುದಾಗಿದೆ. ಸಿಲಿಂಡರ್‌ಗಳನ್ನು ಅನಧಿಕೃತವಾಗಿ ಸಂಗ್ರಹಿಸಿ ಒಂದು ಸಿಲಿಂಡರ್ ನಿಂದ ಮತ್ತೊಂದು ಸಿಲಿಂಡರ್‌ಗೆ ವರ್ಗಾಯಿಸುವುದು ಲಿಕ್ವಿಫೈಯ್ಡ್ ಪೆಟ್ರೋಲಿಂ ಗ್ಯಾಸ್ (ರೆಗುಲೇಷನ್ ಆಫ್ ಸಪ್ಲೈ ಅಂಡ್ ಡಿಸ್ಟ್ರಿಬ್ಯೂಷನ್) ಆರ್ಡರ್ 2000 ರನ್ವಯ ಅಪರಾಧವಾಗಿರುತ್ತದೆ. ಸಿಲಿಂಡರ್‌ಗಳನ್ನು ಸಾಗಾಣಿಕೆ ಮಾಡುವ ವಾಹನಗಳು ಮತ್ತು ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸಲು ಅಡ್ಡಿಪಡಿಸುವಂತಹ ಪ್ರಕರಣಗಳು ಕಂಡುಬಂದಲ್ಲಿ ಕಾನೂನು ಪ್ರಕಾರ ಕ್ರಮ ಜರಗಿಸಲಾಗುತ್ತದೆ. ಸಾರ್ವಜನಿಕರು ದೂರವಾಣಿ ಸಂಖ್ಯೆಗೆ ಮಾಹಿತಿ ನೀಡುವಂತೆ ಜಿಲ್ಲಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

## ತಾಲೂಕು ತಹಸೀಲ್ದಾರ್ ಸರ್ವಾಧಿಕಾರಿ ಧೋರಣೆ ಕೊನೆಗೊಳ್ಳಲಿ: ಒತ್ತಾಯ

**ಹಾರೋಹಳ್ಳಿ:** ತಾಲೂಕು ತಹಸೀಲ್ದಾರ್ ಹರ್ಷವರ್ಧನ್ ಅಧಿಕಾರ ವಹಿಸಿಕೊಂಡಾಗಿನಿಂದ ಸರ್ವಾಧಿಕಾರಿಯಂತೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಈ ಧೋರಣೆ ಕೊನೆಗೊಳ್ಳಬೇಕಿದೆ ಎಂದು ಬಿಜೆಪಿ ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಹಾರೋಹಳ್ಳಿ ಚಂದ್ರು ಒತ್ತಾಯಿಸಿದ್ದಾರೆ.

ನಗರದಲ್ಲಿ ಪತ್ರಿಕಾ ಹೇಳಿಕೆ ನೀಡಿದ ಅವರು, ತಹಸೀಲ್ದಾರ್ ಒಬ್ಬ ಸರ್ವಾಧಿಕಾರಿ ಹಾಗೂ ತುಘಲಕ್ ಮಾದರಿ ಆಡಳಿತ ನಡೆಸುತ್ತಿದ್ದಾರೆ, ಈ ಹಿಂದೆ ಮೊಹಮ್ಮದ್ದ ಬಿನ್ ತುಘಲಕ್ ತನ್ನ ಆಡಳಿತದಲ್ಲಿ ನಡೆಸಲು ಹೊರಟ ಪ್ರಯೋಗಗಳನ್ನು ಹೇಗೆ ನಗೆಪಾಟಲಿಗೆಈಡಾಯಿತು ಎನ್ನುವಂತೆ ತಹಸೀಲ್ದಾರ್ ಹರ್ಷವರ್ಧನ್ ಕೆಲಸ ನಿರ್ವಹಿಸುತ್ತಿದ್ದಾರೆ. ಕಚೇರಿಗೆ ಬರುವ ರೈತರು ಹೋರಾಟಗಾರರ ಮೇಲೆ ಬಾಂಧವ್ಯ ಇಟ್ಟುಕೊಳ್ಳದೆ ಇವರು ಭೂಮಾಫಿಯಾಗಳ ಜೊತೆ ನಂಟು ಹೊಂದಿದ್ದು, ಭ್ರಷ್ಟರ ರಕ್ಷಣೆಯಲ್ಲಿ ತೊಡಗಿದ್ದಾರೆ. ತಾಲೂಕಿನ ಸಾರ್ವಜನಿಕರಿಗೆ ಅನುಕೂಲವಾಗಿದ್ದಂತಹ ತಾಲೂಕು ಕಚೇರಿಯನ್ನು ಬಾಡಿಗೆ ಕಟ್ಟಡಕ್ಕೆ ತರಾತುರಿಯಲ್ಲಿ ಸ್ಥಳಾಂತರಿಸಿದ್ದಾರೆ, ಇದಕ್ಕೆ ಪೂರಕವೆಂಬಂತೆ ಸರ್ಕಾರಿ ಜಾಗದಲ್ಲಿ ಸ್ವಂತ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿದ್ದರೂ ತರಾತುರಿಯಲ್ಲಿ ಖಾಸಗಿ ಕಟ್ಟಡಕ್ಕೆ ವರ್ಗಾಯಿಸಿರುವುದು ಸಾರ್ವಜನಿಕರ ಸಂಶಯಕ್ಕೆ ಎಡೆಮಾಡಿದೆ. ಕಚೇರಿಯ ಸ್ಥಳಾಂತರ ಮಾಡಲು ಸಾರ್ವಜನಿಕರ, ಸಂಘ ಸಂಸ್ಥೆಗಳ ಅಭಿಪ್ರಾಯವನ್ನು ಸಂಗ್ರಹಿಸದೆ ದುಬಾರಿ ವೆಚ್ಚದ ಕಟ್ಟಡಕ್ಕೆ ಕಚೇರಿಯನ್ನು ಸ್ಥಳಾಂತರಿಸಿ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿದ್ದಾರೆ. ವಾಹನ ನಿಲುಗಡೆ ಸೇರಿದಂತೆ ಅನೇಕ ಅನಾನುಕೂಲಗಳಿಂದ ಕೂಡಿರುವ ಇಂತಹ ಕಟ್ಟಡ ಬೇಕಿಲ್ಲದಿದ್ದರೂ ಅವರ ಸ್ವಾರ್ಥಕ್ಕಾಗಿ ಮನ ಬಂದಂತೆ ಅಧಿಕಾರ ನಡೆಸುತ್ತಿದ್ದಾರೆ.



ಇದಲ್ಲದೆ ತಹಸೀಲ್ದಾರ್‌ರವರು ಅಧಿಕಾರ ವಹಿಸಿಕೊಂಡ ನಂತರ ಅಕ್ರಮ ಭೂದಾಖಲೆಗಳನ್ನು ಸೃಷ್ಟಿಸಿ ಬೆಲೆಬಾಳುವ ಸರ್ಕಾರಿ ಜಾಗವನ್ನು ಭೂ ಮಾಫಿಯಾ ಮಾಲೀಕರಿಗೆ ಪರಭಾರೆ ಮಾಡಿ ಪ್ರಕರಣ ತನಿಖೆ ಹಂತದಲ್ಲಿ ಮೇಲ್ನೋಟಕ್ಕೆ ಇವರ ಭ್ರಷ್ಟಾಚಾರ ಕಂಡು ಬಂದಿದೆ.

ಆದರೂ ಇವರು ತಮ್ಮ ಆಡಳಿತದಲ್ಲಿ ನಿರ್ಲಕ್ಷ್ಯ, ಅಸಡ್ಡೆ ತೋರುತ್ತಾ ಸಾರ್ವಜನಿಕರ ಹಿತ ಕಾಪಾಡುವಲ್ಲಿ ವಿಫಲರಾಗಿದ್ದಾರೆ. ಕೂಡಲೇ ಇವರ ಮೇಲಿರುವ ಆರೋಪಗಳನ್ನು ತನಿಖೆ ಮಾಡಿ ಕಾನೂನು ಕ್ರಮ ಕೈಗೊಳ್ಳಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿದರು.

## ಗ್ರಾಮೀಣ ಮಕ್ಕಳ ಕಲಿಕೆಗೆ ನೆರವು



**ಮಾಗಡಿ:** ಗ್ರಾಮೀಣ ಭಾಗದ ವಿದ್ಯಾಭ್ಯಾಸಕ್ಕೆ ತಮ್ಮ ಸಂಪಾದನೆಯ ಒಂದಿಷ್ಟು ದುಡಿಮೆಯನ್ನು ಮೀಸಲಿರಿಸಿದ್ದೇವೆ ಎಂದು ತೇಜಸ್ವಿನಿ ರಮೇಶ್ ತಿಳಿಸಿದರು. ತಾಲೂಕಿನ ಬಿಳಿಗುಂಬ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಹರ್ತಿ ಗ್ರಾಮದ ಸರಕಾರಿ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ ವಿತರಣೆ ಮಾಡಿ ಮಾತನಾಡಿದ ಅವರು, ಹಿಂದೆ ನಾಮ್ಮ ವಿದ್ಯಾದಿಸೆಯಲ್ಲಿ ಓದುವ ಆಸಕ್ತಿಯಿದ್ದರೂ ಸಹ ಮನೆಯ ಬಡತನ ನಮ್ಮ ಓದಿಗೆ ಪೂರಕವಾಗಿ ಪರಿಕರಗಳನ್ನು ಪೂರೈಸಲು ಪೋಷಕರಿಗೆ ತೊಂದರೆಯಾಗುತ್ತಿತ್ತು.

ಮಕ್ಕಳ ವಿದ್ಯಾಭ್ಯಾಸಕ್ಕೆ ನಮ್ಮ ಸಂಪಾದನೆಯ ಒಂದಿಷ್ಟು ಹಣವನ್ನು ವ್ಯಯಿಸಿ ಅವರ ವಿದ್ಯಾಭ್ಯಾಸಕ್ಕೆ ನೆರವಾಗಬೇಕೆಂದು ಚರ್ಚಿಸಿ, ಮಕ್ಕಳ ಕಲಿಕೆಗೆ ಯಾವ ರೀತಿಯಲ್ಲಿಯೂ ತೊಂದರೆಯಾಗಬಾರದೆಂಬ ಸದುದ್ದೇಶದಿಂದ ಇಂದು ತಗ್ಗೀಕುಪ್ಪೆ ಮತ್ತು ಬಿಳಿಗುಂಬ ಗ್ರಾಪಂ ವ್ಯಾಪ್ತಿಯ ಎಲ್ಲಾ ಸರಕಾರಿ ಮತ್ತು ಅನುದಾನಿತ ಶಾಲೆಗಳ ಮಕ್ಕಳಿಗೆ ನೋಟ್ ಪುಸ್ತಕ ವಿತರಣೆ ಮಾಡಲಾಗುತ್ತಿದ್ದು, ಮಕ್ಕಳು ಇದರ ಸದುಪಯೋಗ ಪಡಿಸಿಕೊಂಡು ವಿದ್ಯಾಭ್ಯಾಸದಲ್ಲಿ ಇನ್ನು ಹೆಚ್ಚು ಆಸಕ್ತಿ ತೋರಬೇಕು ಎಂದು ತಿಳಿಸಿದರು.

ಶಾಲೆಯ ಮುಖ್ಯ ಶಿಕ್ಷಕ ಶ್ರೀನಿವಾಸ್ ಮಾತನಾಡಿ ನೆರವು ಪಡೆದ ಮಕ್ಕಳು ಮುಂದೆ ಪ್ರಜೆಗಳಾಗಿ ಅವರು ಇಂತಹ ಕಾರ್ಯಕ್ರಮಗಳಲ್ಲಿ ಆಸಕ್ತಿ ತೋರುತ್ತಾರೆ ಎಂದು ಆಶಯ ತಿಳಿಸಿದರು. ಖಜಾನೆ ರಾಮು, ಗ್ರಾಪಂ ಸದಸ್ಯ ಹೊನ್ನಶಾಮಯ್ಯ, ಶಾಲಾ ಶಿಕ್ಷಕರು ಮತ್ತು ಗ್ರಾಮಸ್ಥರು ಮಕ್ಕಳು ಇದ್ದರು.

## ಕಿರುಸುದ್ದಿ

### ವಿದ್ಯಾರ್ಥಿನಿಲಯಕ್ಕೆ ಬಾಡಿಗೆ ಕಟ್ಟಡಕ್ಕಾಗಿ ಅರ್ಜಿ ಆಹ್ವಾನ

**ಕೋಲಾರ:** ನಗರದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿನಿಲಯ (ಎಚ್.ಐ.ಸಿ-789) ಉನ್ನತೀಕರಣ ಸಂತೇಗೇಟ್, ಕೋಲಾರದ ವಿದ್ಯಾರ್ಥಿನಿಲಯಗಳಿಗೆ 12 ಶೌಚಾಲಯಗಳು, 12 ಸ್ನಾನದ ಗೃಹಗಳು, ಅಡುಗೆ ತಯಾರಿಸುವ ಕೋಣೆ, ಊಟದ ಕೋಣೆ ಹಾಗೂ ವಿದ್ಯಾರ್ಥಿಗಳ ವಾಸಕ್ಕೆ 25 ಕೊಠಡಿಗಳನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಕಟ್ಟಡಗಳನ್ನು ಒದಗಿಸುವ ಸಲುವಾಗಿ ಇಚ್ಛೆ ಉಳ್ಳವರು ಅರ್ಜಿ ಸಲ್ಲಿಸಬೇಕಾಗಿ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

### ಮಾ.19ರಿಂದ ವಾನರಾಶಿ ಈರಲಪ್ಪ ಜಾತ್ರಾ ಮಹೋತ್ಸವ

**ಕೋಲಾರ:** ತಾಲೂಕಿನ ವಾನರಾಶಿಯ ಶ್ರೀ ಈರಲಪ್ಪಸ್ವಾಮಿ ಜಾತ್ರಾ ಮಹೋತ್ಸವವು ಮಾ.19ರ ಗುರುವಾರದಿಂದ 27 ರವರೆಗೆ ನಡೆಯಲಿದ್ದು, ಮಾ.24ರ ಸೋಮವಾರದಂದು ಬ್ರಹ್ಮರಥೋತ್ಸವವು ನಡೆಯಲಿದೆ. ಮಾ.19ರ ಗುರುವಾರ ಸಂಜೆ ಶ್ರೀ ಈರಲಪ್ಪಸ್ವಾಮಿಗೆ ಪಾನಕ ಪೂಜೆಯೊಂದಿಗೆ ಜಾತ್ರೆ ಆರಂಭವಾಗಲಿದೆ. ಮಾ.21 ರ ಶನಿವಾರದಂದು ಶ್ರೀಕೋದಂಡಸ್ವಾಮಿ ಭಕ್ತ ವೃಂದದವರಿಂದ ಭಜನೆ ನಡೆಯಲಿದೆ. ಮಾ.22ರ ಭಾನುವಾರ ಶ್ರೀವೀರಳಪ್ಪಸ್ವಾಮಿ, ಶ್ರೀಅಷ್ಟಮೂರ್ತೆಮ್ಮ, ಶ್ರೀಪ್ಲೇಗಮ್ಮ ದೇವರುಗಳಿಗೆ ದೀಪೋತ್ಸವ ನಡೆಯಲಿದೆ. ಮಾ.23ರ ಸೋಮವಾರ ಬೆಳಗ್ಗೆ 10 ಗಂಟೆಗೆ ಬ್ರಹ್ಮರಥದ ಕಳಸ ಪೂಜೆ, ರಥಕ್ಕೆ ಕಳಸ ಸ್ಥಾಪನೆ, ಬ್ರಹ್ಮರಥ ಸಿದ್ಧತೆ ಹಾಗೂ ಮೂಲ ದೇವರಿಗೆ ವಜ್ರಾಂಗಿ ತೊಡಿಗೆ, ಮಧ್ಯಾಹ್ನ 2 ಗಂಟೆಗೆ ಬ್ರಹ್ಮರಥೋತ್ಸವ ನಡೆಯಲಿದೆ. ಈ ವೇಳೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ವೀರಗಾಸೆ, ಡೊಳ್ಳು ಕುಣಿತ, ತಮಟೆ ವಾದನ, ಕೋಲಾಟ ಕಾರ್ಯಕ್ರಮಗಳು ನೆರವೇರಲಿವೆ. ಅಲ್ಲದೆ ರಾತ್ರಿ ವಾನರಾಶಿ ಹಾಲು ಉತ್ಪಾದಕರ ಸಹಕಾರ ಸಂಘದಿಂದ ಉತ್ತಮ ರಾಸುಗಳಿಗೆ ಬಹುಮಾನಗಳನ್ನು ವಿತರಿಸಲಾಗುತ್ತದೆ. ಮಾ.24ರ ಮಂಗಳವಾರ ರಾತ್ರಿ 7 ಗಂಟೆಗೆ ಪುಷ್ಪ ಪಲ್ಲಕ್ಕಿ ಉತ್ಸವ ಮತ್ತು ತುಮಕೂರಿನ ಪ್ರಿಯಾಂಕ ಮೆಲೋಡೀಸ್ ತಂಡದಿಂದ ಆರ್ಕೆಸ್ಟ್ರಾ ನಡೆಯಲಿದೆ. ಮಾ.25ರ ಬುಧವಾರ ರಾತ್ರಿ 9 ಗಂಟೆಗೆ ಶ್ರೀ ಯೋಗಿನಾರೇಯಣ ಸಂಕೀರ್ತನಾ ಯೋಜನೆ ವತಿಯಿಂದ ನಾಮ ಸಂಕೀರ್ತನೆ ನಡೆಯಲಿದೆ. ಮಾ.26ರ ಗುರುವಾರ ಬೆಳಗ್ಗೆ 9 ಗಂಟೆಗೆ ಶ್ರೀರಾಮನವಮಿ ಹಬ್ಬದ ಪ್ರಯುಕ್ತ ಶ್ರೀರಾಮ ಕೋಟಿ ನಡೆಯಲಿದೆ. ಮಾ.27ರ ಶುಕ್ರವಾರ ಬೆಳಗ್ಗೆ 10 ಗಂಟೆಗೆ ಶ್ರೀರಾಮ ಕೋಟಿ ಮುಕ್ತಾಯ, ಮಹಾ ಮಂಗಳಾರತಿ, ಅಭಯ ಆಂಜನೇಯಸ್ವಾಮಿ ಟ್ರಸ್ಟ್ ವತಿಯಿಂದ ಅನ್ನದಾನ ಹಾಗೂ ರಾತ್ರಿ 7 ಗಂಟೆಗೆ ಶ್ರೀಕೋದಂಡರಾಮಸ್ವಾಮಿ ಪುಷ್ಪ ಪಲ್ಲಕ್ಕಿ, ವಿದ್ಯುತ್ ದೀಪಾಲಂಕಾರ ನಡೆಯಲಿದೆ.

### 'ಕರುನಾಡ ಪದ್ಮಶ್ರೀ' ಪ್ರಶಸ್ತಿ ಪ್ರದಾನ



**ಕೋಲಾರ:** ಗೋವಾದಲ್ಲಿ ಕರ್ಮಭೂಮಿ ಕನ್ನಡ ಸಂಘ ಬಿಚೋಲಿಯಂ ಗೋವಾ ಕನ್ನಡಿಗರ ಸಾಂಸ್ಕೃತಿಕ ಸಮ್ಮೇಳನದ ಅಂಗವಾಗಿ ಕನ್ನಡ ನಾಡಿನ ವೀರಗಾಸೆ ಹಾಗೂ ಭದ್ರಕಾಳಿಯ ಯುವ ಪ್ರತಿಭೆ ಕೋಲಾರ ತಾಲೂಕಿನ ಬೆಳಮಾರನಹಳ್ಳಿ ವಿಶ್ವನಾಥ್‌ರಿಗೆ 'ಕರುನಾಡ ಪದ್ಮ ಶ್ರೀ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಗೋವಾದ ನಿವಾಸಿ ಕನ್ನಡಿಗರು ಜಾನಪದ ಕಲೆಗಳಲ್ಲಿ ಪರಿಣಿತರಾದವರನ್ನು ಗುರುತಿಸಿ ಗೌರವಿಸುವ ಪರಿಪಾಠವನ್ನು ಸತತ ಕಲಾ ಜ್ಯೋತಿ ಟೀಮ್‌ನಲ್ಲಿ ಐದು ವರ್ಷಗಳ ಕಾಲದಿಂದಲೂ ವೀರಗಾಸೆ ಭದ್ರಕಾಳಿ ಕುಣಿತವನ್ನು ನಡೆದುಕೊಂಡು ಬಂದಂತದ್ದು ಅದರಲ್ಲೂ ಕನ್ನಡ ನಾಡಿನ ಜಾನಪದ 2 ಕಲಾವಿದರನ್ನು ಗುರುತಿಸಿ ಗೌರವಿಸಿರುವುದು ಬಹಳ ಸಂತೋಷ ಹಾಗೂ ಸಂಸ್ಕೃತಿಗೆ ಸಿಕ್ಕ ಬೆಲೆಯಾಗಿದೆ. ಮಾಜಿ ಸಭಾಪತಿ ವಿ.ಆರ್ ಸುದರ್ಶನ್, ಸೊಸೈಟಿ ಅಧ್ಯಕ್ಷರಾದ ಶೆಟ್ಟಹಳ್ಳಿ ನಾಗೇಶ್, ಅಮರೇಂದ್ರ, ರೈತ ಮುಖಂಡ ರಾಮುಶಿವಣ್ಣ, ಮೇಡಿಹಾಳ ಮುನಿಆಂಜಿನಪ್ಪ, ಎಂಐಸಿಟಿ ಮಂಜುನಾಥ್, ಪಪಂ ಸದಸ್ಯೆ ದೀಪಾ ವೆಂಕಟೇಶ್, ಮಂಜುಳ ಮುನಿರಾಜು, ರವಿಚಂದ್ರ, ಲೋಕೇಶ್ ಮರಿಯಪ್ಪ, ಸೇರಿದಂತೆ ಹಲವಾರು ಜಾನಪದ ಕಲಾ ತಂಡದವರು ಅಭಿನಂದಿಸಿದ್ದಾರೆ.



ಅಂಬೇಡ್ಕರ್ ಪುತ್ಥಳಿ ಬಳಿ ತಾಲೂಕು ಮಟ್ಟದ ಭೋವಿ ತಾಲೂಕು ಸಂಘದ ಅಧ್ಯಕ್ಷರ ಹಾಗೂ ಭೋವಿ ಯುವ ವೇದಿಕೆ ಅಧ್ಯಕ್ಷರ ಅವಿರೋಧ ಆಯ್ಕೆ ಪ್ರಕ್ರಿಯೆ ನಡೆಯಿತು.

## ಭೋವಿ ಸಮಾಜ ಬಲಗೊಳ್ಳಲಿ

**ಬಂಗಾರಪೇಟೆ:** ಭೋವಿ ಸಮಾಜವನ್ನು ಬಲಪಡಿಸಬೇಕು, ರಾಜಕೀಯವಾಗಿ ಆರ್ಥಿಕವಾಗಿ ಶೈಕ್ಷಣಿಕವಾಗಿ ಬೆಳೆಯಬೇಕಾಗಿದೆ, ಎಲ್ಲಾ ಸಮುದಾಯದವರೊಂದಿಗೆ ಸೇರಿ ಸಮಾಜವನ್ನು ಗಟ್ಟಿ ಮಾಡೋಣ ಎಂದು ಜಿಲ್ಲಾ ಭೋವಿ ಸಂಘದ ಅಧ್ಯಕ್ಷ ಸಿ.ವಿ.ಗೋಪಾಲ್ ಹೇಳಿದರು.

ಪಟ್ಟಣದ ಅಂಬೇಡ್ಕರ್ ಪುತ್ಥಳಿ ಬಳಿ ತಾಲೂಕು ಮಟ್ಟದ ಭೋವಿ ತಾಲೂಕು ಸಂಘದ ಅಧ್ಯಕ್ಷರ ಹಾಗೂ ಭೋವಿ ಯುವ ವೇದಿಕೆ ಅಧ್ಯಕ್ಷರ ಅವಿರೋಧ ಆಯ್ಕೆ ಮಾಡಿ ಮಾತನಾಡಿದ ಅವರು ನಮ್ಮ ಸಮಾಜವು ಒಳ ಮೀಸಲಾತಿಯಲ್ಲಿ ಆಯೋಗವು ತಪ್ಪು ಮಾಡಿದ್ದು, ನಮ್ಮ ಸಮಾಜದ ಮಕ್ಕಳಿಗೆ ವಿದ್ಯಾಭ್ಯಾಸದಲ್ಲಿ ಹಾಗೂ ರಾಜಕೀಯದಲ್ಲಿ ಅನ್ಯಾಯವಾಗಿದೆ, ಈ ಬಗ್ಗೆ ಸಂಸದರಾದ ಎಂ.ಮಲ್ಲೇಶ್ ಬಾಬು ರವರು ಸಹ ಈ ಬಗ್ಗೆ ಧ್ವನಿ ಎತ್ತಿದ್ದಾರೆ, ಆದ್ದರಿಂದ ಸಮಾಜವು ಒಗ್ಗಟ್ಟಾಗಿ ಹೋರಾಟ ಮಾಡಿದಾಗ ನಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಬಹುದೆಂದರು.

ತಾಲೂಕು ಭೋವಿ ಸಂಘದ ಅಧ್ಯಕ್ಷರಾಗಿ ಕೆ.ಜಿ.ಮಂಜುನಾಥ್, ಗೌರವಾಧ್ಯಕ್ಷರಾಗಿ ಗಾಜ ಗ ಕೃಷ್ಣಪ್ಪ, ಭೋವಿ ಯುವ ವೇದಿಕೆ ಅಧ್ಯಕ್ಷರಾಗಿ ನಾರಾಯಣಸ್ವಾಮಿ, ಗೌರವಾಧ್ಯಕ್ಷರಾಗಿ ಮೋಹನ್ ಬಾಬು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಪ್ರಕಟಿಸಿದರು, ಸಂಘದ ಗೌರವಾಧ್ಯಕ್ಷ ಜೆಸಿಬಿ ನಾರಾಯಣಪ್ಪ, ಮುಖಂಡರುಗಳಾದ ನಾರಾಯಣ್. ಪುರಸಭಾ ಮಾಜಿ ಅಧ್ಯಕ್ಷರಾದ ಗೋವಿಂದ, ವಿಕ್ಕಿ, ರವಿ ಮೊದಲಾದವರಿದ್ದರು.



ಕೋಲಾರ ತಾಲೂಕಿನ ಸುಗಟೂರಿನ ಅಂತರಾಷ್ಟ್ರೀಯ ಜಾನಪದ ಕಲಾವಿದ ಗೋ.ನಾ ಸ್ವಾಮಿ ನೇತೃತ್ವದಲ್ಲಿ ಬ್ಯಾಂಕಾಕ್ ನ ಶಾರದಾ ಯೂನಿವರ್ಸಿಟಿಯಲ್ಲಿ ಯುಗಾದಿ ವಸಂತೋತ್ಸವ ಕಾರ್ಯಕ್ರಮ ನಡೆಯಿತು.

## ಬೀದಿನಾಯಿಗಳ ಹಾವಳಿ ತಡೆಗೆ ಡಿಸಿ ಗಡುವು: ಡಾ.ರವಿ ಎಚ್ಚರಿಕೆ

# ಕರ್ತವ್ಯಲೋಪ ಮಾಡದಿರಿ

**ಕೋಲಾರ:** ಜಿಲ್ಲೆಯಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಬಿದಿನಾಯಿಗಳ ಹಾವಳಿಯನ್ನು ನಿಯಂತ್ರಿಸಲು ಹಮ್ಮಿಕೊಂಡಿರುವ ಯೋಜನೆಗಳ ಅನುಷ್ಠಾನದಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿರುವ ಅಧಿಕಾರಿಗಳ ವಿರುದ್ಧ ಜಿಲ್ಲಾಧಿಕಾರಿಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಬೀದಿನಾಯಿಗಳಿಗೆ ಸಂತಾನಶಕ್ತಿ ಹರಣ ಚಿಕಿತ್ಸೆ ಮತ್ತು ರೇಬಿಸ್ ವಿರೋಧಿ ಲಸಿಕೆ ಹಾಕುವ ಪ್ರಕ್ರಿಯೆಯನ್ನು ತೀವ್ರಗತಿಯಲ್ಲಿ ಕೈಗೊಳ್ಳುವಂತೆ ಸೂಚಿಸಿದರು.

ಜಿಲ್ಲೆಯ ವಿವಿಧ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಗುರುತಿಸಲಾದ ನಾಯಿಗಳ ಸಂಖ್ಯೆ ಮತ್ತು ಕೈಗೊಳ್ಳಲಾದ ಕ್ರಮಗಳ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡದ ನೋಡಲ್ ಅಧಿಕಾರಿಗಳನ್ನು ಜಿಲ್ಲಾಧಿಕಾರಿಗಳು ತರಾಟೆಗೆತೆಗೆದುಕೊಂಡರು. ಮಾಹಿತಿ ನೀಡುವಲ್ಲಿ ಬೇಜವಾಬ್ದಾರಿತನ ಪ್ರದರ್ಶಿಸುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸುವುದಾಗಿ ಎಚ್ಚರಿಸಿದರು.

ಶಸ್ತ್ರಚಿಕಿತ್ಸೆಯ ನಂತರ ನಾಯಿಗಳ ಆರೈಕೆ ಮಾಡಲು ಪ್ರತ್ಯೇಕ ಶೆಲ್ಟರ್‌ಗಳ ವ್ಯವಸ್ಥೆ ಮಾಡಬೇಕು. ಕನಿಷ್ಠ 20 ರಿಂದ 30 ನಾಯಿಗಳನ್ನು ಇರಿಸಿಕೊಳ್ಳುವಂತಹ ವ್ಯವಸ್ಥಿತ ಕೆನಲ್‌ಗಳನ್ನು ನಿರ್ಮಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು. ಸಾರ್ವಜನಿಕರಿಗೆ ತೊಂದರೆಯಾಗದಂತೆ ನಾಯಿಗಳಿಗೆ ಆಹಾರ ನೀಡಲು 'ಫೀಡಿಂಗ್ ಜೋನ್'ಗಳನ್ನು ಗುರುತಿಸಬೇಕು. ಈ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ನಾಮಫಲಕಗಳನ್ನು ಅಳವಡಿಸಲು ಸೂಚಿಸಲಾಯಿತು.



### ಸಿಬ್ಬಂದಿ ನೇಮಕಕ್ಕೆ ಚರ್ಚೆ

ಸಂತಾನಶಕ್ತಿ ಹರಣ ಚಿಕಿತ್ಸೆ ನೀಡಲು ಅಗತ್ಯವಿರುವ ಮೂಲಭೂತ ಸೌಕರ್ಯಗಳು, ಶಸ್ತ್ರಚಿಕಿತ್ಸಾ ಕೊಠಡಿ ಮತ್ತು ಸಿಬ್ಬಂದಿಗಳ ನೇಮಕಾತಿಯ ಬಗ್ಗೆ ಚರ್ಚಿಸಲಾಯಿತು. ಕೆಜಿಎಫ್, ಮುಳಬಾಗಿಲು ಮತ್ತು ಕೋಲಾರ ಭಾಗಗಳಲ್ಲಿ ಶೀಘ್ರವೇ ಚಿಕಿತ್ಸಾ ಪ್ರಕ್ರಿಯೆ ಆರಂಭಿಸಲು ಟೆಂಡರ್ ಪಡೆದ ಸಂಸ್ಥೆಗಳಿಗೆ ಸೂಚನೆ ನೀಡಲಾಯಿತು.

ಮಾಲೂರು ಮತ್ತು ಬಂಗಾರಪೇಟೆ ಭಾಗಗಳಲ್ಲಿ ಈ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಶಸ್ತ್ರಚಿಕಿತ್ಸೆ ನಡೆಸಲು ತಜ್ಞ ಪಶುವೈದ್ಯರ ಕೊರತೆಯಿರುವುದು ಗಮನಕ್ಕೆ ಬಂದಿದ್ದು, ನಿವೃತ್ತ ವೈದ್ಯರನ್ನು ಅಥವಾ ಹೊರಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು ನೇಮಿಸಿಕೊಂಡು ಕೆಲಸ ಆರಂಭಿಸುವಂತೆ ಸಲಹೆ ನೀಡಿದರು. ಜಿಲ್ಲೆಯಲ್ಲಿ ಜನಸಾಮಾನ್ಯರು, ಅದರಲ್ಲೂ ವಿಶೇಷವಾಗಿ ಮಕ್ಕಳು ನಾಯಿಗಳ ದಾಳಿಗೆ

**» ಶಸ್ತ್ರಚಿಕಿತ್ಸೆಯ ನಂತರ ನಾಯಿಗಳ ಆರೈಕೆ ಮಾಡಲು ಪ್ರತ್ಯೇಕ ಶೆಲ್ಟರ್‌ಗಳ ವ್ಯವಸ್ಥೆ ಮಾಡಲಿ.**

ಒಳಗಾಗುತ್ತಿರುವುದು ಗಂಭೀರ ವಿಚಾರ. ಹಸಿವಿನಿಂದ ನಾಯಿಗಳು ಉಗ್ರವಾಗದಂತೆ ನೋಡಿಕೊಳ್ಳುವುದು ಮತ್ತು ಅವುಗಳ ಸಂತತಿ ನಿಯಂತ್ರಿಸುವುದು ನಮ್ಮ ಆದ್ಯತೆಯಾಗಬೇಕು. ಇದರಲ್ಲಿ ಯಾವುದೇ ರೀತಿಯ ನಿರ್ಲಕ್ಷ್ಯವನ್ನು ಸಹಿಸುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಟಿ.ಕೆ. ರಮೇಶ್, ಉಪವಿಭಾಗಾಧಿಕಾರಿ ಜಂಬಗಿ ರೇಣುಕಾಪ್ರಸಾದ್ ದಿಲೀಪ್, ನಗರ ಯೋಜನೆ ಯೋಜನಾ ನಿರ್ದೇಶಕಿ ಅಂಬಿಕಾ, ತೋಟಗಾರಿಕೆ ಉಪನಿರ್ದೇಶಕ ಕುಮಾರಸ್ವಾಮಿ, ಆಹಾರ ಇಲಾಖೆಯ ಉಪನಿರ್ದೇಶಕ ಮಲ್ಲಿಕಾರ್ಜುನ್, ಎಲ್ಲಾ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಫ್ರೀಡಂಪಾರ್ಕಿನಲ್ಲಿ ದಲಿತ ಒಕ್ಕೂಟದಿಂದ ಪ್ರತಿಭಟನೆ

**ಕೋಲಾರ:** ಕರ್ತವ್ಯ ನಿರ್ಲಕ್ಷ ತೋರಿರುವ ನಿಕಟ ಪೂರ್ವ ಸಹಾಯಕ ಕಮೀಷನರ್ ಡಾ. ಮೈತ್ರಿ ಅವರ ಆಡಳಿತಾವಧಿಯಲ್ಲಿ ಅವಧಿಯಲ್ಲಿ ನಡೆದಿರುವ ಲೋಪ ದೋಷಗಳ ವಿರುದ್ಧ ತನಿಖೆ ನಡೆಸಿ ಕಂದಾಯ ಇಲಾಖೆಯಿಂದ ಬಿಡುಗಡೆಗೊಳಿಸಿ ಮಾತೃ ಇಲಾಖೆಗೆ ವರ್ಗಾಯಿಸಬೇಕೆಂದು ಒತ್ತಾಯಿಸಿ ಕರ್ನಾಟಕ ದಲಿತ ಸಂಘಟನೆಗಳ ಮಹಾ ಒಕ್ಕೂಟದ ಜಿಲ್ಲಾ ಘಟಕವು ಮಾ.30 ರಂದು ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಪ್ರತಿಭಟನೆ ಹಮ್ಮಿಕೊಂಡಿದೆ ಎಂದು ಸಂಘಟನೆಯ ಜಿಲ್ಲಾಧ್ಯಕ್ಷ ಹೂಹಳ್ಳಿ ಪ್ರಕಾಶ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿನ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ ಕೋಲಾರದ ಉಪವಿಭಾಗದಲ್ಲಿ ಸಹಾಯಕ ಕಮೀಷನರ್ ಆಗಿದ್ದ ಡಾ. ಮೈತ್ರಿ ಅವರು ತಮ್ಮ ಅಧಿಕಾರಾವಧಿಯಲ್ಲಿ ಸಾಲು ಸಾಲು ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವುದು ಒಂದೊಂದಾಗಿ ಬೆಳಕಿಗೆ ಬರುತ್ತಿರುವುದು ಕಳವಳಕಾರಿಯಾಗಿದೆ. ಎಲ್.ಎನ್.ಡಿ.ಆರ್.ಯು. ಅಡಿಯಲ್ಲಿ ಮಾಲೂರಿನ ಚನ್ನಿಗರಾಯಪುರ ಸರ್ವೆ ಸಂಖ್ಯೆ 6 ರಲ್ಲಿನ ಬೆಲೆ ಬಾಳುವ

**» ನಿಕಟಪೂರ್ವ ವಿಭಾಗಾಧಿಕಾರಿ ಮಾತೃ ಇಲಾಖೆಗೆ ವರ್ಗಾಯಿಸಲು ಆಗ್ರಹ**

ಸರ್ಕಾರಿ ಗೋಮಾಳ ಜಮೀನುಗಳನ್ನು ಸಂರಕ್ಷಿಸುವಲ್ಲಿ ವಿಫಲರಾಗಿ ಭೂ-ಮಾಫೀಯಗಳೊಂದಿಗೆ ಕೈ ಜೋಡಿಸಿ ಸರ್ಕಾರಿ ಆಸ್ತಿಯನ್ನು ಲೂಟಿ ಮಾಡಲು ಅವಕಾಶ ಕಲ್ಪಿಸಿದ್ದಾರೆಂದು ಗಂಭೀರ ಆರೋಪ ಮಾಡಿದರು.

ಕೋಲಾರ ತಾಲೂಕಿನ ನರಸಾಪುರ ಹೋಬಳಿಯ ಚೌಡದೇನಹಳ್ಳಿ ನಮ್ಮ ಕಂದಾಯ ಸಚಿವ ಕೃಷ್ಣ ಬೈರೇಗೌಡರ ತವರಿನಲ್ಲಿ ಸರ್ವೆ ಸಂಖ್ಯೆ 18 ಹೊಸ ಸಂಖ್ಯೆ 175ರ 2-20 ಎಕರೆ ಪೈಕಿ 1-10 ಎಕರೆ ಜಮೀನನ್ನು ಪರಭಾರೆ ಮಾಡಿರುವ ಎದುರುದಾರರಿಗೆ ಆಗಿರುವ ಕ್ರಯ ವಹಿವಾಟುಗಳನ್ನು ರದ್ದು ಪಡಿಸಿ ವಾರಸ್ಸುದಾರರಿಗೆ ಪುನರ್ ಸ್ಥಾಪಿಸಬೇಕೆಂದು ಕೋರಿದರು. ದಲಿತ ಸಿಂಹ ಸೇನೆ ಜಿಲ್ಲಾಧ್ಯಕ್ಷ ಮಾಸ್ತಿಬಾಬು, ಐತರಾಸನಹಳ್ಳಿ ವೆಂಕಟೇಶ್, ಚೋಳಘಟ್ಟ ರಾಮಚಂದ್ರ, ಮಧು ಚಂದ್ರ, ಕೆಂಚಪುರ ವೆಂಕಟೇಶ್, ಶ್ರೀನಿವಾಸಪುರ ವೆಂಕಟೇಶ್ ಇದ್ದರು.



## ಲಕ್ಷ್ಮೀನಾರಾಯಣಸ್ವಾಮಿ ರಥೋತ್ಸವ

**ಕೋಲಾರ:** ತಾಲೂಕಿನ ವೇಮಗಲ್ ಪಟ್ಟಣದ ಶ್ರೀ ಲಕ್ಷ್ಮಿನಾರಾಯಣಸ್ವಾಮಿ ಬ್ರಹ್ಮರಥೋತ್ಸವ ಮಾ.15ರಂದು ನಡೆಯಲಿದ್ದು, ಈ ಹಿನ್ನಲೆಯಲ್ಲಿ ರಥೋತ್ಸವ ಕಾರ್ಯಕ್ರಮಗಳು ಶುಕ್ರವಾರ ಮಾಜಿಸಭಾಪತಿ ವಿ.ಆರ್.ಸುದರ್ಶನ್ ಅವರ ಕುಟುಂಬದ ಪೂಜೆಯೊಂದಿಗೆ ಆರಂಭಗೊಂಡವು.


ಮೊದಲ ದಿನದ ಪೂಜೆಯಲ್ಲಿ ದಿವಂಗತ ರಾಮಶೆಟ್ಟಿ ರವರ ಮಕ್ಕಳು, ವಿ.ಆರ್ ನಾಗರಾಜ್ ಮತ್ತು ಮಾಜಿ ಸಭಾಪತಿ ವಿ.ಆರ್ ಸುದರ್ಶನ್ ರವರ ಕುಟುಂಬಸ್ಥರಿಂದ ವಿಶೇಷ ಪೂಜೆ ಹಾಗೂ ಸಂಕಲ್ಪಗಳನ್ನು ನೆರವೇರಿಸುವ ಮೂಲಕ ವಿದ್ಯುಕ್ತವಾಗಿ ಚಾಲನೆ ನೀಡಿದರು.

ಮಾಜಿ ಸಭಾಪತಿಗಳಾದ ವಿ.ಆರ್. ಸುದರ್ಶನ್ ರವರು ದೇವಾಲಯಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ ನೆರೆದಿದ್ದ ಭಕ್ತಾದಿಗಳನ್ನು ಉದ್ದೇಶಿಸಿ ಮಾತನಾಡಿ, ನಮ್ಮ ಗ್ರಾಮೀಣ ಭಾಗದ ಸಂಸ್ಕೃತಿ ಮತ್ತು ಪರಂಪರೆಯಲ್ಲಿ ಇಂತಹ ಜಾತ್ರೆ ಮತ್ತು ರಥೋತ್ಸವಗಳು ಅತ್ಯಂತ ಮಹತ್ವದ ಪಾತ್ರ ವಹಿಸುತ್ತವೆ ಎಂದು ಆಶಯ ವ್ಯಕ್ತಪಡಿಸಿದರು. ಪೂರ್ವಜರಿಂದ ನಡೆದುಕೊಂಡು ಬಂದಿರುವ ಈ ಧಾರ್ಮಿಕ ಪರಂಪರೆಗಳು ಕೇವಲ ವಿಧಿವಿಧಾನಗಳಲ್ಲ,

ಬದಲಿಗೆ ಇಡೀ ಸಮಾಜವನ್ನು ಒಗ್ಗೂಡಿಸುವ ಶಕ್ತಿಯಾಗಿವೆ. ಇಂದಿನ ಆಧುನಿಕ ಯುಗದಲ್ಲಿಯೂ ಜನರು ತಮ್ಮ ಮೂಲ ಬೇರುಗಳನ್ನು ಮರೆಯದೆ ಭಕ್ತಿ ಮತ್ತು ಶ್ರದ್ಧೆಯಿಂದ ಇಂತಹ ಉತ್ಸವಗಳಲ್ಲಿ ಭಾಗವಹಿಸುತ್ತಿರುವುದು ಸಂತಸದ ಸಂಗತಿ ಎಂದರು. ಮುಂದುವರಿದು ಮಾತನಾಡಿದ ಅವರು, ಈ ಪವಿತ್ರ ರಥೋತ್ಸವವು ಕ್ಷೇತ್ರದ ಜನತೆಗೆ ಸುಖ, ಶಾಂತಿ ಮತ್ತು ಸಮೃದ್ಧಿಯನ್ನು ತರಲಿ ಎಂದು ಶ್ರೀ ಲಕ್ಷ್ಮೀ ನಾರಾಯಣಸ್ವಾಮಿಯಲ್ಲಿ ಪ್ರಾರ್ಥಿಸುವುದಾಗಿ ತಿಳಿಸಿದರು.

ದೇವಸ್ಥಾನದ ಪ್ರಧಾನ ಅರ್ಚಕ ಎಸ್.ಕೆ. ಶ್ರೀನಿವಾಸಾಚಾರ್ ಹಾಗೂ ಆಗಮಿಕರಾದ ನರೇಂದ್ರಾಚಾರ್ ಮಾರ್ಗದರ್ಶನದಲ್ಲಿ ಈ ಎಲ್ಲಾ ವಿಧಿವಿಧಾನಗಳು ನೆರವೇರಲಿವೆ.

ಪಟ್ಟಣದ ಹಿರಿಯ ಮುಖಂಡ ಗೌಡರ ಚಿಕ್ಕಮುನಿಯಪ್ಪ ಹಾಗೂ ದೇವಾಲಯ ಅಭಿವೃದ್ಧಿ ಸಮಿತಿಯ ಎಲ್ಲರೂ ವಿಶೇಷವಾಗಿ ಪಾಲ್ಗೊಳ್ಳಲಿದ್ದಾರೆ.



## ಸಮಸ್ಯೆ ಮುಂದಿಟ್ಟು ರಾಜಕೀಯ ಬೇಡ: ರೈತಸಂಘ

**ಬಂಗಾರಪೇಟೆ:** ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿರುವ ಭೌಗೋಳಿಕ ರಾಜಕೀಯ ಸಂಘರ್ಷಗಳಿಂದ ಕೃಷಿ ಪರಿಕರಣಗಳು ಅಡುಗೆ ಅನಿಲ ಮತ್ತು ಅಗತ್ಯ ವ್ಯವಸ್ತುಗಳ ಬೆಲೆ ಏರಿಕೆ ನಿಯಂತ್ರಣಕ್ಕೆ ಪ್ರತಿ ರಾಜ್ಯದಲ್ಲೂ ವಿಶೇಷ ತಂಡ ರಚನೆ ಮಾಡಿ ಜನ ಸಾಮಾನ್ಯರ ಬದುಕನ್ನು ರಕ್ಷಣೆ ಮಾಡಬೇಕೆಂದು 16ರಂದು ಕಟ್ಟಿಗೆ ಹಾಗೂ ಖಾಲಿ ಸಿಲೆಂಡರ್ ಸಮೇತ ರೈಲ್ವೆ ನಿಲ್ದಾಣ ಮುತ್ತಿಗೆ ಹಾಕಲು ರೈತ ಸಂಘದ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ರಾಜ್ಯ ಉಪಾಧ್ಯಕ್ಷ ಕೆ.ನಾರಾಯಣಗೌಡ ತಿಳಿಸಿದ್ದಾರೆ.

ನಗರದ ಹೊರ ವಲಯದ ಅರಣ್ಯ ಉದ್ಯಾನವನದಲ್ಲಿ ಕರೆದಿದ್ದ ರೈತ ಸಂಘದ ಸಭೆಯಲ್ಲಿ ಮಾತನಾಡಿ ಯುದ್ಧದ ಆಟ-ಚಟ: ಮನುಕುಲಕ್ಕೆ ನರಳಾಟ ದೇಶವೊಂದರ ಸಾಂಸ್ಕೃತಿಕ, ಧಾರ್ಮಿಕ ಮಹತ್ವ ಅರಿಯದವರು ಹೇರಿರುವ ಯುದ್ಧ ಇಡೀ ಜಗತ್ತನ್ನು ಆರ್ಥಿಕ, ಸಂಕಷ್ಟ ಮತ್ತು ಮಾನವೀಯ ಬಿಕಟ್ಟಿಗೆ ದೂಡುತ್ತಿದೆ. ಜಿಲ್ಲಾಧ್ಯಕ್ಷೆ ಈಕಂಬಳ್ಳಿ ಮಂಜುನಾಥ, ಹೆಬ್ಬನಿ ಆನಂದರೆಡ್ಡಿ, ತಾ.ಆ.ಕದರಿನ ಅಪ್ಪೋಜಿರಾವ್, ಗೋವಿಂದಪ್ಪ, ಕಾ.ಅಧ್ಯಕ್ಷ ಮುನಿಕೃಷ್ಣ, ವಿಶ್ವ, ಮುನಿರಾಜು, ಲಕ್ಷ್ಮಣ್, ಸಂತೋಷ್, ಶ್ರೀರಾಮರೆಡ್ಡಿ, ಗುಳ್ಳಟ್ಟಿ ಚಾಂದ್ ಪಾಷ, ದಾಬಾಜಾನ್, ಕಿರಣ್, ಮಂಗಸಂದ್ರ ತಿಮ್ಮಣ್ಣ, ಪುತ್ತೇರಿರಾಜು, ಗಿರೀಶ್, ಶೈಲಜಾ, ರತ್ನಮ್ಮ, ಪವಿತ್ರ, ವೆಂಕಟಮ್ಮ, ಮುನಿಚೌಡಮ್ಮ, ನಾಗರತ್ನ, ಪದ್ದಮ್ಮ ಇದ್ದರು.



## ಸಾರ್ವಜನಿಕರ ಮನವಿಗಳಿಗೆ ಸ್ಪಂದಿಸದ ಅಧಿಕಾರಿಗಳು

**ಕೋಲಾರ:** ತಾಲೂಕು ಹಾಗೂ ಜಿಲ್ಲೆಯ ಹಲವು ಅಧಿಕಾರಿಗಳು ಸಾರ್ವಜನಿಕರ ಮನವಿ, ಅಹವಾಲುಗಳಿಗೆ ನಿರ್ಲಕ್ಷ ತೋರಿ ಕರ್ತವ್ಯ ಲೋಪ ಎಸಗುತ್ತಿದ್ದು, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಕರ್ನಾಟಕ ರಾಷ್ಟ್ರ ಸಮಿತಿ ರಾಜ್ಯಾಧ್ಯಕ್ಷ ರವಿಕೃಷ್ಣರೆಡ್ಡಿ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಜಿಲ್ಲಾಡಳಿತ ಭವನದ ಮುಂದೆ ಕರ್ನಾಟಕ ರಾಷ್ಟ್ರ ಸಮಿತಿ ಜಿಲ್ಲಾ ಸಮಿತಿಯ ಧರಣಿಯಲ್ಲಿ ಭಾಗವಹಿಸಿದ್ದ ರಾಜ್ಯಾಧ್ಯಕ್ಷ ರವಿಕೃಷ್ಣರೆಡ್ಡಿ ಮಾತನಾಡಿ. ತಾಲ್ಲೂಕಿನ ರೈತರ ಜಮೀನುಗಳನ್ನು ಸರ್ವೆ ಮಾಡಿ ಗುರುತಿಸಿ ಕೊಡಲು ಸುಮಾರು ಒಂದು ವರ್ಷಗಳಿಂದ ಅಲೆದಾಡಿದರೂ ಯಾವುದೇ ಕ್ರಮ ಜರುಗಿಸಿಲ್ಲ ಎಂದರು.

ಖಾತೆದಾರರ ಜಮೀನು ಸರ್ವೆ ಮಾಡದಿರುವ ಹಿನ್ನಲೆಯಲ್ಲಿ ಅವರ ಕೆಲಸ ಕಾರ್ಯಗಳಿಗೆ ಸ್ಥಳೀಯರು ಕೆಲವು ಕಿರುಕುಳ ನೀಡುತ್ತಿದ್ದಾರೆ ಹಾಗಾಗಿ ಕರ್ತವ್ಯ ನಿರ್ಲಕ್ಷಿಸುತ್ತಿರುವ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಿ ಸಾರ್ವಜನಿಕರ ಕೆಲಸ ಕಾರ್ಯಗಳಿಗೆ ಅನುವು ಮಾಡಿ ಕೊಡಬೇಕೆಂದರು. ತಾಲೂಕಿನ ಕಸಬಾ ಹೋಬಳಿಯ ಚೋಳಘಟ್ಟ ಗ್ರಾಮದಲ್ಲಿ ಸರ್ವೆ ನಂ 49ರಲ್ಲಿನ ಸುಮಾರು 3 ಎಕರೆ 20 ಗುಂಟೆ ಸಾರ್ವಜನಿಕ ಸ್ಮಶಾನಕ್ಕೆ ದಾರಿ ಗುರುತಿಸಿಕೊಡುವ ಬಗ್ಗೆ



ಆಗಸ್ಟ್ ಮಾಹೆಯಲ್ಲಿ ಮನವಿ ಸಲ್ಲಿಸಲಾಗಿತ್ತು. ಜಿಲ್ಲಾಧಿಕಾರಿಗಳು ಸಮಿತಿಯ ಮನವಿಯನ್ನು ಸ್ವೀಕರಿಸಿ ಈ ಎಲ್ಲಾ ಸಮಸ್ಯೆಗಳನ್ನು ಒಂದು ತಿಂಗಳ ಒಳಗಾಗಿ ಬಗೆಹರಿಸಿ ಕರ್ತವ್ಯ ಲೋಪ ಎಸಗಿದವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸುವುದಾಗಿ ಆಶ್ವಾಸನೆ ನೀಡಿದರು. ಜಿಲ್ಲಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಮೋಹನ್ ಸಿ.ಜಿ. ಸೇರಿದಂತೆ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಇದ್ದರು.

## ಯುದ್ಧ ತಂದ ಫಜೀತಿ, ಗ್ಯಾಸ್‌ಗಾಗಿ ಸಾರ್ವಜನಿಕರ ಪರದಾಟ

# ಆಟೋ ಚಾಲಕರಿಗೂ ಸಿಗುತ್ತಿಲ್ಲ ಗ್ಯಾಸ್

**ಬಂಗಾರಪೇಟೆ:** ಮಧ್ಯ ಪ್ರಾಚ್ಯ ರಾಷ್ಟ್ರಗಳ ನಡುವೆ ನಡೆಯುತ್ತಿರುವ ಯುದ್ಧದಿಂದಾಗಿ ಗ್ಯಾಸ್ ಪೂರೈಕೆ ಕಡಿಮೆಯಾಗಿದೆ ಎಂಬ ಕಾರಣಕ್ಕೆ ಗ್ರಾಹಕರು ಗ್ಯಾಸ್ ವಿತರಕರ ಕಚೇರಿಗಳ ಎದುರು ಸಾಲುಗಟ್ಟಿ ನಿಂತು ಬುಕಿಂಗ್ ಮಾಡಲು ಮುಂದಾಗಿದ್ದಾರೆ.

ಪಟ್ಟಣದ ಸಾವಿರಾರು ಆಟೋಗಳು ಗ್ಯಾಸ್ ಹಾಕಿಸಿಕೊಳ್ಳಲು ಬಂಕ್ ಮುಂದೆ ಕೀಲೋಮೀಟರ್ ಗಟ್ಟಲೆ ಸಾಲಿನಲ್ಲಿ ನಿಂತು ಗ್ಯಾಸ್ ಹಾಕಿಸಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ, ಒಂದು ಗ್ಯಾಸ್ ಬಂಕ್ ಮುಚ್ಚಿದ್ದು, ಇರುವ ಒಂದು ಬಂಕ್‌ನಲ್ಲಿ ಸುಮಾರು ಐನೂರಕ್ಕೂ ಹೆಚ್ಚು ರಸ್ತೆಯ ಎರಡು ಕಡೆ ಸಾಲುಗಟ್ಟಿ ನಿಂತು ಗ್ಯಾಸ್‌ಗಾಗಿ ಪರದಾಡುತ್ತಿದ್ದದ್ದು ಕಂಡು ಬಂತು.

ಯುದ್ಧ ನಡೆಯುತ್ತಿರುವ ಪರಿಣಾಮ ಗ್ಯಾಸ್, ಪೆಟ್ರೋಲ್, ಡೀಸೆಲ್ ಸೇರಿದಂತೆ ಅಗತ್ಯ ವಸ್ತುಗಳ ಪೂರೈಕೆ ಕಡಿಮೆಯಾಗುತ್ತಿದ್ದು, ಮುಂದೆ ಪೂರೈಕೆ ಸ್ಥಗಿತಗೊಂಡು ಬೆಲೆಯೂ ಅಧಿಕವಾಗಲಿದೆ ಎಂಬ ವದಂತಿ ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿದೆ, ಇದರಿಂದಾಗಿ ತಾಲೂಕಿನ ಜನ ಆತಂಕಕ್ಕೆ




ಒಳಗಾಗಿದ್ದು, ನಿರ್ವಹಣೆಗೆ ಜೀವನ ಪ್ರಮುಖವಾಗಿ ಬೇಕಿರುವ ಗ್ಯಾಸ್ ಖರೀದಿಗೆ ಸರತಿ ಸಾಲಿನಲ್ಲಿ ನಿಲ್ಲುವುದು ಸಾಮಾನ್ಯವಾಗಿದೆ. ಈ ಹಿಂದೆ ಫೋನ್ ಮೂಲಕ ಬುಕ್ ಮಾಡಿ ಖರೀದಿಸುತ್ತಿದ್ದ ಗ್ರಾಹಕರು ಕಳೆದ ಎರಡು ಮೂರು ದಿನಗಳಿಂದ ಪಟ್ಟಣದ ಗ್ಯಾಸ್ ವಿತರಕರ ಅಂಗಡಿಗಳ ಮುಂದೆ ಬೆಳ್ಳಂ ಬೆಳಗ್ಗೆಯಿಂದಲೇ ನಿಂತು ಬುಕಿಂಗ್ ಮಾಡುತ್ತಿದ್ದಾರೆ, ಫೋನ್ ಮೂಲಕ ಬುಕ್ ಮಾಡಿದರೆ ಏಜೆನ್ಸಿಯಿಂದಲೇ ಮನೆಗೆ ಸಿಲಿಂಡರ್ ತಲುಪಿಸಲಾಗುತ್ತದೆ ಎಂದು ಹೇಳಿದರೂ ಸಾರ್ವಜನಿಕರು ಏಜೆನ್ಸಿಗಳ ಮುಂದೆ ನಿಲ್ಲುವುದನ್ನು ಬಿಡುತ್ತಿಲ್ಲ, ಇತ್ತ ಕಮರ್ಷಿಯಲ್ ಗ್ಯಾಸ್ ವಿತರಣೆಯಲ್ಲಿ ಸ್ವಲ್ಪ ವಿಳಂಬವಾಗುತ್ತಿದ್ದು, ಹೋಟೆಲ್ ಮಾಲೀಕರಿಗೆ ತಲೆನೋವು ಹೆಚ್ಚಾಗಿದೆ, ಸಣ್ಣ ಪುಟ್ಟ ಹೋಟೆಲ್‌ನವರು ಮನೆಯ ಸಿಲಿಂಡರ್‌ಗಳನ್ನು ಪದಾರ್ಥ ತಂದು ಆಹಾರ ತಯಾರಿಸಿ ಗ್ರಾಹಕರ ಹೊಟ್ಟೆ ತುಂಬಿಸುತ್ತಿರುವ ಪ್ರಸಂಗಗಳು ನಡೆಯುತ್ತಿದೆ, ಯಾರೂ ಆತಂಕಪಡುವ ಅಗತ್ಯವಿಲ್ಲ ಎಂದು ಹೇಳಿದರೂ ಗ್ರಾಮೀಣ ಭಾಗದ ಜನರು ಅಡುಗೆ ಎಣ್ಣೆ ಸಿಗುತ್ತಿಲ್ಲವಂತೆ, ಗ್ಯಾಸ್ ಬೆಲೆ ಅಧಿಕವಾಗಲಿದೆಯಂತೆ ಮುಂದೆ ಪೆಟ್ರೋಲ್ ಡೀಸಲ್‌ಗೂ ಸಮಸ್ಯೆ ಎದುರಾಗುತ್ತದೆ ಎಂಬ ಗಾಬರಿಗೆ ಒಳಗಾಗುತ್ತಿದ್ದಾರೆ.

## ಮೃತ ವೆಂಕಟೇಶ್ ಕುಟುಂಬಕ್ಕೆ ₹50 ಲಕ್ಷ ಪರಿಹಾರಕ್ಕೆ ಆಗ್ರಹ

# ಕೆರೆಕಟ್ಟೆ ತಡೆಗೋಡೆಗೆ ಆಗ್ರಹಿಸಿ ಧರಣಿ

**ಕೋಲಾರ:** ಕೋಲಾರ-ಶ್ರೀನಿವಾಸಪುರ ನಡುವೆಯ ಮುದುವಾಡಿ ಕೆರೆಯ ಕಟ್ಟೆಯ ಮೇಲೆ ಹಾದು ಹೋಗಿರುವ ರಾಜ್ಯ ಹೆದ್ದಾರಿಯ ರಸ್ತೆಯನ್ನು ಜೋಡಿ ರಸ್ತೆಯಾಗಿ ಅಭಿವೃದ್ಧಿಪಡಿಸಬೇಕು ಕೂಡಲೇ ತಡೆಗೋಡೆ ಕಟ್ಟಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಮುದುವಾಡಿ ಕೆರೆ ಬಳಿ ಗುರುವಾರ ರಸ್ತೆತಡೆ ನಡೆಸಿದರು.

ಬೆಂಗಳೂರಿನಿಂದ ಹರಿಯುತ್ತಿರುವ ಕೆ.ಸಿ. ವ್ಯಾಲಿ ನೀರನ್ನು ಮುದುವಾಡಿ ಕೆರೆಯಲ್ಲಿ ಸಂಗ್ರಹಿಸಿ, ಇಲ್ಲಿಂದ ಹಲವಾರು ಕೆರೆಗಳಿಗೆ ಹರಿಸಲಾಗುತ್ತಿದೆ. ಇದರಿಂದ ಮುದುವಾಡಿ ಕೆರೆಯಲ್ಲಿ ವರ್ಷ ಪೂರ್ತಿ ನೀರು ಭರ್ತಿಯಾಗಿರುತ್ತದೆ. ಮುದುವಾಡಿ ಕೆರೆ ಕಟ್ಟೆಯ ಮೇಲಿರುವ ರಸ್ತೆಯ ಎರಡು ಕಡೆ ತಡೆಗೋಡೆ ಇಲ್ಲದೇ ಇರುವುದರಿಂದ ವಾಹನ ಓಡಿಸುವಾಗ ಸ್ವಲ್ಪ ಎಚ್ಚರ ತಪ್ಪಿದರೂ ಅಪಘಾತವಾಗಿ ಕೆರೆಯಲ್ಲಿ ಬೀಳುವ ಅವಕಾಶಗಳು ಹೆಚ್ಚಾಗಿದೆ. ಈ ರಸ್ತೆಯನ್ನು ಕಳೆದ ಮೂರು ವರ್ಷಗಳ ಹಿಂದೆ ಅಭಿವೃದ್ಧಿ ಮಾಡಲಾಗಿದ್ದು,



ಕೆರೆಯ ಕೆಲವು ಭಾಗದಲ್ಲಿ ಕಬ್ಬಿಣದ ತಡೆಗೋಡೆ, ಕೆಲವು ಕಡೆ ಕಳಪೆ ಗುಣಮಟ್ಟದ ಸಿಮೆಂಟ್ ಪಿಲ್ಲರ್‌ಗಳನ್ನು ಅಳವಡಿಸಲಾಗಿದೆ.

ಈ ಭಾಗದಲ್ಲಿ ಆಗಿಂದಾಗ್ಗೆ ಅಪಘಾತಗಳು ನಡೆಯುತ್ತಿದ್ದರೂ ಅಧಿಕಾರಿಗಳ ಮುದುವಾಡಿ ಕೆರೆ ಕಟ್ಟೆಯ ಮೇಲೆ ಸುರಕ್ಷಾ ಕ್ರಮಗಳನ್ನು ಕೈಗೊಳ್ಳದೇ ಇರುವುದು ಸರಿಯಲ್ಲ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಪಿ.ಆರ್.ಸೂರ್ಯನಾರಾಯಣ, ಮುಖಂಡರಾದ ಗಾಂಧಿನಗರ ನಾರಾಯಣಸ್ವಾಮಿ, ವಿ.ಗೀತಾ, ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾದ ಪಾತಕೋಟೆ ನವೀನ್‌ಕುಮಾರ್, ಮುಖಂಡರಾದ ಗಂಗಮ್ಮ, ವೆಂಕಟಪ್ಪ, ನಾರಾಯಣರೆಡ್ಡಿ, ಎನ್.ಎನ್.ಶ್ರೀರಾಮ್, ಸಿಐಟಿಯು ಮುಖಂಡರಾದ ಪಿ.ಶ್ರೀನಿವಾಸ್, ಎಂ.ವಿಜಯಕೃಷ್ಣ, ಎಚ್.ಬಿ.ಕೃಷ್ಣಪ್ಪ ಮತ್ತಿತರರು ಭಾಗವಹಿಸಿದ್ದರು.

## ಕಿರುಸುದ್ದಿ

### ರಾಮೇಶ್ವರ ಶಾಲೆಗೆ ಮೇಜು, ಬೆಂಚುಗಳ ವಿತರಣೆ



• **ಚಿಂತಾಮಣಿ:** ಶ್ರೀ ರಾಮೇಶ್ವರ ಶಾಲೆಗೆ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯಿಂದ ಮೇಜು ಮತ್ತು ಬೆಂಚುಗಳ ವಿತರಣಾ ಕಾರ್ಯಕ್ರಮದಲ್ಲಿ ನಡೆಯಿತು. ತಾಲೂಕಿನ ಚಿನ್ನಪಲ್ಲಿ ಕಾರ್ಯಕ್ಷೇತ್ರದ ಏನಿಗದೆಲೆ ಗ್ರಾಮದಲ್ಲಿನ ಅನುದಾನಿತ ಸರ್ಕಾರಿ ಪ್ರೌಢಶಾಲೆಯಾದ ಶ್ರೀ ರಾಮೇಶ್ವರ ಶಾಲೆಯಲ್ಲಿ ಶ್ರೀ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯಿಂದ ಮೇಜು ಮತ್ತು ಬೆಂಚ್ ವಿತರಣೆ ಮಾಡಲಾಯಿತು ಇದಕ್ಕೂ ಮುನ್ನಾ ಕಾರ್ಯದರ್ಶಿ ಶ್ರೀರಾಮರೆಡ್ಡಿ ದೀಪ ಬೆಳಗಿ ಎಸ್‌ಎಸ್ ಎಲ್‌ಸಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಆಡಳಿತ ಮಂಡಳಿಯ ಸದಸ್ಯ ಶಿವಕುಮಾರ್ ಹಾಗೂ ವಲಯದ ಮೇಲ್ವಿಚಾರಕಿ ಶಾಂತಮ್ಮ ಮತ್ತು ಇರಗಂಪಲ್ಲಿ ವಲಯದ ಮೇಲ್ವಿಚಾರಕಿ ವಿಮಲ ಮತ್ತು ಒಕ್ಕೂಟ ಅಧ್ಯಕ್ಷೆ ರುಕ್ಮಿಣಿ ಶಾಲೆಯ ಎಲ್ಲ ಶಿಕ್ಷಕ ವೃಂದದವರು ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

### ಲಸಿಕೆ ಕಾರ್ಯಕ್ರಮಕ್ಕೆ ಚಾಲನೆ




• **ಶಿಡ್ಲಘಟ್ಟ:** ನಗರದಲ್ಲಿರುವ ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಇಂದು 14ರಿಂದ 15 ಹೆಣ್ಣುಮಕ್ಕಳಿಗೆ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಈ ಕಾರ್ಯಕ್ರಮವನ್ನು ಫಲಾನುಭವಿ ಮಕ್ಕಳಿಂದಲೇ ಉದ್ಘಾಟನೆ ಮಾಡುವ ಮೂಲಕ ವಿಶೇಷವಾಗಿ ಆರಂಭಿಸಲಾಯಿತು. ಹೆಣ್ಣುಮಕ್ಕಳಲ್ಲಿ ಗರ್ಭಾಶಯದ ಕ್ಯಾನ್ಸರ್‌ನ್ನು ತಡೆಗಟ್ಟುವ ಉದ್ದೇಶದಿಂದ ಊಕಗಿ ಲಸಿಕೆ ನೀಡುವ ಅಭಿಯಾನವನ್ನು ಆರೋಗ್ಯ ಇಲಾಖೆಯಿಂದ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದ ಅಂಗವಾಗಿ 14 ರಿಂದ 15 ಬಾಲಕಿಯರಿಗೆ ಲಸಿಕೆ ನೀಡಲಾಗುತ್ತಿದೆ. ಆಸ್ಪತ್ರೆಯ ವೈದ್ಯರು ಮತ್ತು ಆರೋಗ್ಯ ಸಿಬ್ಬಂದಿ ಮಕ್ಕಳಿಗೆ ಲಸಿಕೆಯ ಮಹತ್ವವನ್ನು ತಿಳಿಸಿ, ಇದು ಭವಿಷ್ಯದಲ್ಲಿ ಆರೋಗ್ಯವನ್ನು ಕಾಪಾಡಲು ಸಹಾಯಕವಾಗುತ್ತದೆ ಎಂದು ವಿವರಿಸಿದರು. ಕಾರ್ಯಕ್ರಮದಲ್ಲಿ ಪೋಷಕರು, ಆಸ್ಪತ್ರೆಯ ಸಿಬ್ಬಂದಿ ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

### ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯ ಇಲ್ಲ: ಡಿಸಿ

• **ಚಿಕ್ಕಬಳ್ಳಾಪುರ:** ಜಿಲ್ಲೆಯ ಎಲ್ಲಾ ಗೃಹ ಬಳಕೆ ಅಡುಗೆ ಅನಿಲ ಗ್ರಾಹಕರಿಗೆ ತಿಳಿಸುವುದೇನೆಂದರೆ, ಸಾಮಾಜಿಕ ಜಾಲ ತಾಣಗಳಲ್ಲಿ ಗೃಹ ಬಳಕೆ ಅಡುಗೆ ಅನಿಲ ಸಿಲಿಂಡರ್‌ಗಳ ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿರುವ ಬಗ್ಗೆ ವದಂತಿಗಳು ಹರಿದಾಡುತ್ತಿರುತ್ತದೆ. ಆದರೆ ಈ ಹಿಂದಿನಂತೆಯೇ ಜಿಲ್ಲೆಗೆ ಅಗತ್ಯವಿರುವ ಪ್ರಮಾಣದ ಅಡುಗೆ ಅನಿಲ ಸಿಲಿಂಡರ್ ಗಳು ಸರಬರಾಜಾಗುತ್ತಿದ್ದು, ದಿನಾಂಕ.12.03.2026ರಂತೆ 11, 355 ಗೃಹಬಳಕೆ ಅಡುಗೆ ಅನಿಲ ಸಿಲಿಂಡರ್ ಗಳ ಜಿಲ್ಲೆಯಲ್ಲಿ ದಾಸ್ತಾನು ಲಭ್ಯವಿರುತ್ತದೆ. ಗ್ರಾಹಕರು/ಸಾರ್ವಜನಿಕರು ಇಂತಹ ವದಂತಿಗಳಿಗೆ ಯಾರು ಸಹ ಕಿವಿಗೊಡಬಾರದೆಂದು ಹಾಗೂ ಆತಂಕಕ್ಕೆ ಒಳಗಾಗಬಾರದು. ಅಲ್ಲದೆ ಗೃಹಬಳಕೆ ಸಿಲಿಂಡರ್‌ಗಳನ್ನು ಅಕ್ರಮವಾಗಿ ಹೆಚ್ಚುವರಿಯಾಗಿ ದಾಸ್ತಾನು ಮಾಡಿಕೊಳ್ಳುವುದು, ವಾಣಿಜ್ಯ ಉದ್ದೇಶಗಳಿಗೆ ಬಳಕೆ ಮಾಡುವುದು ಮತ್ತು ಗೃಹಬಳಕೆ ಸಿಲಿಂಡರ್ ಪ್ರಕರಣಗಳನ್ನು ಪತ್ತೆಹಚ್ಚಲು ತಾಲ್ಲೂಕು ಮಟ್ಟದಲ್ಲಿ ತಂಡಗಳನ್ನು ರಚನೆ ಮಾಡಲಾಗಿದ್ದು, ಅಕ್ರಮವಾಗಿ ಅನಿಲ ಸಿಲಿಂಡರ್‌ಗಳನ್ನು ದಾಸ್ತಾನು ಮಾಡುವ ಕೃತ್ಯಗಳು ಕಂಡುಬಂದಲ್ಲಿ ಅಂತಹವರ ವಿರುದ್ಧ ಅಗತ್ಯ ವಸ್ತುಗಳ ಕಾಯ್ದೆ-1955 ರನ್ವಯ ಪ್ರಕರಣ ದಾಖಲಿಸಿ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದೆಂದು ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಮಹಿಳಾ ಕ್ರೀಡಾಕೂಟ

• **ಚಿಕ್ಕಬಳ್ಳಾಪುರ:** ಜಿಲ್ಲಾಡಳಿತ,ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಚಿಕ್ಕಬಳ್ಳಾಪುರ ವತಿಯಿಂದ ಮಾರ್ಚ್ 16 ರಂದು ಬೆಳಿಗ್ಗೆ 10 ಗಂಟೆಗೆ ಚಿಕ್ಕಬಳ್ಳಾಪುರ ನಗರದ ಸರ್.ಎಂ.ವಿ.ಜಿಲ್ಲಾ ಕ್ರೀಡಾಂಗಣದಲ್ಲಿ ಮಹಿಳೆಯರು, ಯುವತಿಯರಿಗಾಗಿ ಮ್ಯೂಸಿಕಲ್ ಚೇರ್, ಹಗ್ಗ ಜಗ್ಗಾಟ, 100 ಮೀ, 200 ಮೀ, 400 ಮೀ ಓಟ, ಗುಂಡು ಎಸೆತ ಹಾಗೂ ಡಿಸ್ಕಸ್ ಥ್ರೋ ಕ್ರೀಡೆಗಳಲ್ಲಿ ಮಹಿಳಾ ಕ್ರೀಡಾಕೂಟದ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿದ್ದು, ಈ ಕ್ರೀಡಾಕೂಟದಲ್ಲಿ ಆಸಕ್ತ ಸ್ಥಳೀಯ ಮಹಿಳಾ ಸಂಘ ಸಂಸ್ಥೆಗಳ, ಶಾಲಾ-ಕಾಲೇಜಿನ ವಿದ್ಯಾರ್ಥಿಗಳು, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕೋರಿದೆ. ಸೂಚನೆಗಳು: ಆಧಾರ್ ಕಾರ್ಡ್ ಕಡ್ಡಾಯ ಎಂದು ತಿಳಿಸಿದ್ದಾರೆ.



ಚನ್ನಪಟ್ಟಣ ತಾಲೂಕಿನ ದೊಡ್ಡನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತರಾದ ಸ್ವಾಮಿ ಮತ್ತು ರಾಜು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

## ದೊಡ್ಡನಹಳ್ಳಿ ಡೇರಿಗೆ ಅವಿರೋಧ ಆಯ್ಕೆ

• **ಚನ್ನಪಟ್ಟಣ:** ತಾಲೂಕಿನ ದೊಡ್ಡನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತರಾದ ಸ್ವಾಮಿ ಮತ್ತು ರಾಜು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಂಘದ ಕಚೇರಿಯಲ್ಲಿ ಶುಕ್ರವಾರ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಿಗೆ ತಲಾ ಒಂದೇ ನಾಮಪತ್ರ ಸಲ್ಲಿಕೆಯಾಗಿದ್ದರಿಂದ ಚುನಾವಣಾಧಿಕಾರಿಕೆ.ಟಿ. ಉಮೇಶ್‌ಅವರುಅವಿರೋಧ ಆಯ್ಕೆಯನ್ನು ಘೋಷಿಸಿದರು.

ಚುನಾವಣಾ ಪ್ರಕ್ರಿಯೆಯಲ್ಲಿ ಸಂಘದ ನಿರ್ದೇಶಕರಾದ ನಿಂಗರಾಜು, ರವಿ ಪಿ, ಮರೀಗೌಡ, ಮಹದೇವಮ್ಮ, ಶೋಭಾ, ಕಮಲಮ್ಮ ಹಾಗೂ ರವಿ ಭಾಗವಹಿಸಿ ಅವಿರೋಧ ಆಯ್ಕೆಗೆ ಸರ್ವಾನುಮತ ಸೂಚಿಸಿದರು. ಚುನಾವಣೆಯು ಶಾಂತಿಯುತವಾಗಿ ಹಾಗೂ ಸುಗಮವಾಗಿ ನಡೆಯಲು ಡೇರಿ ಸಿಇಒ ಬಿಳಿಗೌಡ, ಹಾಲು ಪರೀಕ್ಷಕ ಸಂದೀಪ್ ಹಾಗೂ ಸಹಾಯಕಚಿಕ್ಕಲಿಂಗೇಗೌಡ ಸಹಕರಿಸಿದರು.

ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ನೀಲಸಂದ್ರ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಹಾಗೂ ಬ್ರಹ್ಮಣೀಪುರ ಸಹಕಾರ ಸಂಘದ ಮಾಜಿ ಅಧ್ಯಕ್ಷ ಡಿ.ಎಲ್. ಜಗದೀಶ್ ಅವರು, ಡೇರಿ ನೂತನ ಅಧ್ಯಕ್ಷ ಸ್ವಾಮಿ ಹಾಗೂ ಉಪಾಧ್ಯಕ್ಷ ರಾಜು ಅವರು ನಮ್ಮ ನಾಯಕರು ಹಾಗೂ ಶಾಸಕ ಸಿ.ಪಿ.ಯೋಗೇಶ್ವರ್ ಹಾಗೂ ಬಮೂಲ್ ನಿರ್ದೇಶಕ ಎಸ್. ಲಿಂಗೇಶ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ಡೇರಿಯ ಸದಸ್ಯರ ಹಿತಾಸಕ್ತಿಯನ್ನುಕಾಪಾಡುವಜೊತೆಗೆ ಸಂಘದಅಭಿವೃದ್ಧಿಗೆ ಹೊಸ ಆಡಳಿತ ಮಂಡಳಿ ಶ್ರಮಿಸಬೇಕು ಎಂದು ಆಶಿಸಿದರು.



ಕೈವಾರ ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿಸಿ ಸರ್ಕಾರ ಅಧಿಕೃತ ಆದೇಶ ಮಾಡಿದ್ದು ಪ್ರಪ್ರಥಮ ಮುಖ್ಯಾಧಿಕಾರಿಯಾಗಿ ರವೀಂದ್ರ ಜಾಯಿಗೊಂಡೆ ಅಧಿಕಾರ ವಹಿಸಿಕೊಂಡರು. ತಹಸೀಲ್ದಾರ್ ಸುದರ್ಶನ್ ಯಾದವ್‌ರನ್ನು ಭೇಟಿಯಾಗಿ ಸಹಕಾರ ಕೋರಿದರು. ತಾತ್ಕಾಲಿಕ ಮುಖ್ಯಾಧಿಕಾರಿಯಾಗಿ ಪ್ರಭಾರ ವಹಿಸಿಕೊಂಡಿದ್ದ ಚಿಂತಾಮಣಿಯ ನಗರಸಭೆ ಪೌರಾಯುಕ್ತ ಜಿ.ಎನ್.ಚಲಪತಿ ರವೀಂದ್ರರಿಗೆ ಅಧಿಕಾರ ಹಸ್ತಾಂತರ ಮಾಡಿದರು.

## ಎಚ್‌ಎನ್ ವ್ಯಾಲಿ ನೀರು 3ನೇ ಹಂತದ ಶುದ್ಧೀಕರಣಕ್ಕೆ ಒತ್ತಾಯ

# ಯೋಜನೆಗೆ ಇಚ್ಛಾಶಕ್ತಿ ಕೊರತೆ

• **ಚಿಕ್ಕಬಳ್ಳಾಪುರ:** ಎಚ್.ಎನ್.ವ್ಯಾಲಿ ಸಂಸ್ಕರಿತ ನೀರನ್ನು 3ನೇ ಹಂತದಲ್ಲಿ ಶುದ್ಧೀಕರಿಸಲು ವಿವಿಧ ಸಂಘಟನೆಗಳು, ಹೋರಾಟಗಾರರು ಹಾಗೂ ಸಾರ್ವಜನಿಕರು ಒತ್ತಾಯಿಸುತ್ತಿದ್ದರೂ ರಾಜ್ಯ ಸರ್ಕಾರ ಇಚ್ಛಾಶಕ್ತಿ ತೋರದಿರುವುದು ದುರಂತವಾಗಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಸೀಕಲ್ ರಾಮಚಂದ್ರಗೌಡ ಬೇಸರ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯ ಸರ್ಕಾರ ಪ್ರಸ್ತುತ ಇನ್ನೂ ಹಲವು ಕೆರೆಗಳಿಗೆ ಎಚ್‌ಎನ್ ವ್ಯಾಲಿಯ ನೀರು ಹರಿಸಲು ಅನುದಾನ ನೀಡಿದೆ. ಅದೇ ಅನುದಾನವನ್ನು ಪ್ರಸ್ತುತ ಹರಿಸುತ್ತಿರುವ ನೀರು ಮೂರನೇ ಹಂತದ ಶುದ್ಧೀಕರಣಕ್ಕೆ ಬಳಸಿದ್ದರೆ ಜನರ ಆರೋಗ್ಯ ಸುಧಾರಿಸುತ್ತಿತ್ತು. ಆದರೆ ಸರ್ಕಾರ ಆ ನಿಟ್ಟಿನಲ್ಲಿ ಗಮನ ಹರಿಸುತ್ತಿಲ್ಲ ಎಂದರು.

ಸಂದೀಪ್‌ರೆಡ್ಡಿ ಅವರು ತಮ್ಮ ಜೊತೆ ಚರ್ಚೆ ನಡೆಸದೆ ಬಂದ್ ದಿನಾಂಕ ನಿಗಧಿ ಮಾಡಿದ್ದಾರೆ. ಭಾನುವಾರ ಎಲ್ಲರೂ ರಜೆಯಲ್ಲಿರುವ ಕಾರಣ ಅಂದು ಬಂದ್ ಮಾಡಿದರೂ ಯಾವುದೇ ಉಪಯೋಗವಿಲ್ಲ. ಆದರೂ ಬಂದ್‌ಗೆ ನಮ್ಮ ಸಹಮತ ಇದೆ ಎಂದರು.

ಸರ್ಕಾರಕ್ಕೆ ಚುರುಕು ಮುಟ್ಟಿಸಲು ಬಂದ್ ಮಾಡಬೇಕು, ಆದರೆ ಭಾನುವಾರ ಬಂದ್ ಮಾಡುವುದರಿಂದ ಸರ್ಕಾರಕ್ಕೆ ಬಿಸಿ ಮುಟ್ಟಲು ಸಾಧ್ಯವಿಲ್ಲ. ಹಾಗಾಗಿ ಮುಂದಿನ ದಿನಗಳಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಎರಡೂ ಜಿಲ್ಲೆಗಳು ಸೇರಿಸಿ, ರಾಜ್ಯ ನಾಯಕರನ್ನು ಕರೆಯಿಸಿ ಸರ್ಕಾರಕ್ಕೆ ಬಿಸಿ ಮುಟ್ಟಿಸುವ ಪ್ರಯತ್ನ ಮಾಡಲಾಗುವುದು ಎಂದರು.

ಜಿಲ್ಲೆಯ ಜನರು ಸೇವಿಸುವ ಊಟವೇ ವಿಷವಾಗುವ ಸ್ಥಿತಿ ನಿರ್ಮಾಣವಾಗಿದೆ. ಸರ್ಕಾರದ ಚರ್ಮ ಮಂದವಾಗಿದೆ. ಮೂರನೇ ಹಂತದ ಶುದ್ಧೀಕರಣ ಮಾಡದಿದರೆ ಮುರೂ ಜಿಲ್ಲೆಗಳಿಂದ ಮುಂದಿನ ದಿನಗಳಲ್ಲಿ ಪಕ್ಷಾತೀತ ಹೋರಾಟಕ್ಕೆ ಸಿದ್ಧತೆ ಮಾಡಲಾಗುವುದು ಎಂದರು.



> ಬೆಂಗಳೂರಿನಿಂದ ಬರುತ್ತಿರುವ ತ್ಯಾಜ್ಯ ನೀರಿನಲ್ಲಿ ಆಸ್ಪತ್ರೆ ತ್ಯಾಜ್ಯ, ಕೈಗಾರಿಕಾ ತ್ಯಾಜ್ಯ ಸೇರಿ ಆ ತ್ಯಾಜ್ಯ ನೀರಿನಲ್ಲಿ ರಾಸಾಯನಿಕ ಹೆಚ್ಚಾಗಿವೆ. ಇದು ಜನರ ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ. ಜಿಲ್ಲೆಯಲ್ಲಿ ಬೆಳೆಯುವ ತರಕಾರಿಯಲ್ಲೂ ಅಪಾಯಕಾರಿ ಲವಣಾಂಶ ಇರುವ ಮಾತುಗಳು ಕೇಳಿಬಂದಿದ್ದು, ಜಿಲ್ಲೆಯ ರೈತರು ಬೆಳೆದ ತರಕಾರಿ ಬಳಸಬಾರದೆಂದು ಹೇಳಿದರೆ ರೈತರ ಸ್ಥಿತಿ ಏನು?.
> ■ ಸೀಕಲ್ ರಾಮಚಂದ್ರಗೌಡ, ಬಿಜೆಪಿ ಜಿಲ್ಲಾಧ್ಯಕ್ಷ

ಚಿಕ್ಕಬಳ್ಳಾಪುರ ಜಿಲ್ಲಾಕೇಂದ್ರದಲ್ಲಿ ಸುಲಜ್ಜಿತ ಪಕ್ಷದ ಕಚೇರಿ ಮಾಡಬೇಕಿತ್ತು, ನೂತನ ಕಚೇರಿಯನ್ನು ಪಕ್ಷದ ವರಿಷ್ಠರನ್ನು ಕರೆಯಿಸಿ ಮಾ.15ರ ಭಾನುವಾರ ಉದ್ಘಾಟನೆ ನೆರವೇರಿಸಬೇಕಿತ್ತು. ಆದರೆ ಬಂದ್ ಹಿನ್ನಲೆ ಕಚೇರಿ ಉದ್ಘಾಟನೆ ಮುಂದೂಡಲಾಗಿದೆ ಎಂದು ಹೇಳಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಮುರಳಿಧರ್, ಕೊಂಡೇನಹಳ್ಳಿ ಕೆ.ಬಿ.ಮುರಳಿ, ಮಧುಸೂರ್ಯನಾರಾಯಣ ರೆಡ್ಡಿ, ಜಿಲ್ಲಾ ಉಪಾಧ್ಯಕ್ಷ ಮರಳುಕುಂಟೆ ಕೃಷ್ಣಮೂರ್ತಿ, ನಗರಾಭಿವೃದ್ಧಿ ಪ್ರಾಧಿಕಾರ ಮಾಜಿ ಅಧ್ಯಕ್ಷ ಕೃಷ್ಣಮೂರ್ತಿ, ರಾಜ್ಯ ಪರಿಷತ್ ಸದಸ್ಯರ ಎಬಿ ಬೈರೇಗೌಡ ಜಿಲ್ಲಾ ಕಾರ್ಯದರ್ಶಿ ಅಶೋಕ್, ಲಕ್ಷ್ಮಿಪತಿ, ವಿ.ಮಧುಚಂದ್ರ, ಪ್ರಭಾಕರ್ ರೆಡ್ಡಿ, ಸೀಕಲ್ ಆನಂದ್ ಗೌಡ, ದೇವರಾಜ್, ತೇಜೇಂದ್ರ ಪಾಪು, ವೇಣು ಮಾಧವ್, ಗೋವಿಂದರಾಜು, ಬಾಗೇಪಲ್ಲಿ ಪ್ರತಾಪ್, ಗಂಗರೆಡ್ಡಿ ಇದ್ದರು.

## ಪಪಂ ಮುಖ್ಯಾಧಿಕಾರಿಯಾಗಿ ರವೀಂದ್ರ ಅಧಿಕಾರ ಸ್ವೀಕಾರ

• **ಚಿಂತಾಮಣಿ:** ಕೈವಾರ ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿಸಿ ಸರ್ಕಾರ ಅಧಿಕೃತ ಆದೇಶ ಮಾಡಿದ್ದು ಅದರಂತೆ ಕೈವಾರ ಪಟ್ಟಣ ಪಂಚಾಯಿತಿಯ ಪ್ರಪ್ರಥಮ ಮುಖ್ಯಾಧಿಕಾರಿಯಾಗಿ ರವೀಂದ್ರ, ಜಾಯಿಗೊಂಡೆ ಅಧಿಕಾರ ವಹಿಸಿಕೊಂಡರು.

ತಾಲೂಕಿನ ಕೈವಾರದಲ್ಲಿ ಅಧಿಕಾರವಹಿಸಿಕೊಂಡ ನಂತರ ರವೀಂದ್ರ, ಮಾತನಾಡಿ ಕೈವಾರ ಮತ್ತು ಮಸ್ತೇನಹಳ್ಳಿ ಗ್ರಾಮ ಪಂಚಾಯಿತಿಗಳನ್ನು ಸೇರಿಸಿ ಕೈವಾರ ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆ ಗೇರಿಸಿ ಸರ್ಕಾರ ಆದೇಶ ಮಾಡಿದ್ದು, ನಿಯಮಾನುಸಾರ ಅಧಿಕಾರ ವಹಿಸಿಕೊಂಡಿದ್ದು ಪ್ರಾಮಾಣಿಕವಾಗಿ ಕಾನೂನು ಚೌಕಟ್ಟಿನೊಳಗೆ ಕೆಲಸವನ್ನು ನಿರ್ವಹಿಸುತ್ತೇನೆ. ಕೈವಾರ ಪಟ್ಟಣ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮಗಳಲ್ಲಿ ಮೂಲಸೌಕರ್ಯ ಒದಗಿಸಲು ಪ್ರಥಮ ಆದ್ಯತೆ ನೀಡುತ್ತೇನೆ, ಎಲ್ಲರ ಸಹಕಾರದಿಂದ ಕೈವಾರ ಪಟ್ಟಣವನ್ನು ಅಭಿವೃದ್ಧಿಪಡಿಸಲುಪ್ರಾಮಾಣಿಕಪ್ರಯತ್ನ ಮಾಡುತ್ತೇನೆಂದು ನುಡಿದರು. ಚಿಂತಾಮಣಿ ನಗರಸಭೆ ಪೌರಾಯುಕ್ತ ಜಿ.ಎನ್. ಚಲಪತಿ ಮಾತನಾಡಿ ನಾನು ಜಿಲ್ಲಾ ಉಸ್ತುವಾರಿ ಸಚಿವರ ಸೂಚನೆ ಮತ್ತು ಜಿಲ್ಲಾಧಿಕಾರಿಯವರ ಆದೇಶದ ಮೇರೆಗೆ ಕೈವಾರ ಪಟ್ಟಣ ಪಂಚಾಯತಿಯ ಮುಖ್ಯ ಅಧಿಕಾರಿಯಾಗಿ ಪ್ರಭಾರವನ್ನು ವಹಿಸಿಕೊಂಡಿದ್ದೆ ಈಗ ಸರ್ಕಾರದ ಆದೇಶ ಮೇರೆಗೆ ಸ್ನೇಹಿತ ರವೀಂದ್ರರಿಗೆ ಅಧಿಕಾರ ಹಸ್ತಾಂತರ ಮಾಡಿದ್ದೂ ಇಲ್ಲಿನ ಸಮಸ್ಯೆಗಳ ಬಗ್ಗೆ ರವೀಂದ್ರಗೆ ಮಾಹಿತಿ ನೀಡಿದ್ದು, ಗ್ರಾಮದಲ್ಲಿ ಸ್ವಚ್ಛತೆಯನ್ನು ಕಾಪಾಡುವುದು ಅಗತ್ಯವೆಂದು ನುಡಿದರು.

ತಹಸೀಲ್ದಾರ್ ಸುದರ್ಶನ್ ಯಾದವ್‌ರನ್ನು ಭೇಟಿಯಾಗಿ ಸಹಕಾರ ಕೋರಿದರು. ಕೈವಾರ ಪಟ್ಟಣ ಪಂಚಾಯಿತಿಯ ತಾತ್ಕಾಲಿಕ ಮುಖ್ಯಾಧಿಕಾರಿಯಾಗಿ ಪ್ರಭಾರ ವಹಿಸಿಕೊಂಡಿದ್ದ ಚಿಂತಾಮಣಿಯ ನಗರಸಭೆ ಪೌರಾಯುಕ್ತ ಜಿ.ಎನ್.ಚಲಪತಿ ರವೀಂದ್ರರಿಗೆ ಅಧಿಕಾರ ಹಸ್ತಾಂತರ ಮಾಡಿದರು.

ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷೆಯರಾದ ಎಸ್ ಎಂ ರೋಜಾ, ಉಮಾದೇವಿ, ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಮುನಿನಾರಾಯಣಪ್ಪ ಹಾಗೂ ಎಲ್ಲಾ ಮಾಜಿ ಸದಸ್ಯರಿಗೆ ಅಭಿನಂದನೆಗಳನ್ನು ಸಲ್ಲಿಸಿದರು.



## ಕಸಾಪದಿಂದ ಕೈವಾರ ತಾತಯ್ಯ ಸ್ಮರಣೆ ಕಾರ್ಯಕ್ರಮ

• **ಚಿಂತಾಮಣಿ:** ಕೈವಾರತಾತಯ್ಯನವರುಕೇವಲ ಭಕ್ತರಷ್ಟೇ ಅಲ್ಲಸಮಾಜ ಸುಧಾರಕ, ಜ್ಞಾನ ಪ್ರಧಾತ ಮತ್ತು ಮಾನವತೆಯ ದಾರಿದೀಪವಾಗಿದ್ದರೆಂದು ಸಿಆರ್‌ಪಿ ಕೆ.ಬಾಲಾಜಿ ಅಭಿಪ್ರಾಯಪಟ್ಟರು. ನಗರದ ಗಜಾನನ ವೃತ್ತದ ಆಚಾರ್ಯ ಕಾಂಪ್ಲೇಕ್ಸ್ ನಲ್ಲಿ ಕುಂಟಿಗಡ್ಡೆ ಎಂ.ಲಕ್ಷ್ಮಣ್ ಕಛೇರಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು, ಚಿಂತಾಮಣಿ ಘಟಕದ ವತಿಯಿಂದ ಹಮ್ಮಿಕೊಂಡಿದ್ದ ಹುಣ್ಣಿಮೆಯಂದು ಸಾಧಕರ ಸ್ಮರಣೆ ಕಾರ್ಯಕ್ರಮದಲ್ಲಿ ಶ್ರೀ ಕೈವಾರ ತಾತಯ್ಯನವರ ಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿ ತಾತಯ್ಯ ಜೀವನವೇ ಸರಳತೆ, ಸತ್ಯ, ಸೇವೆಯ ಸಂಕೇತವಾಗಿತ್ತು. ಅವರು ಜನರಿಗೆ ದೈವಭಕ್ತಿ ಮಾತ್ರವಲ್ಲ,ಮಾನವಭಕ್ತಿ ಮುಖ್ಯವೆಂದು ಬೋಧಿಸಿದರು. ತಾತಯ್ಯನವರು ಕೀರ್ತನೆ, ತತ್ವಪದಗಳು ಮತ್ತು ಉಪದೇಶಗಳ ಮೂಲಕ ಜನರಲ್ಲಿ ನೀತಿ, ನಂಬಿಕೆ ಮತ್ತು ಧಾರ್ಮಿಕ ಚಿಂತನೆಗಳನ್ನು ಬೆಳೆಸಿದರು. ಜಾತಿ ಮತ ಭೇದಗಳನ್ನು ದೂರ ಮಾಡಿ ಎಲ್ಲರೂ ಒಂದೇ ಎಂಬ ಸಂದೇಶವನ್ನು ಸಾರಿದರೆಂದರು.

ಸಮಾಜದ ಹಿರಿಯ ಸಿ.ಎನ್.ವೆಂಕಟಚಲಪತಿ ಮಾತನಾಡಿ ನಾವು ಜಯಂತಿ ಆಚರಣೆ ಮಾತ್ರ ಮಾಡಿದರೆ ಸಾಲದು ತಾತಯ್ಯನವರ ಆದರ್ಶಗಳನ್ನು ಜೀವನದುದ್ದಕ್ಕೂ ಅಳವಡಿಸಿಕೊಂಡಾಗಲೇ ಈ ಆಚರಣೆಗೆ ಅರ್ಥ ಸಿಗುತ್ತದೆ ಮತ್ತು ಸಾರ್ಥಕವಾಗುತ್ತದೆ. ಇಂದಿನ ಯುವಜನತೆ ತಾತಯ್ಯನವರಸರಳಜೀವನಶೈಲಿ, ಪರಿಶ್ರಮ ಪ್ರಾಮಾಣಿಕತೆ ಮತ್ತು ಸಮಾಜ ಸೇವಾ ಮನೋಭಾವನೆಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕಸಾಪ ಅಧ್ಯಕ್ಷ ಎನ್.ವಿ.ಶ್ರೀನಿವಾಸನ್ ಮಾರ್ಚ್ ತಿಂಗಳಕಾರ್ಯಕ್ರಮಗಳಬಗ್ಗೆಸಭೆಗೆತಿಳಿಸಿದರು. ಮುಖ್ಯ ಅತಿಥಿಗಳಾಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರದ ಕನ್ನಡ ವಿಭಾಗದ ಮುಖ್ಯಸ್ಥ ಎಸ್.ಅಶ್ವತ್ ಕಾರ್ಯಕ್ರಮ ಕುರಿತು ಮಾತನಾಡಿದರು. ಎಂ.ವೈ. ನಂಜುಂಡಗೌಡ, ಈ.ವೈ.ಸರಸ್ವತಮ್ಮ, ಸ್ಮಿತ, ವಾಣಿ, ಸೀತಮ್ಮ, ಪರಮೇಶ್ವರ್ ಗುಪ್ತ, ಎಸ್‌ಎಫ್‌ಎಸ್ ಸುರೇಶ್, ಕೆಎಸ್ ನೂರಲ್ಲಾ, ಹಾಸ್ಯಸಾಹಿತಿ ಗುರುಪ್ರಸನ್ನ, ಶಿಕ್ಷಕ ಬಿ.ವಿಶ್ವನಾಥ್ ತಾತಯ್ಯನವರಕೀರ್ತನೆಗಳನ್ನು ಹಾಡಿದರು.



## ನೂತನ ದ್ವಾರಬಾಗಿಲು ನಿರ್ಮಾಣಕ್ಕೆ ಗುದ್ದಲಿಪೂಜೆ

• **ಶಿಡ್ಲಘಟ್ಟ:** ಹಳ್ಳಿಯಲ್ಲಿ ಕೆರೆ, ಕಟ್ಟೆ, ಗೂಕುಂಟೆ ಸರ್ಕಾರಿ ಶಾಲೆ, ಗುಂಡುತೋಪು, ಅಶ್ವಥಕಟ್ಟೆ, ದೇವಾಲಯಗಳು ಒಳಗೊಂಡಂತೆ ವಿವಿಧ ಹಬ್ಬಗಳು ಆಚರಿಸಿ ಊರ ಜಾತ್ರೆ ಮಹೋತ್ಸವದಲ್ಲಿ ತೊಡಗುವ ಹಳ್ಳಿಯ ಜನತೆ ಹಿರಿಕರು ಕಟ್ಟಿದ ಊರ ಬಾಗಿಲಿನಿಂದ ಗ್ರಾಮದ ಒಳಗೆ ಬರುವ ಸಂಪ್ರದಾಯ ಇಂದಿಗೂ ಸಹ ಅನೇಕ ಹಳ್ಳಿಗಳಲ್ಲಿ ಕಾಣುವಂತಾಗಿದೆ. ಆ ಪ್ರತೀತಿಯ ಸಂಕೇತವಾಗಿ ನೂತನ ದ್ವಾರಭಾಗಿಲು ನಿರ್ಮಿಸಿವಂತ ಪುಣ್ಯದ ಕೆಲಸಕ್ಕೆ ಸಂಕಲ್ಪ ತೊಟ್ಟಿದ್ದೇನೆ ಇದು ನನ್ನ ಸೌಭಾಗ್ಯವಾಗಿದೆ ಎಂದು ಬೆಂಗಳೂರು ಕಳ್ಳಿಪಾಳ್ಯ ಧರ್ಮದರ್ಶಿ ನಾಗರಾಜಪ್ಪ ತಿಳಿಸಿದರು.

ತಾಲೂಕಿನ ವರದನಾಯಕನಹಳ್ಳಿ ಗೇಟ್ ಬಳಿ ಗ್ರಾಮಕ್ಕೆ ನೂತನ ದ್ವಾರಬಾಗಿಲು ನಿರ್ಮಾಣ ಕಾರ್ಯದ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿ ಈಗಾಗಲೆ ಗ್ರಾಮದಲ್ಲಿ ಶ್ರೀ ಆಂಜಿನೇಯ ಸ್ವಾಮಿ ದೇವಾಲಯ ಮತ್ತು ಶ್ರೀ ಪಟಾಲಮ್ಮದೇವಿ ದೇವಾಲಯವನ್ನು ನಿರ್ಮಿಸಿದ್ದು, ಇದೀಗ ಧ್ವಾರ ಭಾಗಿಲು ನಿರ್ಮಿಸಿ ಅದರಲ್ಲಿ ಗ್ರಾಮದರ್ಲ್ಲಿರುವಂತ ಎಲ್ಲಾ ದೇವರುಗಳ ವಿಗ್ರಹಗಳನ್ನು ನೂತನ ಧ್ವಾರ ಭಾಗಿಲಿನಲ್ಲಿ ಪ್ರತಿಷ್ಟಾಪಿಸಲಾಗುವುದು ಎಂದರು. ಧರ್ಮದರ್ಶಿ ವಿ. ನಾಗರಾಜಪ್ಪಮೊಮ್ಮಗನಾಗೇಂದ್ರ, ಹಂಡಿಗನಾಳ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಮುನಿರೆಡ್ಡಿ, ಶ್ರೀಪಟಾಲಮ್ಮ ದೇವಸ್ಥಾನದ ವಕ್ಕಲರಾದ ಕೊಂಡೇನಹಳ್ಳಿ ನಾಗರಾಜಪ್ಪ, ಗಡದನಾಯಕನಹಳ್ಳಿ ನಾಗರಾಜಪ್ಪ, ಗ್ರಾಮದ ಮುಖಂಡರಾದ ಎಂ.ಬಿ ರಾಮಯ್ಯ, ವಿ.ಬಿ ನಾರಾಯಣಸ್ವಾಮಿ, ವಿ.ಆರ್. ಶ್ರೀನಿವಾಸ್, ಆಂಜಿನೇಯ, ವಿಶ್ವನಾಥ್, ಆರ್. ಶ್ರೀನಿವಾಸ್, ಹನುಮಂತಣ್ಣ, ಎಂ. ಶ್ರೀನಿವಾಸ್, ಮುನಿರಾಮ ಇನ್ನಿತರರು ಹಾಜರಿದ್ದರು.



## ಹುಟ್ಟುಹಬ್ಬ ಆಚರಣೆ: ಸಿಹಿ ಹಂಚಿಕೆ

• **ಬಾಗೇಪಲ್ಲಿ:** ನ್ಯೂ ಹೊರೈಜನ್ ಶಾಲಾ ವ್ಯವಸ್ಥಾಪಕ ಪೃಥ್ವಿರಾಜ್ ಬಿ.ಹುಟ್ಟುಹಬ್ಬವನ್ನು ಶಾಲಾಮಕ್ಕಳು ಸಿಬ್ಬಂದಿ ವರ್ಗ ಸಂಭ್ರಮದಿಂದ ಆಚರಿಸಿ ಸಿಹಿ ಹಂಚಿ ಸಂಭ್ರಮಿಸಿದರು. ಶಾಲಾ ಮುಖ್ಯೋಪಾಧ್ಯಾಯ ಡಾ.ಶ್ರೀನಿವಾಸ ರೆಡ್ಡಿ ಮಾತನಾಡಿ 43 ವರ್ಷಗಳ ಹಿಂದೆ ಪೃಥ್ವಿರಾಜ್ ತಂದೆ ಬಯ್ಯ ರೆಡ್ಡಿ ಸ್ಥಾಪಿಸಿದ ನ್ಯೂ ಹೊರೈಜನ್ ಶಾಲೆಯಲ್ಲಿವಿದ್ಯಾಭ್ಯಾಸಮಾಡಿಅನೇಕಉನ್ನತ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಈಗ ತಂದೆಯ ಸ್ಥಾನದಲ್ಲಿ ಶಾಲಾ ವ್ಯವಸ್ಥಾಪಕರಾಗಿ ಪೃಥ್ವಿರಾಜ್ ಬಿ. ಕಾರ್ಯನಿರ್ವಹಿಸುತ್ತಿದ್ದಾರೆ. ವಿದ್ಯಾರ್ಥಿಗಳ ಸಿಬ್ಬಂದಿ ವರ್ಗದ ಜತೆಗೆ ಸರಳ ಸಜ್ಜನಿಕೆಯಿಂದ ನಡೆದುಕೊಳ್ಳುವ ಅವರಿಗೆ



ಭಗವಂತಆಯುಷ್ಯ ಆರೋಗ್ಯ ನೀಡಿವಿದ್ಯಾರ್ಥಿಗಳಿಗೆ ಪಠ್ಯ ಕ್ರೀಡೆ ಕಲಾ ಕಾರ್ಯಕ್ರಮಗಳು ಇನ್ನಷ್ಟು ಪ್ರೋತ್ಸಾಹವನ್ನು ನೀಡುತ್ತಾರೆ, ಇಂದು ಅವರ ಹುಟ್ಟುಹಬ್ಬದ ಪ್ರಯುಕ್ತ ಎಲ್ಲಾ ಶಾಲಾ ಮಕ್ಕಳಿಗೆ ಸಿಹಿ ಹಂಚಿ ಸಿಬ್ಬಂದಿ ವರ್ಗ ಸಂಭ್ರಮಿಸಿದರುಶಾಲಾಮುಖ್ಯೋಪಾಧ್ಯಾಯ ಶ್ರೀನಿವಾಸ್ ರೆಡ್ಡಿ, ದೈಹಿಕಶಿಕ್ಷಕ ಕುಮಾರ್, ಅಭಿಷೇಕ್ ಬಿ.ಎ. ಉಪಸ್ಥಿತರಿದ್ದರು.

## ಹೋಟೆಲ್ ಗ್ಯಾಸ್ ಸಂಕಷ್ಟ

• **ಕೋಲಾರ:** ಮಧ್ಯ ಪ್ರಾಚ್ಯ ರಾಷ್ಟ್ರಗಳಲ್ಲಿ ಯುದ್ಧ ಹಿನ್ನೆಲೆ ರಾಜ್ಯವೂ ಸೇರಿದಂತೆ ಕೋಲಾರ ಜಿಲ್ಲೆಯಲ್ಲಿ ಕಮರ್ಷಿಯಲ್ ಗ್ಯಾಸ್ ಅಭಾವ ಸೃಷ್ಟಿಯಾಗಿದೆ. ಪರಿಣಾಮ ಕೋಲಾರದಲ್ಲಿ ಗ್ಯಾಸ್ ಟ್ರಬಲ್ ಮುಂದುವರೆದಿದ್ದು, ಹೋಟೆಲ್ ಮಾಲೀಕರು ಪರದಾಡುವಂತಾಗಿದೆ. ಗ್ಯಾಸ್ ಇಲ್ಲದೆ ಮೆನು ಬದಲಾಯಿಸಿರುವ ಹೋಟೆಲ್‌ಗಳು ಪರಿಸ್ಥಿತಿ ಹೀಗೆ ಮುಂದುವರೆದ್ರೆ ಎರಡ್ಮೂರು ದಿನಗಳಲ್ಲಿ ಹೋಟೆಲ್ ಬಂದ್ ಮಾಡಬೇಕಾಗುತ್ತದೆ ಎನ್ನಲಾಗಿದೆ. ಕೋಲಾರ ನಗರದ ಪ್ರತಿಷ್ಠಿತ ಪಂಚವಟಿ ಹೋಟೆಲ್‌ನಲ್ಲೂ ಗ್ಯಾಸ್ ಸಮಸ್ಯೆ ಎದುರಾಗಿದ್ದು, ಮೆನು ಬದಲಾವಣೆಯಾಗಿದೆ. ದೋಸೆ, ಪೂರಿ, ಸ್ವೀಟ್ ಸೇರಿದಂತೆ ಸಿಲಿಂಡರ್ ಹೆಚ್ಚಾಗಿ ಬೇಕಾಗುವ ಆಹಾರ ಪದಾರ್ಥಗಳ ತಯಾರಿಕೆ ಸ್ಥಗಿತಗೊಂಡಿದೆ. 5 ಕೆ.ಜಿ ಕಮರ್ಷಿಯಲ್ ಸಿಲಿಂಡರ್ ಗಳನ್ನೆ ನಂಬಿ ಹೊಟೆಲ್ ನಡೆಸುತ್ತಿದ್ದೇವೆ, ಪರಿಸ್ಥಿತಿ ಹೀಗೆ ಮುಂದುವರೆದ್ರೆ, ಹೋಟೆಲ್ ಬಂದ್ ಮಾಡುವ ಸ್ಥಿತಿ ಇದೆ ಅನ್ನೋದು ಮಾಲೀಕರ ಮಾತು.

## ಸೂಕ್ತ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸಾರ್ವಜನಿಕರ ಒತ್ತಾಯ

# ತಳ್ಳುವ ಗಾಡಿಗಳ ಮೈಕ್ ಸದ್ದು: ನಾಗರಿಕರಿಗೆ ಕಿರಿಕಿರಿ

• **ಬಾಗೇಪಲ್ಲಿ:** ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ತಳ್ಳುವ ಗಾಡಿಗಳಲ್ಲಿ ಮೈಕ್ ಅಳವಡಿಸಿಕೊಂಡು ವ್ಯಾಪಾರ ಮಾಡುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಇದರಿಂದ ಉಂಟಾಗುತ್ತಿರುವಜೋರಾದಶಬ್ದಸಾರ್ವಜನಿಕರಿಗೆ ಭಾರೀ ಕಿರಿಕಿರಿ ಉಂಟುಮಾಡುತ್ತಿದೆ. ಈ ಸ್ಥಿತಿ ಶಬ್ದಮಾಲಿನ್ಯಕ್ಕೆ ಕಾರಣವಾಗುತ್ತಿರುವುದರಿಂದ ಸಂಬಂಧಿಸಿದ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ನಾಗರಿಕರು ಒತ್ತಾಯಿಸಿದ್ದಾರೆ.

ಹಣ್ಣು, ತರಕಾರಿ, ತಿಂಡಿಪದಾರ್ಥಗಳು ಸೇರಿದಂತೆ ವಿವಿಧ ವಸ್ತುಗಳನ್ನು ಮಾರಾಟ ಮಾಡುವ ತಳ್ಳುವ ಗಾಡಿ ವ್ಯಾಪಾರಿಗಳು ತಮ್ಮ ವ್ಯಾಪಾರ ಹೆಚ್ಚಿಸಿಕೊಳ್ಳುವ ಉದ್ದೇಶದಿಂದ ಮೈಕ್ ಮೂಲಕ ಜೋರಾಗಿ ಶಬ್ದ ಮಾಲಿನ್ಯ ಮಾಡುತ್ತಾ ಕಾಲೊನಿಗಳು ಮತ್ತು ವಸತಿ ಪ್ರದೇಶಗಳಲ್ಲಿ ಸಂಚರಿಸುತ್ತಿದ್ದಾರೆ. ಬೆಳಗ್ಗಿನಿಂದ ಸಂಜೆವರೆಗೆ ನಿರಂತರವಾಗಿ ಕೇಳಿಬರುವ ಈ ಶಬ್ದದಿಂದ ವಿದ್ಯಾರ್ಥಿಗಳು ಓದುವುದಕ್ಕೂ, ವೃದ್ಧರು ಮತ್ತು ರೋಗಿಗಳು ವಿಶ್ರಾಂತಿ ಪಡೆಯುವುದಕ್ಕೂ ತೊಂದರೆ ಆಗುತ್ತಿದೆ ಎಂದು ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಶಾಲೆಗಳು, ಆಸ್ಪತ್ರೆಗಳು ಮತ್ತು ವಸತಿ ಪ್ರದೇಶಗಳ ಸಮೀಪದಲ್ಲಿಯೂ ಜೋರಾಗಿ ಮೈಕ್ ಬಳಸುತ್ತಿರುವುದು ಪರಿಸ್ಥಿತಿಯನ್ನು ಮತ್ತಷ್ಟು ಗಂಭೀರವಾಗಿಸಿದೆ. ಶಬ್ದ ಮಾಲಿನ್ಯ ನಿಯಂತ್ರಣ ನಿಯಮಗಳ ಪ್ರಕಾರ ಸಾರ್ವಜನಿಕ ಸ್ಥಳಗಳಲ್ಲಿ ಲೌಡ್ ಸ್ಪೀಕರ್ ಅಥವಾ ಮೈಕ್ ಬಳಸಲು ಸಂಬಂಧಿಸಿದ ಅಧಿಕಾರಿಗಳ ಅನುಮತಿ ಅಗತ್ಯವಿದೆ. ಆದರೆ ಅನೇಕರು ಯಾವುದೇ ಅನುಮತಿ ಇಲ್ಲದೆ ಮೈಕ್ ಬಳಸಿ ವ್ಯಾಪಾರ ಮಾಡುತ್ತಿರುವುದು ಕಂಡುಬರುತ್ತಿದೆ.

ಈ ಹಿನ್ನೆಲೆಯಲ್ಲಿ ಪುರಸಭೆ ಹಾಗೂ ಪೊಲೀಸ್ ಇಲಾಖೆ ಗಮನಹರಿಸಿ ನಿಯಮ ಉಲ್ಲಂಘಿಸುವವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ನಾಗರಿಕರು ಆಗ್ರಹಿಸಿದ್ದಾರೆ. ವ್ಯಾಪಾರ ನಡೆಸುವುದು ಅವರ ಹಕ್ಕಾದರೂ, ಸಾರ್ವಜನಿಕರಿಗೆ ತೊಂದರೆ ಉಂಟಾಗದಂತೆ ನಿಯಮ ಪಾಲನೆ ಮಾಡುವುದು ಅಗತ್ಯ ಎಂದು ಸಾಮಾಜಿಕ ಕಾರ್ಯಕರ್ತರು ಅಭಿಪ್ರಾಯಪಟ್ಟಿದ್ದಾರೆ.

ಒಟ್ಟಿನಲ್ಲಿ ಪಟ್ಟಣದಲ್ಲಿ ಹೆಚ್ಚುತ್ತಿರುವ ತಳ್ಳುವ ಗಾಡಿಗಳ ಮೈಕ್ ಶಬ್ದವನ್ನು ನಿಯಂತ್ರಿಸಲು ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು ಎಂಬುದು ಸಾರ್ವಜನಿಕರ ಒತ್ತಾಯವಾಗಿದೆ.

## ಜಾತಿಮುಕ್ತ, ಹಸಿವುಮುಕ್ತ ಸಮಾಜ ನಿರ್ಮಾಣದಲ್ಲಿ ದಸಂಸ ಕೊಡುಗೆ ಅಪಾರ

# ದಲಿತರ ಹಕ್ಕಿಗೆ ಹೋರಾಟ: ಕೆ.ಸಿ.ರಾಜಕಾಂತ್

• **ಚಿಕ್ಕಬಳ್ಳಾಪುರ:** ಕಳೆದ 50 ವರ್ಷಗಳಿಂದ ದಲಿತ ಸಂಘರ್ಷ ಸಮಿತಿ ದಲಿತರು ಮತ್ತು ದಮನಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ತಡೆ ಯುವ ಜೊತೆಗೆ ಜಾತಿಮುಕ್ತ ಮತ್ತು ಹಸಿವುಮುಕ್ತ ಸಮಾಜವನ್ನು ನಿರ್ಮಿಸುವ ದಿಕ್ಕಿನಲ್ಲಿ ನಿರಂತರವಾಗಿ ತನ್ನ ಹೋರಾಟವನ್ನು ಮುಂದುವರಿಸುತ್ತಾ ಬಂದಿದೆ ಎಂದು ದಸಂಸ ರಾಜ್ಯ ಮುಖಂಡ ಕೆ.ಸಿ.ರಾಜಕಾಂತ್ ಅಭಿಪ್ರಾಯಪಟ್ಟರು.

ಚಿಕ್ಕಬಳ್ಳಾಪುರ ತಾಲೂಕಿನ ಕಸಬಾ ಹೋಬಳಿ ಶೇಟ್ ದಿನ್ನೆ ಬಳಿ ದಸಂಸ ವತಿಯಿಂದ ಏರ್ಪಡಿಸಿದ್ದ ಹೋಬಳಿ ಮಟ್ಟದ ನೂತನ ಪದಾಧಿಕಾರಿಗಳ ಆಯ್ಕೆ ಮಾಡುವ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು.

ಇವೆಲ್ಲಾ ಹೋರಾಟಗಳು ದಲಿತ ಚಳುವಳಿಯ ಇಚ್ಛಾಶಕ್ತಿಯ ಮೆರುಪರ್ವತಗಳಾಗಿ ಪರಿಣಮಿಸಿವೆ. ಈ ಹಿನ್ನೆಲೆಯಲ್ಲಿ ದ.ಸಂ.ಸದಲ್ಲಿ ಹೊಸ ವಾತಾವರಣ, ಹೊಸ ನಾಯಕತ್ವ ಮತ್ತು ಹೊಸ ಚಿಂತನೆಗಳನ್ನು ರೂಪಿಸಿ ಪುನರ್ ಸಂಘಟನೆ ಅಗತ್ಯವಿದೆ ಎಂದು ಅವರು ಹೇಳಿದರು. ದ.ಸಂ.ಸ ಜಿಲ್ಲಾ ಸಂಘಟನಾ ಸಂಚಾಲಕ ಎನ್.ಎ ವೆಂಕಟೇಶ್ ದಲಿತರ ಮೇಲಿನ ದೌರ್ಜನ್ಯಗಳನ್ನು ಗಟ್ಟಿದನಿಯಲ್ಲಿ ತಡೆಯುವ ಕೆಲಸ ಮಾಡುವ ಜೊತೆಗೆ, ' ಸಮಸ್ಯೆಗಳಾದ ನೀರು, ನಿವೇಶನ ಮತ್ತು ಭೂಮಿ ಹಕ್ಕುಗಳಿಗಾಗಿ ದ.ಸಂ.ಸ ಹಲವು ಶಾಂತಿಯುತ ಹೋರಾಟಗಳನ್ನು ನಡೆಸಿದೆ.



> ಕಳೆದ 50 ವರ್ಷಗಳ ಸುದೀರ್ಘ ಪಯಣದಲ್ಲಿ ದಲಿತ ಸಂಘರ್ಷ ಸಮಿತಿ ಅನೇಕ ಸಾಧನೆಗಳನ್ನೂ ಸವಾಲುಗಳನ್ನೂ ಎದುರಿಸಿದೆ. ಜನಪರ ಹೋರಾಟಗಳ ಜತೆಗೆ ಭೂಮಿಗಾಗಿ ಕಡ್ಡಾಯ ಶಿಕ್ಷಣಕ್ಕಾಗಿ, ಸೂರಿಗಾಗಿ, ಸೇಂದಿ ಮುಕ್ತ ರಾಜ್ಯಕ್ಕಾಗಿ, ಶೋಷಣೆಯ ವಿಮುಕ್ತಿಗಾಗಿ ವಿಶ್ರಾಂತವಾಗಿ ಹೋರಾಟಗಳನ್ನು ಕಟ್ಟಿದೆ.
> ■ ಕೆ.ಸಿ.ರಾಜಕಾಂತ್, ದಸಂಸ ರಾಜ್ಯ ಮುಖಂಡ

ಚಿಕ್ಕಬಳ್ಳಾಪುರ ತಾಲೂಕು ಸಂಚಾಲಕರಾದ ಎನ್. ಪರಮೇಶ್, ಶಿಡ್ಲಘಟ್ಟ ತಾಲ್ಲೂಕು ಸಂಚಾಲಕರಾದ ತಿರುಮಲಪ್ಪ, ಬಾಗೇಪಲ್ಲಿ ತಾಲೂಕು ಸಂಚಾಲಕರಾದ ವೈಪಾಳ್ಯ ರವಿ, ಗುಡಿಬಂಡೆ ತಾಲೂಕು ಸಮಿತಿಯ ಇಸುಕೂಲಪ್ಪ, ವರ್ಲಕೊಂಡ ರಾಜು,ಗುಡಿಬಂಡೆ ಅದಿನಾರಾಯಣಪ್ಪ, ನಾಗರಾಜಪ್ಪ,ಗಡಿನಾಡು ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮುನಿರಾಜು ಸೇರಿದಂತೆ ಚಿಕ್ಕಬಳ್ಳಾಪುರ ತಾಲ್ಲೂಕು ಸಮಿತಿಯ ಪದಾಧಿಕಾರಿಗಳು ಹಾಗೂ ಮುಖಂಡರು ಉಪಸ್ಥಿತರಿದ್ದರು.